ಕಸ್ತೂರಿ

ಅಕ್ಟೋಬರ್ ೧೯೮೪



ಬೆಲೆ: ೨-೫೦


ಅಂಗಾಂಗಕ್ಕೆ ಕಾಂತಿ ನೀಡುವ
ರೆಕ್ಸೋನಾ
Rexona
FOR SOFT AND GLOWING SKIN

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :
ಆರ್. ಜೆ. ದೇಸಾಯಿ

ಸಹಸಂಪಾದಕ :
ಮಾಧವ ವಾ. ಮಹಿಷಿ

ಕಲೆ :
ಪಿ. ಆರ್. ಪಾಟೀಲ

ಮುಖಪುಟ :
ನಗುವ ಹೂವು

ಚಿತ್ರ :
ಡಾ. ಎಚ್. ಚಂದ್ರಶೇಖರ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI, October 1985

ಬೆಳಕಿಂಡಿ

"ನನ್ನ ಹೆಂಡತಿಗೆ ಡಾಕ್ಟರು ಹೊಸ ನಮೂನೆಯ ಚಿಕಿತ್ಸೆ ನೀಡಿದರು."

"ಹೌ. ಎಂಥ ಚಿಕಿತ್ಸೆ?"

"ಏನಿಲ್ಲ- 'ನಿಮಗೆ ವಯಸ್ಸಾಯ್ತು, ಅದಕ್ಕೇ ಇಂಥ ತೊಂದರೆಗಳು. ಏನೂ ಯೋಚಿಸಬೇಡಿ' ಅಂದರು."

"ಹಾಗಾದ್ರೆ ನೀನೀಗ ನಿಶ್ಚಿಂತ ಅನ್ನು."

"ಊಹೂಂ- ಈಗ, ವಯಸ್ಸಾಯ್ತಲ್ಲಾ- ಅನ್ನೋ ಕೊರಗು ಆಕೆಗೆ."

*

ಮುದುಕ ಎನಿಸಿಕೊಳ್ಳಬಾರದೆಂದಿದೆಯೆ ನಿಮಗೆ?

ಹಾಗಾದರೆ ದೀರ್ಘಾಯುವಾಗುವ ಆಶೆ ಬಿಡಿ.

*

ಉದ್ರೇಕವೆಂಬುದು ವಿಕ್ಷಿಪ್ತ ಅತಿಥಿಯ ಹಾಗೆ. ಒಂದನ್ನು ಸಮಾಧಾನಪಡಿಸಿದಿರೋ ಹಲವಾರು ಮಿತ್ರರೊಡಗೂಡಿ ಬಂದು ಕಾಡುತ್ತದೆ ನಿಮ್ಮನ್ನು.

*

"ಈ ಬೇಯಿಸಿದ ಮೊಟ್ಟೆ ತಣ್ಣಗಾಗಿದೆಯಲ್ಲ! ತಣ್ಣೀರಲ್ಲಿ ಬೇಯಿಸಿದೆಯಾ?"

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಭಾಷೆ ಮತ್ತು ಕಾಲತತ್ತ್ವ

ಮಾನವ ಭಾಷೆಯನ್ನು ರೂಪಿಸಿರುವ ಕಾಲ ತತ್ತ್ವ, ಮತ್ತು ಪ್ರಾಣಿ ಪಶುಗಳ ಭಾಷೆಯನ್ನು ರೂಪಿಸುವ – ರೂಪಿಸುತ್ತಿರುವ – ಕಾಲತತ್ತ್ವ ಇವು ಎರಡೂ ಸಮಾನ ಆಕೃತಿಯವು ಆಗಿಲ್ಲ.

೧) ವೈವಸ್ವತ: ಮನು> ಮಾನವ ಪ್ರಾದುರ್ಭಾವವು, ಸ್ವರ್‌ಪಾತಳಿಯ ಮೇಲೆ ಆಗಿದೆ. ಇದನ್ನು ಅಲ್ಲಗಳೆಯಲು ಆಗುವುದಿಲ್ಲ. ಈ ಸ್ವರ್‌ಪಾತಳಿಯು, ಸ್ಥಲ ಕಾಲದ; ಅಂತರಿಕ್ಷದ ಅವಕಾಶಸ್ಥ ಟೊಳ್ಳಿನ [೦] ಮೇಲ್ಗಡೆಗೆ ಇದೆ.

ಪ್ರಕಾಶ ತತ್ತ್ವವು, ಆಗಾಮೀ ನಾಳೆಗಳತ್ತ ಎಡೆಬಿಡದೆ ಸಾಗಿರುವ ನಿನ್ನೆ ಇಂದು ರೂಪ ಶುಭ್ರ>ಶುಭ ಸ್ವರೂಪದ ಕಾಲಗತಿ.

ಮನು—ಜ = ಮಾನವ ಭಾಷೆಯು, ಪ್ರಕಾಶ ತತ್ತ್ವದ ವಿಭಾಗತ್ರಯದ ನೇರ ಗತಿಯ ಕಾಲದ ಪ್ರಭಾವದಲ್ಲಿ ಆಕಾರ ಪಡೆದಿದೆ.

೨) ಪ್ರಾಣಿ–ಪಶುಗಳ ಭಾಷೆಯನ್ನು ಪ್ರೇರಿಸುವ, ರೂಪಿಸುವ ಕಾಲಗತಿಯು, ಪ್ರಕಾಶ ತತ್ತ್ವದಂತೆ, ನೇರ ಗತಿಯುಕ್ತವಲ್ಲ, ಮತ್ತು ಮಾನ್ ಭಾಷೆಯ ಪ್ರೇರಣೆ–ಪ್ರಚೋದನೆಗೆ ಪ್ರಜ್ಞಾಯುಕ್ತಮನಸ್ ತತ್ತ್ವವು ಕಾರಣವಿದೆ. ಆದರೆ ಪ್ರಾಣಿ ಪಶುಗಳ ಭಾಷೆಯ ಪ್ರೇರಣೆ–ಪ್ರಚೋದನೆಗೆ ಪ್ರಾಣಲಿಂಗ ಶಕ್ತಿಯು ಕಾರಣವಿರುತ್ತದೆ. ಜನನ–ಮರಣಕ್ಕೆ ಕಾರಣವಿರುವ ಪ್ರಾಣಲಿಂಗ ಶಕ್ತಿಯಿಂದ ಪ್ರೇರಿತ ಗತಿರೂಪ ಈ ಕಾಲವು, ನಿತ್ಯವಾಗಿ ವೃತ್ತಾಕೃತಿಯದೇ [೦] ಆಗಬಲ್ಲದು. ಪುರಾತನರು ಇದನ್ನು (ಸಂ)ಭವ ಚಕ್ರ ಅಥವಾ ಕಾಲ(ಮೃತ್ಯು)ಚಕ್ರ ಎಂದುದೂ ನಿಷ್ಕಾರಣವಲ್ಲ.

ನರ: ನಾರಾಯಣ ಸಂಪ್ರದಾಯದ ಪ್ರಸ್ಥಾಪಕರು ಎಂಬ ವ್ಯಾಸ ಕೃಪೆಯಿಂದ, ಈ ಮಾನವನು, ಈಗ ಸ್ವರ್‌ಪಾತಳಿಯಿಂದ ಕೆಳಗೆ ಸ್ಥಲ ಕಾಲದ ಸಂದರ್ಭದಲ್ಲಿ ಬಾಳಬೇಕಾಗಿ ಬಂದ ಈ ನರ: ಮಾನವನು ವೃತ್ತಾಕೃತಿಯ ಕಾಲತತ್ತ್ವದ ಪ್ರಭಾವಕ್ಕೆ ಒಳಗಾಗಿದ್ದರೆ ಸೋಜಿಗವಲ್ಲ.

ಇಂದು, ನಾವೆಲ್ಲ, ಚಾಂದ್ರಮಾನವನ್ನು ಎಂದರೆ ವೃತ್ತಾಕೃತಿಯ ಕಾಲಮಾನವನು ಮೆಚ್ಚಿಕೊಂಡಿದ್ದೇವೆ! ಎಂದರೆ ಇದರ ಸರಳ ಅರ್ಥ; ಪ್ರಕಾಶತತ್ತ್ವದ ಸ್ವರ್‌ಪಾತಳಿಯ ಪ್ರಭಾವದಲ್ಲಿ ಇದ್ದ ಮಾನವನು, ಈಗ ವೃತ್ತಾಕೃತಿಯ ಪ್ರಭಾವದಲ್ಲಿ ಎಂದರೆ ಪ್ರಾಣಿ ಪಶುಗಳ ಪಾತಳಿಯ ಮೇಲೆ ಬಂದಿದ್ದಾನೆ.

ಆದಕಾರಣ, ಈಗ ಮಾನವನೂ ಪ್ರಾಣಿ ಪಶುಗಳಂತೆ, ಪ್ರಾಣಲಿಂಗ ಶಕ್ತಿಯ ಪ್ರಯೋಜನ ಪಡೆದು ಮಾತಾಡುತ್ತಿದ್ದಾನೆ. ಈ ಸ್ಥಿತ್ಯಂತರವನ್ನು ಲೆಕ್ಕಿಸಿ, ವೇದದ ಕವಿಯು, "ಈ ನರನು 'ಯದ್‌ವಾಕ್ ಪಶವಃ ವದಂತಿ' ಈ ಹಂತದ ಭಾಷೆಯನ್ನು ಆಡುತ್ತಿದ್ದಾನಲ್ಲ, ಎಂದು ಮೂದಲಿಸಿದ್ದಾನೆ.

ಈ ಪಶುವಾಕ್–ಸ್ವರೂಪವನ್ನು ವೇದವು ವರ್ಣಿಸಿದೆ.

ದೇವೀಂ ವಾಚಂ ಅಜನಯಂತ ದೇವಾಃ
ತಾಂ ವಿಶ್ವರೂಪಾಂ
ಪಶವಃ ವದಂತಿ।
ಸಾ ನಃ ಮಂದ್ರಾ ಇಷಂ ಊರ್ಜಂ
ದುಹಾನಾ ಧೇನುಃ ವಾಕ್
ಉಪಸ್ತುತಾ ಆವತು (VIII–೧೦೦, ೧೧)

ಈ ಋಚೆಯಲ್ಲಿ ದೇವಿ/ದೇವ ಪದಕ್ಕೆ ಯೋನಿಲಿಂಗ ಎಂದೇ ಅರ್ಥವನ್ನು ಸಾಯಣರೂ ಸೂಚಿಸಿದ್ದಾರೆ. ಅಲ್ಲದೆ ಈ ವಾಕ್: ಶಬ್ದದ್ರವ್ಯವು ಹಸುವಿನ ಹಾಲಿನಂತೆ ಇರುವುದೆಂಬ ಮಾತೂ ಸ್ಪಷ್ಟವಿದೆ. ಅಲ್ಲದೆ 'ಧೇನು' ಪದಕ್ಕೆ, ಅದಿತಿ = ಅಮೃತಸ್ಯ ನಾಭಿಃ ಎಂಬ ಸ್ಪಷ್ಟೀಕರಣವೂ, ಇದರ ಮುಂದೆ ೧೦೧ನೆಯ ಸೂಕ್ತದಲ್ಲಿದೆ. (VIII, ೧೦೧, ೧೫) 'ಗಾಂ ಅದಿತಿಂ ಮಾವಧಿಷ್ಟ ಗೋರೂಪ, ಅದಿತಿಃ ಅಮೃತಸ್ಯನಾಭಿಃ' ದೇವಿಯನ್ನು ಹಿಂಸಿಸಬೇಡಿರಿ, ಎಂಬ ಆದೇಶವಿದೆ! ಆದ ಕಾರಣ, ಶಬ್ದಮಣಿದರ್ಪಣಕಾರನ 'ನಾಭಿಮೂಲ' ಸಂಕೇತಕ್ಕೆ 'ಯೋನಿ' ಎಂಬ ಅರ್ಥವು ಇರುವಲ್ಲಿ ಸಂದೇಹವಿಲ್ಲ; ವೇದದ ವರ್ಣನೆಯೇ ತಪ್ಪು ಇದ್ದರೆ ನಾನು ಅಪರಾಧಿಯಲ್ಲ.

ಧಾರವಾಡ —ಶಂ. ಬಾ. ಜೋಶಿ

ಕಣ್ಣೀರು ಬರಿಸಿದ ವ್ಯಂಗ್ಯಚಿತ್ರ...!

ಸ್ವಾಮೀ ಈ ದೇಶದಲ್ಲಿ ವ್ಯಂಗ್ಯಚಿತ್ರಗಳ ಸ್ವಾರಸ್ಯವಾದ ವಸ್ತುಗಳಿಗೂ ಅಭಾವವೇ? ಪ್ರಾಯಶಃ ವ್ಯಂಗ್ಯಚಿತ್ರಕಾರ ಹೀಗೆ ನೋಡುವ ವ್ಯಂಗ್ಯ ದೃಷ್ಟಿಯಿದ್ದರೆ, ಇಲ್ಲಿ ದೊರಕುವಷ್ಟು "ವೈವಿಧ್ಯಮಯ ವ್ಯಂಗ್ಯಚಿತ್ರ ಮಸಾಲೆ"ಗಳು ಅದೂ ಯಾವ ಪರಿಶ್ರಮವೂ ಇಲ್ಲದೆ ಬೇರೆಲ್ಲೂ ದೊರೆಯಲಾರದು! ವಸ್ತುಸ್ಥಿತಿ ಹೀಗಿದ್ದೂ ನಮ್ಮ ಕೆಲವೊಂದು ವ್ಯಂಗ್ಯಚಿತ್ರ ಸಹೋದರರು ರುಚಿಕಟ್ಟಾದ ವಸ್ತುಗಳನ್ನು 'ಹೆಕ್ಕಿ ತೆಗೆಯುವ' ಬದಲು "ಹಿಂದೂ ಧರ್ಮ-ದೇವರು"ಗಳ ಕುರಿತು ವ್ಯಂಗ್ಯಚಿತ್ರಗಳನ್ನು ಬರೆದು ಓದುಗರನ್ನು 'ನಗಿಸು'ವ ಬದಲು "ಕಣ್ಣೀರು ಸುರಿಸುವಂತೆ" ಮಾಡುತ್ತಿರುವುದಾವ ಕರ್ಮಕ್ಕೆ!

ಬರೋಡ —ಎಸ್ಕೆ ಹಳೆಯಂಗಡಿ

ಕೊಡ ಮತ್ತು ಹಾವು

ಸಪ್ಟೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಶ್ರೀ ಎಕ್ಕುಂಡಿಯವರ 'ಕೊಡ ಮತ್ತು ಹಾವು' ಕವನ ಸಂತೋಷ ಮತ್ತು ವಿಷಾದದ ಅನುಭವ ನೀಡಿತು. ಒಲಿದು ಮದುವೆಯಾದ ಜಮದಗ್ನಿ ಮುಂದೊಮ್ಮೆ 'ಕೊಡ ಮತ್ತು ಹಾವು' ಮಾಡಲು ಅಸಮರ್ಥಳಾದ ರೇಣುಕೆಗೆ ವಿಧಿಸಿದ ಕಥೆ, ಇದಕ್ಕಿಂತ ಮಧುರ ಕವನವಾಗಬಲ್ಲದಲ್ಲವೆ?

ಶಿವಮೊಗ್ಗಾ —ವಿಜಯ ಶ್ರೀಧರ್

ಉತ್ತಮ ಕಥೆ

ಹಳಸಿದ ಪ್ರೇಮ ಪ್ರಣಯ ಕಥೆಗಳನ್ನು ಓದಿ ಓದಿ ನನ್ನ ಮನಸ್ಸು ಜಿಡ್ಡು ಕಟ್ಟಿದಾಗ ಬೊಳುವಾರರ ಸಣ್ಣ ಕಥೆ "ಕಪ್ಪು ಕಲ್ಲಿನ ಸೈತಾನ" ನನ್ನ ಪಾಲಿಗೆ ಬಹು ಆಪ್ಯಾಯಮಾನವಾಗಿತ್ತು. ಪ್ರೇಮ, ಕಾಮದ ಕಾಟ ಬಿಟ್ಟು ಜೀವನದ ವಾಸ್ತವಿಕತೆಯ ಕುರಿತು ಹೃದಯಸ್ಪರ್ಶಿಯಾಗಿ ಬರೆಯಲಾಗುತ್ತದೆ ಎಂಬುದಕ್ಕೆ ಬೊಳುವಾರರ ಈ ಕಥೆಯೇ ಸಾಕ್ಷಿ. ಶೋಷಣೆಯ ವ್ಯವಸ್ಥೆಗಳು "ಓಕ್ಟೊಪಸ್ಸಿ"ನಂತೆ ಹೇಗೆ ತಮ್ಮ ಕಬಂಧ ಬಾಹುಗಳಿಂದ ಮುಗ್ಧರನ್ನು ವಂಚಿಸಿ ಶೋಷಿಸುತ್ತಲಿವೆ ಎಂಬುದಕ್ಕೆ ಅವರ ಸಣ್ಣ ಕಥೆಯೇ ಉದಾಹರಣೆ. ಬಡತನದ ಬದುಕಿನಲ್ಲಿ ಆಶಾವಾದವನ್ನು ನಂಬಿ, ಕೊನೆಗೆ ನಿರಾಶೆಗೊಳ್ಳುವ ಚಕ್ರ ನಿಜಕ್ಕೂ ಹೃದಯ ಸ್ಪರ್ಶಿ.

ಪುತ್ತೂರು —ಎ. ಪಿ. ಗೋವಿಂದಭಟ್ಟ

ಹೋಮಿಯೋಪಥಿ

ಸಪ್ಟೆಂಬರ್ ೮೫ ರ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ, ಡಾ. ಕೃಷ್ಣಮೂರ್ತಿ ಕಿತ್ತೂರರು ಬರೆದ "ಅಲರ್ಜಿ ಮತ್ತು ಹೋಮಿಯೋಪಥಿ" ಒಂದು ಉಪಯುಕ್ತ ಲೇಖನ. ವರ್ಷಗಳಿಂದ ಅಲರ್ಜಿ ಕಾಡಿಸುತ್ತಿದ್ದು ಹೋಮಿಯೋಪಥಿ ಚಿಕಿತ್ಸೆ ಪಡೆಯಲು ಯೋಚಿಸುತ್ತಿರುವಾಗಲೆ ಈ ಲೇಖನ ಕಣ್ಣಿಗೆ ಬಿದ್ದಿದ್ದು, ಹುಡುಕುವ ಬಳ್ಳಿ ಕಾಲಿಗೆ ತೊಡರಿಕೊಂಡ ಹಾಗಾಗಿದೆ. ಡಾ. ಕೃಷ್ಣಮೂರ್ತಿಯವರನ್ನು ಭೇಟಿಮಾಡಲಾಗಿದ್ದು, ಚಿಕಿತ್ಸೆ ಪ್ರಾರಂಭಿಸಲಾಗಿದೆ. ಪರಿಣಾಮ ತಿಳಿಯಲು ಹಲವಾರು ತಿಂಗಳಿನಿಂದ ಹಿಡಿದು, ವರ್ಷಗಳವರೆಗೆ ಕಾಯಬೇಕಂತೆ. ಮುಂದೊಂದು ದಿನ ಹೋಮಿಯೋಪಥಿ ಪರಿಣಾಮದ ಬಗ್ಗೆ ನಿಮಗೆ ಬರೆದು ತಿಳಿಸುತ್ತೇನೆ.

ಗುಲ್ಬರ್ಗಾ —ಎಂ. ಜಿ. ವೆಂಕಟಸ್ವಾಮಿ

ಉಪಯುಕ್ತ ಸಂದರ್ಶನ

ಬಿ. ವಿ. ಕಾರಂತ ಒಂದು ಸಂದರ್ಶನ ಲೇಖನ ಅಪೂರ್ವವೂ ಉಪಯುಕ್ತವೂ ಆಗಿತ್ತು. ಕಾರಂತರಿಗಿರುವ ರಂಗಭೂಮಿಯ ಮೇಲಿನ ಅಪಾರ ಆಸಕ್ತಿ, ಕಾಳಜಿಯು ಪ್ರಶಂಸನೀಯವಾದುದು. ಸಂದರ್ಶಕರ ಪ್ರಶ್ನೆಗಳಿಗೆ ನಿಸ್ಸಂಕೋಚವಾಗಿ ಉತ್ತರಿಸಿರುವ ಕಾರಂತರು ಪ್ರಸ್ತುತ ರಂಗ ಭೂಮಿಯಿಂದ ದೂರವಾಗುತ್ತಿರುವರೇನೋ ಎಂದೆನಿಸುತ್ತದೆ. ತುಂಬಾ ಪ್ರಭಾವಶಾಲಿ ಹಾಗೂ ಆಕರ್ಷಣೀಯ ಮಾಧ್ಯಮವಾದ ಚಿತ್ರರಂಗವು ಇತ್ತೀಚಿನ ದಿನಗಳಲ್ಲಿ ರಂಗಭೂಮಿಯನ್ನು ಪಕ್ಕಕ್ಕೆ ಸರಿಸಿದೆ. ಈ ನಡುವೆಯೂ ನಾಟಕ ಕ್ಷೇತ್ರವನ್ನು ಜೀವಂತವಾಗಿರಿಸಲು ಹೆಣಗುತ್ತಿರುವ ಕಾರಂತರ ಪ್ರಾಮಾಣಿಕ ಯತ್ನವನ್ನು ಆದರಿಸಬೇಕು.

ಬೆಂಗಳೂರು —ವ. ರಾಮಚಂದ್ರರಾವ್

ಕಸ್ತೂರಿ

ವರ್ಷ: ೩೦ ಅಕ್ಟೋಬರ್, ೧೯೮೫ ಸಂಚಿಕೆ : ೨

ಸ್ವರಾಜ್ಯದ ಚಿಂತೆ

ಕುಸುಮಾವತಿ ಶಂಕರರಾವ ದೇಶಪಾಂಡೆ

ಸ್ವರಾಜ್ಯ ಸಿಗುವ ವರೆಗೂ ಇಲ್ಲಿಗೆ ಬರಲಾರೆ"ನೆಂದು ಪಣತೊಟ್ಟ ಮಹಾತ್ಮಾಜಿ ಸಾಬರಮತಿ ಆಶ್ರಮದಿಂದ ಹೊರಟು ಸೇಗಾಂವಕ್ಕೆ ಬಂದು ನೆಲೆಸಿದರು. ಇದನ್ನು ತಮ್ಮ ಅಮೃತ ಸ್ಪರ್ಶದಿಂದ ಸೇವಾಗ್ರಾಮವನ್ನಾಗಿ ಪರಿವರ್ತಿಸಿದರು. ಸೇವಾಗ್ರಾಮ ಮುಂದೆ ದೇಶಭಕ್ತರ ಯಾತ್ರಾಸ್ಥಳವಾಯಿತು, ರಾಷ್ಟ್ರದ ರಾಜಕಾರಣದ ಕೇಂದ್ರವಾಯಿತು.

ಪರ್ಣಕುಟಿಯೊಂದರಲ್ಲಿ ಮಹಾತ್ಮರು ವಾಸಿಸಿದ್ದರು, ಸುತ್ತಲಿನ ನಿವಾಸಗಳಲ್ಲಿ ಆಶ್ರಮವಾಸಿಗಳು. ಕೇವಲ ದೇಶೀ ವಸ್ತುಗಳ ಬಳಕೆಯಿಂದಲೇ ಈ ನಿವಾಸಸ್ಥಾನಗಳು ರಚಿಸಲ್ಪಟ್ಟಿದ್ದವು. ಸುತ್ತಮುತ್ತ ಆಶ್ರಮದ ದನಕರುಗಳಿಗೆ ಬೇಕಾದ ಹುಲ್ಲು ಮತ್ತು ಆಶ್ರಮಕ್ಕೆ ಬೇಕಾದ ತರಕಾರಿ-ಹಣ್ಣು ಹಂಪಲಗಳನ್ನು ಬೆಳೆಯಲಾಗುತ್ತಿತ್ತು. ಇಲ್ಲಿಯ ಜೀವನ ತುಂಬ ಸರಳ-ಶಿಸ್ತು-ಸಂಯಮಗಳದು. ಎಂಥ ಸಿರಿವಂತನೇ ಇರಲಿ ಸ್ವಾವಲಂಬಿಯಾಗಿರಬೇಕೆಂದು ಮಹಾತ್ಮಾಜಿಯ ಕಟ್ಟಪ್ಪಣೆ.

ಪತಿ ಹಾಗೂ ಚಿಕ್ಕ ಮಗುವಿನೊಟ್ಟಿಗೆ ಸೇವಾಗ್ರಾಮದ ಆಶ್ರಮ ಸೇರಿದ್ದ ನನಗೆ ಮಾತ್ರ ಕೆಲವೊಂದು ಸಂದರ್ಭಗಳಲ್ಲಿ ಸ್ವಾವಲಂಬಿಯಾಗುವುದು ತೊಂದರೆಯಾಗುತ್ತಿತ್ತು; ಸಹಾಯ ಹಸ್ತವೊಂದರ ಅವಶ್ಯಕತೆ ಹೆಚ್ಚಿದೆ ಎಂದೆನಿಸಿದಾಗ ಈ ಕುರಿತು ಮಹಾತ್ಮಾಜಿಯನ್ನು ಕಂಡು ವಿಚಾರಿಸಿ "ಸಹಾಯಕ್ಕಾಗಿ ಒಂದು ಹುಡುಗಿಯನ್ನಿಟ್ಟುಕೊಳ್ಳಲು ಅಪ್ಪಣೆ ಕೊಡಬೇಕು" ಎಂದು ವಿನಂತಿಸಿಕೊಂಡೆ.

ಮಹಾತ್ಮಾಜಿ ಯೋಚಿಸಿ "ಆಗಲಿ" ಎಂದರು. "ಆದರೆ ಆ ಹುಡುಗಿ ಹರಿಜನರವಳೇ ಇರಲಿ" ಎಂದೂ ಕಟ್ಟಪ್ಪಣೆ ಮಾಡಿದರು.

ಆಶ್ರಮದ ಎಲ್ಲ ಕೆಲಸಗಳನ್ನು ಪವಿತ್ರಯಜ್ಞಗಳೆಂದು ಕರೆಯುತ್ತಿದ್ದರು ಗಾಂಧೀಜಿ. ನೂಲುವು

ದಕ್ಕೆ ಸೂತ್ರಯಜ್ಞ, ಸಂಡಾಸು ಹಾಗೂ ಇತರ ಸ್ವಚ್ಛತೆಗೆ ಸಫಾಯಿಯಜ್ಞ ಮುಂತಾಗಿ. ಎಲ್ಲ ಕೆಲಸಗಳನ್ನು ಸಮರ್ಪಣೆಯ ಭಾವದಿಂದಲೇ ಮಾಡುತ್ತಿದ್ದೆವು. ಆಲಸ್ಯವೆಂಬ ಪದವೇ ಅಲ್ಲಿ ಅಪರಿಚಿತ. ವಿಶ್ರಾಂತಿಯೆಂದರೆ ಕೆಲಸದಲ್ಲಿ ಬದಲಾವಣೆ. ಎಲ್ಲವೂ ಅಲ್ಲಿಯೇ ಇತ್ತಾದ್ದರಿಂದ ಯಾವುದಕ್ಕೂ ನಾವು ಆಶ್ರಮದಿಂದ ಹೊರಗೆ ಹೋಗಬೇಕಾದ ಪ್ರಸಂಗವಿರುತ್ತಿರಲಿಲ್ಲ.

ಬಾಪೂಜಿಯ ಕುಟೀರದ ಎದುರುಗಡೆಯ ಪ್ರಾಂಗಣದಲ್ಲಿ ನಿತ್ಯ ಬೆಳಗು-ಬೈಗುಗಳಲ್ಲಿ ಪ್ರಾರ್ಥನೆ. ಬಾಪೂಜಿಯ ಎಡಕ್ಕೆ ಸ್ತ್ರೀಯರೂ ಬಲಕ್ಕೆ ಪುರುಷರೂ ಸಾಲಾಗಿ ಕುಳಿತು ಧ್ಯಾನಾಸಕ್ತರಾಗುತ್ತಿದ್ದರು. ನೆಲದಲ್ಲಿ ಸಣ್ಣ ಗೂಟವೊಂದನ್ನು ನೆಟ್ಟು ಅದಕ್ಕೊಂದು ಮಣೆ ಆನಿಸಿದರೆ ಅದೇ ಬಾಪೂಜಿಯ ಆಸನ. ಕೆಲವೊಮ್ಮೆ ಪ್ರಾರ್ಥನಾನಂತರ ಬಾಪೂಜಿ ಚಿಕ್ಕ ಉಪನ್ಯಾಸವನ್ನೂ ಕೊಡುತ್ತಿದ್ದರು. ನಿತ್ಯದ ಪ್ರಾರ್ಥನೆ ಹಾಗೂ ಸೂತ್ರಯಜ್ಞ ಎಲ್ಲರಿಗೂ ಕಡ್ಡಾಯ.

ನಾನು ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದೆನಾದರೂ ಅವಕಾಶ ದೊರೆತಾಗೆಲ್ಲ ಅಲ್ಲಿ ನಡೆಯುತ್ತಿದ್ದ ಸಭೆ ಸಮ್ಮೇಲನಗಳಲ್ಲಿ ಭಾಗಿಯಾಗುತ್ತಿದ್ದೆ. ಬಾಪೂಜಿಯ ಭಾಷಣಗಳನ್ನಂತೂ ಎಂದೂ ತಪ್ಪಿಸಿಕೊಳ್ಳಲಿಲ್ಲ.

ಸೇವಾಗ್ರಾಮದಲ್ಲೊಂದು ಸಲ ಖಾದಿ ಕಾರ್ಯಕರ್ತರು ಹಾಗೂ ವಿಧಾಯಕ ಕಾರ್ಯಕರ್ತರ ನಮ್ಮೇಳನ ನಡೆಯಿತು. ಉತ್ತರ ಭಾರತದಿಂದ ಬಂದಿದ್ದ ನಾರಾಯಣಭಾಯಿ ಎಂಬ ಒಬ್ಬರು ಬಾಪೂಜಿಗೊಂದು ಪ್ರಶ್ನೆ ಹಾಕಿದರು:

"ಬಾಪೂಜಿ, ನಾವೇನೋ ನಿಮ್ಮ ಆದೇಶದಂತೆ ಕಾರ್ಯ ಮಾಡುತ್ತ ಸಾಗಿದ್ದೇವೆ, ಆದರೆ ಸ್ವರಾಜ್ಯವೆಂಬುದು ನಮ್ಮ ಜೀವಮಾನವಿರುವುದರೊಳಗಾಗಿ ಸಿಗುವುದೇ ಎಂಬ ಸಂಶಯವಿದೆ. ಅಥವಾ ಹೀಗೇ ದುಡಿ ದುಡಿದು ಹಣ್ಣಾಗಿ ಸತ್ತುಹೋಗುವೆವೊ..."

ಇದನ್ನು ಕೇಳಿ ಮಹಾತ್ಮರು ಒಂದು ದೊಡ್ಡ ನಗೆ ನಕ್ಕರು. ನಂತರ "ನಿಮಗೆ ಸ್ವರಾಜ್ಯದ ಚಿಂತೆ ಆದರೆ ಅದಕ್ಕೆ ನಮ್ಮ ಕಡೆಗೆ ಯಾವಾಗ ಬಂದೇನೋ ಎಂಬ ಚಿಂತೆ" ಎಂದರು. ಒಂದು ಕ್ಷಣ ಬಿಟ್ಟು, ಆದರೆ "ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವಿರೋ ಇಲ್ಲವೋ ಎಂಬ ಚಿಂತೆ ನನಗೆ. ಆಳರಸರು ಮಧ್ಯರಾತ್ರಿಯಲ್ಲಿ ನನ್ನ ಈ ಗುಡಿಸಲಿಗೆ ಬಂದು, 'ಸ್ವರಾಜ್ಯ ತೆಗೆದುಕೋ' ಎಂದರೇನು ಮಾಡಲಿ?" ಹೀಗೆ ಹೇಳುವಾಗ ಅವರ ಮಾತಿನಲ್ಲಿ ನಿಜವಾಗಿಯೂ ಚಿಂತೆ-ಆತಂಕಗಳಿದ್ದವು.

ಚರಕವೆಂದರೆ ಬಾಪೂಜಿಗೆ ಪ್ರಾಣಸಮಾನ. ಅದರಿಂದಲೇ ಸ್ವಾತಂತ್ರ್ಯ—ಶಾಂತಿಗಳು ಲಭ್ಯವಾಗುತ್ತವೆಂದು ನಂಬಿದ್ದರು. ಒಂದು ಸಲ, ಹೇಳಿದರು, "ನಾನು ದುಂಡು ಮೇಜಿನ ಪರಿಷತ್ತಿಗೆಂದು ಇಂಗ್ಲಂಡಿಗೆ ಹೋಗಿ ತಿರುಗಿ ಬರುವಾಗ ಇಟಲಿಯ ಮುಸ್ಸೊಲಿನಿಯವರ ನನ್ನನ್ನು ಆಮಂತ್ರಿಸಿದ್ದರು. ಅಲ್ಲಿ ಇಳಿದಾಗ ಅವರು ತಮ್ಮ ಶಸ್ತ್ರಾಗಾರವನ್ನು ನನಗೆ ತೋರಿಸಿದರು. ಆಗ ಅವು ಒಂದೊಂದು ತೆರನಾಗಿ ಮಾತನಾಡಿದವು. 'ನನ್ನ ಮೇಲೆ ನಿನ್ನ ಕೈ ಇಡು, ನಿನ್ನ ರಕ್ತ ಹೊರಚಿಮ್ಮುವೆ' ಎಂದಿತು ಖಡ್ಗ. 'ನನ್ನ ಕುದುರೆಯನ್ನೊತ್ತು, ನಿನ್ನೆದೆ ಗುಂಡಿಗೆ ಸೀಳುವೆ' ಎಂದಿತು ಬಂದೂಕು. 'ನನ್ನ ಬಾಯಲ್ಲೊಂದು ಕಡ್ಡಿ ಗೀರಿ ಒಗೆ, ನಿನ್ನನ್ನು ಉಡಾಯಿಸಿಬಿಡುವೆ' ಎಂದಿತು ತೋಫು. 'ಸ್ವಲ್ಪ ಮೇಲೆತ್ತಿ ಕೈ ಬಿಡು, ಇಡೀ ಜಗತ್ತನ್ನೇ ನಾವು ಸರ್ವನಾಶ ಮಾಡುತ್ತೇವೆ' ಎಂದುವು ಬಾಂಬುಗಳು. ಆದರೆ ನನ್ನ ಚರಕ ಹಾಗಲ್ಲ. ಇದರ ಮೇಲೆ ಕೈಯಿಟ್ಟರೆ ವಿಶ್ವಕ್ಕೆ ಶಾಂತಿ ಸುಖ ಕೊಡುತ್ತದೆ. ಬಡವನಿಗೆ ಅನ್ನ ಬಟ್ಟೆಗಳನ್ನು ಕೊಡುತ್ತದೆ. ಇದು ಸುಳ್ಳೆಂದು ಸಿದ್ಧಮಾಡಿಕೊಟ್ಟರೆ ಈ ಚರಕವನ್ನು ನಾನೇ ಸುಟ್ಟು ಹಾಕುವೆ." ಆಗವರ ಧ್ವನಿಯಲ್ಲಿ ಕಾಠಿಣ್ಯವಿತ್ತು.

ಆ ಆಶ್ರಮದಲ್ಲಿ ಮಹಾತ್ಮಾಜಿಯ ಸಾಮೀಪ್ಯದಲ್ಲಿ ನಾಲ್ಕು ವರ್ಷವಿದ್ದುದರಿಂದ ನನಗೆ ಮಾತ್ರ ಸರಳ ಜೀವನದ ಸುಖ, ಸತ್ಯ ಅಹಿಂಸೆಯ ಸುಖ 'ಪರಮ ಸುಖ'ವಾಗಿ ಪರಿಣಮಿಸಿದೆ! ◆

ರಾಜಕಾರಣಿಗಳ ಸ್ವಾರ್ಥಕ್ಕೆ
ದೇಶದ ಭವಿತವ್ಯ ಬಲಿಯಾಗದಿರಲಿ

ಆರಕ್ಷಣೆ : ಒಂದು ಪ್ರಾಮಾಣಿಕ ಚಿಂತನೆ

ಸೀತಾರಾಮ ಪಾಟೀಲ
ಎನ್. ಸುಮತಿ

ನಮ್ಮ ಸಂವಿಧಾನವು ನಾಗರಿಕ ಸ್ವಾತಂತ್ರ್ಯವನ್ನು ಘೋಷಿಸುವುದರ ಜೊತೆಗೆಯೇ ನಮ್ಮ ದೇಶದ ಇನ್ನೊಂದು ಮಹತ್ವದ ಲಕ್ಷಣವನ್ನೂ ಮರೆಯಲಿಲ್ಲ. ಅದುವೆ ಅನುಚ್ಛೇದ ೧೫ ಮತ್ತು ೧೬ರ ಮೂಲಕ ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೆ ಸೇರಿದ ಹುಟ್ಟಾ ಹಿಂದುಳಿದವರಿಗೆ ಆರಕ್ಷಣೆ ನೀಡುವುದು. ಆರಕ್ಷಣೆಯೆಂದರೆ ಈ ಜನಗಳಿಗಾಗಿ ಶೈಕ್ಷಣಿಕ ಸೌಲಭ್ಯಗಳ ವಿಷಯದಲ್ಲೂ ಸರಕಾರಿ ಸೇವೆಗಳಲ್ಲೂ ಸ್ಥಳಗಳನ್ನು ಮೀಸಲಾಗಿಡುವುದು. ಭಾರತದ ಸಂದರ್ಭದಲ್ಲಿ ಇದು ಅನಿವಾರ್ಯ ಅಗತ್ಯವೆಂಬುದು ಸ್ಪಷ್ಟವೇ ಇದೆ. ಸಾವಿರಾರು ವರ್ಷಗಳಿಂದ ರೂಢವಾಗಿ ಬೇರು ತಳೆದಿರುವ ಹಿಂದು ಜಾತಿ ವ್ಯವಸ್ಥೆಯಲ್ಲಿಯ ಅಸಮತೆಯಿಂದಾಗಿ ಭಾರತಿಯರಲ್ಲಿಯ ಬಹು ದೊಡ್ಡ ಭಾಗ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿಯುತ್ತಲೇ ಬಂತು. ಅಸ್ಪೃಶ್ಯತೆಯಂತಹ ಸಂಪ್ರದಾಯ ಪರಿಶಿಷ್ಟ ವರ್ಗವನ್ನು ಸಾಮಾಜಿಕ ರಸಾತಳಕ್ಕೆ ಅಟ್ಟಿಬಿಟ್ಟಿತ್ತು. ಸ್ವಾತಂತ್ರ್ಯಾಂದೋಲನ ಸಮಯದಲ್ಲಿ ಗಾಂಧೀಜಿ ಅಸ್ಪೃಶ್ಯತಾ ನಿವಾರಣೆಗೆ ಬಹು ಮಹತ್ವದ ಸ್ಥಾನವನ್ನಿತ್ತರು. ಅಲ್ಲದೆ ಸಂವಿಧಾನದ ರೂಪಕರಲ್ಲೊಬ್ಬರಾಗಿದ್ದ ಡಾ. ಅಂಬೇಡಕರರು ಸ್ವತಃ ತಮ್ಮದೇ ಆದ ರೀತಿಯಲ್ಲಿ ಅಸ್ಪೃಶ್ಯೋದ್ಧಾರದಲ್ಲಿ ಸಕ್ರಿಯವಾಗಿ ದುಡಿದವರು.

ಸಂವಿಧಾನವು ಮೂಲತಃ ಕೆಲವು ವರ್ಷಗಳವರೆಗೆ ಸ್ಥಳ ಕಾಯ್ದಿರಿಸಬೇಕೆಂದು ನಿರ್ಧರಿಸಿತ್ತಾದರೂ ಅದು ಜಾರಿಯಲ್ಲಿ ಬಂದು ೩೫ ವರ್ಷಗಳು ಮುಗಿದರೂ ಆರಕ್ಷಣೆಯ ಪ್ರಶ್ನೆ ಮುಗಿಯುವುದಿರಲಿ, ಹೊಸ :ಹೊಸ ರೂಪವನ್ನೇ ತಳೆಯುತ್ತಿದೆ, ಅದಕ್ಕೆ ಕಾರಣಗಳು ಅನೇಕ. ಅವು ಊಹಾತೀತವೇನಲ್ಲ. ಮೊದಲು ಸಾಮಾಜಿಕ ನ್ಯಾಯದ ಏಕಮೇವ ಗುರಿ ಸಂವಿಧಾನಕರ್ತರದಾಗಿರಬಹುದಾಗಿದ್ದರೂ ರಾಜಕಾರಣಿಗಳ ಕೈಯಲ್ಲಿ ಸಿಕ್ಕು ಹಲವು ಹತ್ತು ರೂಪಗಳನ್ನು ಪಡೆಯುತ್ತ ಇಂದು ಪೆಡಂಭೂತವಾಗಿ ನಿಂತಿದೆ.

ಮೂಲತಃ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳಿಗೆ ಮಾತ್ರ ಮೀಸಲಾಗಿರಬೇಕಿದ್ದ ಈ ಆರಕ್ಷಣೆಯನ್ನು ಸಡಿಲಿಸಿ ಇತರ ಹಿಂದುಳಿದವರಿಗೂ ಆರಕ್ಷಣೆ ಒದಗಿಸುವ ಯತ್ನ ಪ್ರಾರಂಭವಾಯಿತು. ಇದರೊಂದಿಗೆಯೇ ಇಂಜಿನಿಯರಿಂಗ್

ಮತ್ತು ಮೆಡಿಕಲ್ ಶಿಕ್ಷಣದ ಆಕರ್ಷಣೆ ಹೆಚ್ಚಾಗ ತೊಡಗಿದಂತೆಯೆ ಎಂತಾದರೂ ತಮ್ಮ ಮಕ್ಕಳಿಗೆ ಆ ಶಿಕ್ಷಣ ಸೌಲಭ್ಯ ದೊರಕಿಸುವ ಹವ್ಯಾಸವೂ ಪಾಲಕನೇಕರಿಗೆ ಹೊಸ ಜಾಡ್ಯವಾಗಿಯೇ ಪರಿಣಮಿಸಿತು. ಸರಕಾರಿ ನೌಕರಿಗಳಲ್ಲಿ ಜನಸಂಖ್ಯಾ ಮಾನದಿಂದ ಅತ್ಯಲ್ಪ ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದಿದ್ದ ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೆ ಆರಕ್ಷಣೆಯ ಮೂಲಕ ಹೆಚ್ಚೆಚ್ಚು ಸ್ಥಾನಗಳು ದೊರಕತೊಡಗಿದಾಗ ಇತರರಲ್ಲೂ ಹೊಸ ಆಮಿಷ ಉತ್ಪನ್ನವಾಗತೊಡಗಿತು. ಈ ಒಂದು ನವ ಅವಕಾಶ ರಾಜಕಾರಣಿಗಳಿಗೆ ಆಕರ್ಷಕ ಅಹಾರ ವಾಗಿ ಪರಿಣಮಿಸಿದ್ದರೆ ಅದರಲ್ಲಿ ಆಶ್ಚರ್ಯ ವೇನೂ ಇಲ್ಲ. ಇದರಿಂದಾಗಿ 'ಹಿಂದುಳಿಯುವಿಕೆ' ಯಲ್ಲಿ ವಿಶಿಷ್ಟ ಹಿತಾಸಕ್ತಿ ಬೆಳೆಯುವದಕ್ಕೆ ಬಹಿರಂಗ ಆಮಂತ್ರಣವನ್ನೇ ನೀಡಿದಂತಹ ವಾತಾವರಣ ದೇಶದ ಎಲ್ಲೆಡೆಗಳಲ್ಲೂ ಮೂಡಿತು.

ಅಭಿವೃದ್ಧಿಯ ಮಾರ್ಗದಲ್ಲಿ ಹೆಜ್ಜೆ ಹಾಕ ಲೆಳಸುತ್ತಿರುವ ಭಾರತದಂತಹ 'ಬಡ' ದೇಶ ತನ್ನ ಸದ್ಯೋಭವಿಷತ್ತಿನ ಅಗತ್ಯಗಳನ್ನು ಪ್ರಾಶ-ಸ್ತ್ಯಾನುಸಾರ ನಿರ್ಧರಿಸಬೇಕೆನ್ನುವ ಎತ್ತುಗಡೆ ಯಲ್ಲಿರುವಾಗಲೇ ಸುತ್ತಲೂ ಲತ್ತೆ ಕೊಡುವ ಕತ್ತೆಯಂತೆ ಒಂದೊಂದಾಗಿ ಹೊಸ ಹೊಸ ಸಮಸ್ಯೆಗಳು ಹುಟ್ಟುತ್ತಲೇ ನಡೆದವು. ದೇಶದ ಒಟ್ಟಾರೆ ವ್ಯವಹಾರರಂಗದಲ್ಲಿ ಕಾರ್ಯಕ್ಷಮತೆ ನಿಜಕ್ಕೂ ಹಿಂದುಳಿಯಿತು.

ಕರ್ನಾಟಕದ ಮಟ್ಟದಲ್ಲಿ ಹೇಳುವುದಾದರೆ ಜತ್ತಿ ಆಯೋಗ, ನಂತರ ಹಾವನೂರ ಆಯೋಗ; ರಾಷ್ಟ್ರ ಮಟ್ಟದಲ್ಲಿ ಕಾಲೇಲಕರ ಆಯೋಗ, ಮಂಡಲ್ ಆಯೋಗಗಳು – ಅಂತೆಯೇ ಇನ್ನನೇಕ ರಾಜ್ಯಗಳಲ್ಲಿ ಅಲ್ಲೊಂದು ಇಲ್ಲೊಂದು ಆಯೋಗ ತಮತಮಗೆ ಸರಿ ಕಂಡ ರೀತಿಯಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲೆತ್ನಿಸಿ ಅದನ್ನು ಬಿಡಿಸಿ ದ್ದೇವೆಂದುಕೊಂಡಾಗಲೂ ಮತ್ತೆ ಹೊಸ ಸಮಸ್ಯೆ ಗಳ ಬೀಜಾಂಕುರವನ್ನೂ ಮಾಡಿದುವು. ಈ ಪ್ರಶ್ನೆಗೆ ಸಂಬಂಧಿಸಿದಂತೆ ಅನೇಕ ರಾಜ್ಯಗಳ ಉಚ್ಚ ನ್ಯಾಯಾಲಯಗಳೂ ದೇಶದ ಸರ್ವೋಚ್ಚ ನ್ಯಾಯಾಲಯವೂ ಕಾಲ ಕಾಲಕ್ಕೆ ಮಹತ್ವದ ತೀರ್ಪುಗಳನ್ನು ನೀಡಿವೆ. ಕಳೆದ ಮೇ ತಿಂಗಳಲ್ಲಿ ಹಾವನೂರ ಆಯೋಗದ ಶಿಫಾರಸುಗಳನ್ನು ಆಧರಿಸಿ ಕರ್ನಾಟಕ ಸರಕಾರ ಹೊರಡಿಸಿದ್ದ ಆಜ್ಞೆಯ ಸಿಂಧುತ್ವವನ್ನು ಸರ್ವೋಚ್ಚ ನ್ಯಾಯಾ ಲಯದಲ್ಲಿ ಪ್ರಶ್ನಿಸಿದ್ದ ರಿಟ್ ಪ್ರಕರಣದಲ್ಲಿ ಮಹತ್ವದ ತೀರ್ಪು ಬಂದಿದೆ. ಈ ಪ್ರಕರಣದಲ್ಲಿ ಅದು (ಸಂವಿಧಾನ ಪೀಠ) ನೀಡಿದ ತೀರ್ಪು ತೀರ ಇತ್ತೀಚಿನದು ಹಾಗು ಮಹತ್ವದ್ದೆಂದು ಹೇಳ ಬೇಕು. ಕರ್ನಾಟಕ ಸರಕಾರದ ಕೋರಿಕೆಯ ಮೇರೆಗೆ, ಅದು ನೇಮಿಸಲಿರುವ ಇನ್ನೊಂದು ಆಯೋಗಕ್ಕೆ ಮಾರ್ಗದರ್ಶಕ ಸೂತ್ರಗಳೆನಿಸುವ ತೆರದಲ್ಲಿ ಬಂದಿರುವ ಈ ತೀರ್ಪು 'ಹಿಂದುಳಿ ಯುವಿಕೆ'ಯನ್ನು ಜಾತಿ ಮತ್ತು ಆರ್ಥಿಕ (Caste-cum-means test) ಮಾನದಂಡ ದಿಂದ ಅಳೆಯಬೇಕೆಂದು ಸೂಚಿಸಲಾಗಿದೆ. ವರಿಷ್ಠ ನ್ಯಾಯಮೂರ್ತಿ ವೈ. ವಿ. ಚಂದ್ರಚೂಡ, ನ್ಯಾಯ ಮೂರ್ತಿ ಡಿ. ಎ. ದೇಸಾಯಿ, ನ್ಯಾಯಮೂರ್ತಿ ಓ. ಚಿನ್ನಪ್ಪ ರೆಡ್ಡಿ, ನ್ಯಾಯಮೂರ್ತಿ ಈ. ಎಸ್. ವೆಂಕಟರಾಮಯ್ಯ ಮತ್ತು ನ್ಯಾಯಮೂರ್ತಿ ಎ. ಪಿ. ಸೇನರಿದ್ದ ಈ ಪೀಠದ ಪ್ರತಿಯೊಬ್ಬರೂ ಪ್ರತ್ಯೇಕ ತೀರ್ಪುಗಳನ್ನೇ ನೀಡಿದರೂ ನ್ಯಾಯ ಮೂರ್ತಿ ದೇಸಾಯಿಯುವರು ಮಾತ್ರ ಆರ್ಥಿಕ ಸ್ಥಿತಿ ಗತಿಯನ್ನೇ ಮುಖ್ಯ ಮಾನದಂಡವಾಗಿ ಹಿಡಿಯ ಬೇಕೆಂದು ಹೇಳಿದ್ದಾರೆ. ಆದರೆ ಬಹುಮತದ ಅಭಿಪ್ರಾಯ ಅದರೊಂದಿಗೆ ಜಾತಿಯನ್ನೂ ಗಣ ನೆಗೆ ತಂದುಕೊಳ್ಳಬೇಕೆಂದಿದೆ. ಆದರೆ ಹಿಂದುಳಿ ಯುವಿಕೆಯ ವಿಷಯದಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗಗಳನ್ನು ಮೂಲ ಮಾನದಂಡ ವಾಗಿ ಪರಿಗಣಿಸಿ ಇನ್ನುಳಿದ ಜಾತಿಗಳು ಆ ಮಟ್ಟದಲ್ಲಿ ಹಿಂದುಳಿದಿದ್ದರೆ ಮಾತ್ರ ಅವುಗಳನ್ನು ಹಿಂದುಳಿದವೆಂದು ಪರಿಗಣಿಸಬೇಕೆಂಬ ಅಭಿ ಪ್ರಾಯ ಸಾಮಾನ್ಯವಾಗಿತ್ತು. ಆರ್ಥಿಕವಾಗಿ

ಹಿಂದುಳಿದವರು ಎಂಬ ಒಂದೇ ಆಧಾರದಿಂದ ಆರಕ್ಷಣಾ ನೀತಿಯನ್ನು ಸರಕಾರವು ಅನುಸರಿಸಿದರೆ ಅದು ಬಹುಶಃ ಸಂವಿಧಾನದ ದೃಷ್ಟಿಯಿಂದ ವೈಧವಾಗಲಿಕ್ಕಿಲ್ಲ. ಕೇವಲ ಜಾತಿಯ ಆಧಾರದ ಮೇಲೆ ಆರಕ್ಷಣಾ ನೀತಿಯನ್ನು ಘೋಷಿಸಿದರೆ ಒಂದೇ ಜಾತಿಯಲ್ಲಿಯ ಕೆಲವೇ ಮುಂದುವರೆದವರಿಗೆ ಅದರ ಎಲ್ಲ ಲಾಭಗಳು ತಟ್ಟುವ ಸಂಭವವು ಹೆಚ್ಚು. ಆದ್ದರಿಂದ ಯಾವುದೇ ಆರಕ್ಷಣಾ ನೀತಿ ಸಂಹಿತೆಯು ಜಾತಿ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಮುಂದುವರೆಯಬೇಕೆಂಬುದೇ ನ್ಯಾಯಾಲಯದ ಮಾರ್ಗದರ್ಶಕ ಸೂಚನೆಯಾಗಿದೆ.

ಆರಕ್ಷಣಾ ನೀತಿಯು ಯಶಸ್ವಿಯಾಗಬೇಕಾದರೆ ಅಧಿಕಾರಿಗಳು ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕು. ಇಲ್ಲವಾದರೆ ಅದಕ್ಕೆ ಅಪಯಶಸ್ಸು ಕಟ್ಟಿಟ್ಟದ್ದು. ಆರಕ್ಷಣಾ ನೀತಿಯಿಂದಾಗಿ ಜಾತಿ ಪದ್ಧತಿಯು ಸಡಿಲುಗೊಳ್ಳುವದರಲ್ಲಿ ಸಂದೇಹವೇನಿಲ್ಲ. ನಿಮ್ನ ವರ್ಗಗಳು ಆರಕ್ಷಣೆಯ ಪರಿಣಾಮದಿಂದಾಗಿ ಉಚ್ಚವರ್ಗಕ್ಕೆ ತಲಪಿದರೆ ಅದರಿಂದ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗಳು ನೆಲೆಸುವದರಲ್ಲಿ ಸಂಶಯವೇನಿಲ್ಲ. ನೀತಿಯ ಅನುಷ್ಠಾನದ ಹೆಸರಿನಲ್ಲಿ ಅದರ ದುರುಪಯೋಗ ಮಾತ್ರ ಆಗಬಾರದು.

ಕೆಳಗಿನ ಜಾತಿಗಳಲ್ಲಿ ರಾಜಕೀಯ ಜಾಗ್ರತಿಯು ಉಂಟಾಗಿರುವದರಿಂದ ಉಚ್ಚವರ್ಗಗಳು ಅವರಿಗೆ ಬೆಳೆಯಲಿಕ್ಕೆ ಅವಕಾಶವನ್ನು ಕೊಡಲೇಬೇಕು. ಇಲ್ಲವಾದರೆ ಇದು ವರ್ಗಸಂಘರ್ಷಕ್ಕೆ ನಾಂದಿಯಾದೀತು. ಇದರ ಪರಿಣಾಮಗಳು ಅತ್ಯಂತ ಘೋರವಾಗುವವು.



"ಹೊಸ ಶಿಕ್ಷಣ ನೀತಿ ತರ್ತಾ ಇದೀರಲ್ಲ ನೀವು- ಅಂದ್ರೆ ನಮ್ಮಗು ಇನ್ಮೇಲೆ ಪರೀಕ್ಷೇಲಿ ಒದೇ ಪಾಸ್ ಮಾಡ್ಬೇಕು ಅಂತ ಕಾಣುತ್ತೆ."

೧೯೪೧ರ ವರೆಗೆ ನಡೆದ ಎಲ್ಲ ಜನಗಣತಿಗಳಲ್ಲೂ ಪ್ರತಿಯೊಂದು ಜಾತಿ, ಉಪಜಾತಿಯು ನಮೂದಾಗುತ್ತಿತ್ತಾದ್ದರಿಂದ ಆ ಕುರಿತು ಅಂಕಿ ಅಂಶಗಳು ಲಭ್ಯವಾಗುತ್ತಿದ್ದವು. ಆದರೆ ಸಂವಿಧಾನ ಅನುಷ್ಠಾನದಲ್ಲಿ ಬಂದಾಗಿನಿಂದೀಚೆಗಿನ ನಾಲ್ಕೂ ಜನಗಣತಿಗಳಲ್ಲಿ ಹಿಂದುಗಳಲ್ಲಿಯ ಯಾವುದೇ ಒಳಜಾತಿಯ ಉಲ್ಲೇಖವಿಲ್ಲದಿರುವುದರಿಂದ ಒಟ್ಟಿನಲ್ಲಿ ಆಯಾ ಜಾತಿ ಒಳಜಾತಿಗಳ ಪ್ರಮಾಣವನ್ನು ನಿರ್ಧರಿಸುವುದು ಅಶಕ್ಯವಾಗಿ ಪರಿಣಮಿಸಿದೆ. ನಾವು ಜಾತಿನಿರಪೇಕ್ಷರೆಂದು ಘೋಷಿಸುವುದರೊಟ್ಟಿಗೆಯೇ ಜಾತಿ ಆಧಾರಿತ ಸೌಲಭ್ಯಗಳನ್ನು ಕೇಳುತ್ತಿರಬೇಕಾದಂತಹ ವಿಪರ್ಯಾಸಕ್ಕೆ ಎಡೆಮಾಡಿಕೊಟ್ಟಿದ್ದೇವೆ. ಹೀಗಿರುವಾಗ ಮುಂದಿನ ಜನಗಣತಿಯಿಂದ ಹಳೆಯ ಸಂಪ್ರದಾಯವನ್ನು ಪುನರುಜ್ಜೀವಿಸುವುದು ನ್ಯಾಯವಾಗಿ ತೋರುತ್ತಿದೆ.

ಎಷ್ಟೋ ಸಲ ಆರಕ್ಷಣೆಯ ಅಣಕವನ್ನೂ ಕಾಣುವಂತಹ ನಿದರ್ಶನಗಳೂ ದೊರೆಯುತ್ತವೆ. ಉದಾಹರಣಾರ್ಥ, ಒಂದು ವಿಶ್ವವಿದ್ಯಾಲಯದಲ್ಲಿ ಜರ್ಮನ್, ಫ್ರೆಂಚ್, ರಶಿಯನ್, ಸಂಸ್ಕೃತ ಇತ್ಯಾದಿ ಭಾಷೆಗಳ ಪ್ರಾಧ್ಯಾಪಕರ ಸ್ಥಾನಗಳನ್ನು ಪರಿಶಿಷ್ಟ ವರ್ಗಕ್ಕೆ ಕಾದಿಡಲಾಗಿದೆ! ಇಂಥ ಅಭಾಸಗಳಿಂದ ವರ್ಷಗಟ್ಟಲೆ ಕೆಲ ಸ್ಥಾನಗಳು ಖಾಲಿಯಾಗಿಯೇ ಉಳಿದಿವೆ.

ಗುಜರಾತದಲ್ಲಿ ಇತ್ತೀಚೆ ಆರಕ್ಷಣೆಯ ವಿರುದ್ಧ ನಡೆದ ಆಂದೋಲನ ತೀವ್ರ ಹಿಂಸಾಚಾರಕ್ಕೆ ಎಡೆ ಮಾಡಿಕೊಟ್ಟಿದ್ದನ್ನೂ ಗಮನಿಸುವುದೂ ಅವಶ್ಯ. ತತ್ತ್ವಶಃ ಆರಕ್ಷಣೆಯನ್ನು ವಿರೋಧಿಸದಿದ್ದವರೂ ಆರಕ್ಷಣೆಯು ವಿಶಿಷ್ಟ ಹಿತಾಸಕ್ತಿಯಾಗಿ ಬೆಳೆಯುತ್ತಿರುವುದನ್ನು ಕಂಡೂ ತೆಪ್ಪಗೆ ಕೂಡಲಾಗುವುದಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತ.

ಆರಕ್ಷಣೆ ನಮ್ಮ ಈ 'ಧರ್ಮನಿರಪೇಕ್ಷ ಜಾತ್ಯತೀತ' ರಾಷ್ಟ್ರದಲ್ಲಿ ಸಮಾಜ ಜೀವನದ ಶಾಶ್ವತ ಲಕ್ಷಣವಾಗಿ ಉಳಿಯಬಾರದು. ಅದಕ್ಕೆ ಬದಲು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ನಿಜಕ್ಕೂ ಹಿಂದುಳಿದ ಜಾತಿ, ಉಪಜಾತಿಗಳನ್ನು ಪ್ರಾಮಾಣಿಕವಾಗಿ ಗುರುತಿಸಿ ಅವುಗಳಿಗೆ ಆರಕ್ಷಣೆ ನೀಡಬೇಕು. ಅಲ್ಲದೆ ಅವುಗಳ ಏಳ್ಗೆಗಾಗಿ ಕಾಲ ನಿರ್ಬಂಧಿತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮತ್ತು ಕಾಲಕಾಲಕ್ಕೆ ಅದರ ಅನುಷ್ಠಾನದ ಪ್ರಗತಿವಿಮರ್ಶೆ ನಡೆಯಬೇಕು. ಒಂದು ಹಿಂದುಳಿದ ಜಾತಿಯ ಜನರಲ್ಲಿ ನೂರಕ್ಕೆ ೫೦ರಷ್ಟು ಜನ ಮೇಲೆ ಬಂದಿದ್ದಾರೆಂದು ಖಚಿತಪಟ್ಟನಂತರ ಆ ಜಾತಿಯನ್ನು ಆರಕ್ಷಿತ ಪಟ್ಟಿಯಿಂದ ಸರಿಸಿ ಸಾಮಾನ್ಯರೊಂದಿಗೆ ಸೇರಿಸಬೇಕು.

ಭಾರತದಂತಹ ಬೃಹತ್ ಪ್ರಜಾತಂತ್ರವಾದಿ ರಾಷ್ಟ್ರದಲ್ಲಿ ಹತ್ತಾರು ನೂರಾರು ಬಗೆಯ ಶಕ್ತಿ ಪ್ರತಿಶಕ್ತಿಗಳು ತಾಕಲಾಡುವುದು ಸಹಜವೇ. ಇಂಥಲ್ಲೂ ನಿರ್ದಿಷ್ಟ ಗುರಿಯತ್ತ ದೇಶವನ್ನು ಮುನ್ನಡೆಸಬಲ್ಲ ನಾಯಕತ್ವ ಮಾತ್ರವೇ ಭವಿತವ್ಯಕ್ಕೆ ಯೋಗ್ಯ ಭರವಸೆ ನೀಡಬಲ್ಲದು. ಪ್ರಚಂಡ ಜನಶಕ್ತಿಯ ಈ ಪುರಾತನ ದೇಶದಲ್ಲಿಂದು ಕಂಡುಬರುತ್ತಿರುವ ತೀವ್ರ ವಿರೋಧಾಭಾಸದ ಕಾರ್ಮೋಡಗಳಲ್ಲೂ ಮಿಂಚಿನ ಬೆಳ್ಳಿಗೆರೆ ಮೂಡುವುದು ಅಸಂಭವವೇನಲ್ಲ; ಅದನ್ನು ನಿರೀಕ್ಷಿಸುವುದು ಅಸಾಧುವೂ ಅಲ್ಲ. ಆದರೆ ಯಾವುದೇ ಪ್ರಯತ್ನದ ಹಿಂದೆಯೂ ಪ್ರಾಮಾಣಿಕ ನಿಷ್ಠೆ ಮಾತ್ರ ಆತ್ಮಗತ್ಯ. ★

ದೋಷವಲ್ಲ : ಜುಲೈ ಮುಖಪುಟದ 'ಸರ್ಪಭೂಷಣ' ಶಿವನ ಕಿರೀಟ ನಾಲ್ಕು ಹೆಡೆಗಳ ನಾಗನದಿರುವುದು ದೋಷಪೂರ್ಣವೆಂದು ಓದುಗರೊಬ್ಬರು ಅಗಸ್ಟ ಸಹಚಿಂತನದಲ್ಲಿ ಬರೆದಿದ್ದಾರೆ. ಆದರೆ ಐದನೆಯ ಹೆಡೆ (ಅರ್ಥಾತ್ ಎಡದಿಂದ ಮೊದಲನೆಯ ಹೆಡೆ) ಶಿವನ ಮುಖ ಬಲಗಡೆಗೆ ವಾಲಿರುವುದರಿಂದ ಸ್ಪಷ್ಟವಾಗಿ ಪೂರ್ತಿ ಕಾಣುತ್ತಿಲ್ಲ; ನಿಜಕ್ಕೂ ಅವನ ಕಿರೀಟದ ಐದು ಹೆಡೆಗಳ ನಾಗನದೇ ಎಂದು ಕಲಾವಿದರು ತಿಳಿಸಿದ್ದಾರೆ. ಸಂ.

ರಕ್ತ ಒತ್ತಡ: ಕೆಲವು ಎಚ್ಚರಿಕೆಗಳು

ಡಾ. ಡಿ. ಕೆ. ಮಹಾಬಲರಾಜು

ಆಗಸ್ಟ್ ೮೫ರ 'ಕಸ್ತೂರಿ'ಯಲ್ಲಿ ಪ್ರಕಟವಾದ 'ರಕ್ತದ ಒತ್ತಡ' ಲೇಖನ ಓದಿದೆ. ಇಂದಿನ ಯಾಂತ್ರಿಕ ಯುಗದಲ್ಲಿ ರಕ್ತದ ಒತ್ತಡ ರೋಗಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಈ ರೋಗದ ಮುನ್ನೆಚ್ಚರಿಕೆ ಬಗ್ಗೆ ಕೆಲವು ಮಾಹಿತಿಗಳು ಉಪಯುಕ್ತವಾಗಬಲ್ಲದೆಂದು ತಿಳಿದು, ಈ ಲೇಖನಕ್ಕೆ ಪೂರಕವಾಗಿ ಕೆಲವು ಮಾಹಿತಿಗಳನ್ನು ಇಲ್ಲಿ ನೀಡುತ್ತಿದ್ದೇನೆ.

ನೀವು ರಕ್ತದ ಒತ್ತಡದಿಂದ ಮುಕ್ತರಾಗಬೇಕಾದರೆ ಕೆಳಗಿನ ಕ್ರಮಗಳನ್ನು ಅನುಸರಿಸಿರಿ.

ವಯಸ್ಸು: ರಕ್ತದ ಒತ್ತಡ ಸಾಮಾನ್ಯವಾಗಿ ೪೦ ವಯಸ್ಸಿನ ನಂತರ ಕಾಣಿಸಿಕೊಳ್ಳುತ್ತದೆ. ಈ ವಯಸ್ಸಿನ ನಂತರದವರು ಆಗಾಗ್ಗೆ ತಮ್ಮ ರಕ್ತದ ಒತ್ತಡವನ್ನು ಪರೀಕ್ಷಿಸಿಕೊಳ್ಳಬೇಕು. (ರಾತ್ರಿ ನಿದ್ದೆಯ ನಂತರ ಬೆಳಿಗ್ಗೆ ಪರೀಕ್ಷಿಸಿಕೊಂಡ ರಕ್ತದ ಒತ್ತಡ ನಿಖರವಾಗಿರುತ್ತದೆ).

ದೇಹದ ತೂಕ: ನಿಮ್ಮ ತೂಕ ಹೆಚ್ಚಾಗಿದ್ದರೆ, ನೀವು ಬೊಜ್ಜು ಮೈಯವರಾಗಿದ್ದರೆ ರಕ್ತದ ಒತ್ತಡ ಏರುವ ಸಾಧ್ಯತೆ ಬಹಳ. ಅದಕ್ಕಾಗಿ ನಿಮ್ಮ ದೇಹದ ತೂಕ ಸರಿಯಾಗಿರುವಂತೆ ನೋಡಿಕೊಳ್ಳಿ. (ಬೊಜ್ಜನ್ನು ಇಳಿಸಲು ಮಿತ ಆಹಾರ, ವ್ಯಾಯಾಮ, ಓಡಾಟಗಳು ಸಹಾಯಮಾಡಬಲ್ಲವು.)

ಆಹಾರ ಕ್ರಮ: ಆಹಾರದಲ್ಲಿ ಹೆಚ್ಚಾಗಿ ಕೊಬ್ಬನ್ನು ಉಪಯೋಗಿಸದಿರಿ. ಹೆಚ್ಚು ಕ್ಯಾಲರಿಯುಕ್ತ ಪದಾರ್ಥಗಳಾದ ಸಕ್ಕರೆ, ಬೆಣ್ಣೆ, ತುಪ್ಪ ವರ್ಜಿಸಿ.

ಉಪ್ಪು: ಉಪ್ಪಿನ ಸೇವನೆಯನ್ನು ಆದಷ್ಟು ಕಡಿಮೆ ಮಾಡಿ. ಸಾಧ್ಯವಾದರೆ ಪೂರ್ತಿ ನಿಲ್ಲಿಸಿದರಂತೂ ಒಳ್ಳೆಯದೇ.

ಧೂಮಪಾನ: ಧೂಮಪಾನ ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ. ಆದುದರಿಂದ ಧೂಮಪಾನ, ತಂಬಾಕು ಸೇವನೆ, ನಸ್ಯ ವರ್ಜಿಸಿ.

ಜೀವನ ಕ್ರಮ: ಹಣದ ದಾಹ, ಅಸೂಯೆ, ಹೊಟ್ಟೆಕಿಚ್ಚು, ಅತಿ ಆಸೆ, ಅತೃಪ್ತಿ, ಕೆಡಕು ಗುಣ, ಛಲ, ಹೆಮ್ಮೆ, ಹೆಚ್ಚಿನ ಸ್ಥಾನಮಾನ, ಧನಕ್ಕಾಗಿ ಹೋರಾಟ ವರ್ಜಿಸಿ. ನೆಮ್ಮದಿ ಹಾಗೂ ಶಾಂತಿಯಿಂದ ಬಾಳಲು ಕಲಿಯಿರಿ.

ಯೋಗ: ಯೋಗಾಸನಗಳು ರಕ್ತದ ಒತ್ತಡವನ್ನು ಗಮನಾರ್ಹ ರೀತಿಯಲ್ಲಿ ಕಡಿಮೆ

ಮಾಡಬಲ್ಲವು. ಅದರಲ್ಲೂ ಶವಾಸನ ಬಹಳ ಒಳ್ಳೆಯದು.

ಸೂಕ್ತ ವೈದ್ಯರ ಸಲಹೆ ಚಿಕಿತ್ಸೆಗಳು: ಸಕ್ಕರೆ ಕಾಯಿಲೆಯವರಿಗೆ ರಕ್ತದ ಒತ್ತಡದ ಅಪಾಯ ಹೆಚ್ಚು. ನೀವಾಗಲೇ ರಕ್ತದ ಒತ್ತಡದ ರೋಗಿಗಳಾಗಿದ್ದಲ್ಲಿ, ನಿಮ್ಮ ದೇಹದ ತೂಕ ಇಳಿಸಿ. ಆಹಾರದಲ್ಲಿ ಉಪ್ಪು, ಸಕ್ಕರೆ, ಕೊಬ್ಬಿನ ಸೇವನೆ ಕಡಿಮೆ ಮಾಡಿದಲ್ಲಿ, ನಿಮ್ಮ ರೋಗ ಆಶ್ಚರ್ಯಕರ ರೀತಿಯಲ್ಲಿ ಗುಣವಾಗುತ್ತದೆ.

ರೋಗದ ಪ್ರಾರಂಭಿಕ ಲಕ್ಷಣಗಳು: ತಲೆನೋವು, ತಲೆಸುತ್ತು, ಸಿಡಕುತನ, ಆಲಸ್ಯ, ನಿದ್ರಾಹೀನತೆ, ಮರೆವು, ಜ್ಞಾಪಕಶಕ್ತಿ ನಾಶ, ಏಕಾಗ್ರತೆಯ ಭಂಗ, ಮೈ ಕೈ ಸೋಲುವುದು, ಹೃದಯ ಬಡಿದುಕೊಳ್ಳುವುದು ಇತ್ಯಾದಿ.

ರೋಗದ ಅಪಾಯಗಳು: ಏರಿದ ರಕ್ತದ ಒತ್ತಡವನ್ನು ಅಲಕ್ಷಿಸಿದರೆ ಅದು ಈ ಕೆಳಗಿನ ಅಂಗಗಳಿಗೆ ಹಾನಿಯುನ್ನುಂಟು ಮಾಡಿ, ಸಾವಿಗೆ ಕಾರಣವಾಗಬಲ್ಲದು.

ರಕ್ತದ ಒತ್ತಡ ಹೃದಯದ ಮೇಲೆ ಬಹಳಷ್ಟು ಪ್ರಭಾವ ಬೀರುತ್ತದೆ. ರಕ್ತದ ಒತ್ತಡದ ೬೦-೭೦% ರೋಗಿಗಳು ಹೃದಯಾಘಾತದಿಂದ ನಿಧನರಾಗುತ್ತಾರೆ.

ಮಿದುಳಿನಲ್ಲಿ ರಕ್ತಸ್ರಾವವಾಗಿ ಪ್ರಜ್ಞಾಹೀನತೆ, ಪಾರ್ಶ್ವವಾಯು (ಲಕ್ವ) ಉಂಟಾಗುತ್ತದೆ. ೨೦% ರೋಗಿಗಳು ಈ ರೀತಿ ಸಾಯುತ್ತಾರೆ.

ಮೂತ್ರಪಿಂಡ ಸೋಲುವುದರಿಂದ ೨೦% ಜನ ಮರಣ ಹೊಂದುತ್ತಾರೆ.

ರೆಟಿನಾದಲ್ಲಿ ಆಗುವ ಬದಲಾವಣೆಗಳು ದೃಷ್ಟಿಹೀನತೆ ಮತ್ತು ಅಂಧತ್ವ ತರಬಲ್ಲವು. ✲



ಅಳಿದುಹೋಗುತ್ತಿರುವ ಅಪೂರ್ವ ಪಕ್ಷಿಗಳು

ಎಂ. ಶಶಿಧರ

ಪರಿಸರ ಅಸಮತೋಲನ ಮತ್ತು ಕಾಡಿನ ನಾಶದಿಂದ ಪಕ್ಷಿ ಮತ್ತು ಪ್ರಾಣಿಗಳ ಅವನತಿ ಖಚಿತ. ಬಯಲಿನಲ್ಲೂ, ನಾಗರಿಕ ಮಾನವನ ಆಕ್ರಮಣದಿಂದಾಗಿ ಪಕ್ಷಿಗಳು ವಿನಾಶದಂಚಿಗೆ ಸಾಗುತ್ತಿವೆ.

ಭಾರತದಲ್ಲಿ ವಿನಾಶದ ಅಂಚಿನಲ್ಲಿರುವ ಮೂರು ಪಕ್ಷಿ ಸಂತತಿಗಳೆಂದರೆ, ಪರ್ವತ ಕವುಜಗ (ಮೌಂಟನ್ ಕ್ವೈಲ್), ಜೆರ್ಡಾನ್ ಕೌರಸರ್ ಮತ್ತು ಗುಲಾಬಿ ತಲೆಯ ಬಾತು. ಇವುಗಳ ಜೊತೆ, ಉಳಿವಿಗಾಗಿ ಹೋರಾಡುತ್ತಿರುವ ಹಲವು ಪಕ್ಷಿ ಸಂತತಿಗಳು ಭಾರತದಲ್ಲಿದ್ದರೂ, ಈ ಮೂರು ಸಂತತಿಗಳು ತೀರ ಅಪೂರ್ವವೆಂದು ಗುರುತಿಸಲ್ಪಟ್ಟಿವೆ. ಜೊತೆಗೆ ಅವುಗಳನ್ನು ಹುಡುಕುವ ಕಾರ್ಯವು ಮುಂದುವರಿಯುತ್ತಲಿದೆ.

ಪರ್ವತ ಕವುಜಗ

(ಮೌಂಟನ್ ಕ್ವೈಲ್ - **ophrysia super ciliosa**)

ಇತ್ತೀಚೆಗೆ ಈ ಪಕ್ಷಿ ಸುದ್ದಿಯಲ್ಲಿದೆ. ಈ ಅಕ್ಟೋಬರಿನಲ್ಲಿ ಖ್ಯಾತ ಪಕ್ಷಿಶಾಸ್ತ್ರಜ್ಞ ಸಾಲೀಂ ಅಲಿಯವರು ಇದರ ಇರವನ್ನು ಹುಡುಕಲೆಂದು ಹಿಮಾಲಯದ ತಪ್ಪಲುಗಳಲ್ಲಿ ಯಾತ್ರೆ ಕೈಗೊಳ್ಳಲಿದ್ದಾರೆ. ವಾಸ್ತವವಾಗಿ, ಹಲವರು ಈ ಪಕ್ಷಿಯು ನಶಿಸಿದೆಯೆಂದು ವಾದಿಸುವರು; ಆದರೆ ಸಾಲೀಂ ಅಲಿಯವರ ಆಶೆಯೆಂದರೆ ಪರ್ವತ ಕಮರಿಯ ಮೂಲೆಯಲ್ಲಿ ಇದರ ಸಂತತಿ ಇದ್ದರೂ ಇದ್ದೀತು ಎಂದು. ಇದರ ವಾಸ ಸ್ಥಳ ಪಶ್ಚಿಮ ಹಿಮಾಲಯದ ೬೦೦೦ ದಿಂದ ೭೦೦೦ ಅಡಿ ಎತ್ತರದ ಹುಲ್ಲು ಮತ್ತು ಪೊದೆ ಬೆಳೆದ ಇಳಿಜಾರು, ಮಸ್ಸೂರಿ ಮತ್ತು ನೈನಿತಾಲ್ ಪ್ರದೇಶಗಳಲ್ಲಿ ಬಾನಂಗ್, ಭದ್ರಾಜ್ ಮತ್ತು ಶೇರ್-ಕ-ದಂಡ್ ಸ್ಥಳಗಳಲ್ಲಿ ಕಾಣ ಸಿಗುತ್ತಿತ್ತು. ಆದರೆ ೧೮೭೬ರಲ್ಲಿ ಇದು ಕಟ್ಟ ಕಡೆಯ ಬಾರಿ ಕಾಣಸಿಕ್ಕಿತ್ತು. ಆ ನಂತರ ಇದನ್ನು ಹುಡುಕುವ ಯತ್ನಗಳೆಲ್ಲ ವಿಫಲವಾಗಿವೆ.

ಇದು ಹತ್ತು ಇಂಚು ಉದ್ದದ, ಗುಂಡು ಗುಂಡಾದ ಒಂದು ಜಾತಿಯ ಕವುಜಗ ಪಕ್ಷಿ.

ಬೆನ್ನು ಕಂದು ಮಿಶ್ರಿತ ಹಸಿರು, ತಲೆಯಲ್ಲಿ ಎದ್ದು ಕಾಣುವ ಬಿಳಿ ಪಟ್ಟೆ, ಕಪ್ಪು ಕುತ್ತಿಗೆ, ಕೆಂಪು ಕೊಕ್ಕು, ಕೆಂಪು ಕಾಲು. ಇದರ ಹೆಂಟೆಯು ಸ್ವಲ್ಪ ತೆಳು ಬಣ್ಣದ್ದು, ಚುಕ್ಕಿಗಳು ಜಾಸ್ತಿ! ಗಾಬರಿಗೊಳಿಸಿದಾಗ, ಸ್ವಲ್ಪ ದೂರ ಹಾರಿ, ಮತ್ತೆ ತನ್ನ ಪ್ರಿಯ ಹುಲ್ಲು ಗಿಡಗಳ ನಡುವೆ ವಿರಮಿಸುವದು. ಗಾಬರಿಯಾದಾಗ 'ತೀಕ್ಷ್ಣ ಕೂಗನ್ನು' ಕೂಗುವದು; ಇತರ ಸಮಯದಲ್ಲಿ 'ಸಣ್ಣನೆಯ' ದನಿ ಸಹ. ಇದರ ಹೆಚ್ಚಿನ ವಿವರಗಳು ತಿಳಿದಿಲ್ಲ; ಗೂಡು ಕಟ್ಟುವ ವಿವರಗಳು ಸಹ ತಿಳಿದಿಲ್ಲ. ಬಹುಶಃ ಇದರ ಪ್ರತಿಕೃತಿಗಳು ಜಗತ್ತಿನ ಸಂಗ್ರಹಾಲಯಗಳಲ್ಲಿ ಹತ್ತಕ್ಕಿಂತ ಜಾಸ್ತಿ ಇಲ್ಲವೇ ಇಲ್ಲ. ಈ ವರ್ಷ ಅಕ್ಟೋಬರಿನಲ್ಲಿ ಇದನ್ನು ಹುಡುಕಲು ಹೊರಟಿರುವ ಸಲೀಂ ಅಲಿಯವರ ಪ್ರಯತ್ನದಿಂದ, ಇದರ ಕುರಿತು ಹೆಚ್ಚು ತಿಳಿಯಲಾದೀತು ಎಂದು ಆಶಿಸೋಣ.

ಜೆರ್ಡಾನ್ ಕೌರ್ಸರ್: (Cursorius bitorquatus):

ಇದನ್ನು ಎರಡು ಪಟ್ಟಿಯ ಕೌರ್ಸರ್ ಎಂದು ಸಹ ಕರೆಯಲಾಗುತ್ತದೆ. ೧೮೪೮ ರಲ್ಲಿ ಇದರ ಇರವನ್ನು ಪತ್ತೆ ಹಚ್ಚಲಾಯ್ತು. ಆದರೆ ೧೯೦೦ ರ ಸಮಯದಲ್ಲೆ ದುರ್ಲಭ ಪಕ್ಷಿಯಾಗಿ ಬಿಟ್ಟಿತ್ತು, ಆ ನಂತರ ಇದನ್ನು ಕಾಣಲಾಗಿಲ್ಲ. ಆಂಧ್ರಪ್ರದೇಶದ ಗೋದಾವರಿ ಕಣಿವೆಯಲ್ಲಿ ಮಾತ್ರ ಕಂಡು ಬರುತ್ತಿತ್ತು. ನೆಲ್ಲೂರು, ಕಡಪ, ಭದ್ರಾಚಲಂ, ಅನಂತಪುರ ಜಿಲ್ಲೆಯ ಅರೆಬರೆ ಗುಡ್ಡ ಪ್ರದೇಶಗಳೇ ಇವರ ವಾಸಸ್ಥಾನ. ಆದರೆ, ೧೯೦೦ ನಂತರ ಇದರ ಇರವನ್ನು ಖಚಿತಪಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾಗಿವೆ. ಸುಮಾರು ೧೩ ಇಂಚು ಗಾತ್ರದ, ತೆಳ್ಳನೆಯ ದೇಹದ ಪಕ್ಷಿ ಇದು. ಕಂದು ಎದೆಯ ಮತ್ತು ಕುತ್ತಿಗೆಯ ಮಧ್ಯೆ ಬಿಳಿಯ ಪಟ್ಟಿ, ಜೊತೆಗೆ ಕೆಳಗೆ



ಪರ್ವತ ಕವುಜಗ (ಗಂಡು) ಹಕ್ಕಿ

ಇನ್ನೊಂದು ಬಿಳಿಪಟ್ಟಿ ಇದರ ಪ್ರಮುಖ ಗುರುತು; ತಲೆ, ಬೆನ್ನು ದಟ್ಟ ಹಸಿರು, ಕೆನ್ನೆ ಬಿಳಿ; ಬಾಲ ಕಪ್ಪು. ಇದರ ಜಾತಿಯ ಇನ್ನೊಂದು ಹಕ್ಕಿ ಭಾರತದ ಕೌರ್ಸರ್ (Indian courser) ರೀತಿಯ ನಡೆ ನುಡಿ., ಚುರುಕಾಗಿ ನಡೆಯುತ್ತ, ಕೀಟಗಳನ್ನು ಹಿಡಿಯುತ್ತ, ಗಾಬರಿಯಾದಾಗ ಚಕ್ಕನೆ ಮುಂದೋಡಿ ನಿಲ್ಲುತ್ತದೆ; ಒಂದು ಕ್ಷಣ ನಿಂತು ಗಾಬರಿಯ ಕಾರಣವನ್ನು ಗಮನಿಸುತ್ತದೆ. ಮತ್ತೆ ಓಡುತ್ತದೆ; ಅನಿವಾರ್ಯವಾದಾಗ, ಕೂಗು ಸಹಿತ ಹಾರಿ, ನೆಲಮಟ್ಟದಿಂದ ಜಾಸ್ತಿ ಎತ್ತರಕ್ಕೆ ಹೋಗದೆ, ಅನತಿ ದೂರದಲ್ಲೆ ನೆಲಕ್ಕಿಳಿಯುತ್ತಲೇ ಓಡಲು ಶುರು ಮಾಡುತ್ತದೆ. ಇದನ್ನು ಇನ್ನು ಹುಡುಕಬಲ್ಲೆವೆ ಅಥವಾ ನಾಗರಿಕನು ಇದರ ವಾಸಸ್ಥಳವನ್ನು ಪೂರ್ತಿಯಾಗಿ ಆಕ್ರಮಿಸಿರುವನೆ?

ಗುಲಾಬಿ ತಲೆಯ ಬಾತು

(Rhodonesa earyophylacca) :— ಮುಖ್ಯವಾಗಿ ಹಿಮಾಲಯದ ಜೌಗು ಕಾಡುಗಳಲ್ಲಿ, ನೇಪಾಳ, ಮಣಿಪುರ, ಅಸ್ಸಾಂ, ಬಂಗ್ಲಾಗಳಲ್ಲಿ ಕಾಣಸಿಗುತ್ತಿದ್ದರೂ ಆಂಧ್ರದ ನೆಲ್ಲೂರಿನಲ್ಲೂ ಕಾಣಬರುತ್ತಿದ್ದವು. ಸಾಮಾನ್ಯ

ಭಾರತೀಯ ಪಕ್ಷಿಶಾಸ್ತ್ರ ಎಂಬ ಹೆಸರು ಕೇಳಿದ ತಕ್ಷಣ ನೆನಪಾಗುವವರು ಅಜ್ಜ ಸಲೀಂ ಅಲಿ. ಮುಂಬಯಿಯಲ್ಲಿ ೧೮೯೬ರ ನವಂಬರ್ ೧೨ರಂದು ಜನಿಸಿದ ಇವರು ಚಿಕ್ಕಂದಿನಲ್ಲಿ ಬೇಟೆಯಾಡಿದ ಅಪರೂಪದ ಪಕ್ಷಿಯಿಂದಾಗಿ ಮುಂದೆ ಪಕ್ಷಿಗಳ ವೀಕ್ಷಣೆಯನ್ನು ಹವ್ಯಾಸವನ್ನಾಗಿರಿಸಿಕೊಂಡರು. ನಂತರ ಪಕ್ಷಿಶಾಸ್ತ್ರವನ್ನು ಅಧ್ಯಯನ ಮಾಡಿ, ಮುಂಬಯಿಯ ನ್ಯಾಚುರಲ್ ಹಿಸ್ಟರಿ ಸೊಸೈಟಿಯಲ್ಲಿ ತೊಡಗಿಸಿಕೊಂಡರು. ಭಾರತದ ಹಲವು ರಾಜ್ಯಗಳಲ್ಲಿ ೧೯೩೦ರ ಸಮಯದಲ್ಲೇ ಪಕ್ಷಿಗಳ ಸರ್ವೆ ಮಾಡಿ, ನಂತರ ಪುಸ್ತಕಗಳನ್ನು ಬರೆದರು. ಅವರು ಬರೆದ 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ' ಹೊಸಬರಿಗೆ ಸರಳವಾಗಿ ಪಕ್ಷಿಗಳ ಪರಿಚಯ ಮಾಡಿಕೊಡುವ ಖ್ಯಾತ ಪುಸ್ತಕವಾಗಿದೆ. ಮೊದಲ ಬಾರಿ ೧೯೪೧ರಲ್ಲಿ ಮುದ್ರಣಗೊಂಡ ಇದು, ನಂತರ ೧೩ಕ್ಕೂ ಹೆಚ್ಚು ಮರು ಮುದ್ರಣ ಕಂಡಿದೆ. ಇತರ ಹಲವು ಪುಸ್ತಕಗಳ ಜೊತೆ, ಪಕ್ಷಿ ಶಾಸ್ತ್ರದ ಸಮಗ್ರ ಗ್ರಂಥ 'ಹ್ಯಾಂಡ್‌ಬುಕ್ ಆಫ್ ದಿ ಬರ್ಡ್ಸ್ ಆಫ್ ಇಂಡಿಯ ಎಂಡ್ ಪಾಕಿಸ್ತಾನ'ವನ್ನು ಡಿಲ್ಲಾನ್ ರಿಪ್ಲೆ ಜೊತೆ ಸೇರಿ ಬರೆದರು. ಹತ್ತು ಸಂಪುಟಗಳಲ್ಲಿ ಇರುವ ಈ ಪುಸ್ತಕ ಭಾರತದ ಎಲ್ಲಾ ಭಾಗಗಳ, ಎಲ್ಲಾ ಪಕ್ಷಿಗಳ ಪರಿಚಯ ನೀಡುತ್ತದೆ. ಪುನಃ, ಇತ್ತೀಚೆಗೆ ೧೯೮೩ರಲ್ಲಿ ಭಾರತದ ೧೨೪೧ ಜಾತಿಯ ಪಕ್ಷಿಗಳ ಚಿತ್ರವಿರುವ ಕೈಪಿಡಿ 'ಎ ಪಿಕ್ಟೋರಿಯಲ್ ಗೈಡ್ ಟು ದಿ ಬರ್ಡ್ಸ್ ಆಫ್ ದಿ ಇಂಡಿಯನ್ ಸಬ್ ಕಾಂಟಿನೆಂಟ್'ನ್ನು ಡಿಲ್ಲಾನ್ ರಿಪ್ಲೆ ಜೊತೆ ಸೇರಿ ಬರೆದರು. ಇತ್ತೀಚೆಗೆ ಇವರಿಗೆ ೫೦,೦೦೦ ಡಾಲರಿನ ಜೆ. ಪಾಲ್ ಜೆಟ್ಟಿ ಬಹುಮಾನ ಬಂತು.

ಈ ಅಕ್ಟೋಬರಿನಲ್ಲಿ ಹಿಮಾಲಯದ ಕಾಡುಗಳಲ್ಲಿ ಅವರ ಒಂದು ಯಾತ್ರಾ ತಂಡ ಹೊರಡಲಿದೆ! ಉದ್ದೇಶ–ಹಿಮಾಲಯದ ಕವುಜುಗವನ್ನು (ಹಿಮಾಲಯನ್ ಕ್ವೈಲ್) ಹುಡುಕುವುದು. ಅದೀಗ ಇಲ್ಲವೆಂಬ ಅನುಮಾನ ಇದೆ. ಇವರು ಹುಡುಕುವಲ್ಲಿ ಯಶಸ್ವಿಯಾದರೆ, ಇವರ ಹಿರಿಮೆ ಹೆಚ್ಚುವದಕ್ಕಿಂತ ಮುಖ್ಯವಾಗಿ ಭಾರತದ ಪಕ್ಷಿ ಸಂಕುಲ ಶ್ರೀಮಂತವಾಗುವದು.

ಎಂ. ಕೆ.

ಬಾತುಗಳಷ್ಟೇ ಗಾತ್ರದ ಇದರ ತಲೆ ಗುಲಾಬಿ ಬಣ್ಣದ್ದಿದ್ದು, ಗುಲಾಬಿ ಬಣ್ಣದ ಕೊಕ್ಕು, ದಟ್ಟ ಕಂದು ಬಣ್ಣದ ಬೆನ್ನು, ತೆಳುಕಂದು ಬಣ್ಣದ ಹೊಟ್ಟೆ ಇದರ ಗುರುತುಗಳು. ಗುಂಪಾಗಿ ಕಂಡು ಬರುತ್ತಿದ್ದ ಇವುಗಳ ಮಾಂಸಕ್ಕಾಗಿ, ಸತತ ಬಲಿ ನಡೆಯಿತು. ಅವುಗಳ ಗುಂಪು ಪ್ರವೃತ್ತಿಯೇ ಅವಕ್ಕೆ ಮುಳುವಾಯ್ತು. ೧೯೩೫ರ ನಂತರ ಅವುಗಳನ್ನು ಕಾಣಲಾಗಿಲ್ಲ. ೧೮೯೦ ರ ತನಕ ಕಲ್ಕತ್ತದ ಮಾರುಕಟ್ಟೆಯಲ್ಲಿ ಒಂದೆರಡು ಡಜನ್ನು ಸಿಗುತ್ತಿದ್ದವು. ಆಗಲೇ ಅಪೂರ್ವವಾಗಿದ್ದ ಅವುಗಳ ಹತ್ಯೆ ನಿರಂತರವಾಗಿ ನಡೆದು, ಈಗ ಬಹುಶಃ ಕಾಣದಾಗಿರಬಹುದು. ೧೯೫೬ ರಲ್ಲಿ ಇವುಗಳ ಶಿಕಾರಿಯನ್ನು ಕಾನೂನು ಮೂಲಕ ನಿಷೇಧಿಸಲಾದರೂ, ಊರಿನ ಕೊಳ್ಳೆಯ ನಂತರ ದಿಡ್ಡಿಬಾಗಿಲನ್ನು ಹಾಕಿದಂತೆ, ಪ್ರಾಯಶಃ ಅದಾಗಲೇ ಅವುಗಳ ನಿರ್ನಾಮವಾಗಿದ್ದೀತು.

ಯರೆಲಡ್ಡು (ಗ್ರೇಟ್ ಇಂಡಿಯನ್ ಬಸ್ಟಾರ್ಡ್) (Choriotis nigriaps):

ಕಾನೂನಿನ ಪ್ರಕಾರ ಇದನ್ನು ಕೊಲ್ಲುವಂತಿಲ್ಲ; ಆದರೆ ಬೇಸಾಯದ ಜಮೀನಿನ ವೃದ್ಧಿಯಿಂದಾಗಿ ಇವರ ಸಂತತಿ ಬೆಳವಣಿಗೆಗೆ ಕಷ್ಟವಾಗುತ್ತಿದೆ. ದಖ್ಖನ್ನ ಪ್ರಸ್ತಭೂಮಿಯಲ್ಲಿ ಕರ್ನಾಟಕದ ತನಕ ಕಂಡುಬರುತ್ತದೆಂದು ಹೇಳಲಾದ ಈ ಪಕ್ಷಿ ರಣ ಹದ್ದಿನ ಗಾತ್ರದ್ದು. ಉಷ್ಟ್ರಪಕ್ಷಿಯ ಹೋಲಿಕೆ; ದಟ್ಟ ಬೂದು ಬೆನ್ನು; ಕಪ್ಪು ಬಣ್ಣದ ಭುಜರೆಕ್ಕೆಗಳೂ; ಕುತ್ತಿಗೆ, ಎದೆ ಬಿಳಿ; ಕಪ್ಪನೆಯ ತಲೆ.

ಇದರ ಸಂಖ್ಯೆ ಕ್ಷೀಣಿಸುತ್ತಿದ್ದರೂ, ಆಂಧ್ರದ ಕರ್ನೂಲು ಜಿಲ್ಲೆಯಲ್ಲಿ ಪ್ರಾಯಶಃ ಕರ್ನಾಟಕದ ಉತ್ತರ ಭಾಗದಲ್ಲಿ ಇನ್ನೂ ಉಳಿದಿವೆ. ಹುಲ್ಲು ಬೆಳೆದ ಭೂಮಿ, ಕೃಷಿಭೂಮಿಯಲ್ಲಿ ನಾಲ್ಕೈದರ ಗುಂಪಾಗಿರುವ ಇವು ಚೆನ್ನಾಗಿ ಓಡಬಲ್ಲವು. ಜೊತೆಗೆ ಚೆನ್ನಾಗಿ ಹಾರಲೂ ಬಲ್ಲವು. ಮುಂಬಯಿಯ ನ್ಯಾಚುರಲ್ ಹಿಸ್ಟರಿ ಸಂಘವು ಈ ವರುಷ ಇದರ ಕುರಿತು ಮತ್ತು ಇದರ ಸಮೀಪ ಬಂಧುಗಳಾದ 'ಕಣ್ಣವಳು' (ಲೆಸ್ಸರ್ ಫ್ಲಾರಿಕನ್) ಮತ್ತು ಬೆಂಗಾಳಿ ಫ್ಲಾರಿಕನ್ ಕುರಿತು ಸಂಶೋಧನೆಗೆ ತೊಡಗಿದೆ. ಕರ್ನಾಟಕದಲ್ಲಿ ಯರೆಲಡ್ಡು ಅಥವ ಓರೆ ಪಕ್ಕಿ ಅಥವ ಅರಲುಕುಜಿನ ಹಕ್ಕಿ ಎಂದು ಹೆಸರಿರುವ ಗ್ರೇಟ್ ಇಂಡಿಯನ್ ಬಸ್ಟಾರ್ಡ್‌ನ್ನು ಉಳಿಸಿಕೊಳ್ಳುವಲ್ಲಿ ನಾವು ಸಫಲರಾಗುತ್ತೇವೆಂದು ಆಶಿಸಬೇಕು. ✪

ಪ್ರತಿಕ್ರಿಯೆ

"ದೇವಾಲಯಗಳ ನಗ್ನ ಮೂರ್ತಿಶಿಲ್ಪಗಳು
ಎಷ್ಟೊಂದು ನಿಶ್ಚಲ!"–
ಎಂದೇನೇನೋ ಉದ್ಗಾರವೆತ್ತಿದ ಗೆಳೆಯ;
ಅದಕ್ಕೆ ತಕ್ಷಣವೇ ನಾನು ಹೀಗೆಂದೆ :
"ಅವು ಅಷ್ಟು ನಿಶ್ಚಲವಾಗಿದ್ದೇ
ನಾವು ಇಷ್ಟೆಲ್ಲಾ ಚಲಿಸಿದ್ದೇವೆ
ಇನ್ನೂ ಅವೂ ಚಲಿಸಿದ್ದೇ ಆದರೆ......
ಭಾರತ ಚೈನಾವನ್ನೂ ಮೀರಿಸುತ್ತ
ಜನಸಂಖ್ಯೆಯಲ್ಲಿ !"

–ದೊಡ್ಡರಂಗೇಗೌಡ

ಅಲೆಗಳು

ಮೂಲ: ವಿನ್ನಕೋಟ ಸುಶೀಲಾದೇವಿ
ಕನ್ನಡಕ್ಕೆ : **ಶಾರದಾತನಯ**

"ಪ್ರಖ್ಯಾತ ಗಾಯಕ ಕಿರಣ್‌ಕುಮಾರ್ ಅವರು ನೆನ್ನೆ ರಾತ್ರಿ ಹನ್ನೊಂದು ಘಂಟೆಗೆ ಹೃದಯಸ್ತಂಭನದಿಂದ ಮರಣವನ್ನಪ್ಪಿದರೆಂದು ತಿಳಿಸಲು ವಿಷಾದಿಸುತ್ತೇವೆ"- ಬೆಳಿಗ್ಗೆ ಏಳು ಘಂಟೆಗೆ ಈ ವಾರ್ತೆ ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿತ್ತು. ಇದನ್ನು ಕೇಳುತ್ತಲೇ ಹಿತ್ತಲಿನ ನಲ್ಲಿಯಿಂದ ನೀರಿನ ಕೊಡ ಹೊತ್ತು ತರುತ್ತಿದ್ದ ಸಂಧ್ಯಳ ಕಂಕುಳಿಂದ ಕೊಡ ಜಾರಿ ಬಿತ್ತು.

ಕೊಡ ಬಿದ್ದ ಶಬ್ದಕ್ಕೆ ಮುಂದಿನ ಕೋಣೆಯಲ್ಲಿದ್ದ ಆಕೆಯ ಗಂಡ ಕಾಮೇಶಂ ಹಾಗೂ ಮಕ್ಕಳಿಬ್ಬರೂ ಓಡೋಡಿ ಬಂದರು. ಕೊಡದಲ್ಲಿದ್ದ ನೀರೆಲ್ಲಾ ಚೆಲ್ಲಿ ಅಡಿಗೆ ಮನೆ ಒಂದು ಚಿಕ್ಕ ಕೆರೆಯಂತಾಯ್ತು. ಮೇಲಿಂದ ಬಿದ್ದ ಭಾರಕ್ಕೆ ಬಿಂದಿಗೆಯ ತಳ ಅಂಗೈ ಅಗಲದಷ್ಟು ನೆಗ್ಗಿತ್ತು.

"ಅಕ್ಕ ಅಲ್ಲಿ ನೋಡೆ ಎಷ್ಟೊಂದು ನೀರು ಚೆಲ್ಲಿ ಹೋಗಿದೆ" ಎಂದ ಪುಟ್ಟ ಬಾಬು ಆ ನೀರು ನೋಡಿ. "ಅಮ್ಮಾ ಏನಾಯ್ತಮ್ಮ! ಹಾಗೆ ಬಿಂದಿಗೇನೂ ಹಾಕ್ಕೊಂಡು ಬಿದ್ಬಿಟ್ಟೆ?" ಎಂದು ಕೇಳಿದಳು ಮಗಳು- ಗಾಬರಿಯಿಂದ. ಕಾಮೇಶಂ ಬಿಂದಿಗೆಯನ್ನು ಕೈಗೆತ್ತಿಕೊಂಡು- ಅದು ಎಷ್ಟರಮಟ್ಟಿಗೆ ಸಜ್ಜು-ಗುಜ್ಜಾಗಿದೆ ಎಂದು ಪರೀಕ್ಷಿಸತೊಡಗಿದ.

ರೇಡಿಯೋದಲ್ಲಿ ಇನ್ನೂ ಕಿರಣ್‌ಕುಮಾರ್ ಬಗ್ಗೆ ಹೆಚ್ಚಿನ ವಿಷಯಗಳು ಪ್ರಸಾರವಾಗುತ್ತಿದ್ದುವು. 'ಕಿರಣ್ ನನ್ನ ಕಿರಣ್ ಇನ್ನಿಲ್ಲ ನನ್ನ ಪಾಲಿಗೆ' ಎಂದುಕೊಂಡ ಅವಳ ಮನಸ್ಸು ಶೂನ್ಯವಾಗಿತ್ತು. ಮುಖವನ್ನು ಎರಡೂ ಕೈಗಳಿಂದಲೂ ಮುಚ್ಚಿಕೊಂಡು ಅಳತೊಡಗಿದಳು ಸಂಧ್ಯ.

"ಏನಾಗಿದೆ ನಿಂಗೆ ಅಳೋಕ್ಕೆ? ಅಷ್ಟು ಚೆನ್ನಾಗಿದ್ದ ಕೊಡ ತೊಗೊಂಡು ಇನ್ನೂ ಒಂದು ವರ್ಷ ಕೂಡಾ ಆಗಿಲ್ಲ-ನೋಡು-ಎಷ್ಟೊಂದು ಸಜ್ಜು-ಗುಜ್ಜಾಯ್ತು ನಿನ್ನ ಕೈಗೆ ಸಿಕ್ಕು" ಕಾಮೇಶಂ ಕೋಪದಿಂದ ಅರಚಿದ.

'ನಾಶವಾದದ್ದು ಬಿಂದಿಗೆಯಲ್ಲ ನನ್ನ ಬಾಳು. ಇಂದಿನಿಂದ ನನ್ನ ಭಾವನಾ ಜಗತ್ತೇ ಶೂನ್ಯವಾಯಿತು' ಎಂದು ಅವಳ ಮನಸ್ಸು ವಿಲ-ವಿಲ ಒದ್ದಾಡಿತು.

"ಮಾಡಿರೋ ಅವಿವೇಕದ ಕೆಲಸಕ್ಕೆ ಅಳು ಒಂದು ಕೇಡು. ಬೇಗ ಕಾಫಿ ಮಾಡಿ ನನ್ನ ಮುಖಕ್ಕೆ ಸುರಿ. ನಾನೆಲ್ಲೋ ಹೋಗಬೇಕು

ಅರ್ಜೆಂಟಾಗಿ" ಎಂದು ಕಾಮೇಶಂ ಆಜ್ಞೆಮಾಡಿ ಮುಂದಿನ ಕೋಣೆಗೆ ಹೋದ.

ಈಗ ರೇಡಿಯೋದಲ್ಲಿ ಕಿರಣ್‌ಕುಮಾರನ ಹಾಡುಗಳು ಬಿತ್ತರಗೊಳ್ಳುತ್ತಿದ್ದವು. ಅವನ ಕಂಠ ಸುಶ್ರಾವ್ಯವಾಗಿತ್ತು. ಓಹ್!... ಅದು ಹಾಡಲ್ಲ, ಮೃದು ಮಧುರವಾದ ಪದಪುಂಜ ರಾಗದ ರೂಪ ತಾಳಿ ಕೇಳಿಬರುತ್ತಿತ್ತು. ಆ ಕಂಠ ಇನ್ನೆಲ್ಲಿ? ಆ ಮಧುರ ಗಾಯಕನೂ ಇಲ್ಲ- ಆ ಮಧುರ ಕಂಠವೂ ಇಲ್ಲ- ದೂರ ತೀರಗಳಿಗೆ ಮರಳಿ ಬಾರದ ಲೋಕಕ್ಕೆ ತೆರಳಿದ ಸದ್ದಿಲ್ಲದೆ- ಎಂದೆಲ್ಲ ಅವನನ್ನೇ ನೆನಸಿಕೊಂಡ ಸಂಧ್ಯಳ ಕಣ್ಣಿಂದ ಚಿಮ್ಮಿದ ಅಶ್ರು ಬಿಂದುಗಳು ನೆಲದ ಮೇಲೆ ಹರಡಿಕೊಂಡಿದ್ದ ನೀರಿನಲ್ಲಿ ಒಂದಾಗುತ್ತಿದ್ದವು. 'ಪ್ರಪಂಚಕ್ಕೆ ಅವನ ಇಂಪಾದ ಗಾನ ಮಾತ್ರ ಗೊತ್ತು. ನನಗೆ ಅವನ ಹೃದಯದ- ಮನಸ್ಸಿನ ಲಾಲಿತ್ಯ- ಆದರಾಭಿಮಾನಗಳೂ ಗೊತ್ತು-' ಎಂದುಕೊಳ್ಳುತ್ತಾ ಕಾಫಿ ಡಿಕಾಕ್ಷನ್ನಿಗೆ ಹಾಲು ಸಕ್ಕರೆ ಬೆರಸಿದಳು.

"ಇದೇನು! ಕಾಫಿನೋ ಸಕ್ಕರೆ ಪಾನಕಾನೊ?" ಎಂದು ಗಟ್ಟಿಯಾಗಿ ಕೂಗಿಟ್ಟ ಕಾಮೇಶಂ.

'ಕಿರಣ್ ನಿನ್ನ ಕಂಠದಲ್ಲಿ ಅಷ್ಟೊಂದು- ಇಂಪು ಸಿಹಿ ಹೇಗೆ ಬಂತು? ನೀನೆಲ್ಲೋ ಚಿಕ್ಕಂದಿನಲ್ಲಿ ದಿನಾ ಒಂದೇ ಸಮನಾಗಿ ಸಕ್ಕರೆ ಪರಬತ್ತೇ ಕುಡಿದಿದ್ದೀಯೋ ಏನೊ!' ಎಂದು ಒಂದು ದಿನ ತಾನಂದುದಕ್ಕೆ ಪ್ರತಿಯಾಗಿ ಕಿರಣ್ ತೃಪ್ತಿಯಿಂದ ನಕ್ಕಿದ್ದ.

'ನಿನ್ನ ಕಂಠದಲ್ಲಿರೋದು ನರಗಳಾ? ಇಲ್ಲಾ ವೀಣೆಯ ತಂತಿಗಳಾ? ನಾನು ನೋಡಬೇಕಲ್ಲ!' ಎಂದ ತನ್ನ ಮಾತಿಗೆ-

'ಅಮ್ಮ ಸಂಧ್ಯ! ಅಂಥ ಕೆಲಸ ಎಲ್ಲಾದರೂ ಮಾಡಿ ನನ್ನ ಗಂಟಲನ್ನು ಕೊಯ್ದಿಯಾ? ನೀನು ಹಾಗೆ ಮಾಡಿದರೆ ನಾನು ಸತ್ತೇ ಹೋಗ್ತೀನಿ, ಅಷ್ಟೆ?' ಎನ್ನುತ್ತ ಎರಡು ಕೈಗಳಿಂದಲೂ ಅವಳನ್ನು ಬಳಸಿ ಕುತ್ತಿಗೆಯ ಮೇಲೆ ಚುಂಬನದ ಮಳೆಗರೆಯುತ್ತಿದ್ದ.

"ಎಷ್ಟು ಹೊತ್ತು ಹಾಗೆ ಕಂಬದ ಹಾಗೆ ನಿಂತುಕೊಂಡಿದ್ದೀಯಾ? ಒಳಗೆ ಹೋಗಿ ಅಡಿಗೆ ಆಯ್ತೋ ಇಲ್ಲವೋ ನೋಡು, ಆಫೀಸಿಗೆ ಟೈಮಾಗ್ತಾ ಬಂತು." ಎಂದ ಕಾಮೇಶಂ ಕುಡಿದ ಬಟ್ಟಲನ್ನು ಅವಳ ಕೈಗೆ ಕೊಡುತ್ತಾ.

ಸಂಧ್ಯ ಅಡಿಗೆ ಮನೆಗೆ ಹೋದಳು.

ರೇಡಿಯೋದಲ್ಲಿ ಕಿರಣ್ ಹಾಡಿದ ವಿಷಾದ ಗೀತೆಯೊಂದು ಕೇಳಿಬರತ್ತಿತ್ತು.

'ಕಿರಣ್ ನಿನ್ನ ಕಂಠದಿಂದ ವಿಷಾದ ಗೀತೆಗಳೂ ಎಷ್ಟು ಇಂಪಾಗಿ ಹೊರಹೊಮ್ಮುತ್ತವೆ ಗೊತ್ತಾ?'

'ಸಂಧ್ಯಾ ಪ್ರತಿ ಮನುಷ್ಯನ ಜೀವನದಲ್ಲೂ ಅಂತರ್ವಾಹಿನಿಯಾಗಿ ವಿಷಾದ ಗೀತೆ ಆಲಾಪಿಸುತ್ತಲೇ ಇರುತ್ತದೆ' ಎಂದು ಮತ್ತೊಂದು ಗೀತೆಯನ್ನು ಆಲಾಪಿಸಿದ ಮಧುರವಾಗಿ.

ಆ ಹಾಡಿಗೆ ಆ ಹಾಡಿನ ಭಾವಮಾಧುರ್ಯಕ್ಕೆ ಎದುರಿಗಿದ್ದ ಸಮುದ್ರದ ಅಲೆಗಳು ಭೋರಿಡುತ್ತಿದ್ದು ಒಮ್ಮೆಲೆ ಸ್ತಬ್ಧವಾದಂತಾಯಿತು. ಸೃಷ್ಟಿಯಲ್ಲಿನ ಅಣು ಅಣುವೂ ಅವನ ಹಾಡಿಗೆ ಪುಲಕಾಂಕುರಗೊಂಡಂತಿತ್ತು. ತನ್ನ ಮನಸ್ಸಂತೂ ಅವನ ಗಾನ ಮಾಧುರ್ಯದಲ್ಲಿ ತಲ್ಲೀನವಾಗಿತ್ತು. ಹಾಡುತ್ತಿದ್ದ ಪಕ್ಷಿಯೊಂದು ಇದ್ದಲ್ಲೇ ಚಲಿಸಿದಂತಾಯಿತು.

'ಕಿರಣ್ ನಮ್ಮ ಈ ಮಿಲನ ಒಂದು ಅಪೂರ್ವ ಯೋಗಾಯೋಗ ಅಲ್ವಾ?' ಎಂದು ಒಮ್ಮೆ ಕೇಳಿದ್ದಳು.

'ಸಂಧ್ಯಾ! ಪ್ರೇಮಿಗಳ ಮಿಲನ ಯಾವಾಗಲೂ ಒಂದು ವಿಚಿತ್ರ ಮಿಲನವೇ ಸಂಧ್ಯಾ! ಈ ಗಾನ, ಈ ಗಾನದಲ್ಲಿ ತನ್ಮಯಳಾಗಿ ಆಲಿಸುತ್ತಿರುವ ನೀನು- ನನಗಷ್ಟೇ ಸಾಕು. ಈ ಪ್ರಪಂಚದಲ್ಲಿ ಇನ್ನೇನೂ ಬೇಡ' ಎಂದಿದ್ದ ಭಾವಾವೇಶದಿಂದ.

ತನ್ನನ್ನು ಅಷ್ಟೊಂದು ಪ್ರೇಮಿಸಿದ ಕಿರಣ್ ಇನ್ನಿಲ್ಲ. ಕಿರಣ್ ಸತ್ತುಹೋದರೂ ತಾನಿನ್ನೂ ಕಲ್ಲು ಗುಂಡಿನಂತೆ ಬದುಕಿದ್ದೇನೆ. 'ಭಗವಂತ! ನನಗೇಕೆ ಸಾವು ಬರಬಾರದು? ನನ್ನ ಹೃದಯವೇಕೆ ಸಾವಿರ ಹೋಳಾಗಬಾರದು. ನಾನೊಬ್ಬಳೇ ಅಲ್ಲ, ನನ್ನೊಂದಿಗೆ ಇಡೀ ಪ್ರಪಂಚವೇ ಏಕೆ ಸ್ಫೋಟ-

ಗೊಳ್ಳಬಾರದು? ಎಲ್ಲ ಜೀವಕೋಟಿಯೂ ನನ್ನೊಂದಿಗೆ ಸಾವನಪ್ಪಬೇಕು! ಹೌದು ಎಲ್ಲ ನಶಿಸಿ ಹೋಗಬೇಕು ನನ್ನೊಂದಿಗೆ' ಎಂದು ಚೀರಿಟ್ಟಿತು ಅವಳ ಮನಸ್ಸು.

"ಸಂಧ್ಯಾ! ಏನು.- ಇನ್ನೂ ಸ್ನಾನಕ್ಕೆ ನೀರೇ ಕಾಯಿಸಿಲ್ಲ. ಛೇ! ಛೇ ನಿನಗೆ ಎಲ್ಲಾ ದಿನಾ ಜ್ಞಾಪಿಸಬೇಕು. ಎಲ್ಲೋ ನನಗೆ ಶನಿ ಹಿಡಿದಿದೆ ನಿನ್ನನ್ನು ಕಟ್ಟಿಕೊಂಡಾಗಿನಿಂದ" ಎಂದ ಕಾಮೇಶಂ ಬೇಸರಿಸುತ್ತಾ. ಗಂಡನ ಮಾತುಗಳಿಗೆ ಬೆಚ್ಚಿಬಿದ್ದಳು.


'ನಾನೆಂಥ ಹುಚ್ಚಿ! ಈ ಪ್ರಪಂಚ ಯಾರಿಗಾಗಿಯೂ ಕಾಯುವದಿಲ್ಲ. ತನ್ನ ಪಾಡಿಗೆ ತಾನು ಸಾಗುತ್ತಿರುತ್ತದೆ' ಎಂದುಕೊಳ್ಳುತ್ತಾ ಬಾಯಿಲರ್‌ಗೆ ಬೆಂಕಿ ಹಾಕಿದಳು.

ಈಳಿಗೆ ಮಣೆ ಮುಂದಿಟ್ಟುಕೊಂಡಳು ಹೆಚ್ಚಲು. ಕಿರಣ್‌ಗೆ ಬದನೆಕಾಯಿ ಭಾತು ಎಂದರೆ ತುಂಬ ಇಷ್ಟ. 'ಸಂಧ್ಯ ನಮ್ಮ ಮದುವೆ ಆದಮೇಲೆ ನೀನು ದಿನಾ ನನಗೆ ಇದನ್ನೇ ಮಾಡಿಡಬೇಕು ತಿಳೀತಾ!' ಎನ್ನುತ್ತಿದ್ದ ಅವನ ಮಾತುಗಳು ಅವಳ ನೆನಪಿಗೆ ಬಂದವು.

ಸಂಧ್ಯ ಏನೋ ಯೋಚಿಸುತ್ತಾ ಕೈ ಹೆಚ್ಚಿಕೊಂಡಳು.

"ಅಬ್ಬಾ!"

"ಅಮ್ಮಾ! ರಕ್ತ ಡ್ಯಾಡೀ! ಅಮ್ಮನ ಕೈಯಿಂದ! ಕೈ ಹೆಚ್ಚಿಕೊಂಡಿದಾಳೆ ಅಮ್ಮ" ಎನ್ನುತ್ತ ಮಗಳು ಬಂದು ನೋಡಿ ತಂದೆಯನ್ನು ಕೂಗಿದಳು. "ಯಾವಾಗಲೂ ಏನೋ ಯೋಚನೆ ಮಾಡ್ತಾ ಕೆಲಸ ಮಾಡಿದರೆ ಇನ್ನೇನಾಗುತ್ತೆ, ಕೈಯೂ ಕತ್ತರಿಸುತ್ತೆ ನಾಳೆ ಒಲೆ ಮುಂದೆ ಬೇಜವಾಬ್ದಾರಿಯಾಗಿದ್ದರೆ ಸೀರೆ ಬೆಂಕಿಗೆ ತಗುಲಿ ಹತ್ತಿಕೊಂಡು ಪ್ರಾಣಾನೂ ಹೋಗುತ್ತೆ" ಎಂದ ಕಾಮೇಶಂ.



ಸಂಧ್ಯ ಕೈಗೆ ಒದ್ದೆ ಬಟ್ಟೆ ಸುತ್ತಿಕೊಂಡು ಬದನೆಕಾಯಿ ಪೂರ್ತಿ ಹೆಚ್ಚಿದಳು. ಹೇಗೋ ಅಡಿಗೆ ಶಾಸ್ತ್ರ ಮುಗಿಸಿದಳು. ಗಂಡನಿಗೂ ಮಕ್ಕಳಿಗೂ ಬಡಿಸಿದಳು, ಪಲ್ಯಕ್ಕೆ ಉಪ್ಪು ಜಾಸ್ತಿಯಾಗಿತ್ತು. ಅದನ್ನು ಬಾಯಲ್ಲಿಟ್ಟುಕೊಂಡ ಕಾಮೇಶಂ ಪಲ್ಯವನ್ನು ಮನೆಯೆಲ್ಲಾ ಎರಚಾಡಿದ.

'ಸಂಧ್ಯ! ನಿನಗೆ ಅಡಿಗೆ ಮಾಡೋಕ್ಕೆ ಬರದಿದ್ದರೂ ಪರವಾಗಿಲ್ಲ, ನಮ್ಮ ಮನಸ್ಸು ಮಾತ್ರ ಒಂದಾಗಿರಬೇಕು. ನೀನೇನೂ ಮಾಡಿಟ್ಟರೂ ಅದು ಎಷ್ಟೇ ರುಚಿಯಾಗಿಲ್ಲದಿದ್ದರೂ ನನ್ನ ಪಾಲಿಗದೇ ಅಮೃತ...' ಎನ್ನುತ್ತಿದ್ದ ಕಿರಣ್.

ಮಗಳ ಮಾತಿಂದ ಎಚ್ಚೆತ್ತಳು ಸಂಧ್ಯ.

"ಅಮ್ಮಾ! ಏನಮ್ಮ ನೀನೆಲ್ಲೋ ಇರ್ತೀಯಾ—ಸಾರು ಕೇಳಿದರೆ ಮಜ್ಜಿಗೆ ಹಾಕ್ತೀಯ" ಎಂದಳು ಮಗಳು. ಸಂಧ್ಯ ತನ್ನ ಅನ್ಯಮನಸ್ಕತೆಗೆ ವಿಷಾದಿಸುತ್ತ ಮಗಳು ಊಟ ಮಾಡುತ್ತಿದ್ದ ತಟ್ಟೆಯಲ್ಲಿದ್ದುದನ್ನು ಹೊರ ಚೆಲ್ಲಿ ಮತ್ತೆ ಅನ್ನ ಸಾರು ಹಾಕಿದಳು ತಟ್ಟೆಯಲ್ಲಿ.

"ನಿಮ್ಮ ತಾಯಿನ್ನ ಮದುವೆ ಮಾಡಿಕೊಂಡಾಗಿನಿಂದ ನನಗೆ ಇದೇ ಗೋಳು. ಈಗ ನಿಮಗೂ ತಪ್ಪಿದ್ದಲ್ಲ" ಎಂದ ಕಾಮೇಶಂ.

"ಅಮ್ಮ ನಾವು ಸ್ಕೂಲಿಗೆ ಹೋಗ್ತೀವಮ್ಮ" ಎಂದು ಹೇಳಿ ಶಾಲೆಗೆ ಹೋದರು ಮಕ್ಕಳು. ಕಾಮೇಶಂ ಆಫೀಸಿಗೆ ಹೋದ.


ಬಚ್ಚಲುಮನೆ ತುಂಬ ಒಗೆಯೋ ಬಟ್ಟೆಗಳು. ಅವುಗಳನ್ನೆಲ್ಲಾ ಒಗೆದು ಒಣಗಿಸಿ ಇಸ್ತ್ರಿ ಮಾಡಿಡಬೇಕು, ಆಮೇಲೆ ಮನೆ ಕ್ಲೀನ್ ಮಾಡಬೇಕು. ಮಕ್ಕಳ ಬಟ್ಟೆಗಳನ್ನು ಹೊಲೀಬೇಕು, ಸಂಜೆ ನಾಲ್ಕು ಗಂಟೆಗೆ ಮಕ್ಕಳು ಸ್ಕೂಲಿಂದ ಬರ್ತ್ತಾರೆ. ಕಾಫಿ ತಿಂಡಿ ಮಾಡಬೇಕು. ಮತ್ತೆ ಅಡಿಗೆ—ಊಟ—ನಿದ್ರೆ—ಏನು ಜೀವನವೋ!

'ಸಂಧ್ಯಾ! ಜೀವನವನ್ನು ಕಲಾತ್ಮಕವಾಗಿ ರೂಪಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ನಮಗೆ ಮಾತ್ರ ಸಾಧ್ಯ' ಎಂದಿದ್ದ ಕಿರಣ್ ಒಂದು ದಿನ ಸಂಧ್ಯಾಳ ಮಡಿಲಲ್ಲಿ ಮಲಗಿ.

'ಅಂದರೆ... ಅಂದರೆ' ಎಂದಳು.

'ಈ ಮನುಷ್ಯರು ಒಟ್ಟಾಗಿ ವಾಸಮಾಡೋ ನಗರಗಳಿಂದ ದೂರವಾಗಿ ಒಂದು ಸಣ್ಣ ಊರಲ್ಲಿ ಒಂದು ಸರಳವಾದ ಮನೆ — ಅದರ ಸುತ್ತಲೂ ಹೂತೋಟ - ಹಣ್ಣಿನ ಗಿಡಗಳು, ಅಲ್ಲಿ ನಮ್ಮ ವಾಸ. ಆಡುತ್ತ ಹಾಡುತ್ತಾ, ಸುಖವಾಗಿ ಕಳೆಯಬೇಕು. ಈ ಪ್ರಪಂಚದಲ್ಲಿರುವ ಅಸೂಯೆ ಮೋಸ ಇವುಗಳಿಂದ ದೂರ ಉಳಿದು ಪ್ರಕೃತಿಯ ಮಡಿಲಲ್ಲಿ ಹಾಯಾಗಿ ಜೀವಿಸೋಣ. ನಮ್ಮ ಜೀವನವವನ್ನು ಸಾರ್ಥಕಪಡಿಸಿಕೊಳ್ಳೋಣ ಸಂಧ್ಯಾ.'

ಅದನ್ನು ಆಲಿಸುತ್ತಿದ್ದ ಸಂಧ್ಯಳ ಶರೀರ ಪುಳಕಗೊಂಡಿತು. ಮನಸ್ಸು ಪ್ರಫುಲ್ಲವಾಯಿತು. ಹೀಗೆ ಎಷ್ಟೋ ಸಂಜೆಗಳನ್ನು ಕಳೆದಿದ್ದರು



"ಇವರೇ ನೋಡಿ 'ಉತ್ತುಂಗ' ಕಾದಂಬರಿಯ ಲೇಖಕರು.."

ಕಿರಣ್– ಸಂಧ್ಯಾ ತಮ್ಮದೇ ಮಧುರ ಲೋಕದಲ್ಲಿ ವಿಹರಿಸುತ್ತಾ. ಆ ಕ್ಷಣಗಳು ಹಾಗೇ ಶಾಶ್ವತ ವಾಗಿ ಉಳಿದುಬಿಟ್ಟರೆ... ಉಳಿಯಬೇಕೆಂದೇ ಅವರು ಬಯಸಿದುದು.

"ಆಂಟೀ! ನಮ್ಮಮ್ಮ ಒಂದು ಕಪ್ಪು ಕಡಲೆ ಹಿಟ್ಟು ಇಸ್ಕೊಂಡು ಬಾ ಅಂದ್ರು" ಎಂದು ಬಂದಳು ಪಕ್ಕದ ಮನೆ ಬೇಬಿ.

ಬೇಬಿಗೆ ಕಡಲೆ ಹಿಟ್ಟು ಕೊಟ್ಟಳು ಸಂಧ್ಯ.

"ಹಾಗೇ ನಾಲಕ್ಕು ಹಸಿಮೆಣಸಿನಕಾಯಿನೂ ಇಸ್ಕೊಂಡು ಬಾ ಅಂದ್ರು" ಎಂದಳು. ಸಂಧ್ಯ ಅದನ್ನೂ ಕೊಟ್ಟಳು.

"ಈ ವಾರದ ವಾರಪತ್ರಿಕೇನೂ ಬೇಕಂತೆ."

"ಮತ್ತೇನೇನು ಹೇಳಿ ಕಳ್ಸಿದಾರ್ಯೇ ನಿಮ್ಮಮ್ಮ?" ಎಂದು ಬೇಜಾರುಪಟ್ಟುಕೊಂಡೇ ಪತ್ರಿಕೇನೂ ಕೊಟ್ಟಳು. ಬೇಬಿ ಹೊರಟು ಹೋದಳು.

'ಸಂಧ್ಯಾ! ನಾನು ಮದ್ರಾಸಿಗೆ ಹೋಗ್ತಿದೀನಿ ನನ್ನ ಫ್ರೆಂಡ್ ಒಬ್ಬ ಕಾಗದ ಬರ್ದಿದ್ದಾನೆ. ಇನ್ನೆಷ್ಟು ದಿನ ಈ ನಿರುದ್ಯೋಗದ ಬದುಕು? ಯಾವುದಾದರೂ ಒಂದು ಕೆಲಸ ಹುಡುಕ್ಕೋ ತೀನಿ' ಎಂದು ಹೇಳಿದ್ದ ಕಿರಣ್ ಮದ್ರಾಸಿಗೆ ಹೋದ.

'ಸಂಧ್ಯ! ನನ್ನ ಬಯಕೆ ಈಡೇರಿತು. ಕೆಲಸ ಸಿಕ್ಕಿದೆ. ಕೈತುಂಬ ಸಂಪಾದನೆ. ಸ್ವಲ್ಪ ದಿನಗಳಲ್ಲೇ ಬಂದು ನಿನ್ನನ್ನು ಮದುವೆಯಾಗ್ತೀನಿ. ನಾನೀಗ ಸಿನಿಮಾದ ಪ್ಲೇ ಬ್ಯಾಕ್ ಸಿಂಗರ್. ನನ್ನ ಹಾಡುಗಳು ಇಷ್ಟರಲ್ಲೇ ತುಂಬ ಜನಪ್ರಿಯ ವಾಗುತ್ತವೆ ಎಂಬ ಬಲವಾದ ನಂಬಿಕೆ ನನಗಿದೆ' ಎಂದೆಲ್ಲ ಪತ್ರ ಬರೆದ ಸಂಧ್ಯಳಿಗೆ.

ಇಷ್ಟರಲ್ಲಿ ಸಂಧ್ಯಳ ತಂದೆ ಒಂದು ಸಂಬಂಧ ತೀರ್ಮಾನಿಸಿದ್ದರು ಮಗಳಿಗೆ. ಸಂಧ್ಯಳಿಗೆ ಇದ ರಿಂದ ಕೋಪ ಬಂದರೂ ತಂದೆಯ ಮಾತನ್ನು ಮೀರುವಂತಿರಲಿಲ್ಲ. ಹುಡುಗ ಯೋಗ್ಯ, ಒಳ್ಳೆ ಕೆಲಸದಲ್ಲಿದ್ದಾನೆ ತಮಗೆಲ್ಲ ಒಪ್ಪಿಗೆಯಾಗಿದೆ ಎಂದೂ ಮರು ತಿಂಗಳಲ್ಲೇ ಲಗ್ನ ನಿಷ್ಕರ್ಷೆ ಮಾಡಿದ್ದರು ತಂದೆ. ವರನ ಬಗ್ಗೆ ತನ್ನ ಒಪ್ಪಿಗೆ ಕೇಳಲೇ ಇಲ್ಲ.

ಸಂಧ್ಯಳಿಗೆ ಏನು ಹೇಳಲೂ ತೋಚಲಿಲ್ಲ. ಹೃದಯದಲ್ಲಿ ಅಗ್ನಿಪರ್ವತಗಳು ಸ್ಫೋಟಿಸುತ್ತಿ ದ್ದವು. ಸಮುದ್ರಗಳು ಉಕ್ಕಿ ಹರಿಯುತ್ತಿದ್ದವು. ಆದರೆ ತಂದೆಯ ಮಾತಿಗೆ ಕಟ್ಟು ಬೀಳ ಬೇಕಾದ, ಸಂಪ್ರದಾಯದ ಕಟ್ಟನ್ನು ಮೀರ ಲಾರದ ಮೂಕವೇದನೆ ಮಾತ್ರ ಅವಳ ಪಾಲಿ ಗುಳಿಯಿತು.

ಮದುವೆಯ ಕರೆಯೋಲೆ ನೋಡಿ ಓಡೋಡಿ ಬಂದ ಕಿರಣ್. ಸಂಧ್ಯಳನ್ನು ಬೈದ - ನಿಂದಿಸಿದ ಕೊನೆಗೆ ಕಣ್ಣೀರಿಟ್ಟ. ಕಣ್ಣೀರ ಮಧ್ಯೆ ನಗುತ್ತಾ, 'ಇಷ್ಟೇ ನಮಗೆ ಪ್ರಾಪ್ತ ಸಂಧ್ಯ. ನೀನಾದರೂ ಸುಖವಾಗಿರು. ಇನ್ನು ನನ್ನ ಪಾಲಿಗೆ ಉಳಿದಿರು- ವುದು ನಿನ್ನ ಮಧುರ ನೆನಪುಗಳಷ್ಟೇ' - ಎಂದು ಹೇಳಿ ಹೊರಟುಹೋದ.

ಸಂಧ್ಯಳಿಗೆ ಮದುವೆಯಾಯಿತು ಕಾಮೇಶಂ ನೊಡನೆ. ಸಂಸಾರದ ಸಾಗರದಲ್ಲಿ ಬಿದ್ದು ಅಲೆಗಳ ಹೊಡೆತಕ್ಕೆ ಸಿಕ್ಕಿ - ಹಿಂದೆ ಮುಂದೆ ಚಲಿಸುತ್ತಾ ಒದ್ದಾಡುತ್ತಿದ್ದಾಳು.

ಆದರೆ ಕಿರಣ್‌ನ ನೆನಪು ಬಾರದ ಕ್ಷಣವಿಲ್ಲ. ಊಹಾಲೋಕದಲ್ಲಿ ಅವನನ್ನು ಸ್ಮರಿಸುತ್ತಾ - ವರ್ತಮಾನದೊಡನೆ ರಾಜೀಮಾಡಿಕೊಳ್ಳಲಾರದೆ ಸಂಕ್ಷೋಭೆಗೊಳಗಾಗಿ ಕ್ಷೀಣಿಸುತ್ತಿದ್ದಳು - ಮಾನಸಿಕವಾಗಿ.

"ಅಮ್ಮಾ! ಅಮ್ಮಾ!"

ಸಂಧ್ಯ ಬೆಚ್ಚಿಬಿದ್ದಳು ಆ ಕರೆಗೆ.

'ಅರೇ ಆಗಲೇ ಮಕ್ಕಳು ಬಂದ್ಬಿಟ್ರೆ?!. ಇನ್ನೂ ಟಿಫಿನ್ನೇ ರೆಡಿ ಮಾಡಿಲಿಲ್ಲ. ಕಾಫಿ ಡಿಕಾಕ್ಷನ್ ಹಾಕಿಡಲಿಲ್ಲ. ಇನ್ನೊಂದರ್ಧ ಗಂಟೆ ಅವರೂ ಬಂದ್ಬಿಡ್ತಾರೆ-' ಎಂದುಕೊಂಡು ಬೇಗ ಬೇಗ ಕಾಫಿ ಉಪ್ಪಿಟ್ಟು ಮಾಡಿದಳು. ಆತುರ ದಲ್ಲಿ ಮಾಡಿದ ಉಪ್ಪಿಟ್ಟು ಮುದ್ದೆಯಾಯಿತು. ಅದಕ್ಕೆ ಗಂಡನಿಂದ ಆಗಬೇಕಾದ ಪೂಜೆಯೂ ಆಯಿತು. ಅಡಿಗೆಯನ್ನು ಮುಗಿಸಿದಳು

ಯಾಂತ್ರಿಕವಾಗಿ.

ಮಕ್ಕಳು ಊಟ ಮಾಡಿ ಮಲಗಿದರು. ಕಾಮೇಶಂ ಕೂಡಾ ಊಟ ಮುಗಿಸಿ - ಸಿನಿಮಾ ಪತ್ರಿಕೆಯನ್ನು ತಿರುವಿ ಹಾಕುತ್ತಾ ಮಲಗಿದ, ರೇಡಿಯೋದಲ್ಲಿ ಕಿರಣ್‌ನನ್ನು ಕುರಿತ ಪ್ರತ್ಯೇಕ ಕಾರ್ಯಕ್ರಮ ಬಿತ್ತರಗೊಳ್ಳುತ್ತಿತ್ತು.

'ಕಿರಣ್! ಇಷ್ಟು ದಿನ ನಿನ್ನ ಹಾಡುಗಳನ್ನಾಲಿಸುತ್ತಾ - ನಿನ್ನ ನೆನಪಿನಲ್ಲೇ ಬದುಕಿದ್ದೆ. ಮುಂದೆ ಹೇಗೆ ಬಾಳ ದಿನಗಳನ್ನೆಣಿಸಲಿ?' ಸಂಧ್ಯಳ ಕಣ್ಣುಗಳಿಂದ ಉಕ್ಕಿ ಬರುತ್ತಿದ್ದ ಅಶ್ರುಬಿಂದುಗಳು ಅವಳ ಕೆನ್ನೆಗಳನ್ನು ತೋಯಿಸಿದ್ದುವು.

"ಸಂಧ್ಯಾ! ಒಂದು ಘಂಟೆ ಆಯಿತು. ಇನ್ನೂ ಹಾಗೇ ನಿಂತಿದೀಯ - ಲೈಟ್ ಕಂಬದ ಹಾಗೆ. ಲೈಟ್ ಆಫ್ ಮಾಡು. ಸಾಕು ಮಲಕ್ಕೋ, ಛೇ! ಛೇ! ಹೆಂಗಸಿಗಿರಬೇಕಾದ ಒಂದು ಲಕ್ಷಣವೂ ಇಲ್ಲ ನಿನ್ನಲ್ಲಿ" ಕಾಮೇಶಂ ಸಿಟ್ಟಿಗೆದ್ದ.

ಸಂಧ್ಯ ಲೈಟ್ ಆರಿಸಿದಳು 'ನಿಜ! ನಾನು ಹೆಂಗಸೇ ಅಲ್ಲ. ನನ್ನ ಸ್ತ್ರೀತ್ವವೂ ಕಿರಣ್‌ನ ಹಿಂದೆಯೇ ಹೋಯಿತು. ನಾನೀಗ ಒಂದು ಪ್ರಾಣವಿಲ್ಲದ ಬೊಂಬೆ' ಎಂದುಕೊಂಡಳು.

'ಕಿರಣ್! ನಾವಿಬ್ಬರೂ ಯಾವಾಗಲೂ ಒಟ್ಟಿಗೆ ಇರಬೇಕು ಸಾಯುವಾಗಲೂ ನಾವು ಒಟ್ಟಿಗೇ ಸಾಯಬೇಕು. ನಮ್ಮ ಪ್ರೇಮ ಆದರ್ಶ ಪ್ರೇಮವೆನಿಸಬೇಕು,' ಎಂದಿದ್ದಳು ಕಿರಣ್‌ನೊಡನೆ ತಾನೊಮ್ಮೆ.

ಆ ಮಾತುಗಳು ನೆನಪಿಗೆ ಬರುತ್ತಲೇ ಸಂಧ್ಯಳ ದುಃಖಾವೇಶ ತಡೆಯದಾಯಿತು.

ಇಷ್ಟು ದಿನ ಕಿರಣ್ ತನ್ನ ಬಳಿ ಇಲ್ಲದಿದ್ದರೂ ಎಲ್ಲೋ ಸುಖವಾಗಿರುವನೆಂಬ ಭರವಸೆಯಿಂದ ಬದುಕಿದ್ದಳು. ಆದರೆ ಇಂದು ಕಿರಣ್ ಈ ಲೋಕವನ್ನೇ ತ್ಯಜಿಸಿ ಹೋದ. ಕಿರಣ್ ಇಲ್ಲದ ಈ ಪ್ರಪಂಚದಲ್ಲಿ ತಾನು ಬದುಕಿರುವುದಾದರೂ ಏಕೆ? ತಾನೂ ಕಿರಣ್‌ನೊಡನೆ ಹೊರಟು ಹೋಗುತ್ತೇನೆ. ತಾನೂ ಸಾಯಬೇಕು, ಹೌದು ಸಾಯಲೇ ಬೇಕು. ಈ ಸಮಸ್ಯೆಗೆ ತನ್ನ ಸಾವೇ ಸೂಕ್ತ ಪರಿಹಾರ! ಸ್ಲೀಪಿಂಗ್ ಟ್ಯಾಬ್ಲೆಟ್ಸ್‌ಗಾಗಿ ಅಲ್ಮೇರದ ಬಳಿ ಹೋದಳು. "ಅಮ್ಮಾ" ಬಾಬುವಿನ ಕರೆಯಿಂದ ತಟ್ಟನೆ ನಿಂತಲ್ಲೇ ನಿಲ್ಲುವಂತಾಯಿತು.

"ಅಮ್ಮ! ನಂಗೆ ಭಯವಾಗುತ್ತಮ್ಮ! ನನ್ನನ್ನು ಬಿಟ್ಟು ಎಲ್ಲೂ ಹೋಗಬೇಡ" ಎಂದು ಕನವರಿಸುತ್ತ ಎದ್ದು ಕೂತ ಬಾಬು. ಸಂಧ್ಯ ಬಾಬು ಮಲಗಿದ್ದ ಮಂಚದ ಮೇಲೆ ಬಂದು ಕೂತಳು. ಅವನು ಎರಡು ಕೈಗಳಿಂದಲೂ ಅವಳನ್ನು ಗಟ್ಟಿಯಾಗಿ ತಬ್ಬಿಕೊಂಡು - "ಅಮ್ಮ ನೀನು ಯಾವಾಗಲೂ ನನ್ನ ಹತ್ತಿರಾನೆ ಇರಮ್ಮಾ" ಎಂದ.

"ಆಗ್ಲೀಪ್ಪ ನಾನು ಎಲ್ಲೂ ಹೋಗೋಲ್ಲ. ನಿನ್ನ ಹತ್ತಿರಾನೇ ಇರ್‍ತೀನಿ" – ಎಂದು ಸಮಾಧಾನ ಮಾಡಿದಳು ತನ್ನ ಕಂದನನ್ನು. ತನ್ನ ಹೃದಯ–ಸಮುದ್ರದಲ್ಲಿನ ಅಲೆಗಳು ಎಂದೂ ದಡವನ್ನು ಮೀರಿ ಮುಂದೆ ಹೋಗಲಾರವು. ಅದೇನಿದ್ದರೂ ದಡ ಮುಟ್ಟಿ ಮತ್ತೆ ಸಮುದ್ರಕ್ಕೇ ಹಿಂತಿರುಗಬೇಕು ಎಂದುಕೊಂಡು ಮಗುವನ್ನು ಎದೆಗವಚಿಕೊಂಡು ಕಣ್ಮುಚ್ಚಿ ಮಲಗಿದಳು ಸಂಧ್ಯ.

ಜಗತ್ತಿನಲ್ಲಿ ಅತಿ ಹೆಚ್ಚು ಮಾಂಸ ತಿನ್ನುವ ಪ್ರಾಣಿ ಎಂದರೆ ಅಲಾಸ್ಕದ ಕಂದು ಬಣ್ಣದ ಕರಡಿ. ಅದನ್ನು ಮೀನುಗರಡಿ ಎಂದೂ ಕರೆಯುವುದುಂಟು. ಪೂರ್ಣ ಬೆಳೆದ ಗಂಡು ಕರಡಿಗಳು ಹಿಂಗಾಲುಗಳ ಮೇಲು ಎದ್ದು ನಿಂತರೆ ಎಂಟು ಅಡಿ ಎತ್ತರವಿರುತ್ತವೆ.

ಇದುವೆ ಜೀವ ಇದು ಜೀವನ

ಹಳ್ಳಿಯಲ್ಲಿದ್ದ ನಮ್ಮ ಹೈಸ್ಕೂಲಿನಲ್ಲಿ ವಿಜ್ಞಾನ ಪಾಠವನ್ನು ಮಾಡುತ್ತಿದ್ದೆ. ಆಗ ಸ್ವಲ್ಪ ಬಡವರಂತೆ ಕಾಣುವ ಯಜಮಾನರು ಒಳ ಬಂದು "ನಮಸ್ಕಾರ ಸಾ." ಎಂದರು. ನಾನೂ ನಮಸ್ಕರಿಸಿ, ಏನು ಬೇಕೆಂದು ಕೇಳಿದೆ. ಅದಕ್ಕವರು ಬಾಡಿದ ಮುಖದಿಂದ ಇಡೀ ಕ್ಲಾಸಿನಲ್ಲೆಲ್ಲಾ ಕಣ್ಣಾಡಿಸಿ- ಒಬ್ಬ ವಿದ್ಯಾರ್ಥಿಯ ಕಡೆ ಕೈ ತೋರಿಸುತ್ತಾ "ಆ ಹುಡ್ಗ, ನನ್ಮಗನ ಅಪ್ಪ ಸಾ ನಾನು. ಇದೇ ಯೇನ್ ಸಾ ಪಾಠ ಕಲ್ಸದು ನೀವು? ಅಲ್ಲ.....ಇಂತ ದೇವಾರ್ಸಿ ಷನ್ಮಕ್ಕು ಇನ್ನೊಂವಾಕ್ಸ ಜನ ಇದ್ರೆ ಏನ್ ಸಾ... ಅಳ್ಳ...ಅಳ್ಳ ಇಡಿಯಾಟ್" ಎಂದರು. "ಯಾಕೆ ಸ್ವಾಮಿ... ಏನ್ ಮಾಡಿದ್ದಾನೆ ನಿಮ್ಮಗ?" ಎಂದು ಸಂತೈಸುವ ಧ್ವನಿಯಲ್ಲಿ ಕೇಳಿದೆ. "ಇನ್ನೇನ್ ಮಾಡಿದ್ದಾನೆ. ಕಳ್ಳತನ ಮಾಡಿದ್ದಾನೆ. ನಾವು ಬಡವ್ರು ಸಾ. ಯಾತ್ತೋ ಪಾಕ್ ಕಾಸು ಸಂಪಾದ್ಸಗೆ ಯಾತ್ತೋ ನಿಮ್ಮಂಥ ಪುಣ್ಯವಂತರ ಕೈಕಾಲು ಇಡ್ದು ತ್ವಾಟ ಮಾಡಿದಿನಿ ಸಾ ಕೇಣಿಗೆ. ಆ ತ್ವಾಟದಾಗೆ ಎಲ್ಡು ವಾಕೋ ಅಲಸಿನಣ್ಣು ಮತ್ತೆರ್ಡ ಒಂದು ರಸಬಾಳೆ ಗೊನೆ ತಕ್ಕಂಬಂದು ಅದ್ಯಾರಿಗೆ ಮಾರಿದ್ನೊ ಅದೇನ್ ಮಾಡಿದ್ನೊ ಒಂದೂ ಗೊತ್ತಿಲ್ಲ ಸಾ. ಕೇಳಿದ್ರೆ 'ಅವ್ರಿಕೊಟ್ಟೆ... ಇವ್ರಿಕೊಟ್ಟೆ' ಅಂತಾನೆ- ಈ ವಯಸ್ಸಾಗೆ ಇಂಗ ಮಾಡಿದ್ರೆ ಎಂಗೆ ನೀವೆ ಏಳಿ ಸಾ."

ಅವರ ಮಾತನ್ನು ಕೇಳಿ ನನಗಂತೂ ಆ ಹುಡುಗನ ಮೇಲೆ ಅಸಾಧ್ಯ ಕೋಪ ಬಂತು. ಯಜಮಾನರನ್ನು ಸಂತೈಸಿ ಕಳಿಸಿಕೊಟ್ಟು ಆ ವಿದ್ಯಾರ್ಥಿಗೆ "ಮಾಡ್ತಿಯೇನೋ ಕಳ್ತನ ರ್ಯಾಸ್ಕಲ್ - ನಿಮ್ಮಂಥೋರು ಇರಬಾರ್ದು ಸಾಯಿ ಈಡಿಯಟ್" ಎಂದು ಬಾಸುಂಡೆ ಬರುವಂತೆ ಬಡಿದುಬಿಟ್ಟೆ.

ಸರಿ, ಈ ಘಟನೆಯಾಗಿ ಎರಡು-ಮೂರು ದಿನದಲ್ಲಿ ಏಕಾದಶಿ ಬಂದಿತು. ಸಂತಸದಿಂದಲೇ ಗೆಳೆಯರೊಡನೆ ಫಲಾಹಾರ ಸೇವನೆಗೆ ಕುಳಿತೆ. ತುಂಬಾ ಸಿಹಿಯಾಗಿರುವ ಬಾಳೆ ಹಣ್ಣು, ಹಲಸಿನ ಹಣ್ಣು ತಂಬಿಟ್ಟು ತಿನ್ನುತ್ತಾ "ಅಲ್ಲಾ ಕಣೆ. ದುಡ್ಡಿಲ್ಲ...... ದುಡ್ಡಿಲ್ಲ...... ಅಂತ ರಾಗ ಎಳೀತಿಯಲ್ಲಾ, ಇಷ್ಟೆಲ್ಲಾ ಹಣ್ಣು ತರಿಸೋದಕ್ಕೆ ಎಲ್ಲಿತ್ತೆ ದುಡ್ಡು ನಿನ್ಹತ್ರ?" ಎಂದು ಕೇಳಿದೆ.

ಆಕೆ ಹೇಳಿದ್ದಾದರೂ ಏನು? "ಅಯ್ಯೊ ನೋಡ್ರಿ ನಿಮಗೆ ಹೇಳೋದೆ ಮರ್ತು ಹೋಯ್ತು. ಮೊನ್ನೆ ಅದ್ಯಾರೋ ನಿಮ್ಮ ಸ್ಟೂಡೆಂಟಂತೆ, ಒಂದು ರಸಬಾಳೆ ಗೊನೆ, ಎರಡು ಹಲಸಿನ ಹಣ್ಣು ತಂದುಕೊಟ್ಟ. ದುಡ್ಡು ಕೊಡೋಕೋದ್ರೆ 'ಬೇಡಾಕ್ಕ ನಾವೆಲ್ಲ ಮೇಷ್ಟ್ರ ಹತ್ರ ಇಸ್ಕೊಳ್ತೀವಿ,' ಅಂತ ಹಾಗೇ ಹೊರಟು ಹೋದ..." ಎಂದು ಇನ್ನೂ ಏನೇನೋ ಹೇಳ್ತಾ ಇದ್ಲು. ಅದ್ಯಾವುದೂ ನನ್ನ ಕಿವಿಗೆ ಬೀಳದೇ ಆ ವಿದ್ಯಾರ್ಥಿಯ ಮೈ ಮೇಲೆ ಬೀಳ್ತಾ ಇದ್ದ ಕೋಲಿನ ಹೊಡೆತ, ಅದರ ಹಿಂದೆಯೇ ಎದ್ದದ್ದು ಊದಿಕೊಳ್ಳುವ ಬಾಸುಂಡೆಗಳು ನನ್ನ ಅವಾಚ್ಯ ಬೈಗುಳಗಳು, ಅವನ ರೋದನಭರಿತ "ಇಲ್ಲ ಸಾ... ಇಲ್ಲ ಸಾ..." ಎನ್ನುವ ಆಕ್ರಂದನ ಇವೆಲ್ಲಾ ಕಣ್ಮುಂದೆ ಸುಳಿದು ಹಲಸಿನ ಹಣ್ಣನ್ನು ಕೈಲಿ ಹಿಡಿದು ಧಾರಾಕಾರವಾಗಿ ಅತ್ತುಬಿಟ್ಟೆ.

–ಜಿ. ಆರ್. ನಾಗರಾಜ

ನಾನು ಕಚೇರಿ ಕೆಲಸ ಮುಗಿಸಿ ಬಸ್‌ಗಾಗಿ ಕಾಯುತ್ತಿದ್ದೆ. ಬಸ್ ಇನ್ನೂ ಬಾರದ್ದರಿಂದ ಸುಮ್ಮನೆ ಸುತ್ತಾ ದೃಷ್ಟಿ

ಹಾಯಿಸಿದೆ. ಸ್ವಲ್ಪ ದೂರದಲ್ಲಿ ಒಬ್ಬ ವ್ಯಕ್ತಿ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದರು. ನನಗೆ ಹೇಗೆ ಹೇಗೋ ಆಯಿತು.

ಮತ್ತೆ ಸ್ವಲ್ಪ ಹೊತ್ತು ಬಿಟ್ಟು ಆ ಕಡೆ ನೋಡಿದಾಗಲೂ ಅವರು ಹಾಗೆಯೇ ನನ್ನನ್ನು ನೋಡುತ್ತಲೇ, ಇದ್ದರು. ಬಿಳಿಯ ಪ್ಯಾಂಟು, ಷರ್ಟ್ ತೊಟ್ಟಿದ್ದ ಆ ವ್ಯಕ್ತಿ ಕೇಡಿಯಂತೇನೂ ಕಾಣಿಸುತ್ತಿರಲಿಲ್ಲ. ಅಷ್ಟರಲ್ಲಿಯೇ ಬಸ್ಸು ಬಂದು ನನ್ನ ಮುಜಗರಕ್ಕೆ ಅಂತ್ಯ ಹಾಡಿತು.

ಆದರೆ ಮಾರನೇ ದಿನವೂ ಇದೇ ಕಥೆ, ಬರಬರುತ್ತ ಆ ನೋಟ ನನಗೇಕೋ ಅಹಿತವೆನಿಸತೊಡಗಿತು. ಅವರೇಕೆ ನನ್ನನ್ನು ಮಾತನಾಡಿಸುವ ಪ್ರಯತ್ನ ಮಾಡುವುದಿಲ್ಲ? ಅವರು ಹಾಗೇನಾದರೂ ಮಾಡಿದರೆ ಸರಿಯಾಗಿ ಬುದ್ಧಿ ಕಲಿಸಬಹುದು ಎಂದುಕೊಳ್ಳುತ್ತಿದ್ದ ನನ್ನ ಮನಸ್ಸಿಗೆ ಇದ್ದಕ್ಕಿದ್ದಂತೆ ಒಂದು ಯೋಜನೆ ಹೊಳೆಯಿತು.

ಮಾರನೇ ದಿನ ಬೇಕೆಂದೇ ಒಂದು ಚೀಟಿಯಲ್ಲಿ 'I Love you' ಎಂದು ಬರೆದು, ಹೋಗುತ್ತಾ ಅವರ ಕೈಗೆ ತುರುಕಿದೆ. ಅವರ ತಡವರಿಸುತ್ತಾ "ಏನಿದು?" ಎಂದರು. "ಓದಿ ನೋಡಿ" ಎಂದೆ. ಅವರು "ನನಗೆ ಎರಡು ಕಣ್ಣು ಕಾಣುವುದಿಲ್ಲವಮ್ಮ. ನೀವೇ ಓದಿ ಹೇಳಿಬಿಡಿ" ಎಂದು ಚೀಟಿಯನ್ನು ನನಗೆ ಹಿಂದಿರುಗಿಸಿದಾಗ ದಂಗಾದೆ. ನನ್ನನ್ನು ನೋಡುತ್ತಿದ್ದುದು ಅವರ ಶೂನ್ಯ ದೃಷ್ಟಿ. ಅವರನ್ನು ಪ್ರತಿ ದಿನ ಅವರ ಆಫೀಸಿನ ವ್ಯಾನ್ ಅಲ್ಲಿ ಬಂದು ಕರೆದುಕೊಂಡು ಹೋಗುತ್ತಿತ್ತು. ಅದಕ್ಕಾಗಿ ಅವರು ಅಲ್ಲಿ ಕಾಯುತ್ತಿದ್ದರು.

ಹಾಸ್ಯಕ್ಕಾಗಿ ಬರೆದ ಆ ಚೀಟಿ ನಿಜವಾಗಿ ಪರಿಣಮಿಸಿ ಈಗ ನಾವು ದಂಪತಿಗಳು.

—ಎಸ್. ಹೇಮಲತಾ

ನಾನು ಟಿ.ವಿ. ಮನೆಗೆ ತಂದ ದಿನದಿಂದ ನೆರೆ ಕೆರೆಯ ಹತ್ತು ಹಲವು ಮಂದಿ ದಿನಾ ಸಾಯಂಕಾಲ ಟಿ. ವಿ. ಕಾರ್ಯಕ್ರಮ ನೋಡಿ ರಾತ್ರಿ ಹೊರಟು ಹೋಗುತ್ತಿದ್ದರು. ಟಿ. ವಿ. ಕಾರ್ಯಕ್ರಮದೊಂದಿಗೆ ಬಂದವರಲ್ಲೇ ಹರಟೆ, ಚರ್ಚೆ ಇತ್ಯಾದಿ ಬೇರೆ ಸಾಗುತ್ತಿದ್ದವು. ಇದರಿಂದ ನನಗೆ ಎಂದಿನ ಸಾಯಂಕಾಲದ ವಿಶ್ರಾಂತಿಯಾಗಲೀ ಪತ್ರಿಕೆ ಓದುವುದಾಗಲೀ ಅಸಾಧ್ಯವಾಯಿತು. ಇಂತಹ ಚಿಂತಾಜನಕ ಪರಿಸ್ಥಿತಿಯಲ್ಲಿರುವಾಗ ಪರವೂರಿನ ನಮ್ಮ ಹಿರಿಯರ ಮನೆಯಿಂದ ನನ್ನ ಅಜ್ಜಿ ಒಂದು ವಾರ ನನ್ನೊಂದಿಗೆ ನಿಲ್ಲಲು ಬರುವುದಾಗಿ ಪತ್ರ ಬಂತು. ನನಗೆ ಕುರುವಿನ ಮೇಲೆ ಬೊಕ್ಕೆ ಬಂದಂತಾಯಿತು. ಯಾಕೆಂದರೆ, ನನ್ನಜ್ಜಿಗೆ ತನ್ನ ಸಂಧಿವಾತದ ನೋವು, ಅದರ ತೊಂದರೆಗಳು, ಅದರ ಔಷಧಗಳು, ವೈದ್ಯರ ಉಪಚಾರಗಳ ವಿವರಗಳನ್ನು ದಿನಾಲು ಎಲ್ಲ ಸಮಯದಲ್ಲೂ ಸುತ್ತಲಿದ್ದವರತ್ತ ಹೇಳಿ ಕೊರೆಯುವುದು ಅಭ್ಯಾಸ. ನೆರೆ ಕೆರೆಯವರ ಉಪದ್ರವ ಮತ್ತು ನನ್ನಜ್ಜಿಯ ಕೊರೆತ ನನಗೆ ದಿಕ್ಕೇ ತೋಚದಾಯಿತು. ಆದರೆ ಅಜ್ಜಿ ಬಂದ ದಿನವೇ ನನಗೊಂದು ಉಪಾಯ ಹೊಳೆಯಬೇಕೆ! ಆ ದಿನ ಸಾಯಂಕಾಲ ಅಜ್ಜಿಯ ಪರಿಚಯವನ್ನು ನನ್ನ ಮನೆಗೆ ಎಂದಿನಂತೆ ಬಂದ ನೆರೆ ಕೆರೆಯವರಿಗೆ ಮಾಡಿಸಿದೆನು. ಬಂದವರಿಗೆ ಟಿ. ವಿ. ನೋಡಲು ಸರಿ ಬಿಡದೆ ಅಜ್ಜಿ ದಿನಾಲು ನನ್ನ ಸಂಧಿವಾತದ ಕೊರೆತ ಪ್ರಾರಂಭಿಸಿದರು. ನೆರೆಕೆರೆಯವರು ಬರುವುದು ಕಮ್ಮಿಯಾಗಿ ಕೊನೆಗೆ ನಿಂತೇ ಹೋಯಿತು. ಅಜ್ಜಿಗೆ ದಿನಗಳು ಹ್ಯಾಗೆ ಹೋದುವೆಂದೇ ತಿಳಿಯಲಿಲ್ಲವಂತೆ. ಏಳನೇ ದಿನ ಅಜ್ಜಿ ತಿರುಗಿ ಹೊರಟು ನಿಂತಾಗ ಆಕೆಗೆ ಯಾವ ತರದಲ್ಲಿ ನನ್ನ ಕೃತಜ್ಞತೆಯನ್ನು ತಿಳಿಸಬೇಕೆಂಬುದೇ ನನಗೆ ತಿಳಿಯಲಿಲ್ಲ.

—ಆರ್. ವಿ. ಭಟ್ಟ

ಜಾರ್ಜ್ ಅಫಿಫ್: ಒಂದು ವಿವರಣೆ, ವಿಷಾದ...

ಮೇ ೨, ೧೯೮೪ರ 'ಆನ್‌ಲುಕರ್'ನಲ್ಲಿ ಗಣೇಶಪುರಿಯ ಮುಕ್ತಾನಂದಾಶ್ರಮದ ಜಾರ್ಜ್ ಅಫಿಫ್ ಎಂಬ ಲೆಬನೀಜ್ ನಾಗರಿಕರೊಬ್ಬರ ಕುರಿತು ಒಂದು ತನಿಖಾ ಸ್ವರೂಪದ ಲೇಖನ ಬಂತು. ಅದು ಸಾರ್ವಜನಿಕ ಆಸಕ್ತಿಯ ವಿಷಯವೆಂದು ಭಾವಿಸಿ ನಮ್ಮ ಲೇಖಕ ಶ್ರೀ ಜಿ. ಎಸ್. ಭಟ್ಟರು, ಕೆಲ ತಿಂಗಳುಗಳ ನಂತರ ಸಂಗ್ರಹ ರೂಪದಲ್ಲಿ ಅದರ ಅನುವಾದವನ್ನು ನಮಗೆ ಕಳಿಸಿಕೊಟ್ಟರು. ಕಳೆದ ಎಪ್ರಿಲ್ 'ಕಸ್ತೂರಿ'ಯಲ್ಲಿ 'ಯಾರು ಈ ಜಾರ್ಜ್ ಅಫಿಫ್?' ಎಂಬ ತಲೆಕಟ್ಟಿನೊಂದಿಗೆ ಅದು ಪ್ರಸಿದ್ಧವೂ ಆಯಿತು.

ಜುಲೈ ತಿಂಗಳಲ್ಲಿ ಧಾರವಾಡವಾಸಿಯಾದ ಮುಕ್ತಾನಂದಾಶ್ರಮದ ಅನುಯಾಯಿಯೊಬ್ಬರು ನಮ್ಮ ಬಳಿ ಬಂದು 'ಆನ್‌ಲುಕರ್'ನಲ್ಲಿ ಮೂಲ ಲೇಖನ ಬಂದನಂತರ ಅದಕ್ಕೆ ಸರಿಯಾದ ಉತ್ತರವು ಅದೇ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಬಂದುದನ್ನು ನಮ್ಮ ಗಮನಕ್ಕೆ ತಂದರು. ಅದರ ಸಾರವನ್ನು 'ಕಸ್ತೂರಿ'ಯಲ್ಲಿ ಪ್ರಕಟಿಸುವ ಆಶ್ವಾಸನವನ್ನು ನೀಡಿದ ಕೆಲ ದಿನಗಳ ನಂತರ 'ಆನ್‌ಲುಕರ್'ನ ಆನಂತರದ ಸಂಚಿಕೆಯೊಂದರಲ್ಲಿ ಬಂದ ಜಾರ್ಜ್ ಅಫಿಫರ ಉತ್ತರ ಹಾಗು ಮೂಲ ಲೇಖಕರ ಕ್ಷಮಾಪಣೆ ಎರಡನ್ನೂ ನಮಗೆ ಹುಬ್ಬಳ್ಳಿನಿವಾಸಿ ಅನುಯಾಯಿಯೊಬ್ಬರು ತಂದು ತೋರಿಸಿದರು. ಈ ಸಂಚಿಕೆಯಲ್ಲಿ ಆ ಮೂರೂ ಲೇಖನಗಳ ಸಂಗ್ರಹಾನುವಾದವನ್ನು ನಮ್ಮ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಗಣೇಶಪುರಿಯ ಮುಕ್ತಾನಂದಾಶ್ರಮದ ಬಗ್ಗೆಯಾಗಲಿ ಜಾರ್ಜ್ ಅಫಿಫರ ಬಗ್ಗೆಯಾಗಲಿ 'ಕಸ್ತೂರಿ'ಗೆ ಯಾವುದೇ ಪೂರ್ವಾಗ್ರಹವಿಲ್ಲ. ತನ್ನ ಓದುಗರಿಗೆ ವಿಶ್ವವ್ಯಾಪಾರದ ಮಗ್ಗಲು ಮಗ್ಗಲುಗಳ ಕುರಿತು ಶಕ್ಯವಿದ್ದಷ್ಟೂ ಹೆಚ್ಚೆಚ್ಚು ತಿಳುವಳಿಕೆ ನೀಡಲು ಯತ್ನಿಸುವುದು 'ಕಸ್ತೂರಿ' ತನಗೆಂದು ಇಟ್ಟುಕೊಂಡಿರುವ ಗುರಿ. ಇದೊಂದೇ ಉದ್ದೇಶದಿಂದ ಎಪ್ರಿಲ್ ಸಂಚಿಕೆಯಲ್ಲಿ 'ಯಾರು ಈ ಜಾರ್ಜ್ ಅಫಿಫ್?' ಲೇಖನ ಪ್ರಕಟವಾಯಿತು. ಆ ಲೇಖನದಲ್ಲಿ ಅವರ ಕುರಿತು ಬಂದ ಅನೇಕ ಆಪಾದನೆಗಳಲ್ಲಿ ಸತ್ಯಾಂಶವಿಲ್ಲವೆಂದು ಕಂಡುಬಂದುದರಿಂದ ಮೂಲ ಲೇಖಕಿ ಜಾಯ್ ರ್‍ಯಾಫೀಲ್ ಆ ಲೇಖನವನ್ನು ಹಿಂತೆಗೆದುಕೊಂಡಿರುವುದಲ್ಲದೆ ತಮ್ಮ ಅಚಾತುರ್ಯಕ್ಕಾಗಿ ಕ್ಷಮೆಯನ್ನೂ ಕೋರಿದ್ದಾರೆ.

'ಕಸ್ತೂರಿ'ಗಾಗಿ ಆ ಲೇಖನದ ಸಂಗ್ರಹಾನುವಾದ ಮಾಡಿದ್ದ ಶ್ರೀ ಜಿ. ಎಸ್. ಭಟ್ಟರಿಗೆ ಕೂಡ ಮುಕ್ತಾನಂದಾಶ್ರಮದ ಬಗ್ಗೆಯಾಗಲಿ ಅದರ ಕಾರ್ಯಕರ್ತ ಶ್ರೀ ಜಾರ್ಜ್ ಅಫಿಫರ ಬಗ್ಗೆಯಾಗಲಿ ಯಾವುದೇ ಪೂರ್ವಾಗ್ರಹವಿಲ್ಲ. ಅದೊಂದು ಅನುವಾದಯೋಗ್ಯ ಲೇಖನವೆಂಬ ದೃಷ್ಟಿಯಿಂದ ಮಾತ್ರ ಅನುವಾದಿಸಿ ಕಳಿಸಿದ್ದರು.

'ಯಾರು ಈ ಜಾರ್ಜ್ ಅಫಿಫ್?' ಲೇಖನದ ಪ್ರಕಟನೆಯಿಂದ ಸ್ವತಃ ಶ್ರೀ ಅಫೀಫರಿಗೂ ಆಶ್ರಮದ್ದ ಅನೇಕ್ನ ಭಕ್ತರಿಗೂ ಆಗಿರಬಹುದಾದ ಮಾನಸಿಕ ವೇದನೆಗಾಗಿ 'ಕಸ್ತೂರಿ' ವಿಷಾದ ವ್ಯಕ್ತಪಡಿಸುವುದಲ್ಲದೇ ಅಚಾತುರ್ಯಕ್ಕಾಗಿ ಶ್ರೀ ಜಾರ್ಜ್ ಅಫಿಫರ ಕ್ಷಮೆ ಕೋರುತ್ತದೆ. ಅಲ್ಲದೆ ಈ ಮೂಲಕ 'ಕಸ್ತೂರಿ' ಕೂಡ ಎಪ್ರಿಲ್ ಸಂಚಿಕೆಯಲ್ಲಿ ಬಂದ 'ಯಾರು ಈ ಜಾರ್ಜ್ ಅಫಿಫ್?' ಲೇಖನವನ್ನು ಹಿಂತೆಗೆದುಕೊಂಡಿದೆ.

–ಸಂಪಾದಕ

ಗಣೇಶಪುರಿ: ನಿಜಾಂಶಗಳು

–ರಮೇಶ ಸೇಠ

ಅನೇಕ ವರ್ಷಗಳ ಹಿಂದೆ ಅಮೇರಿಕದಲ್ಲಿ ನಾನು ಅಭ್ಯಾಸಮಾಡುತ್ತಿದ್ದಾಗ, ವಿಚಿತ್ರ ರೀತಿಯಲ್ಲಿ, ನನ್ನ ಅಧ್ಯಾತ್ಮ ಅನ್ವೇಷಣೆ ಪ್ರಾರಂಭವಾಯಿತು. ಅಲ್ಲಿ ನನ್ನ 'ಸಾಕು ತಾಯಿ'ಯಾಗಿದ್ದ ೮೨ರ ವೃದ್ಧೆ, ಒಂದು ರಾತ್ರಿ 'ಯೋಗಿಯೊಬ್ಬನ ಆತ್ಮಕಥೆ' (The Autobiography of A Yogi) ಯನ್ನು ಓದುತ್ತಿದ್ದಳು. ಆ ಪುಸ್ತಕ ನನ್ನ ಲಕ್ಷ್ಯ ಸೆಳೆಯಿತು. ಒಂದು ಹಂತದಲ್ಲಿ ಆಕೆ ಓದುವುದನ್ನು ಒಂದು ಕ್ಷಣ ನಿಲ್ಲಿಸಿ, ನನ್ನೆಡೆ ನೋಡಿ, ಕೇಳಿದಳು— "ನೀನು ಯಾವಾಗಲಾದರೂ ಇದನ್ನು ಓದಿರುವಿಯಾ? ಅಥವಾ ಇಷ್ಟು ವಿಶದವಾಗಿ ತಿಳಿಸಬಲ್ಲಂಥ ಯೋಗದ ಬಗೆಗಿನ ಪುಸ್ತಕದ ಕುರಿತು ಏನಾದರೂ ನಿನಗೆ ಗೊತ್ತಿದೆಯಾ?" ನಾನು ಇಲ್ಲವೆಂದೇ ಉತ್ತರಿಸಬೇಕಾಯಿತು. ಅಂತೂ ಈ ಪ್ರಸಂಗ ನನ್ನನ್ನು ಒಂದು ಹೊಸ ಅನ್ವೇಷಣೆಗೆ ತೊಡಗಿಸಿತಲ್ಲದೆ ೧೧ ವರ್ಷಗಳವರೆಗೆ ನಡೆದ ಹುಡುಕಾಟ ಕೊನೆಗೆ ಅಸಾ-ಮಾನ್ಯ ಸಂತ,—ಸ್ವಾಮೀ ಮುಕ್ತಾನಂದರೆಂಬ ಸಿದ್ಧರನ್ನು ನಾನು ಭೆಟ್ಟಿಯಾಗುವಂತೆ ಮಾಡಿತು.

ಇತ್ತೀಚಿನ ವರ್ಷಗಳಲ್ಲಿ ಬಾಬಾರ ಆಶ್ರಮದ ಬಗ್ಗೆ ಪ್ರಕಟವಾಗಿರುವ ಕೆಲವು ಮಿಥ್ಯಾರೋಪಗಳು ನನ್ನನ್ನು ಈ ಲೇಖನ ಬರೆಯಲು ತೊಡಗಿಸಿದವು.

೧೯೭೩ ರಲ್ಲಿ, 'ಸಂಡೇ ಸ್ಟ್ಯಾಂಡರ್ಡ್' ಪತ್ರಿಕೆಯಲ್ಲಿ ಪ್ರಕಟವಾದ ಸ್ವಾಮೀ ಮುಕ್ತಾನಂದರ ಸಂದರ್ಶನವೇ ನಾನು ಅವರನ್ನು ಹೋಗಿ ಕಾಣುವಂತೆ ಮಾಡಿತು. ಬಾಬಾರ ಅಧ್ಯಾತ್ಮಜೀವನದ ಪರಿಚಯದ ಜತೆಗೆ ಅವರ ಆ ಸಂದರ್ಶನವನ್ನು ಓದಿದ ನಾನು "ಇಷ್ಟು ದಿನದಿಂದ ಹುಡುಕುತ್ತಿದ್ದ ನನ್ನ ಪರಮಗುರು ಇವರೇ'' ಎಂದು ನಿರ್ಧರಿಸಿದೆ. ಅವರ ಮೊದಲ ದರ್ಶನದಿಂದ ಇದು ದೃಢವಾಯಿತು; ನನ್ನ ಜೀವನಕ್ರಮದ ಮೇಲೆ ಅವರ ದರ್ಶನಾನಂತರ ಅನಿರ್ವಚನೀಯ ಪರಿಣಾಮವುಂಟಾಯಿತು; ಆಶ್ರಮಕ್ಕೆ ನಾನು ಕೊಡುತ್ತಿದ್ದ ಭೆಟ್ಟಿಗಳಿಂದ ಹೊಸ ಅನುಭವವುಂಟಾಯಿತು.

ಬಾಬಾರ ಕೃಪೆ ಹಾಗೂ ನನ್ನ ಧ್ಯಾನಗಳಿಂದಾಗಿ ನಾನು ಸಕ್ರಿಯ ರಾಜಕಾರಣದಲ್ಲಿದ್ದರೂ ಕಳಂಕರಹಿತನಾಗಿಯೇ ಇರುವಂತಾಯಿತು. ಮಹಾರಾಷ್ಟ್ರದ ವಿಧಾನ ಸಭೆಯ ಸದಸ್ಯನಾಗಿ ಎರಡು ವರ್ಷ ಕಾಲ ನಾನು ಬಡವ ಬಲ್ಲಿದ ಭೇದವಿಲ್ಲದೆ ನನ್ನ ಮತಕ್ಷೇತ್ರಕ್ಕೆ ಕೆಲವಾದರೂ ಒಳ್ಳೆ ಕೆಲಸ

ಗಳನ್ನು ಮಾಡಿದ್ದೇನೆಂದುಕೊಂಡಿದ್ದೇನೆ. ಕೊಳಚೆ ಪ್ರದೇಶದ ನಿವಾಸಿಗಳು ಮತ್ತು ಮೀನುಗಾರರಲ್ಲಿ ದೇವರನ್ನು ಕಂಡ ನಾನು ಅವರೊಂದಿಗೆ ಆತ್ಮೀಯ ಭಾವ ಹೊಂದಿದೆ.

ಆಶ್ರಮಕ್ಕೆ ನಾನು ನೀಡಿದ ಅನೇಕ ಭೇಟಿಗಳ ಸಂದರ್ಭದಲ್ಲಿ ಅನೇಕ ವಿದೇಶೀ ಭಕ್ತರನ್ನು ಪರಿಚಯ ಮಾಡಿಕೊಂಡು ವಿಚಾರ ವಿನಿಮಯ ಮಾಡಿಕೊಂಡೆ. ಅವರೆಲ್ಲ ಬಾಬಾರ 'ಶಕ್ತಿ'ಯ ಕುರಿತು ತುಂಬ ಭಾವುಕರಾಗಿ ಹೇಳುತ್ತಿದ್ದರು. ಬಾಬಾರ ಆ ಶಕ್ತಿಯೇ ಅವರ ಜೀವನದಲ್ಲಿ ಪ್ರಮುಖ ಬದಲಾವಣೆ ತಂದಿದೆಂದೂ ಹೇಳುತ್ತಿದ್ದುದುಂಟು. ಎಷ್ಟೋ ಜನ ತಮ್ಮ ಗುರುವಿನೊಂದಿಗೆ ಕೆಲ ಕಾಲ ಕಳೆಯಲು ಜಗತ್ತಿನ ಆ ತುದಿಯಿಂದ ಈ ತುದಿಗೆ ಹಾರಿಬಂದಿದ್ದರು.

ಬಾಬಾ ಅವರ ಸಮಾಧಿಯಾದ ನಂತರ ಅವರ ಪ್ರಭಾವ ನನ್ನ ಮೇಲೆ ಇನ್ನೂ ಆಗು



ಕ್ಷಮಿಸಿ

ಜನೆವರಿ ೧೯೮೪ರ ಎರಡನೇ ವಾರದಲ್ಲಿ ಪೆಟ್ರೆಕ್ ಕೆಲ್ಲಿ ಎಂಬೊಬ್ಬ 'ಆನ್‌ಲುಕರ್' ಪತ್ರಿಕಾಲಯಕ್ಕೆ ಬಂದ. ಮುಕ್ತಾನಂದ ಆಶ್ರಮದ ಬಗ್ಗೆ ಸಾಕಷ್ಟು ಲೇಖನಗಳನ್ನು ಬರೆದಿರುವವನಾದ್ದರಿಂದ ನನ್ನನ್ನೇ ಸಾಕಷ್ಟು ದಿನದಿಂದ ಹುಡುಕುತ್ತಿರುವುದಾಗಿ ಆತ ಹೇಳಿದ. ಆತ ತೋರಿಸಿದ ಐಡೆಂಟಿಟಿ ಕಾರ್ಡಿನಿಂದ ಆತ ನ್ಯೂ-ಯಾರ್ಕಿನ ಖಾಸಗಿ ಪತ್ತೇದಾರನೆಂದು ತಿಳಿಯಿತು.

ಕೆಲ್ಲಿ, ತನ್ನ ಬಳಿ ಜಾರ್ಜ್ ಅಫಿಫ್‌ನ ಕುರಿತು ಕೆಲವು ಮುಖ್ಯ ಮಾಹಿತಿಗಳಿವೆ ಎಂದ. ಈ ಮಾತಿಗೆ ಪುಷ್ಟಿ ನೀಡಲು ತನ್ನ ಬಳಿ ಇರುವ ನ್ಯಾಯಾಲಯದ ಅಧಿಕೃತ ಮುದ್ರೆ ಇರುವ ದಾಖಲೆಪತ್ರಗಳನ್ನು ತೋರಿಸಿದ. ಅವು ನಿಜವೆಂದು ಮನಗಂಡ ಮೇಲೆಯೇ ನಾವು 'ಆನ್‌ಲುಕರ್' ೧೯೮೪ ರ ಮೇ ೭ರ ಸಂಚಿಕೆಯಲ್ಲಿ ಜಾರ್ಜ್ ಅಫಿಫ್‌ನ ಕುರಿತು ವರದಿ ಪ್ರಕಟಿಸಿದ್ದು. ಅಮೇರಿಕದ ಕೋರ್ಟಿನ ಅಧಿಕೃತ ಮುದ್ರೆಗಳೇ ಅವಾದ್ದರಿಂದ ಅವು ನಕಲಿ ಎಂದು ಸಂಶಯವೂ ಬರಲಿಲ್ಲ. ನಂತರದ ತನಿಖೆಗಳಿಂದ ಅವುಗಳು ಬೇಕೆಂದೇ ತಯಾರಿಸಿದ ನಕಲಿ ದಾಖಲೆಗಳೆಂದು ಗೊತ್ತಾಗಿದೆ. ಆದ್ದರಿಂದ 'ಆನ್‌ಲುಕರ್' ಪತ್ರಿಕೆ ಮತ್ತು ನಾನು-ಈ ಲೇಖನದಿಂದ ಜಾರ್ಜ್ ಅಫಿಫ್‌ರಿಗೆ ಆದತೊಂದರೆಗಾಗಿ ಮತ್ತು ತನ್ಮೂಲಕ ಅವರ ಹೆಸರಿಗೆ ಹತ್ತಿರಬಹುದಾದ ಕಳಂಕದ ಸಲುವಾಗಿ ವಿಷಾದಿಸುತ್ತೇವೆ, ಮತ್ತು ಆ ಲೇಖನವನ್ನು ಹಿಂತೆಗೆದುಕೊಂಡಿದ್ದೇವೆ. ಆ ದಾಖಲೆಪತ್ರಗಳು ನಿಜ ಎಂದು ತಿಳಿದು, ಸದುದ್ದೇಶದಿಂದ ಈ ಲೇಖನ ಬರೆದಿದ್ದೆವಷ್ಟೆ.

'ಆನ್‌ಲುಕರ್' ವರದಿಗಾರ -**ಜಾಯ್ ರ್‍ಯಾಫೀಲ್**

ತ್ತಿರುವ ಅರಿವುಂಟಾಗುತ್ತದೆ. ಅವರು ಇಲ್ಲಿ ಸದಾಸರ್ವದಾ ಇದ್ದು ನಮ್ಮನ್ನೆಲ್ಲ ಕೃಪಾ ದೃಷ್ಟಿಯಿಂದ ನೋಡುತ್ತಿದ್ದಾರೆ ಎಂಬ ನಂಬಿಕೆ ನನ್ನದು.

ಇಂಥ ಪವಿತ್ರಾತ್ಮ ಹಾಗೂ ಅವರ ಇಬ್ಬರು ಉತ್ತರಾಧಿಕಾರಿಗಳ ಬಗ್ಗೆ ದಿನದಿನಕ್ಕೆ ಜಗತ್ತಿನಲ್ಲಿ ಭಕ್ತಿಗೌರವಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ 'ಆನ್‌ಲುಕರ್' (ಮೆ ೭-೧೯೮೫) ಪ್ರಕಟಿಸಿದ ವರದಿಯು ನಾನು ಗುರುವನ್ನು ಕಂಡ- ಕಾಣುತ್ತಿರುವ ಪವಿತ್ರ ಗಣೇಶಪುರಿಯ ಹೆಸರಿಗೆ ಮಸಿ ಹಚ್ಚುವಂಥದು.

ಆ ಲೇಖನದಲ್ಲಿ ಬಂದದ್ದೆಲ್ಲ ಸುಳ್ಳು. ರ್‍ಯಾಫೀಲ್ ಬರೆದಿರುವಂತೆ ಅದು '೨೦೦ ಕೋಟಿ ಬೆಲೆಯ ಅಧ್ಯಾತ್ಮ ಸಾಮ್ರಾಜ್ಯ'ವಲ್ಲ. ಅದು ಲಾಭದಾಶೆಯಿಂದ ನಡೆಸಲ್ಪಡುತ್ತಿರುವ ಸಂಸ್ಥೆಯೂ ಅಲ್ಲ. ಅದು ರಿಜಿಸ್ಟರಾದ ಧರ್ಮಾದಾಯ ವಿಶ್ವಸ್ತ ಸಂಸ್ಥೆ. ಅದರ ಲೆಕ್ಕ ಪತ್ರಗಳೆಲ್ಲ ಕರಾರುವಾಕ್ಕಾಗಿ ತಪಾಸಿಸಲ್ಪಡುತ್ತವಲ್ಲದೆ ಅಧಿಕಾರಿಗಳಿಗೆ ಬೇಕೆಂದಾಗ ನೋಡಲು ಕೂಡ ಲಭ್ಯವಿರುತ್ತವೆ.

ರ್‍ಯಾಫೀಲ್ ಮಾಡಿದ ಮತ್ತೊಂದು ಆಪಾದನೆ — ಆಶ್ರಮ ೨೦ ಎಕರೆ ಪ್ರದೇಶವನ್ನು ಖರೀದಿಸಿದ್ದು, ಅಲ್ಲಿ ಇಷ್ಟರಲ್ಲೇ ರಜಾ ದಿನದ ಆರಾಮಧಾಮವನ್ನು (ಹೆಲಿ-ಪ್ಯಾಡ್, ಈಜುಗೋಳ, ಐಷಾರಾಮೀ ಉಪಹಾರ ಗೃಹ ಇತ್ಯಾದಿ ಹೊಂದಿದಂತೆ) ನಿರ್ಮಿಸುವ ಯೋಜನೆ ಇದೆ ಎಂಬುದು. ಎಂಥ ಮಾತು! ಗುರುದೇವ ಮತ್ತು ಗುರುಮಾಯಿಯವರ ಶಿಸ್ತಿನ ಜೀವನ ದೃಷ್ಟಿಯಲ್ಲಿ ಇಂಥದಕ್ಕೆ ಎಡೆಯುಂಟೆ?

ಹಳೆಯ ಗಿಡಗಳನ್ನು ತೆಗೆದು ಹೊಸ ತೋಟ ಬೆಳೆಸುತ್ತಿರುವುದಂತೂ ನಿಜ. ಹಾಗೆಯೆ ಹಳೆಯ ಕಟ್ಟಡಗಳ ಬದಲು ಹೊಸ - ಆಧುನಿಕ ಕಟ್ಟಡಗಳು. ಮಳೆಗಾಲದಲ್ಲಿ ತುಂಬುವ ಗಟಾರುಗಳ ನಿರ್ಮೂಲನಕ್ಕಾಗಿ ಹೊಸದಾಗಿ ಒಳಚರಂಡಿ ಹಾಕಲಾಗುತ್ತಿದೆ. ೨೦ ಎಕರೆ ಜಾಗವನ್ನು ಖರೀ-ದಿಸಿದ್ದು, ಅಲ್ಲಿ ನಿರ್ಮಾಣಗೊಳ್ಳಬಹುದಾಗಿದ್ದ ಹೋಟೆಲುಗಳು, ಮದ್ಯದಂಗಡಿಗಳು, ಉಪಹಾರ ಗೃಹಗಳನ್ನು ತಲೆ ಎತ್ತದಂತೆ ಮಾಡಿ ಆಶ್ರಮದ ಪಾವಿತ್ರ್ಯ ಕಾಪಾಡುವುದಕ್ಕೋಸ್ಕರ. ಪಾಶ್ಚಾತ್ಯ ಭಕ್ತರ ಕೋರಿಕೆಯಂತೆ ಇಲ್ಲೊಂದು ಈಜುಗೋಳ ನಿರ್ಮಾಣವಾಗಬೇಕಿತ್ತಾದರೂ ಗುರುಮಾಯಿ ಚಿದ್ವಿಲಾಸಾನಂದಾ ಹೀಗೆ ಮಾಡುವುದರಿಂದ ಭಕ್ತರ ಮನಸ್ಸು ಬೇರೆಡೆಗೆ ಹರಿಯುವ ಸಂಭವವಿರುವುದರಿಂದ ಈಜುಗೊಳ ಬೇಡ ಎಂದರು.

ಈ ಆಶ್ರಮದ ವಾತಾವರಣದಲ್ಲಿದ್ದರೆ ಸಾಕು, ದುಶ್ಚಟಗಳು ತಂತಾವೇ ದೂರವಾಗುತ್ತವಲ್ಲದೆ ಅವುಗಳ ನೆನಪೂ ಆಗದಿರುವಾಗ ಇಲ್ಲಿ ಮಾದಕ ವಸ್ತುಗಳ ವ್ಯವಹಾರ ನಡೆಯುತ್ತದೆ ಎಂದು ಹೇಳುವುದು ಔದ್ಧತ್ಯವೇ ಸರಿ.

ಇನ್ನು ಕೊನೆಯ ಆಪಾದನೆ; ವೆಂಕಪ್ಪ ಎಂಬವರ ಕುರಿತು ಬರೆದಿದ್ದು. ಆತ ಹುಚ್ಚನಂತೆ ಅಲೆಯುವ ಹಾಗೆ ಮಾಡಲಾಗಿದೆ ಎಂದು ರ್‍ಯಾಫೀಲ್ ಬರೆಯುತ್ತಾರೆ. ಅವರು ಆಶ್ರ-ಮದ ಹಣಕಾಸು ವ್ಯವಹಾರ ನೋಡಿಕೊಳ್ಳು-ತ್ತಿದ್ದರೆಂಬ ತಪ್ಪು ಮಾಹಿತಿಯನ್ನೂ ಕೊಟ್ಟಿ-ದ್ದಾರೆ. ವಾಸ್ತವ ಸಂಗತಿಯೆಂದರೆ ವೆಂಕಪ್ಪ ಎಂದೂ ಆಶ್ರಮದ ಹಣಕಾಸು ವ್ಯವಹಾರ ನೋಡಿಕೊಳ್ಳುತ್ತಿರಲಿಲ್ಲ. ಅದು ಧರ್ಮದರ್ಶಿ-ಗಳ ಅಧಿಕಾರ. ವೆಂಕಪ್ಪ ಹಿಂದೆ ಯಾವ ಕೆಲಸ ಮಾಡುತ್ತಿದ್ದರೋ ಅದನ್ನೇ ಈಗಲೂ ಮಾಡುತ್ತಿದ್ದಾರೆ.

ಜಾರ್ಜ್ ಅಫಿಫ್‌ರ ಕುರಿತು ಮಾಡಿದ ಆಪಾದನೆಗಳೂ ಅರ್ಥವಿಲ್ಲದವು. ಅಲ್ಲದೆ ಅಫಿಫ್ 'ಮುಕ್ತಾನಂದ ಸಾಮ್ರಾಜ್ಯ'ವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡಿದ್ದಾರೆಂದೂ ಬರೆದಿದ್ದಾರೆ. ವಿದೇಶಿ ಭಕ್ತರ ವಿಭಾಗವನ್ನಂತೂ ಜಾರ್ಜ್‌ರೇ ನಿರ್ವಹಿಸುತ್ತಾರೆಂದೂ ರ್‍ಯಾಫೀಲ್ ಲೇಖನದಲ್ಲಿ ಹೇಳಿದ್ದಾರೆ. ಜಾರ್ಜ್ ತಮ್ಮ ತಾಳಕ್ಕೆ ತಕ್ಕಂತೆ

ಗುರು - ಗುರುಮಾಯಿಯವರನ್ನು ಕುಣಿಸುತ್ತಿದ್ದಾರೆಂದೂ ಆಪಾದಿಸಿದ್ದಾರೆ. ಸಿದ್ಧ ಗುರುವು ಹೀಗೆ ಯಾರೊಬ್ಬರ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆಂಬುದು ಎಷ್ಟು ಹಾಸ್ಯಾಸ್ಪದ. ಅದು ಅಸಾಧ್ಯ, ಅವಾಸ್ತವ. ಇಲ್ಲಿ ಎಲ್ಲವನ್ನೂ ಗುರುದೇವ – ಗುರುಮಾಯಿಯವರೇ ನಿಭಾಯಿಸುತ್ತಾರೆ. ಜಾರ್ಜ್, ಅವರ ಆಜ್ಞಾಧಾರಕರಲ್ಲೊಬ್ಬರು ಮಾತ್ರ. ಒಳ್ಳೆಯ ನಡತೆಯ ವ್ಯಕ್ತಿ ಆತ. ಆತನ ಸೇವೆಯಿಂದ ಉಳಿದ ಆಶ್ರಮಿಗಳು ಆತನ ಬಗ್ಗೆ ಗೌರವ ಭಾವ ತಾಳಿದ್ದಾರೆ.

ಗುರುದೇವ ಸಿದ್ಧಪೀಠವನ್ನೊಮ್ಮೆ ಸರಿಯಾಗಿ ನೋಡಿದರೆ ಇಲ್ಲಿರುವುದೇನೆಂಬುದರ ಅರಿವು ಯಾವ ಪತ್ರಕರ್ತನಿಗಾದರೂ ಆದೀತು.

ಹುರುಳಿಲ್ಲದ ಅಪಾದನೆಗಳು

ನನ್ನ ಬಗ್ಗೆ ಜಾಯ್ ರ್‍ಯಾಫೀಲ್ ಈ ಪತ್ರಿಕೆಯಲ್ಲಿ ಬರೆದ ಅವಹೇಳನಕಾರಿ ಲೇಖನವನ್ನೋದಿ ತುಂಬ ಆಘಾತವಾಯಿತು. ನಾನು ಲೆಬನಾನಿನಲ್ಲಿ ಹುಟ್ಟಿದೆ ಎಂಬೊಂದು ಅಂಶವನ್ನು ಬಿಟ್ಟರೆ, ಅವರು ನನ್ನ ಬಗ್ಗೆ, ಗಣೇಶಪುರಿಯ ಗುರುದೇವ ಸಿದ್ಧಪೀಠ ಆಶ್ರಮದ ಬಗ್ಗೆ ಮಾಡಿದ ಆಪಾದನೆಗಳೆಲ್ಲವೂ ಹುರುಳಿಲ್ಲದವು, ಶುದ್ಧ ಸುಳ್ಳಿನಿಂದ ಕೂಡಿದವು ಹಾಗೂ ಮಾನನಷ್ಟವುಂಟುಮಾಡುವಂಥವು. ಆದ್ದರಿಂದ 'ಆನ್‌ಲುಕರ್' ಪತ್ರಿಕೆಯು ಈ ಲೇಖನದ ಬಗೆಗೆ ನನ್ನ ಉತ್ತರವನ್ನೂ, ತನ್ನ ಕ್ಷಮೆಯನ್ನೂ ಪ್ರಕಟಿಸುವದಾಗಿಯೂ ಮತ್ತು ಲೇಖನವನ್ನು ಹಿಂತೆಗೆದುಕೊಳ್ಳುವುದಾಗಿಯೂ ಒಪ್ಪಿದೆ. ನನ್ನ ಬಗ್ಗೆ, ವಿಶೇಷವಾಗಿ ಆಶ್ರಮದ ಬಗ್ಗೆ ಉಂಟಾದ ತಪ್ಪು ಕಲ್ಪನೆಯನ್ನು ಹೋಗಲಾಡಿಸುವುದೇ ಈ ಪತ್ರದ ಉದ್ದೇಶ.

ಕಳೆದ ಮೂರು ವರ್ಷಗಳಿಂದ ಜಾಯ್ ರ್‍ಯಾಫೀಲ್ ಆಶ್ರಮದ ಘನತೆಗೆ ಕುಂದು ತರುವಂಥ ಕೆಲಸದಲ್ಲಿ ತೊಡಗಿದ್ದಾರಲ್ಲದೇ ಸ್ವಾಮಿ ಮುಕ್ತಾನಂದ, ಸ್ವಾಮಿ ಚಿದ್ವಿಲಾಸಾನಂದಾ ಹಾಗೂ ಸ್ವಾಮಿ ನಿತ್ಯಾನಂದರು ಅವರವರ ಸ್ಥಾನಕ್ಕೆ ಅನರ್ಹರೆಂಬ ಕಲ್ಪನೆಯನ್ನು ಜನರಲ್ಲಿ ಮೂಡಿಸುವಲ್ಲಿ ನಿರತರಾಗಿದ್ದಾರೆ. ರ್‍ಯಾಫೀಲರಿಗೆ ಆಶ್ರಮದ ಬಗ್ಗೆ ಏನೇನೂ ಗೊತ್ತಿಲ್ಲ, ಆಶ್ರಮವನ್ನವರು ಇಷ್ಟ ಪಡುವುದಿಲ್ಲ ಕೂಡ; ಅಂತೆಯೆ ಅದರ ಹೆಸರು ಕೆಡಿಸಲು ಏನನ್ನೂ ಮಾಡಲು ಹಿಂದೆ ಮುಂದೆ ನೋಡುವುದಿಲ್ಲ. ವಸ್ತುನಿಷ್ಠ ಪತ್ರಕರ್ತನೊಬ್ಬ ಆಶ್ರಮದ ಒಳ್ಳೆಯ ಅಂಶಗಳನ್ನು, ಜನಪುನರುತ್ಥಾನದ ಬಗೆಗಿನ ಅದರ ಕ್ರಮಗಳನ್ನು ಜನಕ್ಕೆ ತಿಳಿಸಿಕೊಡಬೇಕಲ್ಲವೆ?

ಪ್ರತಿದಿನ ಹಳ್ಳಿಹಳ್ಳಿಗೆ ಹೋಗಿ ರೋಗಪೀಡಿತರ ಶುಶ್ರೂಷೆಯಲ್ಲಿ ತೊಡಗುವ, ಅವರಿಗೆ ಪುಕ್ಕಟೆ ಸ್ವಾಸ್ಥ್ಯಪರೀಕ್ಷೆ ಔಷಧಗಳ ಹಂಚಿಕೆಯನ್ನು ಮಾಡುವ ಸುಸಜ್ಜಿತ ಮತ್ತು ನುರಿತ ವೈದ್ಯರು ದಾದಿಯರನ್ನೊಳಗೊಂಡ ನಿತ್ಯಾನಂದ ಮೊಬೈಲ್ ಹಾಸ್ಪಿಟಲ್ಲಿನ ಬಗ್ಗೆ ಏಕೆ ಅವರು ಉಲ್ಲೇಖಿಸಿಲ್ಲ? ಈ ಭಾಗದ ಆದಿವಾಸಿಗಳಿಗೆ ಆಶ್ರಮವೇ ತನ್ನ ಖರ್ಚಿನಲ್ಲಿ ೧೦೦೦ ಸಿಮೆಂಟ್ ಮನೆಗಳನ್ನು ಕಟ್ಟಿ ಅವರಿಗೆ ಬೇಕಾದ ಪಾತ್ರೆ ಪಗಡಗಳ ಸಹಿತ ಮುಫತ್ತಾಗಿ ನೀಡಿದ್ದನ್ನೇಕೆ ಇವರು ಗಮನಿಸಿಲ್ಲ? ಒಮ್ಮೆಲೆ

೧೦,೦೦೦ ಜನ ಆದಿವಾಸಿಗಳಿಗೆ ಬಟ್ಟೆ ಆಹಾರ ವಸ್ತುಗಳನ್ನು ಪುಕ್ಕಟೆಯಾಗಿ ಹಂಚಿದ್ದನ್ನೇಕೆ ಬರೆಯುವುದಿಲ್ಲ? ಈ ಸಮುದಾಯಹಿತ ಕಾರ್ಯವು ಬಾಬಾ ಮುಕ್ತಾನಂದಾ, ಸ್ವಾಮಿ ಚಿದ್ವಿಲಾಸಾನಂದ ಮತ್ತು ಸ್ವಾಮಿ ನಿತ್ಯಾನಂದರ ಬೃಹದ್ ಯೋಜನೆಗಳಲ್ಲಿ ಒಂದು ಸಣ್ಣ ಕಾರ್ಯ ಅಷ್ಟೆ. ಗುರುದೇವ ಸಿದ್ಧಪೀಠ ಎಲ್ಲರಿಗೂ ಮುಕ್ತ. ಜಾತಿ-ಲಿಂಗ-ಧರ್ಮ-ಕೋಮು-ರಾಷ್ಟ್ರೀಯತೆ ಅಥವಾ ನಂಬಿಗೆಗಳ ಭೇದ ಅದಕ್ಕಿಲ್ಲ.

ಕೆಲ ಅಪ್ಪಟ ಸುಳ್ಳುಗಳನ್ನಿಲ್ಲಿ ನಾನು ಎತ್ತಿ ತೋರಿಸಿ ವಾಸ್ತವವನ್ನು ನಿಮ್ಮ ಮುಂದಿಡುತ್ತಿರುವೆ. ನಾನು ಜಾರ್ಜ್ ಫ್ರಾಂಕ್ಲಿನ್ ಎಂಬ ಹೆಸರನ್ನೆಂದೂ ಬಳಸಿಲ್ಲ. ೧೯೭೪ ರಲ್ಲಿ ಬಾಬಾ ಮುಕ್ತಾನಂದರನ್ನು ಭೇಟಿಯಾದ ನಾನು ನನ್ನ ಜೀವಮಾನವನ್ನು ಅವರಿಗೆ ಹಾಗೂ ಆಶ್ರಮಕ್ಕೆ ಮುಡಿಪಿಟ್ಟಿದ್ದೇನೆ; ಈಗ ಸ್ವಾಮಿ ಚಿದ್ವಿಲಾಸಾನಂದಾ ಹಾಗೂ ಸ್ವಾಮಿ ಮುಕ್ತಾನಂದರಿಗಾಗಿ. ೧೯೭೫ ರಲ್ಲಿ ವಿವಾಹಿತನಾದೆ ನಾನು. ನನ್ನ ಹೆಂಡತಿಯೂ ೧೯೭೦ ರಿಂದಲೇ ಆಶ್ರಮದ ಭಕ್ತಳು. ಸಮಯ ಸಿಕ್ಕಾಗೆಲ್ಲ ನಾವು ಗಣೇಶಪುರಿಗೆ ಹೋಗುತ್ತೇವೆ. ಇಲ್ಲಿಗೆ ಬರುವ ಜನ ನಾನು ಕಂಡವರಲ್ಲೇ ಅತ್ಯುತ್ತಮರು. ಇನ್ನು ನನ್ನ ಮನೆತನದ ಹಿನ್ನೆಲೆ: ನನ್ನ ತಂದೆ ಒಬ್ಬ ಇಂಜಿನೀಯರ್, ಒಬ್ಬ ಸೋದರಿ ವಕೀಲಳು, ಒಬ್ಬ ಸೋದರ ಡಿಸೈನರ್ ಮತ್ತು ನನ್ನ ತಮ್ಮ ತಂಗಿಯರು ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾರೆ. ನನ್ನ ತಂದೆಯ ಕಕ್ಕ ದಕ್ಷಿಣ ಲೆಬನಾನಿನ ಆರ್ಚ್‌ಬಿಷಪ್. ನಾನು ಜೆಸ್ಯೂಟ್ ಸ್ಕೂಲಿನಲ್ಲಿ ಓದಿ ಮುಂದೆ ಮೂರು ವರ್ಷದವರೆಗೆ ಕಾಲೇಜು ಅಭ್ಯಾಸ ಮಾಡಿ ಪದವಿ ಪಡೆದದ್ದೂ ಲೆಬನಾನಿನಲ್ಲಿಯೆ.

ನಾನು ಲೆಬನಾನನ್ನು ಬಿಟ್ಟು ಪರದೇಶಕ್ಕೆ ಹೋದದ್ದು ಅಮೇರಿಕದ ಮಿಚಿಗನ್ ಸ್ಟೇಟ್ ಯುನಿವರ್ಸಿಟಿಯಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಸ್ಟೂಡೆಂಟ್ ವಿಸಾ ಪಡೆದು. ನಂತರ ನನಗೆ ವಾಸ್ತುಶಿಲ್ಪ ಹಾಗೂ ವಿನ್ಯಾಸದಲ್ಲಿ ಆಸಕ್ತಿ ಮೂಡಿತು. ಅಂತೆಯೆ ಆ ಅಭ್ಯಾಸಕ್ಕಾಗಿ ಮತ್ತೊಂದು ವಿಶ್ವವಿದ್ಯಾಲಯ ಸೇರಿದೆ. ನಾನೆಂದೂ ಭೂಗತ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿಲ್ಲ ಮತ್ತು ಇಂಥ ಚಟುವಟಿಕೆಗಳಿಗಾಗಿ ಎಫ್‌ಬಿಐ ಆಗಲಿ ಬೇರೆ ಪೋಲೀಸ್ ಆಗಲಿ ನನ್ನ ತಲಾಶೆ ಮಾಡಿಲ್ಲ. ನಾನೆಂದೂ ಬಂಧಿತನಾಗಿಲ್ಲ. ಯಾವುದೇ ದೇಶವನ್ನು ಅನಧಿಕೃತವಾಗಿ ಪ್ರವೇಶಿಸಿಲ್ಲ ಅಥವಾ ತ್ಯಜಿಸಿಲ್ಲ. ಎಂದೂ ಯಾವುದೇ ರೀತಿಯ ಶಿಕ್ಷೆಗೊಳಗಾಗಿಲ್ಲ. ಅದರಲ್ಲೂ ರ್‍ಯಾಫೀಲ್ ಹೇಳಿರುವಂಥ ಸಶ್ರಮ ಕಠಿಣ ಶಿಕ್ಷೆಯ ಮಾತಂತೂ ದೂರವೇ (ಅಮೇರಿಕದಲ್ಲಿ ಸಶ್ರಮ ಕಠಿಣ ಶಿಕ್ಷೆಯಂತೂ ಇಲ್ಲವೇ ಇಲ್ಲ.) ಯಾವುದೇ ನ್ಯಾಯಾಲಯದ ಅಥವಾ ಕಾಯಿದೆಯ ನಿಯಮ ಉಲ್ಲಂಘನೆಯನ್ನಂತೂ ಮಾಡಿಯೇ ಇಲ್ಲ. ಸಂನ್ಯಾಸಿನಿಯರೊಂದಿಗೆ ಎಂದೂ ಎಲ್ಲೂ ಅನೈತಿಕ ನಡವಳಿಕೆ ಮಾಡಿಲ್ಲ. ಆ ಆಪಾದನೆಯೊಂದೇ ರ್‍ಯಾಫೀಲರನ್ನು ಕೋರ್ಟಿಗೆಳೆಯಲು ಸಾಕಾಗಿತ್ತು, ನನಗೆ.

ನಾನು ಧೂಮ್ರಪಾನ ಮಾಡುವುದಿಲ್ಲ, ಮದ್ಯ ಸೇವಿಸುವುದಿಲ್ಲ, ಮಾದಕ ಪೇಯಗಳಿಂದಂತೂ ಬಲು ದೂರ; ಚಹ ಕಾಫಿಯನ್ನೂ ಕುಡಿಯುವುದಿಲ್ಲ. ಆಶ್ರಮದಲ್ಲಿ ಮತ್ತು ಬರಿಸುವ ವಸ್ತುಗಳ ಬಳಕೆ, ಸಿಗರೇಟು ಸೇದುವುದು ಸಹ ನಿಷಿದ್ಧ. ಇದು ಆಶ್ರಮದ ಶಿಸ್ತು. ಇದನ್ನು-ಲ್ಲಂಘಿಸಿದ ಯಾರೇ ಆಗಲೀ ಕೂಡಲೇ ಆಶ್ರಮದಿಂದ ಹೊರಹಾಕಲ್ಪಡುತ್ತಾರೆ. ಹೊಸದಾಗಿ ಬರುವ ಸಾಧಕರಿಗಂತೂ ಈ ವಿಷಯವಾಗಿ ಸಾಕಷ್ಟು ತಿಳುವಳಿಕೆ ಕೊಡಲಾಗುತ್ತವಲ್ಲದೆ ಶಿಸ್ತು ಭಂಗ ಅಥವಾ ಈ ದೇಶದ ಕಾನೂನುಗಳ ಉಲಂಘನೆ ಮಾಡಿದರೆ ಹೊರದೂಡಲ್ಪಡುತ್ತಾರೆಂದೂ ತಿಳಿಸಲಾಗುತ್ತದೆ. ಆದ್ದರಿಂದ ಆಶ್ರಮದಲ್ಲಿ ಅನಧಿಕೃತ ಅನೈತಿಕ ಕೆಲಸ ನಡೆಯುತ್ತದೆ, ಮಾದಕ ವಸ್ತುಗಳ ಸೇವನೆ-

ಕ್ಷಮಾಯಾಚನೆ

ನಾನು 'ಆನ್‌ಲುಕರ್' ಪತ್ರಿಕೆಯಿಂದ ಅನುವಾದಿಸಿದ್ದ ಲೇಖನ 'ಯಾರು ಈ ಜಾರ್ಜ್ ಅಫಿಫ್?'ನಲ್ಲಿ ಸತ್ಯವಿದೂರ ಅಂಶಗಳೇ ತುಂಬಿದೆಯೆಂದು ಮೂಲ ಲೇಖಕಿ ಜಾಯ್ ರ್‍ಯಾಫೀಲರೇ ಒಪ್ಪಿ ಪ್ರಕಟಿಸಿದ ವಿಷಯ ನನಗೆ ಈಚೆಗಷ್ಟೇ ತಿಳಿದು ನನ್ನ ಕೃತ್ಯಕ್ಕಾಗಿ ನನಗೆ ಆಘಾತವಾಯಿತು. ಮುಕ್ತಾನಂದಾಶ್ರಮದ ಬಗ್ಗೆಯಾಗಲಿ ಶ್ರೀ ಜಾರ್ಜ್ ಅಫಿಫರ್ ಬಗ್ಗೆಯಾಗಲಿ ನನಗೆ ಯಾವುದೇ ಪೂರ್ವಾಗ್ರಹವಿಲ್ಲ. ಅಲ್ಲದೆ ವೈಯಕ್ತಿಕ ಸಂಪರ್ಕ ಅಥವಾ ಮಾಹಿತಿಯೂ ಇಲ್ಲ. ಆ ಲೇಖನವನ್ನು ಅನುವಾದಿಸುವಾಗ ನನ್ನ ಉದ್ದೇಶ ಅದು ಸಾರ್ವಜನಿಕ ಆಸಕ್ತಿಯ ವಿಷಯವೆಂದೆನಿಸಿದ್ದುದರಿಂದ ಅದನ್ನು ಕನ್ನಡ ಓದುಗರಿಗೆ ನೀಡಬೇಕೆಂಬುದು ಮಾತ್ರವಾಗಿತ್ತು. ನನ್ನ ಈ ಅನು-ವಾದದಿಂದ ಶ್ರೀ ಜಾರ್ಜ್‌ರ ಮನಸ್ಸಿಗೆ ಆಘಾತವಾಗಿದ್ದರೆ ಅದು ಸಹಜವೇ ಸರಿ. ನಿರುದ್ದಿಷ್ಟವಾಗಿಯೇ ಸಂಭವಿಸಿದ ಈ ಪ್ರಮಾದಕ್ಕಾಗಿ ನಾನು ಅವರ ಕ್ಷಮೆ ಯಾಚಿಸುತ್ತೇನೆ.

–ಜಿ. ಎಸ್. ಭಟ್

ವಿತರಣೆಯಾಗುತ್ತದೆ ಎಂಬ ಆಪಾದನೆಯಾಗಲಿ ನಾನು ಯಾರಿಗಾದರೂ ಅಪರಿಚಿತ ವಸ್ತುವನ್ನು ಸೇದುವಂತೆ ಒತ್ತಾಯ ಮಾಡಿದೆನೆಂಬ ಹೇಳಿಕೆಯಾಗಲಿ ಸತ್ಯಕ್ಕೆ ದೂರವಾದದ್ದು. 'ಆನ್‌ಲುಕರ್' ಈ ವಿಷಯದಲ್ಲಿ ಸತ್ಯಶೋಧನೆಯ ಕೆಲಸಕ್ಕೆ ತೊಡಗಬಹುದಿತ್ತಲ್ಲ. ಹಾಗೆ ಮಾಡಿದ್ದರೆ ಇಲ್ಲಿ (ಆಶ್ರಮದಲ್ಲಿ) ಜನ ಹೇಗೆ ವಾಸಿಸುತ್ತಾರೆ ಮತ್ತು ಗುರು-ದೇವರ ಪ್ರೀತಿಯಿಂದಾಗಿ ಹೇಗೆ ಒಗ್ಗೂಡಿ ಕೆಲಸ ಮಾಡುತ್ತಾರೆಂಬುದು ಅವರಿಗೆ ಗೊತ್ತಾಗುತ್ತಿತ್ತು.

ನಾನು ಪ್ರತಿಯೊಂದು ಆಪಾದನೆಯನ್ನೂ ಅಲ್ಲಗಳೆಯುತ್ತ ಹೋಗಬಹುದು- ಆದರೆ ಏನು ಪ್ರಯೋಜನ? ನನ್ನ ಹೆಸರು ಹಾಗೂ ಆಶ್ರಮದ ಖ್ಯಾತಿಯನ್ನು ಕೆಡಿಸುವುದು 'ಆನ್‌ಲುಕರ್'ನ ಉದ್ದೇಶ. 'ತನಿಖಾ ವರದಿ'ಯ ಹೆಸರಿನಲ್ಲಿ ಜನರನ್ನು ತಪ್ಪು ತಿಳುವಳಿಕೆಗೆಳೆಯಲಾಗುತ್ತಿದೆ. 'ಆನ್‌ಲುಕರ್'ನ ಈ ವರದಿಯನ್ನು ನಿಜ ಎಂದು ನಂಬಿ ಕೆಲವು ಪತ್ರಿಕೆಗಳೂ ಪುನರ್ಮುದ್ರಿಸಿವೆ. ಈಗ ಜನಕ್ಕೆ ಯಾವುದು ನಿಜ ಯಾವುದು ಸುಳ್ಳೆಂಬುದು ಮನದಟ್ಟಾಗಬಹುದು.

–ಜಾರ್ಜ್ ಅಫಿಫ್

ಬಚ್ಚಲ ಬಿಲ್ಲೆ ತಿಂದರೇನು? ಕಲ್ಲದ ಹೊನ್ನು ಮುಚ್ಚಿಲ್ಲಿದ್ದರೇನು? ಆಕಾಶದ ಮಾವಿನ ಫಲವೆಂದರೇನು? ಕೊಯ್ಯಲಿಲ್ಲ, ಮೆಲ್ಲಲಿಲ್ಲ!

–ಬಸವೇಶ್ವರ



ಮುಂಬಯಿ ಜೀವನದ ಒಂದು ನೋಟ

ಒಪ್ಪಂದ

ಜಿ. ವಿ. ಕಂಚುಗಾರ

ಮೊದಲನೆಯ ಪಾಳಿ ಮುಗಿಸಿ ಚರ್ಚ್‌ಗೇಟ್ ಸ್ಟೇಷನ್ನಿಗೆ ಬರುವಾಗ ಏನಿಲ್ಲವೆಂದರೂ ೭.೪೫ ಆಗುತ್ತದೆ. ಇತ್ತೀಚೆಗೆ ಸ್ಲೋ ಟ್ರೇನ್ ಅಲರ್ಜಿ ಹಿಡಿದುಹೋಗಿದೆ. ಮೊದಮೊದಲು ಯಾವುದಾಯಿತು ಅದರಲ್ಲಿ ಹೋಗುತ್ತಿದ್ದವ ಈಗ ಬೊರಿವಲಿಯೇ ಆಗಬೇಕು, ಅದೂ ಫಾಸ್ಟ್ ಇರಬೇಕು ಅಂತ ಕಾಯುವುದಿದೆ. ೭.೫೩ಕ್ಕೆ ವಿರಾರ್ ಲೋಕಲ್ ಇದ್ದರೂ ಬೊರಿವಲಿಯಲ್ಲಿ ಆ ರಷ್‌ನಲ್ಲಿ ಇಳಿದುಕೊಳ್ಳುವುದು ಕಷ್ಟ ಅಂತ (ಒಂದೆರಡು ಸಲ ಇನ್ನೂ ಮುಂದೆ ಭಾಯಿಂದರ್ ವರೆಗೂ ಹೋದದ್ದಿದೆ) ಐದು - ಹತ್ತು ನಿಮಿಷ ನಿಂತು ೭ - ೫೯ರ ಡಬ್ಬಲ್ ಫಾಸ್ಟ್ ಬೊರಿವಲಿ ಗಾಡಿ ಹತ್ತುತ್ತೇನೆ. ಸ್ಟೇಷನ್ ಬಂದ ಹಾಗೆಲ್ಲಾ ಅಲ್ಲಲ್ಲಿ ಹತ್ತಿ ಇಳಿಯುವ ಕೆಲವಷ್ಟು ಹೆಣ್ಣು ಮಕ್ಕಳನ್ನಾದರೂ ನೋಡಬಹುದೆಂದುಕೊಂಡು ಲೇಡೀಸ್ ಕಂಪಾರ್ಟ್‌ಮೆಂಟಿನ ನಂತರದ ಡಬ್ಬ ಹತ್ತಿ ಕಿಟಕಿ ಹತ್ತಿರ .ಕುಳಿತುಕೊಳ್ಳುತ್ತೇನೆ.

ಅರ್ಧ ಗಂಟೆಯಲ್ಲೇ ಗಾಡಿ ಅಂಧೇರಿ ತಲುಪುತ್ತದೆ. ಪ್ರತಿ ಸಲದಂತೆ ಈ ಸಲವೂ ಗಾಡಿ ನಾಲ್ಕನೆಯ ಪ್ಲಾಟ್‌ಫಾರ್ಮಿನಲ್ಲಿ ಬಂದು ನಿಲ್ಲುತ್ತದೆ. ಈ ಮೊದಲು ವಿರಾರ್ ಲೋಕಲ್ ಹೋದ ಕಾರಣದಿಂದಲೋ ಅಥವಾ ಈ ಗಾಡಿ ಅಂಧೇರಿ ಹಾಗೂ ಬೊರಿವಲಿಗಳ ನಡುವಣ ಸ್ಟೇಷನಿನಲ್ಲಿ ನಿಲ್ಲುವುದಿಲ್ಲವೆಂಬ ಕಾರಣ - ದಿಂದಲೋ ಅಂತೂ ಗಾಡಿಯಲ್ಲಿ ಹೆಚ್ಚಿಗೆ ಯಾರೂ ಹತ್ತುವುದಿಲ್ಲ. ಇದ್ದವರಲ್ಲೂ ಹಲವರು ಗಾಡಿಯಿಂದಿಳಿದು ಗಾಡಿ ಹೆಚ್ಚು ಕಡಿಮೆ ಖಾಲಿಯಾಗುತ್ತದೆ.

ಅಲ್ಲಿಂದ ಹೊರಟ ಗಾಡಿ ಬರೀ ಹದಿನೈದು ನಿಮಿಷದಲ್ಲಿ ಬೊರಿವಲಿ ಮುಟ್ಟುತ್ತದೆ. ಒನೆಯ ಪ್ಲಾಟ್‌ಫಾರ್ಮಿನಿಂದ ೮-೫೩ಕ್ಕೆ ಹಿಂತಿರುಗಿ ಚರ್ಚ್‌ಗೇಟಿಗೆ ಹೋಗುವ ಫಾಸ್ಟ್ ಟ್ರೇನ್ ಇದು ಅಂತ ಅನೌನ್ಸ್ ಮಾಡುತ್ತಾ "ಉತರ್ನೇ ವಾಲೋಂ ಕೋ ಪಹಲೇ ಉತರ್ನೆ ದೀಜಿಯೆ" ಎಂದು ಕಿರುಚಿಕೊಳ್ಳುತ್ತಾ ಅನೌನ್ಸರ್ ತನ್ನ ಗಂಟಲನ್ನಿಷ್ಟು ಹಾಳುಮಾಡಿಕೊಳ್ಳುತ್ತಾನೆ. ಹತ್ತುವವರದೇ ಮೇಲುಗೈ ಆಗುತ್ತದೆ. ಗಾಡಿ ಸಂಪೂರ್ಣ ನಿಲ್ಲುವ ಮೊದಲೇ ಧಡ್ ಧಡ್ ಧಡ್ ಅಂತ ಮಶಿನ್ ಗನ್ ಹಿಡಿದು ಮುನ್ನುಗ್ಗುವ ಯೋಧರಂತೆ

ಬ್ರೀಫ್‌ಕೇಸ್ ಹಿಡಿದು ಹಾರುತ್ತಾರೆ-ಒಂದೊಂದು ಸೀಟಿಗಾಗಿ. ಜಾಣರಾದವರು ಅವ-ರನ್ನು ಎದುರಿಸಿ ಕೈ ಕಾಲು ಮುರಿದುಕೊಳ್ಳುವ ಸಾಹಸಕ್ಕೆ ಹೋಗದೆ ಹತ್ತುವವರೆಲ್ಲಾ ಹತ್ತಿ ಕೊಳ್ಳುವ ತನಕ ಇನ್ನೊಂದು ದಿಕ್ಕಿನಲ್ಲಿ ಮುದುಡಿ ನಿಂತು ಬಿಡುತ್ತಾರೆ. ಒಮ್ಮೊಮ್ಮೆ ಒಬ್ಬಿಬ್ಬರು ಅವರಿವರ ಕಾಲಡಿ ಸಿಕ್ಕಿ ಉಸಿರು ಕಟ್ಟಿ ಸಾಯು-ವುದೂ ಇದೆ. ಇದೆಲ್ಲಾ ಈಗ ಸಾಮಾನ್ಯವಾಗಿ ಬಿಟ್ಟಿದೆ. ಪಿಕ್ ಪಾಕೆಟ್ ಮಾಡುವವರಿಗಂತೂ ಇದು ಸುಗ್ಗಿಯ ಕಾಲ.

ಯೋಚಿಸುತ್ತಾ ಕುಳಿತಿದ್ದ ನಾನು ಕಿಟಕಿಯ ಪಕ್ಕದಲ್ಲಿ ಇನ್ನೂ ಕುಳಿತುಕೊಂಡೇ ಇದ್ದೆ. ಗಾಡಿ ನಿಲ್ಲುವ ಮೊದಲೇ ಹಾರುತ್ತಾ ಬಂದ ಗುಜರಾತಿ ಮಧ್ಯ ಪ್ರಾಯದವನೊಬ್ಬ ನನ್ನ ಪಕ್ಕದಲ್ಲೇ ಬಂದು ಕುಳಿತುಕೊಂಡು "ನೀವು ಇಳಿಯುವವರಿದ್ದಿರಾ?" ಅಂತ ಕೇಳುತ್ತಾನೆ. ನಾನು ಹೌದೆಂಬಂತೆ ತಲೆಯಾಡಿಸುತ್ತೇನೆ.

"ಹಾಗಿದ್ದಲ್ಲಿ ಪ್ಲೀಸ್ ಒಂದು ನಿಮಿಷ ಕುಳಿತು ಕೊಳ್ಳಿ. ನಮ್ಮವರು ಬರುವವರಿದ್ದಾರೆ. ಅವರು ಬಂದ ನಂತರ ಎದ್ದರೆ ಬಹಳ ಉಪ ಕಾರವಾದೀತು" ಅಂತ ಹೇಳಿ ಏಳ ಹೊರಟ ನನ್ನನ್ನು ಅವರದೇ ಅಧಿಕಾರವೆಂಬಂತೆ ಎಳೆದು ಕುಳ್ಳಿರಿಸುತ್ತಾರೆ. ಒಳಗೊಳಗೇ ಸಿಟ್ಟು ನೆತ್ತಿ ಗೇರಿದರೂ ನನಗೇನೂ ಅಂತಹ ಅರ್ಜೆಂಟ್ ಕೆಲಸವಿಲ್ಲದಿದ್ದುದರಿಂದ ಮೌನವಾಗಿಯೇ ಸಮ್ಮತಿ ಈಯುತ್ತೇನೆ. ಅಂತೂ ಅವರ ಒಬ್ಬ ಸ್ನೇಹಿತನಿಗೆ ಸೀಟು ಸಿಗುತ್ತದೆ. ಅವರು ಇಬ್ಬರಲ್ಲ ಒಟ್ಟಿಗೆ ನಾಲ್ಕು ಜನರಿದ್ದಾರೆ ಅಂತ ಅವರೆಲ್ಲ ಪರಸ್ಪರ ಗುಜರಾತಿಯಲ್ಲಿ ಮಾತನಾಡ ತೊಡಗಿದಂತೆಯೇ ಅರ್ಥವಾಗತೊಡಗುತ್ತದೆ. ಅಷ್ಟರೊಳಗೆ ಗಾರ್ಡ್ ವಿಸಲ್ ಹಾಕಿದ್ದು ಕೇಳಿಸಿ ಬೇಗ ಬೇಗ ಗಾಡಿಯಿಂದ ಇಳಿದುಕೊಳ್ಳುತ್ತೇನೆ.

ಈ ವಿಷಯ ಅಲ್ಲಿಗೇ ಮುಗಿಯುವದಿಲ್ಲ. ಆನಂತರ ಕೆಲವು ದಿನಗಳ ತನಕ ಅವರು ನನಗೆ ಅದೇ ಕಂಪಾರ್ಟ್‌ಮೆಂಟನಲ್ಲಿ ಸತತವಾಗಿ ಸಿಗುತ್ತಾರೆ. ಹಾಗೇಯೇ ಅವರ ಪರಿಚಯವೂ ಆಗುತ್ತದೆ.

ಅವರಲ್ಲಿ ಮೂವರ ಹೆಸರು ದ್ವಿವೇದಿ, ತ್ರಿವೇದಿ, ಮತ್ತು ಚತುರ್ವೇದಿ ಅಂತ. ಮೂವ ರದ್ದೂ ತಾಂಬಾಕಾಂಟಾದಲ್ಲಿ ಆಫೀಸಿದ್ದು ಮೂವರೂ ಹೋಲ್ ಸೇಲ್ ಯಾರ್ನ್ ಮರ್ಚಂಟ್ಸ್ ಆಗಿ ಕೈತುಂಬಾ ಹಣ ಸಂಪಾ ದಿಸುತ್ತಿದ್ದಾರಂತೆ. ನಾಲ್ಕನೆಯವನ ಹೆಸರು ಷಾ ಅಂತ. ಶೇರು ವಹಿವಾಟಿನಲ್ಲಿ ಗಟ್ಟಿ ಕುಳ ಆಗಿದ್ದಾನಂತೆ. ಎಲ್ಲರ ಹತ್ತಿರವೂ ಅವರದ್ದೇ ಆದ ವೆಹಿಕಲ್ ಇದ್ದರೂ ದೂರ ಜಾಸ್ತಿ ಆದುದರಿಂದ ಬೆಳಿಗ್ಗೆ ಯಾವಾಗಲೂ ಇದೇ ಟ್ರೇನಿನಲ್ಲಿ ಎಲ್ಲಾ ಒಟ್ಟಿಗೇ ಹೋಗುತ್ತಾರಂತೆ. ಮೊದಮೊದಲು ಕುಳಿತುಕೊಳ್ಳಲು ಜಾಗ ಸಿಕ್ಕಿ ದಲ್ಲಿ ಟೈಮ್‌ಪಾಸಿಗಾಗಿ 'ಮೆಂಡಿಕೋಟ್' ಆಡ್ತಾ ಹೋಗುತ್ತಿದ್ದವರು ಈಗ ಪೊಯಿಂಟ್ ಲೆಕ್ಕದಲ್ಲಿ ಹಣ ಹಾಕಿ ರಮ್ಮಿ ಆಡಲಿಕ್ಕೆ ಪ್ರಾರಂಭಿಸಿ-ದ್ದಾರಂತೆ. ಇತ್ಯಾದಿ... ಇತ್ಯಾದಿ...

ಆ ದಿನವೂ ನಾನು ಅದೇ ಟ್ರೇನಿನಲ್ಲಿದ್ದೆ. ನನ್ನನ್ನು ನೋಡಿದವರು ಪರಿಚಯದ ನಗೆ ಬೀರಿ ಅವರದಾದ ಒಂದು ಸಣ್ಣ ಸಮಸ್ಯೆಯನ್ನು ನನ್ನ ಮುಂದಿಟ್ಟರು.

"ದಿನವೂ ಸೀಟಿಗೆ ೫ ರೂಪಾಯಿ ಲೆಕ್ಕದಲ್ಲಿ ನಾಲ್ಕು ಸೀಟು ಬುಕ್ ಮಾಡಲಿಕ್ಕೆ ಆಗ ಬಹುದಾ? ನಿನ್ನ ಪರಿಚಯದಲ್ಲಿ ೩-೪ ಜನ ಹುಡುಗರಿದ್ದರೆ ಇದೇನೂ ಕಷ್ಟದ ಕೆಲಸವಲ್ಲ. ಅಂಧೇರಿಯಲ್ಲಿ ಗಾಡಿ ಖಾಲಿ ಇರುತ್ತದೆ. ಳನೆಯ ಪ್ಲಾಟ್‌ಫಾರ್ಮಿನಿಂದ ೮-೩೦ ಕ್ಕೆ ಸರಿಯಾಗಿ ಇದು ಹೊರಡುತ್ತದೆ. ಬರಿ ೧೫-೨೦ ನಿಮಿ ಷದ ಕೆಲಸ. ಬೊರಿವಲಿಯಿಂದ ಅಂಧೇ-ರಿಯತನಕ ನಾಲ್ಕು ಜನರಿಗೆ ನಾಲ್ಕು ಪಾಸನ್ನು ತೆಗೆದುಕೊಡೋಣ. ಫಸ್ಟ್‌ಕ್ಲಾಸಿನಲ್ಲಿ ಹೋಗಲಿಕ್ಕೆ ಇವರಿಗೇನು ಧಾಡಿಯೇ ಅಂತ ನಿನ್ನ ಮನಸ್ಸಿನಲ್ಲಿ ಪ್ರಶ್ನೆ ಎದ್ದಿರಬೇಕು! ಟ್ರಿಬ್ಬಲ್ ಹಣ ತುಂಬಿಯೂ ಸರಿಯಾಗಿ ನಿಂತು

ಕೊಳ್ಳಲಿಕ್ಕೂ ಸ್ಥಳ ಸಿಗದ ಮೇಲೆ ಫಸ್ಟ್ ಕ್ಲಾಸ್ ಆದರೇನು ಸೆಕೆಂಡ್‌ಕ್ಲಾಸ್ ಆದರೇನು ಅಲ್ಲವೆ? ಹಾಂ ಹೇಗೂ ಇರಲಿ, ಯಾವುದಕ್ಕೂ ಯೋಚಿಸಿ ಹೇಳು" ಅಂತ ೨೦ ರ ನೋಟೊಂದನ್ನು ನನ್ನ ಕಿಸೆಯಲ್ಲಿ ತುರುಕಿ ಮುಗುಳ್ನಗೆ ಬೀರಿದರು.

ನನ್ನ ಪರಿಚಯದಲ್ಲಿ ಕೆಲಸ ಇಲ್ಲದೆ ಅಲೆದಾಡುತ್ತಿರುವ ಹುಡುಗರಿಗೇನು ಬರವೇ? ಕಳೆದ ಜೂನಿನಲ್ಲಿ ಮೆಟ್ರಿಕ್ ಪಾಸ್ ಮಾಡಿ ಕಾಲೇಜಿಗೂ ಹೋಗದೆ ಕೆಲಸಕ್ಕೂ ಸೇರದೆ (ಹೋಗದೆ ಸೇರದೆ ಅನ್ನುವುದಕ್ಕಿಂತ ಸಾಧ್ಯವಾಗದೆ ಎನ್ನುವುದು ಹೆಚ್ಚು ಉಚಿತವಾದೀತು) ತಿರುಗಾಡುತ್ತಿರುವ ಹುಡುಗರೇ ಕೆಲವರಿದ್ದರು. 'ಆಯಿತು' ಅಂತ ತಲೆಯಾಡಿಸಿ ಅವರಿಂದ ಬೀಳ್ಕೊಟ್ಟೆ.

*

ಈಗ ಪ್ರತಿ ದಿನ ದ್ವಿವೇದಿ ಗ್ರೂಪ್ ೩ನೆಯ ಪ್ಲಾಟ್‌ಫಾರ್ಮಿನಿಂದ ಹೊರಡುವ ೮-೫೩ರ ಬೊರಿವಲಿ ಲೋಕಲ್ಲಿನಲ್ಲಿ ಲೇಡೀಸ್ ಕಂಪಾರ್ಟ್‌ಮೆಂಟಿನ ನಂತರದ ಡಬ್ಬದಲ್ಲಿ ಇಸ್ಪೀಟಾಟ ಆಡ್ತಾ ಮಜಾದಲ್ಲಿ ಹೋಗುತ್ತಾರೆ. ನಾನೂ ನನ್ನ ಮೂವರು ಗೆಳೆಯರೂ (ರವಿವಾರ ಬಿಟ್ಟು) ಪ್ರತಿ ದಿನ ಅವರಿಗೆ ಸೀಟು ರಿಸರ್ವ್ ಮಾಡಿ ಕೊಡುತ್ತೇವೆ. ಟ್ರೇನ್ ಸರಿಯಾದ ವೇಳೆಗೆ ಬಾರದಿದ್ದರೆ, ಕ್ಯಾನ್ಸಲ್ ಆದರೆ ಅಥವಾ ಬೇರೆ ಪ್ಲಾಟ್‌ಫಾರ್ಮಿಗೆ ಬಂದರೆ ನಾವು ಜವಾಬ್ದಾರರಲ್ಲ ಅಂತ ಮೊದಲೇ ತಿಳಿಸಿದ್ದೇವೆ. ಎಲ್ಲಾದರೂ ಅಪರೂಪಕ್ಕೊಮ್ಮೆ ಮಾತ್ರ ಹೀಗಾಗುವುದು ಅನ್ನುವುದು ಅವರಿಗೂ ತಿಳಿದದ್ದೆ. ಆದ್ದರಿಂದ ಅವರದ್ದೇನೂ ಚಕಾರವಿಲ್ಲವೆನ್ನಿ.

ನಿಮ್ಮಲ್ಲಿ ಯಾರಿಗಾದರೂ ಸೀಟ್ ರಿಸರ್ವ್ ಮಾಡಿಸಿಕೊಳ್ಳಬೇಕೆನಿಸಿದಲ್ಲಿ ಒಂದು ದಿನ ಕಷ್ಟಪಟ್ಟು [ಮತ್ತೆ ಕಷ್ಟಪಡಬೇಕಾದದ್ದಿಲ್ಲ.] ಈ ಗಾಡಿಯು ಇದೇ ಕಂಪಾರ್ಟ್‌ಮೆಂಟಿನಲ್ಲಿ ನನ್ನನ್ನು ಭೇಟಿಯಾಗಿ. ಫಸ್ಟ್‌ಕ್ಲಾಸ್, ಸೆಕೆಂಡ್ ಕ್ಲಾಸ್ ಯಾವುದು ಬೇಕು ಅದು, ಸೀಟ್ ರಿಸರ್ವ್ ಮಾಡಿಕೊಡುವ ಕೆಲಸ ನನ್ನದು. ಚಾರ್ಜು ಅತ್ಯಲ್ಪ. **At the rate of Rs. 5/– daily to monthly pass fare. That's all.** ಸ್ವಲ್ಪ ಹೆಚ್ಚಾಯಿತು ಅನಿಸಿತೆ? ಮೊದಮೊದಲು ಹಾಗೆ ಸಹಜವೇ. ಆದರೆ ಇಸ್ತ್ರೀ ವಸ್ತ್ರವನ್ನೆಲ್ಲಾ ಹಾಳು ಮಾಡಿಕೊಂಡು ಬೈಸಿಕೊಂಡು ಹೊಡೆಸಿಕೊಂಡು ಇಲ್ಲ ಕೈಕಾಲು ಮುರಿದುಕೊಂಡು ನೇತಾಡುವಂತೆ ಹೋಗುವುದಕ್ಕಿಂತ ಆರಾಮದಲ್ಲಿ ಕುಳಿತುಕೊಂಡು; ಬೇಕಾದರೆ ಇಸ್ಪೀಟಾಟ ಆಡುತ್ತಲೋ ನಿದ್ರೆ ಮಾಡುತ್ತಲೋ ಇಲ್ಲ ಓದುತ್ತಲೋ ಹೋಗುವುದು ಒಳ್ಳೆಯದಲ್ಲವೇ? ನೀವೇ ಯೋಚಿಸಿ ನೋಡಿ. ನಿಮಗೆ ಸರಿ ಎನಿಸಿದಲ್ಲಿ ನನ್ನನ್ನು ಸಂಪರ್ಕಿಸಿ. ನನ್ನನ್ನು ಭೇಟಿಯಾಗಬೇಕಾದ ಸ್ಥಳ ನೆನಪಿದೆಯಲ್ಲವೆ?

ಬೊರಿವಲಿ ಸ್ಟೇಷನ್...ಮೂರನೆಯ ಪ್ಲಾಟ್‌ಫಾರ್ಮ್......೮-೫೩ರ ಟ್ರೇನ್......ಲೇಡೀಸ್ ಕಂಪಾರ್ಟ್‌ಮೆಂಟಿನ ನಂತರದ ಡಬ್ಬ...ಸ್ವಲ್ಪ ತಡವಾದರೂ ನನ್ನ ಬದಲಿಗೆ ನಿಮಗೆ ದ್ವಿವೇದಿ ಗ್ರುಪ್ ಸಿಗಬಹುದು; ಎಚ್ಚರ. ✡

ಪೋರ್ಟ್‌ಲ್ಯಾಂಡ್ ಸಿಮೆಂಟ್ ಎನ್ನುತ್ತಾರಲ್ಲ– ಈ ಹೆಸರು ಅದಕ್ಕೆ ಬಂದದ್ದು ೧೮೨೪ರಲ್ಲಿ. ಇಂಗ್ಲಂಡಿನ ಹೆಸರಾಂತ ಪೋರ್ಟ್‌ಲ್ಯಾಂಡ್ ಕಟ್ಟಡದ ಕಲ್ಲಿನ ಬಣ್ಣವನ್ನೇ ಈ ಸಿಮೆಂಟ್ ಹೋಲುತ್ತಿದ್ದುದೇ ಇದಕ್ಕೆ ಕಾರಣ.

ಅಲ್ಜೀರಿಯದಲ್ಲೊಂದು ಮದುವೆ

ಲುಡ್ಮಿಲಾ ಫ್ಯೂದೊರೊವಾ

ದಾರಿಯಲ್ಲಿ ಪೋಣಿಸಿದಂತೆ ಕಾಣುತ್ತಿದ್ದ ಕಾರುಗಳು ಸಾಲಾಗಿ ಅಬ್ಬರಿಸುತ್ತ ಪಕ್ಕದಲ್ಲೇ ಹಾದುಹೋದವು. ನನ್ನ ಅಚ್ಚರಿಯನ್ನು ಕಂಡು ನನ್ನ ಕಾರಿನ ಡ್ರೈವರ್ ನಸುನಕ್ಕು, ಅದು, ವರನನ್ನು ಕರೆತರಲು ಹೊರಟ ಮೆರವಣಿಗೆಯೆಂದು ವಿವರಿಸಿದ. ಮರುಗಳಿಗೆಯಲ್ಲೇ ಇಂಥದೇ ಮತ್ತೊಂದು ಮೆರವಣಿಗೆ ನಮ್ಮೆದುರು ಹೊರಟಿರುವುದು ಕಂಡುಬಂತು. ಪುಷ್ಪಾಲಂಕೃತ ಕಾರೊಂದನ್ನು, ಜನರಿಂದ ತುಂಬಿದ್ದ ನಾನಾ ನಮೂನೆಯ ಕಾರುಗಳು ಹಿಂಬಾಲಿಸುತ್ತಿದ್ದವು. ಡೋಲು ಕೊಳಲುಗಳನ್ನು ಬಾರಿಸುತ್ತ ಹಾಡುತ್ತಿದ್ದರು ಈ ಕಾರುಗಳಲ್ಲಿ ಕುಳಿತವರು.

"ಈಗ ಶರತ್ಕಾಲ. ಇಲ್ಲಿ ಈ ಕಾಲದಲ್ಲಿ ಮದುವೆಗಳು ಸಾಮಾನ್ಯವಾಗಿ ಎಲ್ಲೆಡೆಯೂ ನಡೆಯುತ್ತವೆ" ಎಂದ ಡ್ರೈವರ್. ನಾನು ಇಂಥದೊಂದು ಕಾರ್ಯಕ್ರಮದಲ್ಲಿ ಇಷ್ಟರಲ್ಲೇ ಪಾಲ್ಗೊಳ್ಳಬಹುದೆಂದೇನೂ ಊಹಿಸಿರಲಿಲ್ಲ.

ಒಂದು ವಾರದ ನಂತರ ನಾನು ಅಲ್ಜೀರಿಯನ್ ವಿವಾಹ ಸಮಾರಂಭವೊಂದಕ್ಕೆ ಆಮಂತ್ರಿಸಲ್ಪಟ್ಟೆ. ಸುಡು ಬಿಸಿಲಿನ ಆ ದಿನ ಮಧ್ಯಾಹ್ನ ಮೂರು ಗಂಟೆಗೆ, ನಾವು ರಾಜಧಾನಿಯ ಸೆರಗಿನಲ್ಲಿರುವ ಆ ಸಣ್ಣ ಮನೆಗಳಿದ್ದಲ್ಲಿ ಹೋದೆವು. ಅಲ್ಲಿ ಸಡಗರದ ಕೇಂದ್ರವಾಗಿದ್ದ ಮನೆಯನ್ನು ದೂರದಿಂದಲೇ ವಾದ್ಯಗಳು ಹಾಗೂ ಸುತ್ತ ನೆರೆದ ಜನಸಮೂಹದಿಂದಲೇ ಗುರುತಿಸಬಹುದಿತ್ತು. ನನ್ನನ್ನು ತಾಡಪತ್ರಿ ಹೊಚ್ಚಿದ ಸಿಮೆಂಟಿನ ನೆಲದ ಒಳಾಂಗಣದ- ಹೆಣ್ಣು ಮಕ್ಕಳಿಗೆ ಮೀಸಲಿದ ಕೊಠಡಿಗೆ ಕರೆದೊಯ್ಯಲಾಯಿತು. ಆ ವೇಳೆಗಾಗಲೇ ಅಲ್ಲಿ ಹಬ್ಬದ ವಾತಾವರಣ ಉಂಟಾಗಿತ್ತು. ಹೆಂಗಸರೆಲ್ಲ ಚಾಪೆ, ಕಂಬಳಿ, ಕುರಿ ಚರ್ಮ ಮತ್ತು ಮೆದು ಹಾಸುಗಳ ಮೇಲೆ ಕುಳಿತು, ತರುಣಿಯರಿಬ್ಬರು ಡೋಲು ಬಡಿಯುತ್ತ ಹಾಡುತ್ತಿರುವುದನ್ನು ನೋಡುತ್ತಿದ್ದರು.

ಅಲ್ಜೀರಿಯನ್ನರ ಮದುವೆಯೊಂದು ಉತ್ಸವವಿದ್ದ ಹಾಗೆ. ವಿವರವಾಗಿ ಹೇಳಬೇಕೆಂದರೆ, ಮದುವೆಗೆಂದೇ ಸಿದ್ಧಪಡಿಸುವ ಸಾಂಪ್ರದಾಯಿಕ ಸಿಹಿ ತಿಂಡಿ 'ಕೋಸ್–

('Asia and Africa Today' ದಿಂದ ಸಾಭಾರ)

ಕೋಸ್' ತಯಾರಿಕೆಯ ದಿನದಿಂದಲೇ ಮದುವೆಯ ಕಾರ್ಯಕ್ರಮ ಪ್ರಾರಂಭ. ಈ ತಿನಿಸನ್ನು ಗೋಧಿಯಿಂದ ಮಾಡುತ್ತಾರೆ. ಇದನ್ನು ಅಕ್ಕಿಗಿಂತಲೂ ಸಣ್ಣಾಗುವಂತೆ ಒತ್ತು ಹಾಕುತ್ತಾರೆ. ಬಹಳಷ್ಟು ಜನ ಮದುವೆ ಊಟಕ್ಕೆ ಸೇರುವದರಿಂದ ಈ ತಿಂಡಿಯನ್ನು ಮದುವೆಗೆ ಹಲವಾರು ದಿನ ಮೊದಲೇ ಮಾಡಲು ಪ್ರಾರಂಭಿಸುತ್ತಾರೆ. ಈ ಕೆಲಸದಲ್ಲಿ ಸಂಬಂಧಿಕರು, ನೆರೆಹೊರೆಯವರು, ಮದುಮಗಳ ಹಾಗೂ ಅವಳ ಅಕ್ಕನ ಗೆಳತಿಯರೂ ಪಾಲ್ಗೊಳ್ಳುತ್ತಾರೆ. ಹಾಡುತ್ತ, ನರ್ತಿಸುತ್ತ ಅವರೆಲ್ಲ ತಮ್ಮ ಆಯಾಸ ಮರೆಯುವುದರ ಜತೆಗೆ ಉತ್ಸವದ ವಾತಾವರಣವನ್ನು ನಿರ್ಮಿಸುತ್ತಾರೆ. ಮದುವೆಯ ದಿನದವರೆಗೂ ಸಂಭ್ರಮ ಹೆಚ್ಚುತ್ತಲೇ ಹೋಗುತ್ತದೆ.

ನಾವು ವರ ಮಹಾಶಯನನ್ನು ಭೇಟಿಯಾಗಲು ಅವನಿದ್ದ ಕೊಠಡಿಗೆ ನಡೆದೆವು. ನನಗೆ ಕುಳಿತುಕೊಳ್ಳಲು ಕುರ್ಚಿ ಹಾಕಿದರೂ, ನಾನು ಅಲ್ಲಿ ಕೂಡದೆಯೆ ಮೆತ್ತನೆಯ ಗಾದಿಯ ಮೇಲೆ ದಿಂಬಿಗೆ ಒರಗಿ ಕುಳಿತು, ಮಾತನಾಡುತ್ತಿದ್ದವರೊಂದಿಗೆ ಸೇರಿ ವರನನ್ನು ಮಾತನಾಡಿಸಲು ಬಯಸಿದೆ. ಅವನು ಅವರೊಂದಿಗೆ ಮಾತನಾಡುತ್ತ ಅಲ್ಲಿಯೇ ಹಾದುಹೋಗುತ್ತಿದ್ದ ತನ್ನ ತಂಗಿಯನ್ನು ಕರೆದು ಆಕೆಗೇನೋ ನೆನಪಿಸುತ್ತ, ಅನ್ಯಮನಸ್ಕನಾಗಿ, ತನ್ನ ತಾಯಿಯನ್ನು ಯಾವುದೋ ವಿಷಯವಾಗಿ ಕೇಳಿದ. ನನ್ನೊಂದಿಗೆ ಮಾತ್ರ ಆದರದಿಂದಲೇ ಮಾತನಾಡಿದ. ನಂತರ ಒಮ್ಮೆಲೆ ಮಾತನ್ನು ನಿಲ್ಲಿಸಿ, ಮನೆಯ ಒಳಗಡೆ ಏನು ನಡೆಯುತ್ತಿದೆ ಎಂದು ಆಲಿಸತೊಡಗಿದ. ಉತ್ಸಾಹದ ದೊಡ್ಡ ದನಿಗಳು, ಕಾರಿನ ಬಾಗಿಲನ್ನು ತೆಗೆದು ಹಾಕಿದ ಸದ್ದು, ಜನರ ಗಲಿಬಿಲಿ ಅಲ್ಲಿ ಕೇಳಿಬಂತು. ಸೇರಿದ್ದ ಹೆಂಗಸರು ಈಗ ಹಾಡುವುದನ್ನು ನಿಲ್ಲಿಸಿ, ತಮ್ಮನ್ನು ಸಿಂಗರಿಸಿಕೊಳ್ಳತೊಡಗಿದರು. ಅತಿಥಿಗಳೆಲ್ಲರೂ ಹೊರಬಂದು, ತಮಗಾಗಿ ಸಿದ್ಧವಾದ ಕಾರುಗಳೆಡೆಗೆ ನಡೆದರು.

ಎಲ್ಲರೂ ಕಾರುಗಳಲ್ಲಿ ಕುಳಿತ ಮೇಲೆ ನಾವು ಆ ಸ್ಥಳ ಬಿಟ್ಟು ಹೊರಟಾಗ ಸೂರ್ಯಾಸ್ತ ಸಮೀಪಿಸುತ್ತಿತ್ತು. ಮಾರ್ಗದುದ್ದಕ್ಕೂ ಬಲ ತುದಿಯಲ್ಲಿದ್ದ ಅಂಗಡಿಗಳು, ರಂಗು ರಂಗಿನ ಹಣ್ಣು ತರಕಾರಿಗಳಿಂದ ತುಂಬಿದ್ದ ತಟ್ಟೆಗಳು ನಮ್ಮನ್ನು ತಮ್ಮ ಶುಭ್ರ ಹಾಗೂ ಕಣ್ಸೆಳೆಯುವ ಬಣ್ಣದೊಂದಿಗೆ ಮರಳುಗೊಳಿಸುತ್ತಿದ್ದವು. ಅಂಬೆಗಾಲಿಕ್ಕುತ್ತ, ಸಮುದ್ರದೆಡೆಗೆ ಹೊರಟಿರುವ ಕೂಸಿನ ಹಾಗೆ ಕಾಣುವ ನಗರದ ಅತಿ ಸುಂದರ ನೋಟದ ನಡುವೆ, ಅಂಕುಡೊಂಕಾದ ರಸ್ತೆಯಲ್ಲಿ ಸಾಗಿ, ನಾವು ಗುಡ್ಡವನ್ನು ಏರಿ 'ಅತ್ಯುತ್ತಮ' ಎನ್ನುವದನ್ನು ಸಹ ಬದುಗಿಡುವಂಥ ಸುಂದರ ಪ್ರದೇಶವೊಂದನ್ನು ಪ್ರವೇಶಿಸಿದೆವು. ಅಲ್ಲಿ ಮುಂದಿನ ಕಾರ್ಯಕ್ರಮದ ಕುರಿತು, ಎಲ್ಲರಿಗೂ ವಿವರಿಸಲಾಯಿತು. ಅಲ್ಲಿಯ ನಿವಾಸದ ಸಣ್ಣ ರಸ್ತೆಗಳ ಹಾಗೂ ಸರೋವರದ ನಡುವೆ, ನಮ್ಮನ್ನು ಗೌರವದಿಂದ ಮೆರವಣಿಗೆ ಮಾಡಲಾಯಿತು. ಇದು ಮುಗಿಯುವವರೆಗೆ, ನಮ್ಮ ಕಾರಿನ ದೀಪಗಳು ಪ್ರಕಾಶಮಾನವಾಗಿ ಉರಿಯುತ್ತಲೇ ಇದ್ದವು. ಮರುಕ್ಷಣದಲ್ಲಿ ಕಾರು ಪ್ರಾಂಗಣವನ್ನು ಪ್ರವೇಶಿಸಿದಾಗ ಅಸಾಧ್ಯ ಗದ್ದಲದಿಂದ ತುಂಬಿ ಹೋಯಿತು. ಆ ವೇಳೆಗಾಗಲೇ ಗಂಡಿನ ಕಡೆಯವರು, ಎಲ್ಲಾ ಸ್ಥಳವನ್ನು ಆಕ್ರಮಿಸಿ, ಮಾಳಿಗೆ ಮೇಲಿಂದ, ಬಾಲ್ಕನಿಯಿಂದ, ಕಿಟಕಿಗಳಿಂದ ಹೊರಗೆ ಹಣಕಿ ನೋಡುತ್ತಿದ್ದರು. ನಾವೆಲ್ಲ ಗುಂಪುಗೂಡಿ, ಗದ್ದಲ ಮಾಡುತ್ತ, ರೇಷ್ಮೆಪಟ್ಟೆ, ದಾರ ಮುಂತಾದ ವಸ್ತುಗಳೊಂದಿಗೆ, ಮದುಮಗನ ನಿವಾಸವನ್ನು ಪ್ರವೇಶಿಸಿದೆವು. ನಮ್ಮ ದೊಡ್ಡ ಗುಂಪು, ಆ ಸಣ್ಣ ಕೋಣೆಯಲ್ಲಿ ಸೇರಿಕೊಂಡಿದ್ದು ಆಶ್ಚರ್ಯವೆ. ಅತಿಥಿಗಳಿಗೆಲ್ಲ ಒಂದು ಸಣ್ಣ ಕೋಣೆಯಲ್ಲಿ ಕಾಗದಿಂದ ಮುಚ್ಚಿದ್ದ ಸುವಾಸನೆಯುಕ್ತ ಸಣ್ಣ ಕೇಕು ತುಂಡು ಮತ್ತು ಕಾಫಿಯನ್ನು ನೀಡ

ಲಾಯಿತು. ನಾವು ಮಾತ್ರ ಕಾಫಿಯನ್ನು ಕುಡಿದು ಮುಗಿಸಿದೆವಾದರೂ ನಮ್ಮೊಂದಿಗೆ ಆ ಕೋಣೆಯಲ್ಲಿದ್ದ ಹೆಂಗಸರು (ಅವರಿಗಾಗೇ ಮೀಸಲಾಗಿಸಿದ್ದ ಕೋಣೆಯದು) ತಮ್ಮ ಮುಖಗಳಿಗೆ ತೆಳು ಮುಸುಕನ್ನು ಧರಿಸುವಲ್ಲಿ ಮಗ್ನರಾಗಿದ್ದರು. ಮದುವೆಯ ಉಡುಪನ್ನು ಧರಿಸಿ ಮೇಲೆ ತೆಳು ಹೊದಿಕೆಯೊಂದನ್ನು ಹೊದ್ದಿದ್ದ ಮದುಮಗಳು, ತನ್ನ ತಂಗಿ ಮತ್ತು ನಾದಿನಿಯರೊಂದಿಗೆ ಅಲ್ಲಿಗೆ ಆಗ ಮಿಸಿದಳು.

ಇದಕ್ಕೂ ಮೊದಲು ಹಲವಾರು ವಿಧಿಗಳು ನೆರವೇರುತ್ತವೆ. ಹುಡುಗನು, ತಾನು ಆಯ್ಕೆ ಮಾಡಿಕೊಂಡ ಹುಡುಗಿಯನ್ನು, ಅವಳ ತಂದೆ-ತಾಯಿಯರಿಗೆ ತಿಳಿಸುವುದು ಆ ವೇಳೆಗಾಗಲೇ ಹುಡುಗಿ ತನ್ನ ಹೃದಯವನ್ನು ಇಂಥ ಹುಡುಗನಿಗೆ ಅರ್ಪಿಸಿದ್ದೇನೆಂದು ತನ್ನ ತಾಯಿ-ತಂದೆಗೆ ಹೇಳುವುದು, ನಂತರ ಹುಡುಗಿಯ ತಾಯಿ ಸಂಪ್ರದಾಯ ರೀತ್ಯಾ ನಿಶ್ಚಯ ಕಾರ್ಯ ಮಾಡುವುದು, ಹುಡುಗಿಯ ತಂದೆ-ತಾಯಿಯರು 'ಒಪ್ಪಿಗೆ' ಕೊಟ್ಟ ನಂತರ, ಹುಡುಗನು ಮದುವೆಗಾಗಿ ಕಾಣಿಕೆಯನ್ನು ತರುವುದು ಇತ್ಯಾದಿ. ಈ ಕಾಣಿಕೆ ವಸ್ತ್ರವಾಗಬಹುದು, ಬಂಗಾರದ ಆಭರಣವಾಗಬಹುದು ಅಥವಾ ಮನೆಯನ್ನು ಅಲಂಕರಿಸುವ ಚಾಪೆಯಾದರೂ ಆಗಿರಬಹುದು. ನಂತರ ಎರಡೂ ಕಡೆಯವರು ಒಂದೆಡೆ ಸೇರಿ, ಸಣ್ಣ-ಪುಟ್ಟ ಸಮಸ್ಯೆಗಳಿದ್ದರೆ ಬಗೆಹರಿಸಿಕೊಂಡು, ಮುಂದಿನ ಕ್ರಮಗಳ ರೂಪ ರೇಷೆ ತಯಾರಿಸುತ್ತಾರೆ. ಮೊದಲು ಎರಡೂ ಕಡೆಯ ಕುಟುಂಬಗಳ ಗಂಡಸರು ಮಸೀದೆಯಲ್ಲಿ ಸೇರಿ, ಮದುವೆಯ ಸಂಪ್ರದಾಯಗಳನ್ನು ನಡೆಸುತ್ತಾರೆ. ಈ ಸಮಯದಲ್ಲಿ ವರ ಅಲ್ಲಿ ಹಾಜರಿರುವದಿಲ್ಲ. ಇಮಾಮರು ಈ ಧಾರ್ಮಿಕ ವಿಧಿಗೆ ಸಂಬಂಧಿಸಿದಂತೆ ಕುರಾನಿನಲ್ಲಿ ಇರುವ ಭಾಗಗಳನ್ನಾಯ್ದು ಓದಿ ಹೇಳುತ್ತಾರೆ. ನಂತರ, ಅಲ್ಲಿ ಸೇರಿದವರೆಲ್ಲ ಮದುಮಗಳ ಮನೆಗೆ ಬರುತ್ತಾರೆ. ಅಲ್ಲಿ ಅವರನ್ನು, ಕೋಸ್-ಕೋಸ್ ತಿಂಡಿ, ಮಾಂಸದ ತಿನಿಸು, ಕಾಫಿ, ಶರಬತ್ತು, ಹಣ್ಣು ಮತ್ತು ಸಿಹಿ ತಿಂಡಿಗಳು ಕಾಯುತ್ತಿರುತ್ತವೆ. ನಂತರ ಹೆಂಗಸರು, ತಮ್ಮ ವಸತಿಯಲ್ಲಿ ಜಾನಪದ ವಾದ್ಯಗಳನ್ನು ಬಾರಿಸುತ್ತ ಹಾಡುತ್ತ ಕುಣಿಯುತ್ತಾರೆ.

ಅನಂತರ, ನವದಂಪತಿಗಳು, ತಮ್ಮ ತಂದೆ ಅಥವಾ ಅಣ್ಣಂದಿರ ಸಾಕ್ಷಿಯಾಗಿ, ನಗರಸಭೆ ಕಚೇರಿಯಲ್ಲಿ ತಮ್ಮ ಮದುವೆಯ ನೋಂದಣಿಯನ್ನು ಮಾಡಿಸುತ್ತಾರೆ.

ಇಷ್ಟೆಲ್ಲ ಕಾರ್ಯಕ್ರಮದ ನಂತರವೇ ಮದುವೆಯ ಕೊನೆಯ ಕಾರ್ಯಕ್ರಮದ ದಿನವನ್ನು ನಿಶ್ಚಯಿಸುತ್ತಾರೆ. ಮದುವೆಯ ಸಂಪ್ರದಾಯಗಳು ಮುಗಿಯಲು ಒಂದರಿಂದ ಎರಡು ತಿಂಗಳು ಬೇಕು. ಈ ಅವಧಿಯಲ್ಲಿ, ಮದುವೆಯ 'ವಿಶೇಷ ಊಟ' ಮುಗಿಯುವ ದಿನದ



"ಪಕ್ಷಗಳು ಎಷ್ಟು?"
"ಶುಕ್ಲಪಕ್ಷ, ಕೃಷ್ಣಪಕ್ಷ, ಹೊಟ್ಟೆಪು
ಜನತಾ ಪಕ್ಷ, ಕಾಂಗ್ರೆಸ್.."

ವರೆಗೂ, ವಧೂವರರಿಬ್ಬರೂ ಬೇರೆಯಾಗಿ, ತಮ್ಮ ಮನೆಯವರೊಂದಿಗೇ ಇರಬೇಕು. ಅವರು ಹೀಗೆ ಬೇರೆಯಾಗಿರುವ ವೇಳೆಯಲ್ಲಿ, ಅವರ ಸಂಬಂಧದಲ್ಲೇನೂ 'ಬದಲಾವಣೆ'ಯಾಗುವುದಿಲ್ಲ ವೆಂಬುದು ನಾವು ಗಮನಿಸಬೇಕಾದ ಮುಖ್ಯ ಅಂಶ.

ಈಗ ಗಂಡಿನವರು ಹುಡುಗಿಯನ್ನು ಅವಳ ತಂದೆ–ತಾಯಿಯರ ಒಪ್ಪಿಗೆ ಪಡೆದು, 'ಹೊಸ ಮನೆ'ಗೆ (ಗಂಡಿನ ಮನೆ) ಕರೆ ತರುತ್ತಾರೆ. ಅಲ್ಲಿ ಮದುಮಗಳನ್ನು ಬರಮಾಡಿಕೊಳ್ಳುವ ಕೊನೆಯ ಕಾರ್ಯಕ್ರಮ ಏರ್ಪಾಡಾಗಿರುತ್ತದೆ. ಮದುಮಗಳು ಬಂದಾಗ, ಅಲ್ಲಿದ್ದ ಜನರು, ಮಕ್ಕಳು, ಹಿರಿಯರಾದಿಯಾಗಿ ಎಲ್ಲಗೂ ಅವ ಳನ್ನು ಸಡಗರ, ಸಂತೋಷ, ಉತ್ಸಾಹಗಳಿಂದ ಸ್ವಾಗತಿಸುತ್ತಾರೆ.

ಆ ಸಮಯದಲ್ಲಿ, ವಸತಿಯಿಂದ ಡೋಲಿನ ಧ್ವನಿ ಕೇಳಿಬರುತ್ತದೆ. ಇಲ್ಲಿಯ ಡೋಲು ನೋಡಲು ಅಪರೂಪದ್ದೆನಿಸುತ್ತದೆ. ಮಣ್ಣಿನ ಬಾನಿಯಂತೆ ಕಾಣುವ ಇದಕ್ಕೆ ಚರ್ಮವನ್ನು ಹೊದಿಸಿರುತ್ತಾರೆ. ಸುಂದರವಾದ ಉಡುಪು ಗಳನ್ನು ಧರಿಸಿದ ಹೆಂಗಸರು ಪ್ರಾಂಗಣದ ಸುತ್ತ ಮುತ್ತ, ಕುರ್ಚಿ, ಸ್ಟೂಲುಗಳ ಮೇಲಲ್ಲದೆ, ಪ್ರಾಂಗಣಕ್ಕೆ ಹೊಂದಿಕೊಂಡೇ ಇರುವ ಮಾಳಿಗೆ ಕೋಣೆಗಳಲ್ಲೂ ಕುಳಿತಿದ್ದರು. ಅವರು ಧರಿಸಿದ್ದ ಬಂಗಾರ ಮತ್ತು ಬೆಳ್ಳಿ ಎಳೆಗಳಿಂದ ಕಸೂತಿ ಹಾಕಿದ ರೇಷ್ಮೆಯ ಉಡುಪುಗಳು, ಮಿನುಗುವ ಜರಿಯ ವಸ್ತ್ರ, ಸೂಕ್ಷ್ಮವಾದ ಲೇಸ್‌ಗಳು, ಭಾರ ವಾದ ಚುಕ್ಕೆಗಳು ಮತ್ತು ಹೊಳೆಯುವ ರತ್ನ ಗಳು ಎಲ್ಲಾ ಸೇರಿ, ಆ ಹೆಂಗಸರನ್ನು ಅವರ್ಣ ನೀಯ ಸುಂದರಿಯರನ್ನಾಗಿ ಮಾಡಿದ್ದವು.

ಬಗೆಬಗೆಯ ತೊಡುಗೆಗಳು, ರಾಷ್ಟ್ರೀಯ ಪರಂಪರೆಯನ್ನು ಪ್ರತಿನಿಧಿಸುವ, ಬಂಗಾರ– ಬೆಳ್ಳಿಯ ಎಳೆಗಳಿಂದ ಕಸೂತಿ ಮಾಡಿದ ತೆಳು ಮುಸುಕುಗಳು, ಸಂಜೆ ವೇಳೆ ಧರಿಸುವ ಬಟ್ಟೆ ಗಳಲ್ಲದೇ ಅತ್ಯಂತ ಆಧುನಿಕ ಉಡುಗೆಗಳನ್ನು ಅಲ್ಲಿ ನೋಡಬಹುದಾಗಿತ್ತು. ತಲೆಯಿಂದ ಕಾಲಿನ ವರೆಗೂ ಮುಚ್ಚುವಂಥ ನಿಲುವಂಗಿಯಂಥವು ಗಳನ್ನೂ ಅವುಗಳ ಮೇಲೆ ಮೇಲು ಹೊದಿಕೆ ಯನ್ನೂ ಹೊದ್ದ ಬಹಳಷ್ಟು ಸಂಪ್ರದಾಯಸ್ಥ ಸ್ತ್ರೀಯರೂ ಅಲ್ಲಿದ್ದರು. ಕೆಲವರು ಇಂಥ ತೊಡುಗೆಯಲ್ಲಿ ಬಂದವರು ಇಲ್ಲಿ ಬಂದಮೇಲೆ ಅವುಗಳನ್ನು ತೆಗೆದಿರಿಸಿ ಫ್ಯಾಷನೇಬಲ್ ಡ್ರೆಸ್ಸು ಗಳನ್ನೂ ಹಾಕಿಕೊಂಡರು. ಆಧುನಿಕವಾಗಿ ಕೇಶಾ ಲಂಕಾರವನ್ನೂ ಮಾಡಿಕೊಂಡರು.

ಈ ಜನರು, ತಮ್ಮ ತೊಡೆಗಳ ಮಧ್ಯ ಡೋಲುಗಳನ್ನಿರಿಸಿಕೊಂಡು ಪ್ರಾವೀಣ್ಯದಿಂದ ಬಾರಿಸುತ್ತಾರೆ. ಹಾಡು–ಕುಣಿತಗಳೊಂದಿಗೆ. ಒಂದಾದ ಮೇಲೆ ಒಂದರಂತೆ, ವಾದ್ಯವನ್ನು ನೈಪುಣ್ಯದಿಂದ ಬಾರಿಸಲಾರಂಭಿಸಿದರು. ಆಗ ಮೊದಲನೆಯ ನೃತ್ಯಗಾತಿ ಅಲ್ಲಿ ಕಾಣಿಸಿ ಕೊಂಡಳು.

ಇಷ್ಟರೊಳಗಾಗಿ ವಧುವಿಗಾಗಿ ಸುಂದರ ಮೇಲು ಹೊದಿಕೆಯನ್ನು ಹಾಕಿದ, ಕೈಗಳುಳ್ಳ ಕುರ್ಚಿಯೊಂದನ್ನು ಸಭಾಗೃಹದ ಮಧ್ಯೆ ಇಡ ಲಾಗಿತ್ತು. ಕುರ್ಚಿಯ ಮೇಲೆರಡು ಹಾಗೂ ಕಾಲ ಬಳಿ ಒಂದು–ಒಟ್ಟು ಮೂರು ಸ್ಯಾಟಿನ್ ಮೆತ್ತೆಗಳೂ ಇಡಲ್ಪಟ್ಟಿದ್ದವು.

ವಧು ಸಭಾಗೃಹದಲ್ಲಿ ಕಾಣಿಸಿಕೊಂಡಾಗ, ಸ್ವಾಗತದ ಸುರಿಮಳೆಯಾಯಿತು. ಬಿಳಿಯ ಲೇಸಿ ನಿಂದ ಒಪ್ಪಮಾಡಿದ ಗುಲಾಬಿ ಬಣ್ಣದ ಕಸೂತಿ ಉಡುಗೆಯೂ, ಅಚ್ಚುಕಟ್ಟಿನ ದುಂಡನೆಯ ಅವಳ ದೇಹಾಕೃತಿಗೆ ಹೊಂದಿಕೆಯಾಗಿತ್ತು. ಅವಳ ಕುತ್ತಿಗೆ, ಕಿವಿ ಮತ್ತು ಮಣಿಕಟ್ಟುಗಳು, ರತ್ನದ ಆಭರಣಗಳಿಂದ ಅಲಂಕೃತವಾಗಿದ್ದವು. ಯಾರ ಕಡೆಗೂ ನೋಡದೇ ಗಂಭೀರಳಾಗಿ ವಧು ಕುರ್ಚಿಯಲ್ಲಿ ಕುಳಿತಳು. ಅವಳ ತಂಗಿಯು, ಪಕ್ಕದಲ್ಲಿ ಕುಳಿತು ಮಡಿಸಿದ್ದ ವಧುವಿನ ಉಡಿಗೆಯ ಭಾಗವನ್ನು ಸರಿಪಡಿಸುತ್ತ ಅಲಂಕಾರ ಸಾಮಗ್ರಿಗಳನ್ನು ಅವಳಿಗೆ ನೀಡುತ್ತಲಿದ್ದಳು. ಒಬ್ಬರಿಗೊಬ್ಬರು ಸ್ಪರ್ಧಿಯಾಗಿ, ಮಹಿಳೆಯರು

ನೃತ್ಯ ಮಾಡಲು ಪ್ರಾರಂಭಿಸಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡವರನ್ನು ಸಂತೋಷಗೊಳಿಸಲು ಪ್ರಯತ್ನಿಸುತ್ತಿದ್ದರು. ಅತಿಥಿಗಳಿಗೆ ಕಾಫಿ, ಕೇಕ್, ಶರಬತ್ತುಗಳನ್ನು ಒದಗಿಸಿದರಲ್ಲದೆ, ವಧುವಿನ ಮನೆಯಲ್ಲಿ ನೀಡಿದಂತೆಯೆ ಸುಂದರ ಕಾಣಿಕೆಗಳನ್ನೂ ಕೊಡಲಾಯಿತು. ಈ ಮದುವೆ ಔತಣದ ಸಮಯದಲ್ಲಿ, ವಧು, ಅನೇಕ ಬಾರಿ ತನ್ನ ಉಡುಪುಗಳನ್ನು ಬದಲಾಯಿಸಿದಳು.

ಇದರ ನಂತರ ಆ ರಾತ್ರಿಯ ಕೊನೆಯ ದರ್ಶನವೆಂಬಂತೆ, ವಧು, ಬಿಳಿಯ ಲೇಸಿನಿಂದ ಹೂಹೂವಾಗಿ ತಯಾರಿಸಿದ್ದ ಮದುವೆ-ಯುಡುಗೆಯಲ್ಲಿ ಪುನಃ ಕಾಣಿಸಿಕೊಂಡಳು. ಒಂದು ಕ್ಷಣ, ಮಾತು, ಹಾಡುಗಳು ನಿಂತು, ಎಲ್ಲರ ದೃಷ್ಟಿಯೂ ಅವಳ ಮೇಲೆ ಕೇಂದ್ರೀಕೃತವಾಯಿತು. ಮತ್ತೊಮ್ಮೆ, ಡೋಲಿನೊಡನೆ, ಎತ್ತರದ ಧ್ವನಿಯ ಹಾಡಿನೊಂದಿಗೆ, ಸಮಾರಂಭವು ಮುಕ್ತಾಯಗೊಂಡಿತು. ದುಃಖದಿಂದ ಕೆಂಪಾದ ಹಾಗೂ ಆಯಾಸಗೊಂಡ ಮುಖದೊಂದಿಗೆ, ವಧು, ಕುಳಿತ್ತಿದ್ದ ಅತಿಥಿಗಳ ಮಧ್ಯದಿಂದ, ನೇರವಾದ ದಾರಿಗುಂಟ, ನವದಂಪತಿ-ಗಳಿಗಾಗಿ ಮೀಸಲಿರಿಸಿದ್ದ ಕೋಣೆಗೆ ನಡೆದಳು.

ವಧು ಹೊರಟು ಹೋದ ನಂತರ, ನೃತ್ಯ-ಹಾಡುಗಳು ಕಡಿಮೆಯಾದವು. ಆತಿಥೇಯರು ಕೋಸ್ - ಕೋಸ್, ಮಾಂಸ ಮತ್ತು ಹಣ್ಣು-ಗಳನ್ನು ಜೋಡಿಸಿರಿಸಿದ್ದ ಮೇಜಿನೆಡೆಗೆ ಅತಿಥಿ-ಗಳನ್ನು ಆಮಂತ್ರಿಸಿದರು.

ಔತಣದುದ್ದಕ್ಕೂ ಗಂಡಸರು ಸಭಾಗೃಹದಲ್ಲಿ ತಮ್ಮಗೆ ನೀಡಿದ ಕಾಫಿಯ ಕುರಿತು ಮೆಚ್ಚುಗೆಯ ಮಾತನಾಡಿದರು; ಹಾಡುಗಳನ್ನು ಹಾಡಿದರು. ನೃತ್ಯ ಮಾಡಲಿಚ್ಛಿಸಿದವರು ಮಧ್ಯೆ ಹೋಗಿ ಒಂದೆರಡು ಹೆಜ್ಜೆ ಹಾಕಿ ಬಂದರು. ಇವೆಲ್ಲದರ ಮಧ್ಯೆ, ಪ್ರಾಂಗಣದಲ್ಲಿ ಕಾಣಿಕೆ ನೀಡುವ ಸ್ಥಳವೊಂದರಲ್ಲಿ ಹಬ್ಬದ ಕಳೆಯೇರಿ ನಡೆಯುತ್ತಿದ್ದ ಇವರ ಚಟುವಟಿಕೆಯನ್ನು ವರಮಹಾಶಯನು ನೋಡುತ್ತ ಕುಳಿತಿದ್ದನು. ಎಲ್ಲರ ಗಮನವನ್ನು ತನ್ನತ್ತ ಸೆಳೆಯುತ್ತ ಮಧ್ಯರಾತ್ರಿ ಸುಮಾರಿಗೆ ಅವನ್ನು ಎದ್ದು ನಿಂತನು. ವಾದ್ಯಗಳು ಸಂಗೀತವನ್ನು ನುಡಿಸಿದವು. ವರನು, ನೃತ್ಯ ಮಾಡಲು ತಯಾರಿ ನಡೆಸುವಂತೆ ಸಭಾಂಗಣದ ತುಂಬೆಲ್ಲ ನಡೆದಾಡಿದನು. ಕೈಯಲ್ಲಿ ಹಣ ಹಿಡಿದು ನಿಂತಿದ್ದವರು ಅವನಿಗೆ ನೀಡಿದರು. ಆ ರಾತ್ರಿ ಪ್ರತಿಯೊಬ್ಬರೂ, ವರನಿಗೆ ಕಾಣಿಕೆ ನೀಡಲು ಬಯಸುತ್ತಿದ್ದರು. ಮುಂಜಾನೆಯವರೆಗೆ ವಿಶ್ರಾಂತಿಗಾಗಿ, ಅತಿಥಿ-ಗಳನ್ನು ಸಭಾಂಗಣದ ಎರಡೂ ಕಡೆ ಬಿಟ್ಟು, ವರನು ಉಲ್ಲಸಿತನಾಗಿ ಮನೆಯೊಳಗೆ ಹೋದನು.

ಈ ದೀರ್ಘಕಾಲದ ಮದುವೆ ಸಂಪ್ರದಾಯ-ಗಳು ಮತ್ತೊಂದು ಕಾರ್ಯಕ್ರಮದೊಂದಿಗೆ ಅಂತ್ಯವಾಗುತ್ತವೆ. ಮದುವೆ ನಡೆದ ವಾರದ ನಂತರ ನವದಂಪತಿಗಳು ವಧುವಿನ ಮನೆಗೆ ಬರುತ್ತಾರೆ. ಒಂದಷ್ಟು ದಿನ ಇದ್ದು ಸಂತೋಷದಿಂದ ಕಾಲ ಕಳೆಯುತ್ತಾರೆ.

ಅಲ್ಜೀರಿಯನ್ ಮದುವೆ ಕೇವಲ ಕುಟುಂಬ-ವೊಂದರ ಧಾರ್ಮಿಕ ಸಮಾರಂಭವಲ್ಲ, ಒಂದು ಸಾಮಾಜಿಕ ಸ್ನೇಹ ಮಿಲನ. ✡



ಅವಳಿ ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಹುಟ್ಟುತ್ತಿರುವುದರ ಕುರಿತು ಮಕ್ಕಳ ತಜ್ಞ ಜಾರ್ಜ್ ವರ್ಕೆಗ್ನೇಜ್ ಈ ರೀತಿ ಹೇಳುತ್ತಾರೆ: "ಇಂದು ಜಗತ್ತಿನ ತುಂಬ ಹಿಂಸೆಯೇ ತುಂಬಿರುವದರಿಂದ, ಅದನ್ನು ಒಂಟಿಯಾಗಿ ಎದುರಿಸಲು ಶಿಶುವಿಗೆ ಕಷ್ಟವಾಗುತ್ತದೆಯೇನೊ."

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಶಬ್ದವೇಧಿ

(ಅ) ವ್ಯಾಕರಣ ಪಂಡಿತ (ಆ) ಭಾಷಣಕಾರರಿಗೆ ಕಲ್ಲೆಸೆತ (ಇ) ಶಬ್ದ ಕೇಳಿ ಬಾಣ ಹೊಡೆಯುವಿಕೆ (ಈ) ಅರ್ಥ ವಿವರಣೆ

೨. ಶುಕ್ತಿ

(ಅ) ಬಲ (ಆ) ಕಪ್ಪೆ ಚಿಪ್ಪು (ಇ) ಗಿಳಿಯ ಮಾತು (ಈ) ಒಣಗಿದ್ದು

೩. ಧೂಮಿಲ

(ಅ) ಹೊಗೆ ತುಂಬಿದ (ಆ) ಧೂಳಿಡಿದ (ಇ) ಪಾಂಡವರ ಪುರೋಹಿತ (ಈ) ಬೀಡಿ

೪. ಕಂಡರಣೆ

(ಅ) ಖಡಾಖಂಡಿತ (ಆ) ಪ್ರತ್ಯಕ್ಷದರ್ಶಿ ಸಾಕ್ಷಿ (ಇ) ತೀರ್ಮಾನ (ಈ) ಕೆತ್ತನೆ

೫. ನಿಷೇಕ

(ಅ) ನಡುಕ (ಆ) ಉಪಚಾರ (ಇ) ವಿರೋಧ (ಈ) ಶೋಭನ ಪ್ರಸ್ತ

೬. ಪ್ರತಿಭಟ

(ಅ) ಎದುರಾಳಿ (ಆ) ಹೊಗಳು ಭಟ್ಟ (ಇ) ಪ್ರೇಮಿ (ಈ) ಬುದ್ಧಿವಂತ

೭. ಹೊರಪು

(ಅ) ಭಾರ (ಆ) ಚೆದುರುವಿಕೆ (ಇ) ತುಂಬುವುದು (ಈ) ಹೊರಡಿಸುವುದು

೮. ಹೊಳಹು

(ಅ) ಕೆತ್ತುವಿಕೆ (ಆ) ಹರಿಯುವುದು (ಇ) ಗುರುತು (ಈ) ಹೂವಿನ ದಳ

೯. ಯೋಗಾಯೋಗ

(ಅ) ಯೋಗದಲ್ಲಿ ಶ್ರೇಷ್ಠ (ಆ) ಅದೃಷ್ಟ ಕೂಡಿ ಬರುವುದು (ಇ) ಯೋಗಾಭ್ಯಾಸ (ಈ) ಕೂಡಿ ಬೇರಾಗುವುದು

೧೦. ರಂಧ್ರಾನ್ವೇಷಣೆ

(ಅ) ಹಾವು ಹಿಡಿಯುವುದು (ಆ) ಗಳಿಗೆ ಬಟ್ಟಲು (ಇ) ತಪ್ಪು ಹುಡುಕುವುದು (ಈ) ಅಲೆದಾಟ

೧೧. ದಮನ

(ಅ) ದಂಡನೆ (ಆ) ದಪ್ಪತನ (ಇ) ಉಸಿರಾಟ (ಈ) ದೊಡ್ಡ ಸೂಜಿ

೧೨. ಜನಾನಾ

(ಅ) ಜನರ ತಲೆ ಎಣಿಸುವುದು (ಆ) ತಾಯಿ ಮನೆ (ಇ) ಸಂತಾನ (ಈ) ರಾಣೀವಾಸ

೧. **ಶಬ್ದವೇಧಿ** (ಇ) ಬರೇ ಶಬ್ದ ಕೇಳಿ ಆ ಕಡೆ ಬಾಣ ಹೊಡೆಯುವ ವಿದ್ಯೆ; ಅಂಥ ಬಾಣ. ಉದಾ:- ದಶರಥನ ಶಬ್ದವೇಧಿ ಬಾಣದಿಂದ ಶ್ರವಣಮುನಿ ಸತ್ತ. [ಸಂ. ಶಬ್ದ + ವೇಧಿ = ಗುರಿ ತಾಗುವ]

೨. **ಶುಕ್ತಿ** (ಆ) ಕಪ್ಪೆ ಚಿಪ್ಪು; ಮುತ್ತಿನ ಚಿಪ್ಪು. ಉದಾ:— ಶುಕ್ತಿಯಲ್ಲಿದ್ದ ಮುತ್ತು. [ಸಂ.]

೩. **ಧೂಮಿಲ** (ಅ) ಹೊಗೆ ಕೂಡಿದ, ಹೊಗೆ ತುಂಬಿದ; ಧೂಮ್ರ; ಹೊಗೆಯಂಥ. ಉದಾ:— ಧೂಮಿಲ ನಯನ. [ಸಂ. ಧೂಮ = ಹೊಗೆ + ಲ]

೪. **ಕಂಡರಣೆ** (ಈ) ಕೆತ್ತನೆ; ಕಲ್ಲು ಮೊದಲಾದ್ದರಲ್ಲಿ ಚಿತ್ರ ಮೊದಲಾದ್ದನ್ನು ಕೊರೆಯುವಿಕೆ. ಉದಾ:— ದೇವಾಲಯದ ಕಂಡರಣೆ. [ಕನ್ನಡ – ಸಂ. ಖಂಡದಿಂದ ?]

೫. **ನಿಷೇಕ** (ಈ) ಶೋಭನ ಪ್ರಸ್ತ, ಗಂಡ ಹೆಂಡಿರು ಪ್ರಥಮತಃ ಕೂಡುವುದಕ್ಕೆ ಸಂಬಂಧಿಸಿದ ವಿಧಿ; (ಅಕ್ಷರಶಃ) ಸಿಂಪಡಿಸುವಿಕೆ. [ಸಂ. ನಿ = ಸರಿಯಾಗಿ + ಸೇಕ = ಚಿಮುಕಿಸುವದು.]

೬. **ಪ್ರತಿಭಟ** (ಅ) ಎದುರಾಳಿ, ಯುದ್ಧದಲ್ಲಿ ವಿರೋಧಿ ವೀರ. ಉದಾ:— ಇವನಿಗೆ ಪ್ರತಿಭಟನಿಲ್ಲ. [ಸಂ. ಪ್ರತಿ = ಎದುರು + ಭಟ = ವೀರ]

೭. **ಹೊರಪು** (ಆ) ಚೆದರುವಿಕೆ; ಮೋಡ ಚೆದರಿ ಬಾನು ಸ್ವಚ್ಛವಾಗುವುದು. ಉದಾ:— ಹೊರಪಾದ ಮೇಲೆ ಹೊರಡುವಾ. (ಕನ್ನಡ – ಹೊಳಪುವಿನ ಒಂದು ರೂಪ?]

೮. **ಹೊಳಹು** (ಇ) ಗುರುತು; ಚಿತ್ರ ಬರೆಯುವಾಗ ಮೊದಲು ಹಾಕಿದ ಬಾಹ್ಯ ರೇಖೆ. ಉದಾ:— ಯೋಜನೆಯ ಹೊಳಹು. [ದೇಶ್ಯ—ಪೊಳೆ = ಹೊಳೆಯಿಂದ?]

೯. **ಯೋಗಾಯೋಗ** (ಅ) ಅದೃಷ್ಟ ಕೂಡಿಬರುವುದು; ಆಕಸ್ಮಾತ್ತಾಗಿ ಕೂಡಿ ಬರುವುದು. ಉದಾ:—ಯೋಗಾಯೋಗದಿಂದ ಭೇಟಿ. [ಸಂ. ಯೋಗ = ಜೋಡಿಸುವಿಕೆ + ಆಯೋಗ]

೧೦. **ರಂಧ್ರಾನ್ವೇಷಣೆ** (ಇ) ತಪ್ಪು ಹುಡುಕುವುದು. (ಅಕ್ಷರಶಃ ತೂತು ಹುಡುಕುವುದು) ಉದಾ:— ರಂಧ್ರಾನ್ವೇಷಣೆಯಲ್ಲೇ ಆಸಕ್ತ. [ಸಂ. ರಂಧ್ರ = ತೂತು + ಅನ್ವೇಷಣೆ = ಹುಡುಕಾಟ]

೧೧. **ದಮನ** (ಅ) ದಂಡನೆ, ದಬ್ಬುವಿಕೆ, ದಬ್ಬಾಳಿಕೆ, ಉದಾ:— ಎದುರು ಪಕ್ಷದ ದಮನ. [ಸಂ.]

೧೨. **ಜನಾನಾ** (ಈ) ರಾಣೀವಾಸ, ಮನೆಯಲ್ಲಿ ಹೆಂಗಸರಿಗಾಗಿ ಪ್ರತ್ಯೇಕಿಸಿದ ಭಾಗ. ಉದಾ:— ಸುಲ್ತಾನನ ಜನಾನಾ. [ಉರ್ದು – ಪರ್ಶಿಯನ್ – ಜನ್ = ಸ್ತ್ರೀ + ಆನಾ]

ನಿಮ್ಮ ಶಬ್ದಶಕ್ತಿಯ ಶ್ರೇಣಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ಶ್ರೇಣಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ		...	ಸಾಧಾರಣ
೯–೧೦	,,	—	ಉತ್ತಮ
೧೧–೧೨	,,	—	ಅತ್ಯುತ್ತಮ

ಇಂಡೋನೇಶಿಯದ ಕಥೆ

ಇನೆಮ್

ಮೂಲ : ಪ್ರದ್ಯುಮ್ನ ಅನಂತತೂರ್
ಕನ್ನಡಕ್ಕೆ: 'ಕುಂವೀ'

ಇನೆಮ್ ನನಗಿಂತ ಕೇವಲ ಎರಡು ವರ್ಷ ದೊಡ್ಡವಳು. ಅಲ್ಲದೆ ನನಗೆ ಒಳ್ಳೆಯ ಸ್ನೇಹಿತೆ. ಸುಂದರವಾಗಿ ಕಾಣುವ ಮೈ ಕೈ ತುಂಬಿಕೊಂಡಿರುವ ಆ ಹುಡುಗಿಯ ವಯಸ್ಸು ಹತ್ತಕ್ಕೆ ಎರಡು ಕಡಿಮೆ ಅಷ್ಟೆ. ಮನೆ ಒಳ ಹೊರಗೆ ಸದಾ ಕಷ್ಟಪಟ್ಟು ಕೆಲಸ ಮಾಡುವ ಆಕೆ ಮೈಗಳ್ಳಿ ಅಲ್ಲವೇ ಅಲ್ಲ. ಯಾವಾಗಲೂ ಕೆಲಸ ಬೊಗಸೆಗಳಲ್ಲಿ ತಲ್ಲೀನಳಾಗಿರುವ ಆ ಹುಡುಗಿಯನ್ನು ನೋಡಿದವರು "ಪರವಾಗಿಲ್ಲ, ಈ ಹುಡುಗಿಯ ಕೈ ಹಿಡಿಯುವವನು ಅದೃಷ್ಟವಂತನೇ ಸರಿ" ಎಂದು ಬಾಯಿತುಂಬ ಮಾತಾಡಿಕೊಳ್ಳುವರು.

ನಮ್ಮ ಮನೆಯಲ್ಲಿ ಕೆಲಸಗಾತಿಯಾಗಿರುವ ಇನೆಮ್ ಒಂದು ದಿನ ಸ್ನಾನದ ಕೋಣೆಯಲ್ಲಿ ನೀರು ಕಾಯಿಸುತ್ತಿದ್ದಳು. ನನ್ನನ್ನು ನೋಡಿದ ಆಕೆ "ಗಸ್‌ಮುಖ್ ನಿನಗೆ ಗೊತ್ತಾ?... ಇಷ್ಟರಲ್ಲೇ ನನ್ನ ಮದುವೆ" ಎಂದು ಕೇಳಿದಳು.

"ನಿಜವಾಗ್ಲೂ ಮದುವೆಯಾ!" ಆಶ್ಚರ್ಯದಿಂದ ಕೇಳಿದೆ ನಾನು.

"ಹೌದು... ಅಪ್ಪ ಅಮ್ಮರಿಗೆ ಆ ಹುಡುಗ ಇಷ್ಟವಾಗಿದ್ದಾನಂತೆ. ಸಂಬಂಧದ ಬಗ್ಗೆ ಮಾತಾಡಿಕೊಂಡು ಬಂದಿದ್ದಾರೆ."

"ಮದುಮಗಳಾಗಬೇಕೂಂತ ನಿನ್ಗೆ ತುಂಬ ಇಷ್ಟ ಅಲ್ವೆ?"

"ಆನಂದವೇ ಸರಿ! ಹೊಸ ಹೊಸ ಬಟ್ಟೆ ತೊಟ್ಟುಕೊಳ್ತೇನೆ. ಆಭರಣಗಳಿಂದ ಅಲಂಕರಿಸಿಕೊಳ್ತೇನೆ. ತಲೆ ತುಂಬ ಹೂವಿಟ್ಟುಕೊಳ್ತೇನೆ, ಮುಖಕ್ಕೆ ಪೌಡರ್..."

ಹೀಗೆ ಕೆಲವು ದಿನಗಳು ಕಳೆದು ಹೋದವು.

ಇನೆಮ್‌ಳ ಅಮ್ಮ ಬಂದು ಮಗಳನ್ನು ಕರೆದುಕೊಂಡು ಹೋಗ್ತೀನಿ ಅಂತಂದಳು. ಹೊಲದಲ್ಲಿ ಕೆಲಸವಿಲ್ಲದಿದ್ದಾಗ ಆಕೆ ಬಟ್ಟೆಗಳ ಮೇಲೆ ಕಸೂತಿ ಕೆಲಸ ಮಾಡುತ್ತಿದ್ದಳು. ನಮ್ಮ ಊರಿನಲ್ಲಿ

ಬಹಳಷ್ಟು ಮಂದಿ ಹಾಗೆಯೇ. ಇನೆಮ್‌ಳ ತಂದೆಗೆ ಇಸ್ಪಿಟಾಟ ಅಂದರೆ ಹುಚ್ಚು. ಅಲ್ಲದೆ ಕೋಳಿ ಪಂದ್ಯಗಳಲ್ಲಿ ಸಹ ಪಾಲ್ಗೊಳ್ಳುತ್ತಿದ್ದ. ಒಮ್ಮೊಮ್ಮೆ ಮನೆ ಬಿಟ್ಟ ಅಂದರೆ ಮತ್ತೆ ಮನೆ ಸೇರುವುದು ಕೆಲವಾರು ದಿನಗಳ ನಂತರವೇ ಸರಿ. ಕೆಲವು ದಿನಗಳ ಪರ್ಯಂತರ ಆತ ಮನೆಯಲ್ಲಿ ಎಂದೂ ಇದ್ದುದಿಲ್ಲ. ಮನೆಗೆ ಬಂದ ಅಂದರೆ ಜೇಬಿನ ತುಂಬ ಹಣ ತುಂಬಿಕೊಂಡೇ ಬರುತ್ತಿದ್ದ.

"ನಮ್ಮ ಹುಡುಗೀನ ಕರೆದುಕೊಂಡು ಹೋಗ್ತೀನಮ್ಮಾ" ಎಂದು ಕೇಳಿದಳು ನಮ್ಮ ಅಮ್ಮನಿಗೆ ಇನೆಮ್‌ಳ ತಾಯಿ.

"ಈಗ್ಲೆ ಮದುವೆ ಏಕೆ! ಕೇವಲ ಎಂಟು ವರ್ಷ ವಯಸ್ಸಿನಲ್ಲಿ?!" ಎಂದು ನನ್ನ ತಾಯಿ ಆಶ್ಚರ್ಯ ದಿಂದ ಆಕೆಯನ್ನು ಪ್ರಶ್ನಿಸಿದಳು.

"ನಿಜ ಹೇಳಬೇಕೆಂದರೆ ಏಳನೆ ವಯಸ್ಸಿಗೇ ಮದುವೆ ಮಾಡಬೇಕಿತ್ತು. ಆದರೆ ಬಡವರು ನಾವು. ಚಿಕ್ಕ ವಯಸ್ಸಿದ್ದಾಗಲೇ ಮದುವೆ ಮಾಡದೆ ಹೋದರೆ ದೊಡ್ಡವರಾದ ಮೇಲೆ ಗಂಡುಗಳು ಸಿಕ್ಕಬೇಕಲ್ಲ" ಇನೆಮ್‌ಳ ತಾಯಿ ವಾಸ್ತವ ಸ್ಥಿತಿಯನ್ನು ವಿವರಿಸಿ ಹೇಳಿದಳು.

ನಮ್ಮ ತಾಯಿ ಇನೆಮ್‌ಳನ್ನು ಬಳಿಗೆ ಕರೆದು, "ಏನೇ... ನಿನಗೆ ಮದುವೆ ಅಂತಲ್ಲ! ಮದುವೆ ಮಾಡಿಕೊಳ್ಳೋಕೆ ನಿನಗೆ ಇಷ್ಟವೇನು?" ಎಂದು ಪ್ರಶ್ನಿಸಿದಳು.

ಆ ಹುಡುಗಿ ಆಗ ನಾಚಿಕೆಯ ಮುದ್ದೆಯಾಗಿ ಮುಖ ತಗ್ಗಿಸಿದಳು ಅಷ್ಟೆ, ಉತ್ತರ ಕೊಡಲೇ ಇಲ್ಲ.

"ಈ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿಬಿಟ್ರೇ ಅಂದ್ರೆ ಹುಡುಗಿಯ ಆರೋಗ್ಯ ಕೆಡುವುದಿಲ್ಲವೇನು?" ಎಂದು ಅಮ್ಮ ಅನುಮಾನದ ಅಭಿಪ್ರಾಯವನ್ನು ವ್ಯಕ್ತಪಡಿಸಿದಳು.

"ಅಂಥದೇನೂ ಇಲ್ರೀ... ನಮ್ಮನೇಲಿ ಬದುಕಿ ಬಾಳಿದೋರೆಲ್ಲ ನೂರಾರು ವರ್ಷ ಬದುಕಿದ ದೀರ್ಘಾಯುಷಿಗಳೇ. ನನ್ನ ತಾಯಿ ಇನ್ನೂ ಸದೃಢವಾಗಿ ಬದುಕೇ ಇರುವಳು. ಆಕೆಯ ವಯಸ್ಸೀಗ ಐವತ್ತೆಂಟು ವರ್ಷ. ಆಕೆಯ ಮದುವೆಯೂ ಕೇವಲ ಎಂಟಿದ್ದಾಗಲೇ ಆಯಿತು. ನನ್ನ ಅಜ್ಜಿಯ ವಯಸ್ಸು ಎಪ್ಪತ್ನಾಲ್ಕು ವರ್ಷಗಳು. ಅದು ಕೂಡ ಇನ್ನೂ ಬದುಕೇ ಇದೆ."

ಮುಂದೆ ಆಕೆಯೊಂದಿಗೆ ಮಾತಾಡಲು ಇಷ್ಟಪಡದೆ ನನ್ನ ತಾಯಿ ತೋಟಕ್ಕೆ ಹೋಗಿಬಿಟ್ಟಳು. ಆ ಹುಡುಗಿಯ ಮದುವೆಯಾದ ಹೊರತು ಕನ್ಯಾ ಶುಲ್ಕ ದಕ್ಕುವುದಿಲ್ಲ.

ಕೆಲವು ದಿನಗಳ ನಂತರ ಇನೆಮ್ ಮನೆಯಿಂದ ಹೊರಟು ಹೋದಳು. ಆ ಹುಡುಗಿಯ ಮದುವೆಗೆ ನನ್ನ ತಾಯಿ ಐದು ಕೇಜಿ ಅಕ್ಕಿ, ೨೫ ಸೆಂಟ್ ಹಣವನ್ನು ನನ್ನೊಂದಿಗೆ ಕಳಿಸಿಕೊಟ್ಟಳು.

ಮದುವೆ ಉಡುಪು ಅಲಂಕಾರದಲ್ಲಿ ಇನೆಮ್ ನನ್ನ ಕಣ್ಣಿಗೆ ತುಂಬ ಸುಂದರವಾಗಿ ಕಾಣಿಸಿದಳು. ಮದುವೆಯ ಎರಡು ದಿನಗಳ ಪರ್ಯಂತರ ಬಂಧು ಬಳಗದವರು ಆ ಅವರ ಮನೆಯಲ್ಲಿ ಚೆನ್ನಾಗಿ ಕುಡಿದರು, ಚೆನ್ನಾಗಿ ತಿಂದರು. ಗಂಡಸರೊಂದಿಗೆ ಹೆಂಗಸರೂ ಬೆರೆತು ಉದ್ರೇಕದಿಂದ ನೃತ್ಯ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದೆ.

ಮದುಮಗನ ಬಳಿಗೆ ಇನೆಮ್‌ಳನ್ನು ಕರೆತರುತ್ತಲೆ ಆ ಹುಡುಗಿ ಆತನ ಪಾದಕ್ಕೆ ನಮಸ್ಕರಿಸಿ ಸುಗಂಧಭರಿತ ಪನ್ನೀರಿನಿಂದ ಆತನ ಕಾಲುಗಳನ್ನು ತೊಳೆದಳು.

ಆನಂತರ ಇನೆಮ್ ಬಿಕ್ಕಿ ಅಳುವುದನ್ನು ನಾನು ನೋಡಿದೆ.

ನಾನು ನನ್ನ ತಾಯಿಯನ್ನು ಕೇಳಿದೆ: "ಯಾಕಮ್ಮ ಇನೆಮ್ ಹಾಗೆ ಅಳುತ್ತಿರುವುದು?"

"ವಧು ಅತ್ತಳು ಅಂದ್ರೆ ತನ್ನ ಪೂರ್ವಿಕರನ್ನು ಕರೆದಳು ಅಂತ ಅರ್ಥ. ಅವರ ಆತ್ಮಗಳು ಮದುವೆಯ ಸಂದರ್ಭದಂದು ಹಾಜರಿದ್ದು ಸಂತೋಷದ ಉತ್ಸವವನ್ನು ನೋಡಿ ತಮ್ಮ ವಾರಸುದಾರರು ಸುಖವಾಗಿದ್ದಾರೆಂದು ಸಂತೃಪ್ತಿ ಹೊಂದಿ ವಾಪಸಾಗುತ್ತವೆ" ಎಂದು ತಾಯಿ ನನಗೆ ಸವಿವರವಾಗಿ ಹೇಳಿದಳು.

ಅಸಲು ಅಮ್ಮ ಹೇಳಿದ ಒಂದು ಮಾತು

ನನಗೆ ಅರ್ಥವಾಗಲೇ ಇಲ್ಲ. ನಂತರ ನನಗೆ ಗೊತ್ತಾಯಿತು; ಇನೆವ್ ಯಾಕೆ ಅತ್ತಳೂ ಅಂತ. ಆ ಸಮಯದಲ್ಲಿ ಆ ಹುಡುಗಿಗೆ ಬಾತ್ರೂಮಿಗೆ ಹೋಗುವ ಅತ್ಯವಸರವಿತ್ತು ಅಂತ.

ಆ ನಂತರದ ಎಲ್ಲ ಕಾರ್ಯಕ್ರಮಗಳು ನಿರಾತಂಕವಾಗಿ ಜರುಗಿದವು.

ಸಾಲ ಕೊಟ್ಟವರು ಬಂದು ತಗಾದೆ ಮಾಡಿದಾಗ ಇನೆವ್‌ಳ ತಾಯಿ ಕಸೂತಿ ಕೆಲಸ ಮಾಡಿ ಹಣ ಸಂಪಾದಿಸಿ ಸಾಲ ತೀರಿಸಿ ಋಣ ಮುಕ್ತಳಾದಳು.

ನಮ್ಮ ಮನೆಗೆ ಸ್ವಲ್ಪ ದೂರದಲ್ಲಿಯೇ ಇನೆವ್‌ಳ ಮನೆ ಇರೋದು. ಒಂದು ರಾತ್ರಿ ಇನೆವ್‌ಳ ಮನೆಯಿಂದ ಜೋರಾಗಿ ಅಳುತ್ತಿರು



ವಂಥ ಶಬ್ದ ಕೇಳಿ ಬಂತು. ಅವು ಇನೆಮ್ ದುಃಖದ ಬಾಧೆಯಿಂದ ಅಳುತ್ತಿರುವ ಸದ್ದೆಂದು ಆ ಕೂಡಲೇ ನನಗೆ ತಿಳಿಯಿತು.

ಅಮ್ಮನನ್ನು ಕೇಳಿದೆ, "ಇನೆಮ್ ಯಾಕೆ ಹಾಗೆ ಅಳುತ್ತಿರುವುದು?"

"ಯಾವುದೋ ಜಗಳವಿರಬೇಕು! ಅಲ್ಲಾಹ್... ಇನೆಮ್‌ಳನ್ನು ಕಷ್ಟಕೋಟಲೆಗಳಿಂದ ರಕ್ಷಿಸು ತಂದೆಯೇ" ಎಂದು ಅಮ್ಮ ಪ್ರಾರ್ಥಿಸಿದಳು.

ಅಮ್ಮ ನನಗೆ ಸರಿಯಾಗಿ ಸಮಾಧಾನ ಕೊಡಲೇ ಇಲ್ಲ. ಕೆಲವು ನಿಮಿಷಗಳ ನಂತರ ಇನೆಮ್‌ಳ ಕಿರುಚಾಟ ನಿಂತುಹೋಯಿತು.

ಒಂದು ದಿನ ಇನೆಮ್ ನಮ್ಮ ಮನೆಗೆ ಬಂದಳು. ಲವಲವಿಕೆ ಇಲ್ಲದೆ, ಸಪ್ಪಗೆ, ರಕ್ತ ಹೀನಳಾಗಿ ಕಾಣಿಸಿದಳು. ಬರುತ್ತಲೇ ನಮ್ಮ ತಾಯಿಯ ಬಳಿಗೆ ಹೋಗಿ ಕಣ್ತುಂಬ ನೀರು ತಂದುಕೊಂಡಳು. ಆಗ ಅಮ್ಮ ಕೇಳಿದಳು: "ಮೊನ್ನೆ ರಾತ್ರಿ ನಡೆದದ್ದಾದರೂ ಏನು ಇನೆಮ್? ಯಾಕೆ ಹಾಗೆ ಜೋರಾಗಿ ಅಳುತ್ತ ಕೂಗಿಕೊಳ್ತಿದ್ದೆ?"

"ನನ್ನನ್ನು ಮತ್ತೆ ನಿಮ್ಮ ಮನೆಗೆ ಕರೆಸಿಕೊಳ್ಳಿ ರವಮ್ಮಾ; ಆ ಹಿಂಸೆ ನೋವು ನನ್ನ ಕೈಲಿ ತಡೆದು ಕೊಳ್ಳಲಾಗ್ತಿಲ್ಲ."

"ಏನು...ಏನು ನಡೆಯಿತು? ನಿನ್ನ ಗಂಡ ಮನೆಯಲ್ಲಿ ಇಲ್ವಾ?"

"ಇದ್ದಾನೆ...ಅದೆಲ್ಲ ನನಗಿಷ್ಟವಲ್ಲದ ಕೆಲಸ ವಮ್ಮಾ."

"ನಿನ್ನ ಗಂಡನೊಂದಿಗೆ ನೀನು ಸುಖವಾಗಿ ಇಲ್ಲವೇನು?"

"ಆತ ಪ್ರತಿ ದಿನ ರಾತ್ರಿ ನನ್ನ ಮೇಲೆ ರಾಕ್ಷಸನಂತೆ ಬೀಳ್ತಾನೆ. ಒತ್ತಾಯಪೂರ್ವಕವಾಗಿ ಆಲಿಂಗಿಸಿಕೊಳ್ತಾನೆ. ಆಗ ನನಗೆ ಉಸಿರಾಡಲೂ ಕಷ್ಟವಾಗ್ತದೆ. ನಾನು ನಿಮ್ಮೇ ಮನೆಗೇ ಬರ್ತೀ ನಮ್ಮಾ."

"ಅದೆಲ್ಲ ಹೇಗೆ ಸಾಧ್ಯ ಇನೆಮ್? ನೀನು ನಿನ್ನ ಗಂಡನ ಸೇವೆ ಮಾಡಬೇಕು. ಹಾಗೆ ಮಾಡ ದಿದ್ದರೆ ನಿಮ್ಮ ಪೂರ್ವಜರು ಸುಮ್ಮನಿದ್ದಾರಾ? ಅವರ ಶಾಪ ನಿಮಗೆ ತಗಲುತ್ತದೆ. ಆತನಿಗೆ ರುಚಿ ರುಚಿಯಾದ ಅಡುಗೆ ಮಾಡಿಡಬೇಕು. ಆತನ ಬಟ್ಟೆಗಳನ್ನು ತೊಳೆಯಬೇಕು. ಆತ ದಣಿದು ಬಂದಾಗ ಚೆನ್ನಾಗಿ ಮಾಲಿಷ್ ಮಾಡಬೇಕು. ಒಳ್ಳೆಯ ಹೆಂಡತಿ ಅಂತ ಅವರಿಂದ ಅನ್ನಿಸ್ಕೋ ಬೇಕು ಇನೆಮ್... ಅರ್ಥ ಆಯ್ತಾ?" ಎಂದು ಅಮ್ಮ ಬುದ್ಧಿವಾದ ಹೇಳಿ ಆಕೆಯನ್ನು ಅಲ್ಲಿಂದ ಸಾಗಹಾಕಿದಳು.

ಇನೆಮ್ ಹೋದನಂತರ ನಾನು ಅಮ್ಮನಿಗೆ ಕೇಳಿದೆ: "ಅಮ್ಮಾ ನಿನ್ನನ್ನು ಅಪ್ಪ ತುಂಬ ಹಿಂಸಿಸುತ್ತಿದ್ದರೇನು?"

ಅದಕ್ಕೆ ಅಮ್ಮ ನಗುತ್ತ ಉತ್ತರಿಸಿದಳು: "ಇಲ್ಲ! ಪಾಪ...ನಿನ್ನ ತಂದೆ ಈ ಪ್ರಪಂಚ ದಲ್ಲಿರೋ ಗಂಡಸರೆಲ್ಲರಿಗಿಂತ ಉತ್ತಮ ದರ್ಜೆ ಯವರಾಗಿದ್ದರು. ತುಂಬ ಒಳ್ಳೆಯವರಾಗಿದ್ದರು."

*

ಹೀಗೆ ಒಂದು ವರ್ಷ ಕಳೆದುಹೋಯಿತು.

ಒಮ್ಮೆ ಅಕಸ್ಮಿಕವಾಗಿ ಇನೆಮ್ ನಮ್ಮ



"ಅವ್ರು ರಾಗಿಣಿ ಅಲ್ಲಾ ಕಣೋ-ರೇಗಿಣಿ!"

ಮನೆಗೆ ಬಂದಳು. ಒಂದು ವರ್ಷದಲ್ಲಿ ಆಕೆಯಲ್ಲಿ ಶಾರೀರಿಕವಾಗಿ ಅದೆಷ್ಟು ಬದಲಾವಣೆ! ಇನೆವ್ ದೊಡ್ಡ ಹೆಂಗಸಿನಂತೆ ಕಾಣಿಸುತ್ತಿದ್ದಳು. ಎಷ್ಟೋ ಬದಲಾಗಿದ್ದಾಳೆ, ವಿಷಾದದ ಛಾಯೆ ಮುಖದ ತುಂಬ ಇದೆ.

"ಅಮ್ಮಾ... ನನ್ನ ಗಂಡ ನನ್ನ ಬಿಟ್ಟುಬಿಟ್ಟ."

"ವಿಚ್ಛೇದನ ಕೊಟ್ಟುಬಿಟ್ಟನೇನು?"

"ಹೌದಮ್ಮಾ."

"ಯಾಕೆ ಬಿಟ್ಟ? ಆತನಿಗೆ ಪ್ರಿಯವಾಗುವಂತೆ ನೀನು ಸೇವೆ ಮಾಡಲಿಲ್ಲವೇನು?"

"ನಾನು ಎಲ್ಲ ಮಾಡ್ತಿದ್ದೆ...ನೀವು ಹೇಳಿದಂತೆ ಎಲ್ಲ ಕೆಲಸ ಮಾಡಿ ನೋವು ನುಂಗಿಕೊಂಡಿದ್ದೆ. ಆತ ದಣಿದು ಬಂದಾಗ ಮಾಲಿಷ್ ಮಾಡ್ತಿದ್ದೆ. ರುಚಿಯಾದ ಅಡುಗೆಮಾಡಿ ಊಟ ಬಡಿಸ್ತಿದ್ದೆ... ಹೀಗೆ ಎಷ್ಟು ಕೆಲಸ ಮಾಡುತ್ತಿದ್ದರೂ ಆತ ನನ್ನ ಪ್ರತಿನಿತ್ಯ ದನಕ್ಕೆ ಬಡಿವಂತೆ ಬಡಿಯುತ್ತಿದ್ದ."

"ಹ್ಹಾಂ! ಆತ ನಿನ್ನನ್ನು ಹೊಡೆಯುತ್ತಿದ್ದನೇನು?"

"ಮೈತುಂಬ ಬೊಬ್ಬೆಗಳೇಳುವಂತೆ ಹೊಡೆಯುತ್ತಿದ್ದನಮ್ಮಾ. ಮೊದಲು ಅಪ್ಪ ಅಮ್ಮ ಹೊಡೆಯುತ್ತಿದ್ದುದಕ್ಕಿಂತ ಜೋರಾಗಿ ಹೊಡೆಯುತ್ತಿದ್ದ; ನಾನು ಹಗಲಿರುಳು ಕೆಲಸ ಮಾಡುತ್ತಿದ್ದರೂ ಆತ ಸೇರುತ್ತಿರಲಿಲ್ಲ."

"ನೀನು ಸರಿಯಾಗಿ ನಿನ್ನ ಗಂಡ ಸೇವೆ ಮಾಡಿದ್ದಲ್ಲಿ ಆತ ನಿನ್ನನ್ನು ಯಾಕೆ ಹೊಡೆಯುತ್ತಿದ್ದ? ಸರಿಯಾಗಿ ಸೇವೆ ಮಾಡದಿದ್ದಾಗ ಮಾತ್ರ ಗಂಡಂದಿರು ತಮ್ಮ ಹೆಂಡಂದಿರನ್ನು ಶಿಕ್ಷಿಸುತ್ತಾರೆ" ಎಂದು ಅಮ್ಮ ಅನುಮಾನ ವ್ಯಕ್ತಪಡಿಸಿದಳು.

ಇನೆವ್ ವಾಸ್ತವ ಸಂಗತಿಯನ್ನು ಬದಿಗೊತ್ತಿ ಕೇಳಿದಳು, "ಅಮ್ಮ, ಮತ್ತೆ ನನಗೆ ನಿಮ್ಮ ಮನೇಲಿ ಕೆಲಸ ಕೊಡಿಯಮ್ಮ...ನಿಮ್ಮ ಮನೇಲಿ ಇದ್ದುಕೊಂಡು ಹೇಳಿದ ಕೆಲಸವನ್ನು ಚೊಕ್ಕವಾಗಿ ಮಾಡಿ ಮುಗಿಸುತ್ತೇನೆ."

ಅಮ್ಮ ತಡವರಿಸದೆ ಉತ್ತರಿಸಿದಳು: "ನಿನ್ನ ಗಂಡ ನಿನ್ನನ್ನು ವಿಧ್ಯುಕ್ತವಾಗಿ ಬಿಟ್ಟುಬಿಟ್ಟಿದ್ದಾನೆ... ಗಂಡನಿಂದ ತಿರಸ್ಕರಿಸಲ್ಪಟ್ಟ ಹೆಣ್ಣಿಗೆ ಗೌರವಸ್ಥ ಮನೆಯಲ್ಲಿ ಕೆಲಸ ಸಿಗುವುದು ಹೇಗೆ ಸಾಧ್ಯ? ನಮ್ಮ ಮನೆಯಲ್ಲಿ ಮದುವೆ ವಯಸ್ಸಿಗೆ ಬಂದಿರೋ ಗಂಡು ಮಕ್ಕಳಿದ್ದಾರೆ. ನೋಡಿದವರಾದರೂ ಏನು ಅಂದುಕೊಳ್ಳುವರು?"

ಇನೆವ್‌ಳಿಗೆ ಮುಂದೇನು ಮಾತಾಡಲೂ ತೋಚಲಿಲ್ಲ. ನಿಟ್ಟುಸಿರಿಟ್ಟು ಹಾಗೆ ಕೂತು ಕ್ಷಣ ಹೊತ್ತು ಕವಿದಿರುವ ಭವಿಷ್ಯತ್ತಿನ ಬಗ್ಗೆ ಯೋಚಿಸಿದಳು. ಮತ್ತೆ ಅಮ್ಮ ಸಮಾಧಾನ ಹೇಳಲು ಪ್ರಯತ್ನಿಸಿದಳು — "ಇನೆವ್... ನೀನು ಮತ್ತೆ ನಿನ್ನ ತಂದೆ ತಾಯಿಗಳ ಜೊತೆಗೇ ಇದ್ದು ಕಾಲ ಹಾಕು... ಅವರಿಗಾದರೂ ಸಹಾಯ ಮಾಡು... ನನ್ನ ಬಳಿ ನೀನು ಸರಿಹೋಗುವುದಿಲ್ಲ."

ಇನೆವ್ ನಿರಾಶೆಯಿಂದ ಹೊರಟು ಹೋದಳು. ತನ್ನ ತವರು ಮನೆಯಲ್ಲಿಯೇ ಇರತೊಡಗಿದಳು. ಮುಂದೆಂದೂ ಆಕೆ ಮನೆಯಿಂದ ಹೊರಗೆ ಕಾಲು ಇಡಲೇ ಇಲ್ಲ. ಅವರ ಮನೆಯಲ್ಲಿಯೇ ಚಿಕ್ಕವರು ದೊಡ್ಡವರು ಇನೆವ್‌ಳನ್ನು ಶಿಕ್ಷಿಸುತ್ತಿದ್ದರು, ಬಯ್ಯುತ್ತಿದ್ದರು. ಆ ಮನೆಗೆ ಆಕೆ ಭಾರವಾಗಿದ್ದಳು, ಇಡೀ ಓಣಿಗೆ ಕೇಳಿಸುವಂತೆ ಮಗಳನ್ನು ಅವಳಮ್ಮ ಗಟ್ಟಿಯಾಗಿ ನಿಂದಿಸುತ್ತಿದ್ದಳು. ಅದನ್ನು ಕೇಳಲಾರದೆ ನಾನು ನಿರ್ವಾಹವಿಲ್ಲದೆ ಕಿವಿ ಮುಚ್ಚಿಕೊಳ್ಳುತ್ತಿದ್ದೆ. ಆದರೆ ಇನೆವ್ ಮಾತ್ರ ಮುಂದೆಂದೂ ನಮ್ಮ ಮನೆಯಂಗಳ ತುಳಿಯಲೇ ಇಲ್ಲ. ★

ಈ ಚಿತ್ರದಲ್ಲಿ ಎಲ್ ಐ ಸಿ ಏಜೆಂಟರ ಗುರುತುಹಚ್ಚಿ ನೋಡೋಣ.



ಇದು ಖಂಡಿತಾ ನಿಮ್ಮಿಂದಾಗದು. ಏಕೆಂದರೆ ಅವರು ಆ ಪರಿವಾರದವರಲ್ಲೊಬ್ಬರಂತಿದ್ದಾರೆ.

ಹೌದು. ವೃತ್ತಿನಿಷ್ಠ ಎಲ್ಐಸಿ ಏಜೆಂಟರು ತಮ್ಮ ಗ್ರಾಹಕರಾದ ಪಾಲಿಸಿದಾರರ ಕುಟುಂಬದ ಅವಿಭಾಜ್ಯ ಅಂಗವಾಗಬಿಡುವರು. ಜೀವವಿಮೆ, ಕರವಿನಾಯತಿಗಳ ಬಗ್ಗೆ ದಕ್ಷ ಸಲಹೆ ನೀಡಬಲ್ಲವರಾದ ಇವರು ವಿವಿಧ ವಿಮಾ ಯೋಜನೆಗಳಲ್ಲಿ ಯುಕ್ತವಾದುವುದನ್ನು ಆಯ್ದುಕೊಳ್ಳಲು ನೆರವಾಗಿ ನಿಮ್ಮ ಪರಿವಾರದ ಹಿತದೃಷ್ಟಿಯಲ್ಲಿ ಅತಿ ಮಹತ್ವ ಅಗತ್ಯಗಳಿಗಾಗಿ ನಿಮ್ಮ ಉಳಿತಾಯದಿಂದ ಹೆಚ್ಚಿನ—ಉಪಯೋಗ ಪಡೆಯುವ ಮಾರ್ಗದರ್ಶನವೀಯುವರು.

ನಿಮ್ಮ ಪರಿವಾರದ ಆಪ್ತಮಿತ್ರರಾದ ಏಜೆಂಟರು ಇನ್ನೊಮ್ಮೆ ನಿಮ್ಮನ್ನು ಕಂಡಾಗ ನಿಮಗೆ ವ ನಿಮ್ಮ ಪರಿವಾರಕ್ಕೆ ಲಾಭದಾಯಕವಾಗಬಲ್ಲ ಜೀವವಿಮಾ ಯೋಜನೆಗಳ ಬಗ್ಗೆ ಚರ್ಚಿಸಿ. ಮಕ್ಕಳ ವಿದ್ಯಾಭ್ಯಾಸ, ನವಜೀವನ ಪದಾರ್ಪಣೆ ವಿವಾಹ ವ ಸ್ವಂತದ ನಿಶ್ಚಿಂತ ನಿವೃತ್ತ ಜೀವನಕ್ಕಾಗಿ ಹಣಹೂಡುಗಿಸುವ ಸುಲಭ ವಿಧಾನಗಳನ್ನು ತಿಳಿಯಿರಿ. ಹಾಗೆಯೇ ಹೆಚ್ಚುತ್ತಿರುವ ಸಂಪಾದನೆಯೊಂದಿಗೆ ಬೆಳೆಯುತ್ತಿರುವ ಹೊಣೆಗಾರಿಕೆಗಳಿಗೆ ತಕ್ಕುದಾಗಿ ಜೀವವಿಮಾ ಸುರಕ್ಷೆಯ ಸಮತೋಲ ಕಾಯ್ದಿರಿಸುವ ಅಗತ್ಯವನ್ನೂ ಅರ್ಥಮಾಡಿಕೊಳ್ಳಿರಿ.

ಇಂದೇ ನಿಮ್ಮ ಏಜೆಂಟರೊಡನೆ ಮಾತಾಡಿರಿ. ಅವರು ನಿಮ್ಮ ಹಿತೈಷಿಗಳಷ್ಟೇ ಅಲ್ಲ, ಹಿತಸಾಧಕರೂ ಹೌದು.

ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ

1985-86 ಎಲ್ ಐ.ಸಿ.ಯ ಏಜೆಂಟರ ವರ್ಷ

ಕಲಾವಿದ ಎನ್. ಸಿ. ದೇಸಾಯಿ

ಗೋವಾ

ಹತ್ತು ವರ್ಷಗಳ ಹಿಂದೆ 'ದೇಶ ಬಂಧು' ವಾರ ಪತ್ರಿಕೆಯಲ್ಲಿ 'ಕಲಾವಿದ ನಾನಾ' ಎಂಬೊಂದು ಲೇಖನವನ್ನು ನಾನು ಬರೆದೆ. ಅಲ್ಲಿದ್ದುದು ಉದಯೋನ್ಮುಖ ಚಿತ್ರಕಾರ- ಮೀಸೆ ಕುಡಿಯೊಡೆಯುತ್ತಿದ್ದ ಯುವಕ ಕಲಾವಿದರೊಬ್ಬರ ಸೂಕ್ಷ್ಮ ಪರಿಚಯ.

ಆ ನುಡಿಚಿತ್ರವನ್ನು ನಾನು ಬರೆಯಲು ಕಾರಣ ಆ ಕಲಾವಿದನಿಗೆ ಭವ್ಯ ಭವಿಷ್ಯತ್ತಿದೆ ಎಂಬ ನನ್ನ ಆಗಿನ ನಂಬುಗೆ. ಅವರನ್ನು ಕುರಿತು ನನಗಿದ್ದ ಕನಸುಗಳು—ನನ್ನ ಹಾಗೆಯೇ ಅವರ ಇನ್ನೆಷ್ಟೋ ಜನ ಸ್ನೇಹಿತರಿಗಿದ್ದ ಕನಸುಗಳು - ಈಗ ನನಸಾಗುತ್ತಿವೆ..."



ಫೋಟೊ: ಬಿ. ಕೆ. ಸನೀಲ್

ನಿರಂಜನರ ಅಭಿಪ್ರಾಯವಿದು. ೧೯೫೭ರ ಫೆಬ್ರುವರಿ ೧೩ರ 'ಚಿತ್ರ ಗುಪ್ತ' ವಾರ ಪತ್ರಿಕೆಯಲ್ಲಿ ಕಲಾವಿದ ಎನ್. ಸಿ. ದೇಸಾಯಿಯವರನ್ನು ಕುರಿತು ಅವರು ಬರೆದಿದ್ದರು. ಅದಕ್ಕೂ ಒಂದು ದಶಕದ ಹಿಂದೆ ಹುಬ್ಬಳ್ಳಿಯಲ್ಲಿಯೇ ಇದ್ದ ನಿರಂಜನ (ಆಗ ಅವರಿನ್ನೂ ಕುಳಕುಂದ ಶಿವರಾಯನೆಂದೇ ಬರೆದುಕೊಳ್ಳುತ್ತಿದ್ದರು.) ಅವರ 'ರಕ್ತ ಸರೋವರ' - 'ಸಂಧಿ ಕಾಲ' ಕಥಾ ಸಂಗ್ರಹಗಳ ಮೇಲು ಹೊದಿಕೆ ಚಿತ್ರವನ್ನು ರೂಪಿಸಿಕೊಟ್ಟಿದ್ದರು ದೇಸಾಯಿ. ನಿರಂಜನರು ತುಂಬ ಮೆಚ್ಚಿಕೊಂಡು, ಈ ಯುವ ಕಲಾವಿದನ ಬೆಳವಣಿಗೆಯನ್ನು ಗಮನಿಸುತ್ತಲೇ ಬಂದಿದ್ದರು.

ಈಗ ಅರವತ್ತರ ಗಡಿ ದಾಟಿದ ಈ ವ್ಯಕ್ತಿ ಇಂದು ಕನ್ನಡದ ಬಹುತೇಕ ಪತ್ರಿಕೆಗಳು, ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ತಮ್ಮ ಚಿತ್ರಗಳು, ಛಾಯಾ ಚಿತ್ರಗಳು, ಮುಖ ಪುಟದ ವರ್ಣಚಿತ್ರ, ವರ್ಣ ಛಾಯಾ ಚಿತ್ರ ಇಲ್ಲವೇ ವರ್ಣ ಪಾರದರ್ಶಿಕೆಗಳ ಮೂಲಕ ಮತ್ತು ಚಿತ್ರ ಲೇಖನಗಳು, ವ್ಯಕ್ತಿ ಚಿತ್ರಗಳ ಮೂಲಕ ಕನ್ನಡ ಓದುಗರಿಗೆಲ್ಲ ಪರಿಚಿತರು. ಅಲ್ಲದೇ ಮುಂಬೈ ಕನ್ನಡಿಗ ಎಂದೇ ಮೆಚ್ಚಿನವರಿಗೆ ದೇಸಾಯಿ ಗೊತ್ತು. ಅವರ ಕುರಿತು, ಅವರ ಸಾಧನೆಯ ಕುರಿತು ಈ ಪರಿಚಯ.

ಧಾರವಾಡ ಜಿಲ್ಲೆಯ ಅಗಡಿಯವರಾದ ದೇಸಾಯರಿಗೆ ಚಿಕ್ಕಂದಿನಲ್ಲಿ ಎಷ್ಟೋ ದಿನಗಳ ವರೆಗೆ "ದವಸ-ಧಾನ್ಯಗಳು, ಆಹಾರ ವಸ್ತುಗಳು ಪೇಟೆಯಲ್ಲಿಟ್ಟು ಮಾರುವಂಥ ಸರಕುಗಳು" ಎಂಬುದೇ ಗೊತ್ತಿರಲಿಲ್ಲವಂತೆ. ಒಂದು ಕಾಲದಲ್ಲಿ ಸಾವಿರಾರು ಎಕರೆ ಜಮೀನುಗಳ ಒಡೆಯರಾಗಿದ್ದ ಇವರ ತಂದೆಗೆ, ಇದ್ದೊಬ್ಬ ಮಗ ವ್ಯವಹಾರಕ್ಕೆ ತಕ್ಕಷ್ಟು ಓದು ಬರೆಹ ಕಲಿತರಾಯಿತೆಂಬ ಇಚ್ಛೆ. ಆದರೆ ದಿನದಿನಕ್ಕೆ ದೇಸಗತಿಯ ಗತಿ ಬದಲಾಗುತ್ತಿದ್ದ ದಿನಗಳವು. ಜಮೀನುಗಳು ಕೈಬಿಡತೊಡಗಿದ್ದುವು. ತಂದೆಯೋ ಮೊದಲಿನ ಗತ್ತುಗಮ್ಮತ್ತಿನಲ್ಲಿಯೇ ಉಳಿಯಬಯಸಿದ್ದರು. ಇಂಥ ಮನೆತನದ ಹುಡುಗ, ಉಳಿದ ಜಮೀನನ್ನು ನೋಡಿಕೊಳ್ಳುತ್ತ 'ಗೌಡ'ರಾಗಿ ಇದ್ದುಬಿಡಬಹುದಿತ್ತಲ್ಲ. ಕೈಗೆ ಮಣ್ಣು ಅಂಟಿಸಿಕೊಂಡು ಹೊಲಮನೆ ರೈತರು ಎಂದೆಲ್ಲ ಮಾತಾಡುವ ಬದಲು ಬಣ್ಣ-ಕುಂಚ, ಕ್ಯಾನ್‌ವಾಸ್-ಕ್ಯಾಮರಾ, ಪತ್ರಿಕೆ-ಲೇಖನ ಇತ್ಯಾದಿಗಳ ಕಡೆ ಲಕ್ಷ್ಯ ಹರಿಸಿದ್ದೇಕೆ?

ಆದರೆ ಬಣ್ಣ ಕುಂಚಗಳ ಒಡನಾಟ ದೇಸಾಯರಿಗೆ ಚಿಕ್ಕಂದಿನದು. ಶ್ರಾವಣ ಬಂತೆಂದರೆ ಸಾಕು ಮನೆಯಲ್ಲಿ ಗೌರಿಯ ಪೂಜೆಗಾಗಿ ಚಿಕ್ಕ ಮಡಕೆಗಳ ಮೇಲೆ ಚಿತ್ತಾರ ಬಿಡಿಸುತ್ತಿದ್ದ ಕಕ್ಕನ ಪಕ್ಕದಲ್ಲಿ ಕುಳಿತು ವೀಕ್ಷಿಸಿ, ತಾನೂ ಹಾಗೆಯೇ ಚಿತ್ರಿಸಲೆತ್ನಿಸಿ ಸಫಲನಾದಾಗ ಏನೋ ವಿಲಕ್ಷಣ ಸಂತೋಷ ಚಿಕ್ಕ ಗೌಡರಿಗೆ. ನಿಂತಲ್ಲಿ ಕೂತಲ್ಲಿ ಚಿತ್ತಾರಗಳನ್ನು ಬಿಡಿಸಲಾರಂಭಿಸಿದ ಹುಡುಗನನ್ನು ಅಗಡಿಯ ಕನ್ನಡ ಶಿಕ್ಷಕ ರಾ. ನ. ಗುಡಿಯವರು ಪ್ರೋತ್ಸಾಹಿಸಿದರು.

ಆಗಿನ್ನೂ ದೇಸಾಯಿ ಕನ್ನಡ ಎರಡನೆ ತರಗತಿಯಲ್ಲಿ ಓದುತ್ತಿದ್ದರು. ಪ್ಲೇಗಿನ ಹಾವಳಿಯಿಂದಾಗಿ ಊರಿಗೆ ಊರೇ ಗುಳೆ ಕಿತ್ತಿ ಸುರಕ್ಷಿತ ಪ್ರದೇಶಕ್ಕೆ ಹೋಗಿ ನೆಲೆಸಿತು. ದೇಸಾಯರ ಕುಟುಂಬ ಮಾತ್ರ ಊರ ತುಸು ದೂರದ ತಮ್ಮ ಬಂಗಲೆಗೆ ಸ್ಥಳಾಂತರಿಸಿತು. ಈ ಬಂಗಲೆಯ



ಕಾಶ್ಮೀರ ಕೊಳ್ಳ – ತೈಲವರ್ಣ ಚಿತ್ರ

ಪಕ್ಕದಲ್ಲಿಯೇ ಶ್ರೀ ಶೇಷಾಚಲ ಗುರುಗಳ ಆನಂದವನ. ಬಂಗಲೆಯಿಂದ ಶಾಲೆ ದೂರವಿದ್ದುದರಿಂದಲೂ-ಎರಡು ಗಂಡು ಮಕ್ಕಳು ಸತ್ತು, ಗುರುಗಳ ಕೃಪೆಯಿಂದ ಬದುಕುಳಿದ ಈ ಅಪರೂಪದ ಮಗನಿಗೆ ತೊಂದರೆಯಾದೀತೆಂಬ ಕಾಳಜಿಯಿಂದಲೂ ಶಾಲೆಗೆ ಹೋಗುವುದೇ ಬೇಡ ಎಂದರು ತಂದೆ. ಅಲ್ಲಿಗೆ ಹುಡುಗನ ಓದು ಮುಗ್ಗಿತು.

ಅಗಡಿ ಆನಂದವನ ದಿ. ಗಳಗನಾಥರ ಕರ್ಮಭೂಮಿಯಷ್ಟೇ. ಶ್ರೀ ಶೇಷಾಚಲ ಗ್ರಂಥಮಾಲೆ ಆಗ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಸಂಸ್ಕೃತಿ ಪ್ರಸಾರದ ಮಹತ್ತರ ಕೆಲಸವನ್ನು ಕೈಗೊಳ್ಳುತ್ತಿದ್ದ ಪ್ರಕಾಶನ ಸಂಸ್ಥೆ. ಗಳಗನಾಥರ ಸಮಕಾಲೀನರಾಗಿದ್ದು, ತಮ್ಮ ಪತ್ತೇದಾರಿ ಕಾದಂಬರಿಗಳ ಮೂಲಕ ಜನಕ್ಕೆ 'ಥ್ರಿಲ್' ಉಂಟುಮಾಡುತ್ತಿದ್ದ ದಿ. ಭೀ. ಪ. ಕಾಳೆಯವರು ಆಗ ಆ ಪ್ರಕಾಶನ ಸಂಸ್ಥೆಯ ಮುದ್ರಕ-ಪ್ರಕಾಶಕರು. ಒಂದು ರೀತಿಯಲ್ಲಿ ಆ ಪ್ರಕಾಶನವೇ ದೇಸಾಯರ ಕಲಾವಿಕಾಸಕ್ಕೆ ಕಾರಣವಾಯಿತು. ಕಾಳೆಯವರು "ಗೌಡರ ಮಗ ನಾನಾನಿಂದ" ತಮ್ಮ ಹಾಗೂ ಪ್ರಕಾಶನದ ಪುಸ್ತಕಗಳಿಗೆ ಒಳಚಿತ್ರಗಳನ್ನು ಬರೆಯಿಸಿಕೊಳ್ಳುತ್ತಿದ್ದರು. ಗ್ರಂಥಮಾಲೆಗೆ ಬರುತ್ತಿದ್ದ ಅಸಂಖ್ಯಾತ ಪುಸ್ತಕಗಳು ದೇಸಾಯರಿಗೆ ಪ್ರೇರಣೆ ನೀಡಿದುವು. ಹತ್ತಿರದ ಹಾವೇರಿಯ ಹೈಸ್ಕೂಲಲ್ಲಿ ಚಿತ್ರಕಲೆಯ ಶಿಕ್ಷಕರಾಗಿದ್ದ ಕಾಳಪ್ಪ ಗುಡಿಸಾಗರರು ಈ ಎಳೆ ಕಲಾವಿದನ ಚಿತ್ರಗಳನ್ನು ನೋಡಿ ಬೆರಗಾಗಿ, ಮಾರ್ಗದರ್ಶನ ಮಾಡು



ದೇಸಾಯರು ಚಿತ್ರಿಸಿದ ವೀಣೆ ಶೇಷಣ್ಣನವರ ಚಿತ್ರ. ಷಣ್ಮುಖಾನಂದ ಸಭಾಗೃಹದಲ್ಲಿರುವ ಈ ಚಿತ್ರದ ಅನಾವರಣವನ್ನು ಖ್ಯಾತ ಕಲಾವಿದ ಶ್ರೀ. ಕೆ. ಕೆ. ಹೆಬ್ಬಾರರು ನೆರವೇರಿಸಿದಾಗಿನ ಸಂದರ್ಭ

ವರ ಜತೆಗೆ ಅವಶ್ಯವಿದ್ದ ಕೆಲವು ಸಲಕರಣೆಗಳನ್ನು ನೀಡಿ ಉತ್ತೇಜನವಿತ್ತರು.

೧೯೩೯. ಸಾವಿರ ಎಕರೆಯಷ್ಟು ಜಮೀನು ಕೈಬಿಟ್ಟು ಹೋದ ಮಾನಸಿಕ ಚಿಂತೆ ಹಾಗೂ ದೊಡ್ಡ ಊರಲ್ಲಿ ಚಿಕಿತ್ಸೆ ಅನಿವಾರ್ಯವೆಂದೆನಿಸಿದ ಅಸ್ವಾಸ್ಥ್ಯ ಇವುಗಳಿಂದಾಗಿ ಹುಬ್ಬಳ್ಳಿಗೆ ಹೋಗಬೇಕಾಯಿತು ಚಿದಂಬರಗೌಡರು. ಅಲ್ಲಿಯೇ ಮನೆ ಹೂಡಬೇಕಾದ ಅನಿವಾರ್ಯ ಪ್ರಸಂಗ. ನಾನಾ ದೇಸಾಯಿಗೆ ಓದು ಮುಂದುವರಿಸುವ ಇಚ್ಛೆ. ತಂದೆಗೆ ದುಂಬಾಲು ಬಿದ್ದು ಸಿಟಿ ಹೈಸ್ಕೂಲಿನ ವಿದ್ಯಾರ್ಥಿಯಾದರು. ಚಿತ್ರಕಲೆಯಲ್ಲಿ ಹೆಚ್ಚು ಅಭ್ಯಾಸ ಮಾಡಿ ಗ್ರೇಡ್ ಪರೀಕ್ಷೆಗೆ ಕುಳಿತು, ಮುಂಬೈ ರಾಜ್ಯಕ್ಕೇ ಮೆಮರಿ ಡ್ರಾಯಿಂಗಿನಲ್ಲಿ ಸರ್ವಪ್ರಥಮರಾಗಿ ಪಾರಿತೋಷಕ ಪಡೆದರು.

೧೯೪೨ ರಲ್ಲಿ ಇನ್ನೂ ಅದೇ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದರು ದೇಸಾಯಿ. ತಂದೆ ಆಗ ಡಿಗೆ ವಾಪಸಾಗಿ ನೆಲೆಸಿದ್ದರಿಂದ ಮಿತ್ರ ಸಮಾಜವೆಂಬ ಲಾಜಿನಲ್ಲಿ ಕೋಣೆ ಹಿಡಿದಿದ್ದ ದೇಸಾಯಿ 'ಚಲೇಜಾವ್' ಕೂಗಿನಲ್ಲಿ ದನಿಗೂಡಿಸಿದರು.

ಆಗಸ್ಟ್ ೯ ರಂದು ದೇಶದ ಮುಂದಾಳುಗಳೆಲ್ಲ ಬಂಧಿತರಾದರು. ಚಿಕ್ಕಂದಿನಲ್ಲೇ ಗಳಗನಾಥರ ಕಾದಂಬರಿಗಳನ್ನೋದಿ ದೇಶಾಭಿಮಾನವನ್ನು ಜಾಗ್ರತಗೊಳಿಸಿಕೊಂಡಿದ್ದ ಈ ಹುಡುಗ ಆ ದಿನ ಗೆಳೆಯರೊಂದಿಗೆ, ಇತರೊಂದಿಗೆ ಮೆರವಣಿಗೆ ತೆಗೆದು ಶಾಲೆ-ಕಾಲೇಜು ಮುಚ್ಚಿಸುವಲ್ಲಿ ತೊಡಗಿದರು.

ದೇಸಾಯರದು ಬರಿ ದೇಸಗತಿಯ ಮನೆತನವಲ್ಲ. ಊರಿನ ಗೌಡಕಿ ಕುಲಕರ್ಣಿಕೆಯ ಹಕ್ಕೂ ಇವರ ಮನೆತನದ್ದೇ. ಮಗನೇನಾದರೂ ಈ ಚಳವಳಿಯಲ್ಲಿ ಪಾಲ್ಗೊಂಡರೆ ಬ್ರಿಟಿಶರು ಗೌಡಕಿ ಹಕ್ಕುಗಳನ್ನು ಕಸಿದುಕೊಂಡಾರೆಂಬ ಭಯದಿಂದ ತಂದೆ ಹುಬ್ಬಳ್ಳಿಗೆ ಧಾವಿಸಿದರು. ಮೆರವಣಿಗೆ ಮುಗಿಸಿಕೊಂಡು ಕೋಣೆಗೆ ಮರಳಿದ ದೇಸಾಯಿ ತಂದೆಯನ್ನು ಕಂಡು ಅಳುಕಿದರು.

"ಹೂಂ ನಡಿ, ಊರಿಗೆ ಇಲ್ಲಿರೋದು ಬ್ಯಾಡ" ಎಂದು ಗಂಟು ಮೂಟೆ ಕಟ್ಟಿಸಿ ಮಗನನ್ನು ಅಗಡಿಗೆ ಕರೆದೊಯ್ದರು. ದೇಸಾಯರ ಶಿಕ್ಷಣ ಸಮಾಪ್ತಿಯಾಯಿತು. ಅಗಡಿಯಲ್ಲಿ ಗೃಹಬಂಧ



ಅಬುಬಿಟ್ಟ - ತೈಲವರ್ಣ ಚಿತ್ರ

ಸದಲ್ಲಿರಬೇಕಾಯಿತು ದೇಸಾಯಿ. ಇತ್ತ ಹುಬ್ಬಳ್ಳಿಯಲ್ಲಿ ಇವರನ್ನು ಹಿಡಿಯಲು ವಾರಂಟ್ ತೆಗೆಯಲಾಗಿತ್ತಂತೆ. ಹುಬ್ಬಳ್ಳಿಯ ಹದ್ದು ದಾಟಿ ಹೋದ ಹುಡುಗ 'ಸಿಗಲಿಲ್ಲ'. ಆಗಲೇ ಮತ್ತೆ ಶ್ರೀ ಶೇಷಾಚಲ ಗ್ರಂಥಮಾಲೆಯ ಸಂಪರ್ಕ.

ಊರಲ್ಲಿ ಹೊಲ — ಮನೆಗಳ ದೇಖರಿಕಿ ಮಾಡುತ್ತ, ಚಿತ್ರ ಬರೆದು ಪತ್ರಿಕೆಗಳಿಗೆ ಕಳಿಸುತ್ತಲಿದ್ದ ಮಗ ಯಾಕೆ ಈ 'ಹೀನ ಕೆಲಸ' ಕ್ಕೆ ಕೈ ಹಾಕಿದ್ದಾನೋ ಎಂಬ ಅನಿಸಿಕೆ ತಂದೆಗೆ. ಆದರೆ ಉಳಿದವರಿಂದ ಮೆಚ್ಚುನುಡಿ. ದಿ. ನಾ. ಸು. ಹರ್ಡೀಕರರ 'ಹುಬ್ಬಳ್ಳಿ ಗೆಜೆಟ್' ಪತ್ರಿಕೆಗೆ ಅದರ ತಲೆಬರಹವನ್ನು ಕಲಾತ್ಮಕವಾಗಿ ಬರೆದು ಕಳಿಸಿದರು. ಚಿತ್ರ ಪ್ರಕಟವಾಗಲಿಲ್ಲವಾದರೂ ಅದನ್ನು ಮೆಚ್ಚಿದ್ದ ಪತ್ರಿಕೆಯವರು ಐದು ರೂಪಾಯಿ ಸಂಭಾವನೆ ಕಳಿಸಿದ್ದರಂತೆ. ಮುಂದೆ ಅದರ ವಿಶೇಷಾಂಕಕ್ಕೆ ದೇಸಾಯರನ್ನು ಹುಬ್ಬಳ್ಳಿಗೆ ಕರೆಸಿಕೊಂಡು ಚಿತ್ರಗಳನ್ನು ತೆಗೆಸಿಕೊಡರಂತೆ ಪ್ರಕಾಶಕರು. ಈ ಹೊತ್ತಿಗೆ ಅದು 'ಜೈ ಹಿಂದ್' ಆಗಿತ್ತು. ಇದೇ ಸಂದರ್ಭದಲ್ಲಿ ದೇಸಾಯಿಗೆ ನಿರಂಜನರ ಸಂಪರ್ಕ ಬಂದದ್ದು.

ಜಮೀನುದಾರಿಕೆಯತ್ತ ಪೂರ್ಣ ಮನಸ್ಸಿಲ್ಲ. ಅದು ಶಾಶ್ವತವೂ ಅಲ್ಲ. ಇಂದಿಲ್ಲ ನಾಳೆ ತನಗೆ ತನ್ನ ಕಾಲ ಮೇಲೆ ತಾನೇ ನಿಲ್ಲಬೇಕಾದ ಪ್ರಸಂಗ ಬರಬಹುದು. ಆದರೆ ಹೇಗೆ? ನೌಕರಿ ಮಾಡಬೇಕೆಂದರೆ ಅಷ್ಟು ಓದಿಲ್ಲ. ತನಗೆ ಬರುವುದು ಚಿತ್ರ ತೆಗೆಯುವುದೊಂದೇ. ಆದರೆ ದೊಡ್ಡ ಮನೆತನದ ಹುಡುಗ ಕಲಾವಿದನಾಗುವುದು ಅಂತಸ್ತಿಗೆ ಸಲ್ಲದ ಮಾತು ಎಂದು ವಿರೋಧಿಸಿದ್ದರು ತಂದೆ. ಆ ಮಾನಸಿಕ ತೊಳಲಾಟದಲ್ಲಿಯೇ ಕೆಲವು ತೈಲಚಿತ್ರಗಳನ್ನು ರಚಿಸಿದ್ದರು. ಫೋಟೋಗ್ರಫಿಯತ್ತಲೂ ಲಕ್ಷ್ಯ ಹರಿಸಿದ್ದರು. ದೂರದ ಸಂಬಂಧಿಯೊಬ್ಬರು ಕೊಟ್ಟಿದ್ದ ಬಾಕ್ಸ್ ಕ್ಯಾಮರಾದಲ್ಲಿ, ಕಣ್ಣಿಗೆ ಕಂಡ ಸುಂದರ ದೃಶ್ಯಗಳನ್ನು ಸೆರೆಹಿಡಿದು, ಇದ್ದಲ್ಲಿಯೇ ಸಲಕರಣೆಗಳನ್ನು ಹೊಂದಿಸಿಕೊಂಡು ಕೆಂಪು ಗ್ಲಾಸಿನ



ಜಲವರ್ಣದಲ್ಲೊಂದು ಅಲಂಕಾರಿಕ ಚಿತ್ರ

ಕಂದೀಲಿನ ಬೆಳಕಿನಲ್ಲಿ ರೋಲ್ ಡೆವಲಪ್ ಮಾಡುತ್ತಿದ್ದರಂತೆ. ಅಂದು ಪ್ರಾರಂಭವಾದ ಫೋಟೋಗ್ರಫಿಯಲ್ಲಿ ಇಂದು ತಮ್ಮದೇ ಪ್ರಸಿದ್ಧಿ ಗಳಿಸಿಕೊಂಡಿದ್ದಾರೆ ದೇಸಾಯಿ.

ಸಾಂಸ್ಕೃತಿಕ ಕಾರ್ಯಕಮಗಳು, ಚಿತ್ರಕಲೆ, ಫೋಟೋಗ್ರಫಿ ಎಂದು ಅಡ್ಡಾಡುತ್ತಿದ್ದ ದೇಸಾಯಿ ಗೃಹಸ್ಥಾಶ್ರಮಿಯೂ ಆದರು. ಈ ವೇಳೆಗೆ ಇವರ ಗೆಳೆಯರಾದವರು ಹಾವೇರಿಯ ಶಂಕರಪ್ಪ ಮೋಟೆಬೆನ್ನೂರರು. ಅವರು ಮನೆಯಲ್ಲಿ ಫ್ರೆಟ್‌ವರ್ಕ್ ಮಾಡುತ್ತಿದ್ದರು. ಅದಕ್ಕಾಗಿ ದೇಸಾಯಿಯವರಿಂದ ನಕ್ಷೆಗಳನ್ನು ಬರೆಸಿಕೊಂಡು ಹೋಗುತ್ತಿದ್ದರು. ಕ್ರಾಫ್ಟ್ ಟೀಚರ್ ಕೋರ್ಸಿಗೆಂದು ಮುಂಬಯಿಗೆ ಹೋಗಿದ್ದ ಮೋಟೆಬೆನ್ನೂರರು ಉಳಿದಿದ್ದ ವಸತಿಗೃಹದಲ್ಲಿ, ಜಾಹೀರಾತು ಸಂಸ್ಥೆಯೊಂದರ ಮ್ಯಾನೇಜರರಾಗಿದ್ದ ಕನ್ನಡಿಗರೊಬ್ಬರು ವಾಸಿಸುತ್ತಿದ್ದರು. ದೇಸಾಯರ ಬಗ್ಗೆ ಮೋಟೆಬೆನ್ನೂರರು ಅವರಿಗೆ ಹೇಳಿದಾಗ "ಮುಂಬಯಿಗೆ ಕರೆಸಿಬಿಡಿ" ಎಂದರಂತೆ. ಮಿತ್ರನಿಂದ ದಿನ ಬಿಟ್ಟು ದಿನ ಪತ್ರಗಳು ಬರಲಾರಂಭಿಸಿದವು. ತಂದೆಗೆ ವಿವರಿಸಿದಾಗ "ಹೋಗಿ ಬಾ ನೋಡೋಣ" ಎಂದರಂತೆ.

ತಿಂಗಳೊಳಗಿನ ಹಸುಗೂಸು (ಮಗ), ಹೆಂಡತಿಯನ್ನು ಬಿಟ್ಟು ಮುಂಬಯಿಗೆ ಗಾಡಿ ಹತ್ತಿದರು : ದೇಸಾಯಿ. "ಹಾವೇರಿಯಿಂದ ಮುಂಬಯಿಗೆ ಆಗ ಹತ್ತು ರೂಪಾಯಿ ಗಾಡಿ ಚಾರ್ಜು."

ಮುಂಬಯಿಯಲ್ಲಿ ೧೨೫ ರೂಪಾಯಿ ಸಂಬಳದ ಕೆಲಸ. ಹೆಂಡತಿ ಮಗನನ್ನು ತಮ್ಮಲ್ಲೇ ಕರೆಸಿಕೊಳ್ಳಬೇಕೆಂದರೆ ನೌಕರಿ ಅಷ್ಟು ಗಟ್ಟಿಯಿಲ್ಲ. ಅದಕ್ಕೂ ಹೆಚ್ಚಿನ ಸಮಸ್ಯೆಯೆಂದರೆ ವಾಸಕ್ಕೊಂದು ಮನೆ ಹುಡುಕುವುದು. ಆಗ ಅವರ ಸಹಾಯಕ್ಕೆ ಬಂದದ್ದು ಪ್ರೀಮೀಯರ್ ಆಟೋಮೊಬೈಲ್ಸ್ ಸಂಸ್ಥೆ. ಕಲಾವಿದ ಹುದ್ದೆಯ ಜತೆಗೆ ವಾಸಕ್ಕೊಂದು ಮನೆಯೂ ದೊರೆಯಿತು. ಈಗೆರಡು ವರ್ಷಗಳ ಹಿಂದೆ ಇದೇ ಸಂಸ್ಥೆಯ ಪ್ರಚಾರ ಖಾತೆಯಲ್ಲಿ ಆಫೀಸರ್ ಆಗಿ ನಿವೃತ್ತರಾದರು. ಪ್ರೀಮೀಯರಿನಲ್ಲಿ ಕೆಲಸ ಮಾಡುತ್ತಲೇ ಜತೆಗೆ ದಂಡಾವತಿ ಮಠರ 'ನೂತನ ಕಲಾಮಂದಿರ'ದಲ್ಲಿ ಕಲಾಶಿಕ್ಷಣ ಮುಂದುವರೆಸಿ, ಜೆ. ಜೆ. ಸ್ಕೂಲ್ ಆಫ್ ಆರ್ಟ್ ಮುಖಾಂತರ ಜಿ. ಡಿ. ಆರ್ಟ್ಸ್ ಪರೀಕ್ಷೆ ಪಾಸ್ ಮಾಡಿದರು.

ನಂತರದ ದಿನಗಳಲ್ಲಿ ಛಾಯಾಚಿತ್ರಕಲೆ, ಚಿತ್ರಕಲೆಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡ ದೇಸಾಯರು ಲೇಖಕರಾಗಬೇಕಾಗಿ ಬಂದ ಪ್ರಸಂಗ ಒದಗಿದ್ದು ೧೯೫೭ ರಲ್ಲಿ. ಆಗ ನೂತನ ಕಲಾಮಂದಿರಕ್ಕೆ ೨೫ ವರ್ಷ. ಕನ್ನಡದ ವಿನಾ ಮರಾಠಿ, ಇಂಗ್ಲೀಷ್ ಪತ್ರಿಕೆಗಳಲ್ಲಿ ಆ ಬಗ್ಗೆ, ಅವರ ಸ್ಥಾಪಕ ದಂಡಾವತಿಮಠರ ಬಗ್ಗೆ ಲೇಖನಗಳು ಪ್ರಕಟವಾಗಿದ್ದವು. ಕನ್ನಡದಲ್ಲಿ ಯಾರೂ ಬರೆಯದ್ದರಿಂದ ತಾವೇ ಒಂದು ಲೇಖನ ಸಿದ್ಧಪಡಿಸಿ ಬೆಂಗಳೂರಿನ ವಾರ ಪತ್ರಿಕೆಯೊಂದಕ್ಕೆ ಕಳಿಸಿದರು. ಅದು ಚಿತ್ರಸಹಿತ ಪ್ರಕಟವಾಗಿ ರಿಗೆ ಮತ್ತೆ ಮತ್ತೆ ಬರೆಯಲು ಪ್ರೇರಕವಾಯಿತು.

ದೇಸಾಯಿ ಬರೆದ ಲೇಖನಗಳು ಅಸಂಖ್ಯಾತ. ವಿಷಯ ಹುಡುಕಿಕೊಂಡು, ವಿಷಯ ಸಿಕ್ಕರೆ ಅವುಗಳಿಗೆ ತಕ್ಕ ಚಿತ್ರ - ಛಾಯಾಚಿತ್ರಗಳನ್ನು ತಾವೇ ತಯಾರಿಸುವೆಡೆಗೆ ಹೆಚ್ಚು ಗಮನ ಹರಿಸಿದ ದೇಸಾಯಿ ಪೇಯಿಂಟಿಂಗ್‌ಗಳನ್ನೂ ಮಾಡತೊಡಗಿದರು. ಈ ವರೆಗೆ ಬಹುಶಃ ಇಷ್ಟು ವಿಷಯವೈವಿಧ್ಯದಲ್ಲಿ ಚಿತ್ರಲೇಖನಗಳನ್ನು ಬರೆದವರು ಬೆರಳಣಿಕೆಯಷ್ಟು ಜನ ಮಾತ್ರವೇನೋ. ಒಮ್ಮೊಮ್ಮೆ ಒಂದೇ ಪತ್ರಿಕೆಗೆ ಒಂದಕ್ಕಿಂತ ಹೆಚ್ಚು ಚಿತ್ರಲೇಖನಗಳನ್ನು ಬರೆಯಬೇಕಾಗಿ ಬಂದಾಗ ಅವರು ಡಿ. ನಾರಾಯಣಮೂರ್ತಿ ಆದರು, ನಾನಾ ಸಾಹೇಬ ದೇಸಾಯಿಯೂ ಆದರು, ನಾ. ದೇಸಾಯಿಯೂ ಆದರು.

ಪುಣೆಯ ಮುಳಾ-ಮುಠಾ ನದಿ ದುರಂತ, ಪಾನ್‌ಶೇಟ್ ಅಣೆಕಟ್ಟು ಒಡೆದ ಸಂದರ್ಭ, ಕೊಯನಾ ಭೂಕಂಪದ ಭೀಕರ ಪರಿಣಾಮ ಮುಂತಾದವುಗಳನ್ನು ಕುರಿತು ತತ್‌ಕ್ಷಣ ಅಲ್ಲಿಗೆ ಹೋಗಿ ಸಚಿತ್ರ ವರದಿಗಳನ್ನವರು ಕನ್ನಡದ ದಿನ ಪತ್ರಿಕೆಗಳಿಗೆ ಕಳಿಸಿದ್ದಾರೆ. ಕೊಯನಾ ದುರಂತದ 'ವಸುಂಧರೆಯ ಒಡಲು ನಡುಗಿದಾಗ' ಆಗಲಿ, ಮುಂಬಯಿಯ ಟ್ರಾಮ್ ಸಾರಿಗೆ ನಿಂತಾಗಿನ

'ಟಿಪ್ರುಮಮ್ಮನ ಕೊನೆ'ಯೆ ಆಗಲಿ, ರಾಜಸ್ಥಾನಿ ಮಹಿಳೆಯರ ಹಬ್ಬ 'ತೀಜ' ಕುರಿತಾಗಲಿ ದೇಸಾಯಿ ಮನಮುಟ್ಟುವಂತೆ ಬರೆದುದಿದೆ. 'ಪ್ರಜಾವಾಣಿ'- 'ಕನ್ನಡ ಪ್ರಭ' - 'ಕರ್ಮವೀರ' — 'ಸಂಯುಕ್ತ ಕರ್ನಾಟಕ'ಗಳಿಗೆ ವರದಿಗಳನ್ನೂ 'ಮುಂಬಯಿ ಪತ್ರ' ವನ್ನೂ ಬರೆದು ಅಲ್ಲಿಯ ಸಾಹಿತ್ಯಕ- ಸಾಂಸ್ಕೃತಿಕ ಕ್ಷೇತ್ರದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ವ್ಯಕ್ತಿ ಚಿತ್ರಗಳಲ್ಲಿ ಅವರು ಹೆಚ್ಚಾಗಿ ಪರಿಚಯಿಸಿದ್ದು ಕಲಾವಿದರನ್ನೇ. ಅಲಮೇಲಕರ್, ಹೆಬ್ಬಾರ ಮುಂತಾದವರ ನಿಕಟವರ್ತಿ ಕೂಡ. ಶಿಲ್ಪಿ ರೆಂಜಾಳ ಗೋಪಾಲ ಶೆಣೈ ಅವರನ್ನು ಅವರು ಕೆಲಸ ಮಾಡುತ್ತಿದ್ದಲ್ಲಿಯೇ ಹೋಗಿ ಸಂದರ್ಶಿಸಿ ಬರೆದ ಇವರ ಲೇಖನ ಉತ್ಕೃಷ್ಟ. ಶಿಲ್ಪಕಲೆಯ ಬೀಡುಗಳಾದ ಅಬುಬೆಟ್ಟ, ಸೊಗಲ, ಸಾದುರ್ಗ, ವಿಜಾಪುರ, ಉದಯಪುರ, ಜಯಪುರ, ಪುಷ್ಕರ, ಹಾವೇರಿ, ಹಾನಗಲ್ಲು, ಅಂಬರನಾಥಗಳ ಕಲೆಯ ಸಿರಿಯನ್ನು ಕೆಮರಾದಲ್ಲಿ ಸೆರೆ ಹಿಡಿದು ನಮಗೆಲ್ಲ ಶಬ್ದಚಿತ್ರಗಳಲ್ಲಿ ವರ್ಣಿಸಿದ್ದಾರೆ. ಹಾವೇರಿಯ ಕಾಯಂ 'ದನಗಳ ಜಾತ್ರೆ' ಕುರಿತ ಅವರ ಲೇಖನವೂ ಗಮನಾರ್ಹ.

ದೇಸಾಯರು ಮೊದಮೊದಲು ರೂಪಿಸಿದ ವರ್ಣಚಿತ್ರಗಳಲ್ಲಿ ಅವರದೇ ಆದ ಒಂದು ಛಾಪು, ಒಂದು ಶೈಲಿ ಇತ್ತು. ಅವರಲ್ಲಿಯ ಸಂಗ್ರಹ ನೋಡಿದ ನನಗೆ ನಂತರ ಅವರು ಆ ಶೈಲಿಯನ್ನೇಕೆ ರೂಢಿಸಿಕೊಳ್ಳಲಿಲ್ಲವೋ ಎಂಬ ಅನಿಸಿಕೆ ಬಲವಾಗಿ ಕಾಡಿದೆ. ಬಹುಶಃ ಚಿತ್ರಕಲೆಯೊಂದನ್ನೇ ಲಕ್ಷಿಸಿದ್ದರೆ..."ಹಾಗಾಗಿದ್ದರೆ ಹೀಗಾಗುತ್ತಿರಲಿಲ್ಲ. ಚಿತ್ರಕಲೆ, ಛಾಯಾಚಿತ್ರಕಲೆ, ಲೇಖನ ಕಾರ್ಯ, ಸಾಂಸ್ಕೃತಿಕ ಚಟುವಟಿಕೆಗಳು ನನಗೆ ಹಣಕ್ಕಿಂತ ಹೆಚ್ಚು ಹೆಸರು, ಸಮಾಧಾನ-ಸಂತೃಪ್ತಿ ನೀಡಿವೆ" ಎನ್ನುತ್ತಾರವರು. ಸಾಂಸ್ಕೃತಿಕ ಚಟುವಟಿಕೆಗಳು, ಅವುಗಳಿಗೆ ಬೇಕಾದ ಕಲೆಯ ಬಗೆಗಿನ ಕೆಲಸಗಳಲ್ಲಿ ದೇಸಾಯಿ ದಣಿವರಿಯದೇ ದುಡಿಯುತ್ತಾರೆ. ಪೋಸ್ಟರ್ ಎಂದರೂ ಸರಿ, ಸ್ಮರಣಸಂಚಿಕೆಯ ಮುಖಚಿತ್ರವೆಂದರೂ ಸರಿ, ಕೊನೆಗೆ ನಾಟಕವೊಂದರ ಕಾಸ್ಟ್ಯೂಂ ಡಿಸೈನ್ ಎಂದರೂ ಸರಿ. ಹಗಲು ರಾತ್ರಿ ಎನ್ನದೆ, ಮಿತ್ರರೊಂದಿಗೆ ಚರ್ಚಿಸುತ್ತ ಇಂಥ ಕೆಲಸ ಮಾಡುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಇವರ ಸೇವೆಯ ಲಾಭ ಪಡೆಯದ ಮುಂಬಯಿಯ ಕನ್ನಡ ಸಂಘ-ಸಂಸ್ಥೆಗಳಿಲ್ಲ. ಇವರ ಕುಲದೈವತವಾದ ಚಿದಂಬರ ಗುರುಗಳ ಉತ್ಸವ, ಆಗಡಿ ಆನಂದವನದಲ್ಲಿ ಇತ್ತೀಚೆ ನಡೆದ 'ಸದ್ಬೋಧ ಚಂದ್ರಿಕೆ'ಯ ಅಮೃತ ಮಹೋತ್ಸವದ ಸ್ಮರಣ ಸಂಚಿಕೆಗಳೇ ಇದಕ್ಕೆ ಸಾಕ್ಷಿ. ಅದು ಅಂದವಾಗಿ ಹೊರಬರಲು ದೇಸಾಯಿ ಎಷ್ಟು ಪರಿಶ್ರಮ ಪಟ್ಟಿದ್ದಾರೆಂಬುದು ನನಗೆ ಗೊತ್ತು.

"ನಿವೃತ್ತಿಯ ನಂತರ ಮನೆಯಲ್ಲಿ ಕ್ಯಾನ್-ವಾಸ್-ಬಣ್ಣ-ಕುಂಚ ಹಿಡಿದು ಒಂದಷ್ಟು ಪೇಯಿಂಟಿಂಗುಗಳನ್ನು ಮಾಡುತ್ತ ಕೂತುಬಿಡ್ರಿ. ಸುಮ್ಮನೇ ಆ ಈ ಕೆಲಸ ಯಾಕ ಮಾಡ್ತೀರಿ? ಇಷ್ಟು ದಿನ ಮಾಡಿದ್ದು ಸಾಕು, ಈಗಾದರೂ ನಿಮ್ಮ ಪ್ರತಿಭೆಯನ್ನು ಪೂರ್ಣವಾಗಿ ಗೊತ್ತು ಮಾಡಿಕೊಡುವಂಥ ಕೃತಿಗಳ ರಚನೆ ಮಾಡ್ರಿ"



ಅದ್ಯಾರ ವಶೀಲಿಯಿಂದ ನಿನ್ನನ್ನು ಸಿಪಾಯಿಯ ಕೆಲಸಕ್ಕೆ ಹಚ್ಚಿದ್ನೋ. ಅವನ ಮನೆ ಹಾಳಾಗಾ-ಗಡಿಯಾರ ನೋಡಿ ಎರಡು ಬಾರಿಸು ಅಂದ್ರೆ...??

ಎಂಬುದು ಇವರ ಪತ್ನಿ-ಪುತ್ರರ ಅಭಿಪ್ರಾಯ.

"ದೇಸಾಯಿ, ಇನ್ನು ಪೂರ್ಣ ಪ್ರಮಾಣದ ಕಲಾವಿದರಾಗಿ" ಎಂದು ಹೆಬ್ಬಾರರು ಸೂಚಿಸಿದ ರಂತೆ, ಇವರು ನಿವೃತ್ತಿಯ ನಂತರ ಬೇರೆ ಕ್ಷೇತ್ರ ದಲ್ಲಿ ಮುಂದುವರೆಯುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಾಗ.

ದೇಸಾಯರ ಬಳಿ ಇರುವ ಕಲೆಯ ವಿಷ ಯದ ಮಾಹಿತಿ ಹಾಗೂ ಗ್ರಂಥ ಸಂಗ್ರಹ ಅಪೂರ್ವವಾದದ್ದು. ಇತ್ತೀಚಿನ ಐದಾರು ವರ್ಷ ಗಳಲ್ಲಿ ದೇಸಾಯರು ಆದಿವಾಸಿಗಳ ಕಲೆಯ ಕುರಿತು ಹೆಚ್ಚು ಲಕ್ಷ್ಯ ವಹಿಸಿದ್ದಾರೆ. ಮಹಾ ರಾಷ್ಟ್ರದ ವಾರಲೀ ಜನಾಂಗ ಕಲೆಯ ಕುರಿತು ಎಲ್ಲರಿಗೂ ತಿಳಿಸಿದ್ದಾರೆ. ಸಾವಂತವಾಡಿಯ ಚಿತಾರಿಗಳ ಕಲೆ, ಚಿಕಣಿ ಚಿತ್ರಕಲೆ ಕುರಿತ ಅವರ ಲೇಖನಗಳನ್ನೂ ಹೆಸರಿಸಬೇಕು. ಇದಕ್ಕೂ ಹೆಚ್ಚಿನ ಕೆಲಸವೆಂದರೆ ೨೦೦ ವರ್ಷಗಳಷ್ಟು ಹಿಂದೆ ಸೊಲ್ಲಾಪುರದಲ್ಲಿ ಬದುಕಿದ್ದ ಕನ್ನಡಿಗ ಸಂತ ಕವಿ ಶುಭರಾಯನ ಕುರಿತು ವಿಷಯ ಸಂಗ್ರಹಿಸುವುದ ರೊಂದಿಗೆ, ವಿನಾಶದಂಚಿನಲ್ಲಿರುವ ಅವರ ವರ್ಣ ಚಿತ್ರಗಳ ಸ್ಲೈಡು ಮಾಡಿಕೊಂಡು ತಂದಿದ್ದಾರೆ. ಇದು ದೇಸಾಯಿಯವರು ನಮ್ಮ ಕಲಾಕ್ಷೇತ್ರಕ್ಕೆ ಮಾಡಿದ ದೊಡ್ಡ ಉಪಕಾರ.

ಮರಾಠಿ ಪತ್ರಿಕೆಗಳ ಮುಖ ಪುಟವನ್ನು ಇವರ ವರ್ಣ ಪಾರದರ್ಶಿಕೆಗಳು ಅಲಂಕರಿಸಿವೆ ಯಷ್ಟೇ ಅಲ್ಲ, ಮರಾಠಿಯಲ್ಲಿ 'ತುಕಾರಾಮಾಶಿ ನಾತೆ ಸಾಂಗಣಾರೆ ಅಭಂಗಕಾರ ಸಂತ ರಾಜಾ-ರಾಮ' ಎಂಬ ವಿಷಯವಾಗಿ ಲೇಖನವನ್ನೂ ಬರೆದಿದ್ದಾರೆ.

ಮುಂಬಯಿಯ ಕನ್ನಡ ಸಂಘ - ಸಂಸ್ಥೆಗಳಲ್ಲಿ ದೇಸಾಯಿ ನಿಷ್ಠಾವಂತ ಕಾರ್ಯಕರ್ತ. ಕುರ್ಲಾ ದಲ್ಲಿ ಕನ್ನಡ ಶಾಲೆ ಸ್ಥಾಪಿಸುವಲ್ಲಿಯೂ ಅವರು ಮುತುವರ್ಜಿಯಿಂದ ದುಡಿದಿದ್ದಾರೆ.

ನತ್ತು, ಕೇಶಾಲಂಕಾರ ಕುರಿತಾಗಲಿ, "ಉಗು-ಳುವೆಡೆಯಲ್ಲೆಲ್ಲ ಉದ್ಭವವಾದ ದೇವ"ರ ಚಿತ್ರ ಗಳ ಕುರಿತಾಗಲಿ ಸ್ವಾರಸ್ಯವಾಗಿ ಬರೆದಿದ್ದಾರೆ. 'ಸಂಸ್ಕಾರ' — 'ವಂಶವೃಕ್ಷ' ಕಾದಂಬರಿಗಳ ಕುರಿತು ಮುಂಬಯಿಯ ಸಾಹಿತ್ಯವಲಯದ ಮಿತ್ರರನ್ನು ಮನೆಗೆ ಕರೆದು ಚರ್ಚಾಗೋಷ್ಠಿ ಏರ್ಪಡಿಸಿದ್ದಾರೆ. ವರಕವಿ ಬೇಂದ್ರೆಯವರಂತೂ ಒಮ್ಮೆ ದಿಲ್ಲಿಯಿಂದ ವಾಪಸಾಗುವಾಗ ಮುಂಬೈ ಯಲ್ಲಿಳಿದು ಎರಡು ದಿನ ದೇಸಾಯರ ಮನೆಯಲ್ಲಿ ವಾಸ್ತವ್ಯ ಹೂಡಿದರಂತೆ. "ಆ ಸಂದರ್ಭ ಅವಿ ಸ್ಮರಣೀಯ" ಎನ್ನುವ ದೇಸಾಯಿ ಬೇಂದ್ರೆ ತಮ್ಮ ಮನೆಯಲ್ಲಿ ಹಿರಿಯಜ್ಜನಂತೆಯೆ ಇದ್ದರು, ಎನ್ನುತ್ತಾರೆ. ಸಾಹಿತ್ಯಕ — ಸಾಂಸ್ಕೃತಿಕ — ಧಾರ್ಮಿಕ ಚಟುವಟಿಕೆ ಇದ್ದಲ್ಲೆಲ್ಲ ದೇಸಾಯಿ ಹುಡುಗರಿಗಿಂತ ಹುಡುಗನಾಗಿ ಕ್ಯಾಮರಾ ದೊಂದಿಗೆ ಹಾಜರು.

ಪತ್ರಿಕಾ ವರದಿಗಾರ, ಛಾಯಾಚಿತ್ರಗ್ರಾಹಕ, ವರ್ಣಚಿತ್ರ ಕಲಾವಿದ, ಲೇಖಕ ದೇಸಾಯಿಯವ ರೀಗ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ. ಸ್ನೇಹಿತ ರೊಂದಿಗೆ ಹುಬ್ಬಳ್ಳಿಯಲ್ಲೊಂದು ಜಾಹಿರಾತು ಸಂಸ್ಥೆ ಪ್ರಾರಂಭಿಸಿರುವ ಅವರು ಇನ್ನು ತಮ್ಮ ಬಿಡುವಿನ ವೇಳೆಯನ್ನು ಚಿತ್ರಕಲೆಗೆ ಮೀಸಲಾಗಿಡ ಬಹುದೇನೋ. ಈ ವರೆಗೆ ಒಕ್ಕೈ ಪ್ರದರ್ಶನ ಸಾಮೂಹಿಕ ಪ್ರದರ್ಶನ ನಡೆಸಿರುವ ದೇಸಾಯಿ ಯವರಿಗೆ ಈಗ ತಮ್ಮೆಲ್ಲ ಕೃತಿಗಳ ಪ್ರದರ್ಶನ-ಏರ್ಪಡಿಸಬೇಕೆಂಬ ಇಚ್ಛೆಯಿದೆ. ಅದಕ್ಕಾಗಿ ತಯಾರಿಯೂ ನಡೆದಿದೆ. ಕರ್ನಾಟಕದಲ್ಲೆಲ್ಲ ತಮ್ಮ ಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸ ಬೇಕೆಂದಿದ್ದಾರೆ. ಅಗಡಿಯಲ್ಲಿಯ ತಮ್ಮ ವಾಡೇ ದಲ್ಲಿಯ ದೊಡ್ಡ ಮನೆಯನ್ನು ತಮ್ಮ ಕಲೆಗಳ ಹಾಗೂ ಜಾನಪದ ಚಿತ್ರಕಲೆಯ ಸಂಗ್ರಹಾಲಯ ವಾಗಿ ಮಾರ್ಪಡಿಸುವದೂ ಅವರ ವಿಚಾರ.

ಕೇಶಾಯರ್ ನಲ್ಲಿರುವ ಚರ್ಚಿನ ಬಾಗಿಲ ಮೇಲಿರುವ ಫಲಕದಲ್ಲಿ ಈ ರೀತಿ ಬರೆದಿದ್ದಾರೆ. ಇದು ದೇವರ ಮನೆ. ಸ್ವರ್ಗದ ಬಾಗಿಲು ಕೂಡ. (ಚಳಿಗಾಲದಲ್ಲಿ ಬಾಗಿಲು ಮುಚ್ಚಿರುತ್ತದೆ.)"

ಜನಪರವಾಗಿ ಬಾಳಿ ಬದುಕಿದ ಕವಿ

ಕಾರ್ಲ್ ಸ್ಯಾಂಡ್‌ಬರ್ಗ್

ಸುಬ್ಬಣ್ಣ ಎಕ್ಕುಂಡಿ

ಜೀವನದ ದಾರಿಯು ಬದಿಗೆ, ನಾನು ಮೋಡಿ ಹಿಡಿದವನಂತೆ ಕುಳಿತುಕೊಂಡೆನು. ನನ್ನ ಸುತ್ತಲೂ ಕುರುಚಲು ಪೊದೆಯೊಂದು ಹುಟ್ಟಿಕೊಂಡಿತು. ಆ ಕಂಟಿಗಳು ಎಳೆಯ ಸಸಿಗಳಾಗಿ ಬೆಳೆದವು. ತರುವಾಯ ಆ ಸಸಿಗಳು ಹೆಮ್ಮರಗಳಾಗಿ ನಿಂತವು. ಆಗ ನನಗೆ, ಅಸ್ಪಷ್ಟತೆಯ ಆಳಗಳಿಂದ ಹೊರಬರುವ ದಾರಿ, ಅಸಾಧ್ಯವೆನಿಸಿತು,'' ಎಂದು ಅಮೇರಿಕದ ಸಾಹಿತಿ ಹಾಥಾರ್ನ್ ಬರೆಯುತ್ತಾನೆ. ಬರೆಹಗಾರನೊಬ್ಬನು 'ವ್ಯಕ್ತಿತ್ವ'ವುಳ್ಳ ಸಾಹಿತಿಯೆನಿಸಿಕೊಳ್ಳುವುದು ಕಷ್ಟದ ಕೆಲಸವಾಗಿದೆ. ಇಂಥ ವ್ಯಕ್ತಿತ್ವ ಪಡೆಯಲು, 'ದಣಿವಿನ ದಾರಿ' ನಡೆಯಬೇಕಾಗುತ್ತದೆ. ಆಗ ಮಾತ್ರವೇ ಅವನನ್ನು ಒಂದು ದೇಶವು ತನ್ನ ಕಿವಿ ಕಣ್ಣು ಮತ್ತು ಹೃದಯದ ಹತ್ತಿರಕ್ಕೆ ಸೇರಿಸುತ್ತದೆ. ನಮ್ಮ ವೇದಗಳಲ್ಲಿ ಒಂದು ಕೊಳದ ಕಥೆ ಬರುತ್ತದೆ. ಅದರಲ್ಲಿ ಮುಳುಗಿ ಎದ್ದವರು ಮುದುಕರೇ ಇರಲಿ, ರೂಪಗೇಡಿಗಳೇ ಇರಲಿ ಯುವಕರಾಗಿ, ರೂಪವಂತರಾಗಿ ಏಳುತ್ತಿದ್ದರು. ಒಳ್ಳೆಯ ಸಾಹಿತಿಯ ಭಾಷೆ ಇಂಥ ಕೊಳವಾಗಿರುತ್ತದೆ. ಅವನು ಬಳಸುವ ನುಡಿಯಲ್ಲಿ, ಧ್ವನಿ, ಭಾವ, ಅರ್ಥ, ರಸ, ಕೊನೆಗೆ ಬದುಕು ಕೂಡ ಪುನರ್ನವಗೊಳ್ಳುತ್ತದೆ. ಅಮೆರಿಕದ ಕಾರ್ಲ್ ಸ್ಯಾಂಡ್‌ಬರ್ಗ್ ಇಂಥ ಒಬ್ಬ ಕವಿಯಾಗಿದ್ದಾನೆ. ನಗೆಗಾರ ಮಾರ್ಕ್ ಟ್ವೇನ್ ಆ ದೇಶದ ಹಳ್ಳಿಗಾಡಿನ ಚೈತನ್ಯವೆನಿಸಿದರೆ, ಕವಿ ಕಾರ್ಲ್ ಸ್ಯಾಂಡ್‌ಬರ್ಗ್, ಅಲ್ಲಿಯ ಭೌತಿಕ ಸಂಸ್ಕೃತಿಯ ನಡುವೆಯೂ ಮುಗ್ಧ ಮಾನವತೆ ಹಾಗೂ ನ್ಯಾಯ ನೀತಿಗಳ ಪರವಾಗಿ ನಡೆಸುವ ನಿರಂತರ ಹೋರಾಟದ ಧ್ವನಿಯಾಗಿದ್ದಾರೆ. ಅವರು ತುಂಬ ಜನಪ್ರಿಯ ಕವಿಯಾಗಿದ್ದಾರೆಂದು ವಾಚನಾಲಯದ ಅಧಿಕಾರಿಯೊಬ್ಬರು ನಡೆಸಿದ ಸರ್ವೆಯಿಂದ ತಿಳಿದುಬರುತ್ತದೆ. ಪುಸ್ತಕ ಕೊಳ್ಳಲಾರದ ಟ್ಯಾಕ್ಸಿ ಚಾಲಕರು, ದರ್ಜಿಗಳು, ಕೂಲಿಗಳು, ಸ್ಟೆನೋಗಳು, ಹಮಾಲರು ಮತ್ತು ಒಕ್ಕಲಿಗರು ಸ್ಯಾಂಡ್‌ಬರ್ಗರ ಕವಿತೆಗಳನ್ನು ಮತ್ತೆ ಮತ್ತೆ ಓದುತ್ತಿದ್ದರಂತೆ. ಅವರ ಕೃತಿಗಳೂ ಭಾಷೆಯೂ ಅವರ ಬದುಕಿನ ಅಷ್ಟೊಂದು ಹತ್ತಿರವಾಗಿದ್ದುವಂತೆ.

''ನನ್ನ ಗಿಟಾರ್ ತೆಗೆದುಕೊಂಡು ನಾನು ಮತ್ತೆ ಹಾಡಬೇಕು. ಏಕೆಂದರೆ ಜೀವನವು ಅಲ್ಲಿ ಸ್ಪಂದಿಸುತ್ತದೆ. ಉಳ್ಳವರು, ಬಡವರು, ದರೋಡೆ

ಚೋರರು, ಕೊಲೆಗಡುಕರು, ನೇಣು ಹಾಕು ವರುವ, ತಂದೆಗಳು, ಎಡವಟ್ಟು ಹುಡುಗರು, ಕಂದರಿಗೆ ಮೃದುವಾಗಿ ನುಡಿವ ತಾಯಿಂದಿರು, ರೈಲು ಕಂಬಿ ಕೂಲಿಗಳು, ಹಡಗಿನ ಖಲಾಸಿಗಳು, ದಾರಿಕಾರರು, ಮನೆಯಲ್ಲಿದ್ದ ಪ್ರಣಯಿಗಳು, ಜೀವನವು ತಮಗೇನು ಮಾಡಿದೆಯೆಂದು ಹೇಳು ವರು.'' ಸ್ಯಾಂಡ್‌ಬರ್ಗ್‌ನ ಕವಿತೆಗಳಲ್ಲಿ ಇವರ ಬದುಕಿನ ಹೊಳೆ ಹರಿದಿದೆ. ಅವರಿಗೆ ಜೀವನ ತುಂಬ ಪ್ರಿಯವಾದದ್ದು. ಅಂತೆಯೆ ಜನ ಎಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಇಂಥ ಪ್ರೀತಿ ಉತ್ಸಾಹಗಳಿಂದ, ಅವರು ಅಮೆರಿಕವನ್ನೆಲ್ಲ ಸುತ್ತಿದರು. ಇನ್ನಷ್ಟು ಬೆಳೆಸಿದ ರೈತರನ್ನು, ಇನ್ನಷ್ಟು ಕೂಲಿ ಕೇಳಿದ ಕಾರ್ಮಿಕರನ್ನು ಅಲ್ಲಲ್ಲಿ ಕಂಡರು. ಒಳಿತನ್ನು ಅಪಾರವಾಗಿ ಯೋಚಿಸ ಬಲ್ಲ, ಮಾಡಬಲ್ಲ ಸಾಮರ್ಥ್ಯವು ಜನರಲ್ಲಿದೆ ಎಂದು ಕಾರ್ಲ್ ದೃಢವಾಗಿ ನಂಬಿದ್ದರು. ಇಂಥ ನಂಬಿಕೆಯನ್ನು ಬರೆಪವಲ್ಲಿಳಿಸಿದ ಕಾರ್ಲ್ ಸ್ಯಾಂಡ್‌ಬರ್ಗ್ ಜನಪ್ರಿಯ ಕವಿಯಾದದ್ದು ಸೋಜಿಗವಲ್ಲ!

ಸುಮಾರು ಆರಡಿ ಎತ್ತರದ ನಿಲವು, ಕೆಂಪು ಮೈಬಣ್ಣ, ಅಲಗಿನಂಥ ಮುಖ, ತುಸು ಎತ್ತರ ಗೊಂಡ ಕೆನ್ನೆಗಳು, ಸಪೂರ ಮೈಕಟ್ಟು, ಅಗಲವಾದ ಭುಜಗಳು - ಸ್ಯಾಂಡ್‌ಬರ್ಗ್ ಹೀಗಿ ದ್ದರು. ಅವರ ಕುಟುಂಬವು ಸ್ವೀಡನ್ನಿನಿಂದ ವಲಸೆ ಬಂದ, ಲೂದರನ ಕ್ರಿಶ್ಚಿಯನ್ ಕುಟುಂಬವಾಗಿತ್ತು. ಕಾರ್ಲ್ ಸ್ಯಾಂಡ್‌ಬರ್ಗ್ ಗೇಲ್ಸಬರ್ಗ್ ಎಂಬಲ್ಲಿ ೧೮೭೮ ಜನವರಿ ೬ ರಂದು ಹುಟ್ಟಿದರು. ಅವರ ತಂದೆಯ ಹೆಸರು ಆಗಸ್ಟ್ ಸ್ಯಾಂಡ್‌ಬರ್ಗ್, ತಾಯಿಯ ಹೆಸರು ಕ್ಲಾರಾ ಮ್ಯಾಟಲ್ಡ್ ಸ್ಯಾಂಡ್‌ಬರ್ಗ್. ತಂದೆ ಓದುಬರಹಗಳನ್ನು ಅರಿಯದ ಕಾರ್ಮಿಕ. ತಾಯಿ ಸ್ವೀಡಿಶ್ ಮತ್ತು ಇಂಗ್ಲೀಷಿನಲ್ಲಿ ಓದಲು ಬರೆಯಲು ಬಲ್ಲವರಿದ್ದರು. ಅವರ ಬಡ ಕುಟುಂಬ ಮೂರು ಕೋಣೆಗಳ ಒಂದು ಸಣ್ಣ ಮನೆ ಯಲ್ಲಿ ತಂದೆ ಗಳಿಸುತ್ತಿದ್ದ ನಾಲ್ವತ್ತು ಡಾಲರು ಗಳಲ್ಲಿ ಜೀವನ ಸಾಗಿಸುತ್ತಿತ್ತು. ಕಾರ್ಲನ ಬಾಲ್ಯದ ವಿದ್ಯಾಭ್ಯಾಸವು ಗೇಲ್ಸಬರ್ಗಿನಲ್ಲೇ ನಡೆಯಿತು. ಆತ ಹದಿನೈದು ವರ್ಷದವನಿದ್ದಾಗ ಎಂಟನೇ ಗ್ರೇಡ್ ಮುಗಿಸಿದನು. ಓದು ಮುಂದ ರಿಸಲು ಅನೂಕೂಲವಿಲ್ಲದರಿಂದ, ಕಾರ್ಲ್ ಗಳಿಕೆಯ ದಾರಿ ಹುಡುಕಬೇಕಾಯಿತು. ಹಂಫ್ರಿ ಎಂಬುವನ ಸಲೂನಿನಲ್ಲಿ ಕೆಲಸಕ್ಕೆ ಸೇರಿ ನೆಲ ತಿಕ್ಕುವದು ಹಾಗೂ ಬೂಟ್ ಪಾಲಿಶ್ ಮುಂತಾ ದುವನ್ನು ಮಾಡಿದನು ಸ್ಯಾಮ್ ಖಾರ್ಲೊ ಎಂಬ ಸ್ನೇಹಿತನೊಂದಿಗೆ. ಮನೆ ಮನೆಗೆ ಡೇರಿ ಹಾಲು ಮುಟ್ಟಿಸಿ ದುಡಿದನು. ಆಗಲೇ ಸ್ಯಾಮ್ ಕಾರ್ಲ್‌ನಿಗೆ ಅಪರೂಪದ ಜನಪದ ಹಾಡು ಗಳನ್ನು ಕಲಿಸಿಕೊಟ್ಟನು. ತರುವಾಯ ತಂದೆಯು, ಕಾರ್ಲ್‌ನಿಗೆ ಶಿಕಾಗೋಕ್ಕೆ ಹೋಗಲು ಒಂದು ಪಾಸ್ ದೊರಕಿಸಿ ಕೊಟ್ಟನು. ಪ್ರಯಾಣದಲ್ಲಿ ಕಾರ್ಲ್ ಹೊಲಗಳಲ್ಲಿ ದುಡಿದನು. ಹೊಟೆಲು ಗಳಲ್ಲಿ ತಟ್ಟೆ ತೊಳೆದನು, ಕಿಡಕಿ ನೆಲಗಳನ್ನು ಉಜ್ಜಿದನು. ಕಸ ಗುಡಿಸಿದನು. ಸುಗ್ಗಿಯ ಕೊಯಲಿನಲ್ಲಿ ನೆರವಾದನು. ರೈಲು ಕಂಬಿ ಹಾಕುವ ಗ್ಯಾಂಗ್‌ಮನ್ ಆದನು. ದಾರಿಗುಂಟ ಬಯಲಲ್ಲಿ, ಹೊಲಗಳಲ್ಲಿ ಮಲಗಿದನು. ಕಾಡು ಗಳಲ್ಲಿ ಇರುಳನ್ನು ಕಳೆದನು. ಧೂಳಿ, ಇಲ್ಲವೆ ಕೆಸರು ಹಿಡಿದ ಬಟ್ಟೆ ತೊಟ್ಟು, ತೆರೆದ ಡಬ್ಬಿಗ ಳಲ್ಲೊ, ಇಲ್ಲವೆ ಡಬ್ಬಿಗಳ ನಡುವಿನ ಕೊಂಡಿಯ ಮೇಲೊ ಕುಳಿತು, ನಿದ್ರೆಯೂ ಇಲ್ಲದೆ ಪ್ರಯಾ ಣಿಸುತ್ತಿದ್ದನು. ಕೈಗೆ ಸಿಕ್ಕ ಕೆಲಸ ಮಾಡುವ 'ಹೋಬೊ' ಆಗಿ ಊರೂರು ಅಲೆದನು. ಇಂಥ ಪುಕ್ಕಟೆ ಪ್ರವಾಸದಲ್ಲೊಮ್ಮೆ ನಿಗ್ರೋ ಸಂಗಾತಿ ಯೊಂದಿಗೆ ಸಿಕ್ಕು ಬಿದ್ದ ಕಾರ್ಲ್ ಹತ್ತು ದಿನ ಸೆರೆಮನೆಯಲ್ಲಿರಬೇಕಾಯಿತು. ಹತ್ತು ಡಾಲರು ದಂಡವನ್ನು ತೆರಬೇಕಾಯಿತು. ಪ್ರವಾಸದಲ್ಲಿ, ಇಯೋವ, ಮಿಸೂರಿ, ಕಾನ್ಸಾಸ್ ಮತ್ತು ಶಿಕಾಗೋಗಳನ್ನು ಸುತ್ತಿಕೊಂಡು ಕಾರ್ಲ್, ಗೇಲ್‌ಬರ್ಗಿಗೆ ಮರಳಿ ಬಂದನು. ಈ ಪ್ರವಾಸವು ಅವನಿಗೆ ಬದುಕಿನ ಹೋರಾಟವನ್ನು ಕಲಿಸಿತ್ತು.

ಹಾಗೂ ಅವನ ಮನೋಧರ್ಮದಲ್ಲೂ ಸಾಕಷ್ಟು ಬದಲಾವಣೆ ಉಂಟುಮಾಡಿತ್ತು. ಮನೆಗೆ ಬಂದ ಮೇಲೂ, ಕಾರ್ಲ್, ಬಣ್ಣ ಬಳಿಯುವ ಕೆಲಸ ಮಾಡಿದನು. ಸೈನ್ಯ ಸೇರಿ ಕೆಲವು ಕಾಲ ದುಡಿದನು. ಬೆಂಕಿ ನಂದಿಸುವ ಇಲಾಖೆಯಲ್ಲಿ ಉದ್ಯೋಗ ಮಾಡಿದನು. ಜಾಹೀರಾತು ಕೆಲಸವನ್ನೂ ಕೈಕೊಂಡನು. ಆಗಲೇ ಲೊಂಬಾರ್ಡ್ ಕಾಲೇಜಿನಲ್ಲಿ ವಿದ್ಯಾರ್ಥಿಯೆಂದು, ಸೇರಿಕೊಂಡನು. ಫೀ ಹಣ ಗಳಿಸಲು, ಗಂಟೆ ಬಾರಿಸುವ ಕೆಲಸವನ್ನೂ ಮಾಡಿದನು. ಕಾಲೇಜಿನಲ್ಲಿ, ಓದುತ್ತಿದ್ದಾಗಲೇ ಕಾರ್ಲ್ ಸ್ಯಾಂಡ್‌ಬರ್ಗ್ ಶೇಕ್ಸ್‌ಪಿಯರ್, ಚೌಸರ್ ಮುಂತಾದವರ ಕೃತಿಗಳನ್ನು ಅಭ್ಯಾಸ ಮಾಡಿದನು. ಕಾಲೇಜು ಪತ್ರಿಕೆಯ ಸಂಪಾದಕನಾಗಿ, ಸಾಹಿತ್ಯ ಕ್ಷೇತ್ರದಲ್ಲಿಯ ಮೊದಲ ಅನುಭವಗಳನ್ನೂ ಪಡೆದನು. ಆಗಲೇ ಮತ್ತೊಮ್ಮೆ ನ್ಯೂಜರ್ಸಿ, ನ್ಯೂಯಾರ್ಕ್, ಡೆಲವೇರ್‌ಗಳನ್ನು ಸುತ್ತಾಡಿ ಬಂದನು. ಮನೆಗೆ ಬಂದ ಕಾರ್ಲನಿಗೆ ಕಾವ್ಯದ ಗೀಳು ಹಿಡಿಯಿತು.

ಒಂದು ದಿನ ತಂದೆ ನಿರಾಶೆಯಿಂದ ಕೇಳಿದರು : "ಕಾರ್ಲಿ, ಕಾವ್ಯದಿಂದ ಹಣವೇನಾದರೂ ಬರುವದೆ?" ಆಗ ಮಗ ಉತ್ತರ ಕೊಟ್ಟನು, "ಅಪ್ಪ, ಅದರಲ್ಲಿ ಅಂಥ ಆಸೆಯಿದೆಯೆಂದು ಕಾಣುವದಿಲ್ಲ." ಆದರೂ ಕಾರ್ಲ್ ಕಾವ್ಯ ಬರೆದರಷ್ಟೆ ಅಲ್ಲ. ಹಣವನ್ನೂ ಗಳಿಸಿದರು. ಕಾಲೇಜಿನಲ್ಲಿ ಓದುತ್ತಿದ್ದಾಗ, ಕಾರ್ಲ್ ಸ್ಯಾಂಡ್‌ಬರ್ಗರಿಗೆ ಪ್ರೊ. ಫಿಲಿಪ್ ರಾಯಿಟ್, ಎಂಬುವರ ಪರಿಚಯವಾಯಿತು. ಅವರು ಒಂದು ಪ್ರೆಸ್ಸನ್ನು ಹೊಂದಿದ್ದರಲ್ಲದೆ, 'ಬಡ ಲೇಖಕರ ಕ್ಲಬ್'ನ್ನು ಸಂಘಟಿಸಿ



ಜಾನ್ ಎಫ್. ಕೆನ್ನೆಡಿಯೊಂದಿಗೆ ಕವಿ ಸ್ಯಾಂಡ್‌ಬರ್ಗ್

ದ್ದರು. ಎಳೆಯರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸುತ್ತಿದ್ದ ಪ್ರೊ. ರಾಯಿಟ್, ಬಡ ಪ್ರತಿಭಾವಂತರ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಗಾಢ ಸಾಮಾಜಿಕ ಕಾಳಜಿಗಳನ್ನು ಹೊಂದಿದ್ದ ಅವರು ಹೊಸ ಸಮಾಜ ವ್ಯವಸ್ಥೆಯನ್ನು ತರುವದರಲ್ಲಿ ಆಸಕ್ತರಿದ್ದರು. ಅವರ ನೆರವಿನಿಂದಲೆ ಕಾರ್ಲ್, ೧೯೦೪-೫ ರ ಸುಮಾರಿಗೆ, 'ಇನ್ ರೆಕ್‌ಲೆಸ್ ಎಕ್ಸಟಸಿ', 'ದಿ ಪ್ಲೇಂಟ್ ಆಫ್ ಎ ರೋಸ್', ಮತ್ತು 'ಇನ್ಸಿಡೆಂಟಲ್' ಎಂಬ ಮೂರು ಸಂಗ್ರಹಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಅಂಥ ಯಾವ ವಿಶೇಷವಿಲ್ಲದಿದ್ದರೂ, ಅರ್ಧ ಕವಿತೆ, ಅರ್ಧ ಗದ್ಯಗಳನ್ನು ಪ್ರಭಾವಿಯಾಗಿ ಬಳಸಬಲ್ಲ, ವಚನ ಶೈಲಿಯ ಸೊಗಸನ್ನು ಚನ್ನಾಗಿ ಗುರುತಿಸಬಹುದು. ಕಾರ್ಲ್ ಸ್ಯಾಂಡ್‌ಬರ್ಗರ ಈ ಕೃತಿಗಳಲ್ಲಿ, ಸಂಯಮವಿಲ್ಲದ ಉತ್ಸಾಹ ಹಾಗೂ ಆಯ್ಕೆಯಿಲ್ಲದ ಆತುರಗಳನ್ನು ಅಲ್ಲಲ್ಲಿ ಕಾಣಬಲ್ಲೆವು.

ಕಾರ್ಲ್ ಸ್ಯಾಂಡ್‌ಬರ್ಗರಿಗೆ ಗಿಟಾರ್ ವಾದ್ಯ ಹಾಗೂ ಜನಪದ ಹಾಡುಗಳು ಬಹಳ ಪ್ರಿಯವಾಗಿದ್ದವು. ಬಾಲ್ಯದಿಂದಲೂ ಕಾರ್ಲ್ ಹಾಡುವ ಕ್ಲಬ್ಬುಗಳ ಸದಸ್ಯರಾಗಿ, ಗಿಟಾರ್ ಬಾರಿಸುತ್ತ ಊರೂರುಗಳನ್ನು ಸುತ್ತಿ, ಉಪನ್ಯಾಸ ಕೊಡುತ್ತಿದ್ದರು. ಅಲ್ಲಲ್ಲಿ ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ, ಹಾಡುತ್ತ ಹಣ ಗಳಿಸುತ್ತಿದ್ದರು. ಹೀಗೆ ಬಂದ ಹಣದಿಂದ, ತಮ್ಮ ಕವಿತೆಗಳನ್ನು ಪ್ರಕಟಿಸುತ್ತಿದ್ದರು. ಹೊಲಗಳಲ್ಲಿ ದುಡಿಯುವವರ ಹಾಗೂ ನಿಗ್ರೋ ಕಾರ್ಮಿಕರ ದುಃಖದ ಹಾಡುಗಳನ್ನು ಮೆಲ್ಲಗೆ ಹಾಡುತ್ತಿದ್ದರೆ, ಸಭಿಕರು ತನ್ಮಯಗೊಂಡು ಸ್ತಬ್ಧವಾಗಿ ಆಲಿಸುತ್ತಿದ್ದರು. ಇಂಥ ಸಭೆಯಲ್ಲೊಮ್ಮೆ ಕಾರ್ಲ್ ಹಾಡಿದಾಗ ಪ್ರಸಿದ್ಧ ಲೇಖಕ ಸಿಂಕ್ಲೇರ್ ಲಿವಿ ಅದನ್ನು ಕೇಳಿ ಕಂಬನಿದುಂಬಿದರಂತೆ. ಸುಪ್ರಸಿದ್ಧ ಗಿಟಾರ್ ವಾದಕ ಸೆಗೊವಿಯ, ಸ್ಯಾಂಡ್‌ಬರ್ಗ್‌ನ ಗುರುವಾಗಿದ್ದರು. "ಈ ಕವಿ ಸಂಗೀತಗಾರ ಹಾಗೂ ಇತಿಹಾಸಜ್ಞನ ಪ್ರತಿಭೆಯು ಅವನು ನುಡಿಸುವ ಗಿಟಾರಿನಲ್ಲಿ ಕರಗಿಹೋಗುತ್ತದೆ," ಎಂದು ಸೆಗೊವಿಯ, ಶಿಷ್ಯನ ಬಗ್ಗೆ ಹೆಮ್ಮೆಯಿಂದ ಬರೆದರು. ಕಾರ್ಲ್ ಸ್ಯಾಂಡ್‌ಬರ್ಗ್, ತಾನು ಅಲ್ಲಲ್ಲಿ ಕಲಿತ ಇಲ್ಲವೆ ಸಂಗ್ರಹಿಸಿದ ಹಾಗೂ ಬರೆದ ಸುಮಾರು ೨೮೦ ಹಾಡುಗಳನ್ನು 'ದಿ ಅಮೇರಿಕನ್ ಸಾಂಗ್ ಟ್ಯಾಗ್' ಎಂಬ ಕೃತಿಯಲ್ಲಿ ಪ್ರಕಟಿಸಿದರು (೧೯೨೭). ಇದಕ್ಕೂ ಮುಂಚೆ ೧೯೨೦ ರಲ್ಲಿ 'ಸ್ಮೋಕ್ ಆ್ಯಂಡ್ ಸ್ಟೀಲ್' ಎಂಬ ಕಾವ್ಯಸಂಗ್ರಹ ಪ್ರಕಟಿಸಿದ್ದರು. ವಿಶ್ವವಿದ್ಯಾಲಯಗಳು ಹಾಗೂ ಸಾಹಿತ್ಯ ಸಂಘಗಳು, ಅವರನ್ನು ಕಾರ್ಯಕ್ರಮಗಳಿಗೆ ಆಮಂತ್ರಿಸುತ್ತಿದ್ದವು. ಕಾರ್ಲ್ ಹೋದಲ್ಲೆಲ್ಲ ಜನರು ಗಿಟಾರಿನೊಂದಿಗೆ ಬರಲೇಬೇಕೆಂದು ಒತ್ತಾಯಿಸುತ್ತಿದ್ದರು, ಇಂಥ ಸಂಚಾರದಲ್ಲೊಮ್ಮೆ ಕಾರ್ಲ್ ಸ್ಯಾಂಡ್‌ಬರ್ಗರಿಗೆ ಬಾಳ ಸಂಗಾತಿಯಾಗಲಿರುವ ಚೆಲುವೆ, ಪಾವುಲಾ ಸ್ಟೈಚೈನ್(**Paula Steichen**)ಳ ಪರಿಚಯವಾಯಿತು. ಅವಳು ಕೂಡ, ಕಾರ್ಲನ ಹಾಗೆ, ಸಮಾಜವಾದಿ ಕನಸುಗಾತಿಯಾಗಿದ್ದಳು. ಶಿಕಾಗೊ ಯುನಿರ್ಸಿಟಿಯ ಪದವೀಧರೆಯಾಗಿ ಪ್ರಿನ್ಸ್‌ಟನ್ನಿನಲ್ಲಿ ಅಧ್ಯಾಪಕಿಯಾಗಿದ್ದಳು. ಸಾಹಿತ್ಯ ವಾಸ್ತುಶಿಲ್ಪ ಹಾಗೂ ತಳಿಶಾಸ್ತ್ರಗಳಲ್ಲಿ ಪರಿಣಿತಳಿದ್ದಳು. ಹಲವು ಭಾಷೆಗಳನ್ನು ಬಲ್ಲವಳಾಗಿದ್ದಳು. ಸೌಂದರ್ಯ, ಸೌಜನ್ಯ ಹಾಗೂ ಪ್ರತಿಭೆಗಳು ಸಂಗಮಗೊಂಡ ಪಾವುಲಾ, ಕಾರ್ಲನ ಬದುಕನ್ನು ಸುಖ ಸಂತೃಪ್ತಿಗಳಿಂದ ತುಂಬಿದಳು. ಅವಳ ಸೋದರ ಎಡ್ವರ್ಡ್ ಸ್ಟೈಚೈನ್ ಜಗತ್ಪ್ರಸಿದ್ಧ ಫೋಟೋಗ್ರಾಫರ್ ಆಗಿದ್ದರು. ಸ್ಯಾಂಡ್‌ಬರ್ಗ್ ಸಂಸಾರ ಹೂಡಿದಾಗ ಸಮಾಜವಾದಿ ಸಂಘಟನೆಯನ್ನು ಕೈಕೊಂಡರು ಹಾಗೂ 'ಲೀಡರ್' ಪತ್ರಿಕೆಯಲ್ಲಿ ಕೆಲಸಕ್ಕೂ ಸೇರಿಕೊಂಡರು. ಸ್ಯಾಂಡ್‌ಬರ್ಗ್ ದಂಪತಿಗೆ ಮೂವರು ಹೆಣ್ಣು ಮಕ್ಕಳು. ಮಾರ್ಗರೆಟ್, ಜೇನೆಟ್ ಮತ್ತು ಹೆಲ್ಗ. ಮಕ್ಕಳು ಕೂಡ ತಾಯಿ ತಂದೆಗಳಂತೆ, ಸಾಹಿತ್ಯ, ಸಂಗೀತ ಹಾಗೂ ಅತಿಥಿ ಸತ್ಕಾರಗಳಲ್ಲಿ ತುಂಬ ಆಸಕ್ತರಾಗಿ ಬೆಳೆದರು.

ಕಾರ್ಲ್ ಸ್ಯಾಂಡ್‌ಬರ್ಗರ ಸಾಹಿತ್ಯಸೃಷ್ಟಿಯು

ಕಾವ್ಯದಿಂದ ಅರ್ಥಶಾಸ್ತ್ರದ ವರೆಗೂ ಹರಡಿದೆ. ಅವರು ಬರೆಯಲು ಆರಂಭಿಸಿದ್ದು, ಪತ್ರಕರ್ತನಾಗಿ; ವಿಸ್‌ಕಾನ್ಸಿನ ಮತ್ತು ಇಲಿನಾಯ್‌ಗಳ ಕ್ರಾಂತಿವಾದಿ ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಸಂಪುಗಳು, ದೊಂಬಿಗಳು, ವರ್ಣದ್ವೇಷದ ಗಲಭೆಗಳು ಹಾಗೂ ಅಲ್ಲಲ್ಲಿಯ ಸಾಮಾಜಿಕ ಹಾಗೂ ಔದ್ಯೋಗಿಕ ಉಲ್ಬಣಗಳನ್ನು ವರದಿ ಮಾಡುತ್ತಿದ್ದರು. ಕಾರ್ಮಿಕ ಸಂಘಟನೆಗಳಲ್ಲೂ ದುಡಿದರು. ಸಣ್ಣ ಮಕ್ಕಳಿಗಾಗಿ 'ರೂಟ್ ಬಾಗ್ ಕಥೆಗಳು' ಎಂಬ ಕೃತಿಯನ್ನು ಬರೆದರು. ಅಮೇರಿಕನ್ನರಿಗೂ ಪ್ರಪಂಚದ ಪುರೋಗಾಮಿಗಳಿಗೂ ಪ್ರಿಯರಾದ ಈ ಕವಿಯು ಕಾವ್ಯ, ಇತಿಹಾಸ, ಜೀವನ ಚರಿತ್ರೆ, ಕಥೆ ಮತ್ತು ಸಂಗೀತವೆಂಬ ಐದು ಕ್ಷೇತ್ರಗಳಲ್ಲಿ ದುಡಿದು ಯಶಸ್ಸು ಹಾಗೂ ಕೀರ್ತಿ ಸಂಪಾದಿಸಿದರು. ಕಳೆದ ಐವತ್ತು ವರ್ಷಗಳಲ್ಲಿ, ಅಮೆರಿಕದಲ್ಲಿ ಜರುಗಿದ ಎಲ್ಲ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಹಾಗೂ ಸಾಹಿತ್ಯಕ ಪಲ್ಲಟಗಳನ್ನೆಲ್ಲ, ಕಾರ್ಲ್ ಸ್ಯಾಂಡ್‌ಬರ್ಗರು ತಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಈ ಕವಿಯು ಅಮೇರಿಕನ್ನರಿಗೆ ರಾಷ್ಟ್ರೀಯ ಹೆಮ್ಮೆಯಾಗಿದ್ದಾರೆ. ಏಕೆಂದರೆ ಇವರು ಅಮೆರಿಕದ ಚರಿತ್ರೆಯಲ್ಲಿ ಉಜ್ವಲವಾಗಿ ಬೆಳಗಿದ ಅಬ್ರಹಾಮ್ ಲಿಂಕನ್ನರ ಅಮೋಘ ಜೀವನ ಕಥೆಯನ್ನು ಆರು ಸಂಪುಟಗಳಲ್ಲಿ ಬರೆದಿದ್ದಾರೆ. ಅಬ್ರಹಾಮ್ ಲಿಂಕನ್ನರು, ವರ್ಣದ್ವೇಷ ಹಾಗೂ ಶೋಷಣೆಯ ವಿರುದ್ಧ ಹೋರಾಡಿ, ಮಾನವರ ಸಮಾನತೆ ಹಾಗೂ ಘನತೆಗಳನ್ನು ಎತ್ತಿ ಹಿಡಿದರು. ಮಾನವ ಸ್ವಾತಂತ್ರ್ಯ ಹಾಗೂ ಗೌರವಗಳಿಗೆ ಹೋರಾಡಿ ಪ್ರಾಣತೆತ್ತ ಲಿಂಕನ್ನರು, ಕಾರ್ಲ್ ಸ್ಯಾಂಡ್‌ಬರ್ಗರಿಗೆ ತುಂಬ ಪ್ರಿಯರಾಗಿದ್ದರು. ಸ್ಯಾಂಡ್‌ಬರ್ಗ್ ಬರೆದ ಲಿಂಕನ್ನರ ಚರಿತ್ರೆ ಎಷ್ಟು ಜನಪ್ರಿಯವಾಯಿತೆಂದರೆ, ಅಮೇರಿಕದ ಪ್ರತಿನಿಧಿಗಳ ಕಾಂಗ್ರೆಸ್ಸು ೧೯೫೯, ಫೆಬ್ರುವರಿ ೧೨ರಂದು ಕಾರ್ಲ್ ಸ್ಯಾಂಡ್‌ಬರ್ಗರನ್ನು ಕರೆಸಿಕೊಂಡು, 'ಅಮೋಘ ವ್ಯಕ್ತಿಯ ಅಮೋಘ ಚರಿತ್ರೆ' ಬರೆದದ್ದಕ್ಕೆ, ರಾಷ್ಟ್ರೀಯ ಗೌರವವನ್ನು ಸಲ್ಲಿಸಿತು. ಲಿಂಕನ್ ಜನ್ಮದ ೧೫೦ನೆ ವರ್ಷದ ಉತ್ಸವ ಸಂದರ್ಭದಲ್ಲಿ, ತನಗೆ ನೀಡಿದ ಗೌರವಕ್ಕೆ ಕೃತಜ್ಞತೆ ಸಲ್ಲಿಸುತ್ತ, ಕಾರ್ಲ್ ಸ್ಯಾಂಡ್‌ಬರ್ಗ್ ಹೇಳಿದರು: "ಮಾನವನ ಚರಿತ್ರೆಯಲ್ಲಿ ಇಂಥ ಇನ್ನೊಬ್ಬರು ಸಿಗುವದು ವಿರಳ. ಅಬ್ರಹಾಮ್ ಲಿಂಕನ್ ಉಕ್ಕಿನಹಾಗಿದ್ದರು. ಕಿನ ಕಾಪಿನಂತೆ ಇದ್ದರು. ಬಂಡೆಯಂತೆ ಕಠೋರವಾಗಿದ್ದರು. ತೆವಳುವ ಮಂಜಿನಂತೆ ಮೃದುವಾಗಿದ್ದರು. ಅವರು, ತನ್ನ ಹೃದಯದಲ್ಲೂ, ಮನಸ್ಸಿನಲ್ಲೂ, ಪ್ರಚಂಡ ಬಿರುಗಾಳಿಯನ್ನೂ, ಅನಿರ್ವಚನೀಯ ಪರಿಪೂರ್ಣ ಶಾಂತಿಯನ್ನೂ ಹಿಡಿದಿಟ್ಟುಕೊಂಡಿದ್ದರು." ಆ ದಿನಗಳಲ್ಲಿ ಸ್ಯಾಂಡ್‌ಬರ್ಗ್, ಸದಾ ಲಿಂಕನ್ನರ ಸ್ಮರಣೆಯಿಂದ ತುಂಬಿ ಹೋಗಿದ್ದರು.

ಕಾವ್ಯವು ಬರಿಯ ಛಂದಸ್ಸು ಅಲಂಕಾರಗಳನ್ನು ಪರಿಣಾಮಕರವಾಗಿ ಬಳಸುವ ಶಬ್ದಗಳ ಕಸರತ್ತಲ್ಲ. ಬದುಕಿನ ಹೋರಾಟದಲ್ಲಿ ಜನರಿಗೆ ಅದು ಸ್ಥೈರ್ಯವನ್ನು ಕೊಡಬೇಕು. ಅವರ ಹೋರಾಟಗಳನ್ನು ಅರ್ಥಪೂರ್ಣಗೊಳಿಸುವಲ್ಲಿ ಅದು ನೆರವಾಗಬೇಕು. ಸ್ಯಾಂಡ್‌ಬರ್ಗರ ಕಾವ್ಯವು ಇಂಥ ವರ್ಗಕ್ಕೆ ಸೇರಿದೆ. ಉದ್ಯಮಗಳು ಬೆಳೆದಂತೆ, ನಗರಗಳೂ ಬೆಳೆದವು. ನಗರಗಳು ಬೆಳೆದಂತೆ ಬದುಕಿನ ಸರಳತೆ, ಶಾಂತಿ ಹಾಗೂ ಸ್ವಚ್ಛತೆಗಳು ಕಣ್ಮರೆಯಾದವು. ವಾಣಿಜ್ಯ ವಿಸ್ತರಿಸಿದಂತೆ, ಮೌಲ್ಯಗಳು ಕುಸಿದವು. ಹಣ ಗಳಿಸುವ ಆತುರದಲ್ಲಿ ಸಂಬಂಧಗಳು ಕಡಿದುಬಿದ್ದವು. ಸುಲಿಗೆಯು ಸಾಮಾನ್ಯಗೊಂಡಾಗ, ದಯೆ, ಪ್ರೇಮ, ಸ್ನೇಹ ಹಾಗೂ ಸಜ್ಜನಿಕೆಗಳು ಉಧ್ವಸ್ತಗೊಂಡವು. ಅನ್ನ ಹಾಗೂ ಕೆಲಸಗಳನ್ನು ನೀಡಬಲ್ಲ ವ್ಯವಸ್ಥೆಯಲ್ಲಿ, ಕರುಣೆ ಹಾಗೂ ಪ್ರೀತಿಗಳು ಬಾಡುತ್ತಿರುವದೇ ಇಲ್ಲಿಯ ದುರಂತವಾಗಿದೆ. ಇಂಥ ದುರಂತದ ಚಿತ್ರಗಳನ್ನು, ಕಾರ್ಲ್ ಸ್ಯಾಂಡ್‌ಬರ್ಗ್ ತಮ್ಮ ಕಾವ್ಯದಲ್ಲಿ ಪರಿಣಾಮಕಾರಿಯಾಗಿ ಮೂಡಿಸಿರುವರು. 'ಮ್ಯಾಗ್' ಎಂಬ ಕವಿತೆಯ ಈ ಸಾಲುಗಳನ್ನು ನೋಡಿರಿ.

ನನಗನಿಸುತ್ತದೆ, ಮಕ್ಕಳಾಗದಿದ್ದರೇನೆ
ಚೆನ್ನಾಗಿತ್ತು.
ಬಾಡಿಗೆ, ಕಲ್ಲಿದ್ದಲು, ಬಟ್ಟೆಗಳು,
ಇರದಿದ್ದರೇ ಚೆನ್ನಾಗಿತ್ತು
ಬಾಕಿ ವಸೂಲಿಗೆ ಬರುವ ದಿನಸಿ
ಅಂಗಡಿಯವನೂ ಬೇಡಾಗಿತ್ತು.
ಕಾಳುಗಳಿಗೆ, ತಿಂಡಿತಿನಸುಗಳಿಗೆ ದಿನಾಲು
ಹಣ ಬೇಕು.
ದೇವರಾಣೆಗೂ, ಮ್ಯಾಗ್, ನಿನ್ನನ್ನು
ನೋಡಿರಬಾರದಿತ್ತು,
ದೇವರಾಣೆಗೂ, ಮಕ್ಕಳು ಇಲ್ಲದಿದ್ದರೇ
ಚೆನ್ನಾಗಿತ್ತು.

ಹಣದ ಅಭಾವದಿಂದ ಪ್ರೀತಿಯು ಬತ್ತಿ ಹೋಗಿದೆ. 'ಶಿಕಾಗೊ' ಸಂಕೇತವಾಗಿರುವ ಔದ್ಯೋಗಿಕ ಸಮಾಜವು ಮಾನವೀಯ ಮೌಲ್ಯಗಳನ್ನು ಮುಳುಗಿಸಿಬಿಟ್ಟಿದೆ. ದಿನದ ವ್ಯವಹಾರಗಳಲ್ಲಿ, 'ಶೋಷಣೆ'ಯೆಂಬ ಹೊಸ ಬಗೆಯ 'ನಿರ್ಲಕ್ಷ್ಯ'ವನ್ನು ಬಿತ್ತಿ ಬೆಳೆಸಿದೆ. ಇಂಥ ನಿಷ್ಕರುಣ ವ್ಯವಸ್ಥೆಯಲ್ಲಿ, ನಿಷ್ಕರಣ ಸಾವು ನೋವುಗಳಿಗೂ, ಬದುಕಿನ ಸಂಕೇತಗಳಿಗೂ, ಯಾವ ಬೆಲೆಯೂ ಇಲ್ಲ. ಫ್ಯಾಕ್ಟರಿಗೆ ಬೆಂಕಿ ಬಿದ್ದಾಗ, ಆರು ಮಾಳಿಗೆಗಳಿಂದ ಹಾರಿಕೊಂಡು ತೀರಿ ಹೋದ ಹುಡುಗಿಯ ಬಗ್ಗೆ ಇಲ್ಲೊಂದು ಪದ್ಯ:

ಅನಾ ಇಮರಾಥ,
ಎದೆಯ ಮೇಲಲ್ಲಿ ಕೈಗಳನ್ನು ಮಡಿಚಿರಿ -
ಹೀಗೆ,
ಕಾಲುಗಳನ್ನು ಕುಸು ಇನ್ನಷ್ಟು
ನೆಟ್ಟಗಾಗಿಸಿರಿ – ಹೀಗೆ,
ಮತ್ತು ವಾಹನವನ್ನು ತರಹೇಳಿರಿ,
ಅವಳನ್ನು ಮನೆಗೊಯ್ಯಲು.
ಅವಳ ತಾಯಿ ಇಷ್ಟು ಅಳುವಳು,
ಸೋದರಿಯರು, ಸೋದರರು.
ಆದರೆ ಮಿಕ್ಕವರು ಪಾರಾಗಿ, ಸುರಕ್ಷಿತ
ಕೆಳಗಿಳಿದರು.

ಬೆಂಕಿ ಹತ್ತಿದಾಗ, ಫ್ಯಾಕ್ಟರಿಯ
ಹುಡುಗಿಯರಲ್ಲಿ,
ಹಾರಿಕೊಳ್ಳುವಾಗ ದುರ್ದೈವಿಯಿದ್ದವಳು
ಇವಳೊಬ್ಬಳೇ.
ಎಲ್ಲ ದೇವರಾಟ ಮತ್ತು ಬೆಂಕಿಯಿಂದ
ಪಾರಾಗಲು,
ಸೌಲಭ್ಯದ ಅಭಾವ.

ಇನ್ನೊಂದು ದಾರುಣ ಪದ್ಯದಲ್ಲಿ, ಮಗು ತೀರಿದಾಗ, ಬಡ ತಾಯಿ ತಂದೆಗಳು ಇನ್ನು ಮೇಲೆ ಡಾಕ್ಟರರ ಬಿಲ್ಲು ಕೊಡಬೇಕಾದ ಪರಿಸ್ಥಿತಿ ಬರದು ಎಂದು ತಮ್ಮಷ್ಟಕ್ಕೇ ಸಂತೈಸಿಕೊಳ್ಳುವುದನ್ನು ವರ್ಣಿಸಿದ್ದಾರೆ. ಸ್ಯಾಂಡ್‌ಬರ್ಗ್ ಕವಿತೆಯಲ್ಲಿ, ಹಳ್ಳಿಗಾಡಿನ ಬದುಕು ಹೊಂದುತ್ತಿರುವ ವಿಕಾರವಾದ ಬದಲಾವಣೆಗಳನ್ನೂ, ಸಾಮಾಜಿಕ ಸಮಕಳಿಯನ್ನೂ ಚೆನ್ನಾಗಿ ಚಿತ್ರಿಸಿದ್ದಾರೆ. ಇನ್ನೊಂದು ಪದ್ಯದಲ್ಲಿ, ಸುಂದರಿ ಚಿಕ್ ಲಾರಿಮರ್, ತನ್ನ ಸಾಮಾನುಗಳನ್ನು ಚೀಲದಲ್ಲಿ ತುಂಬಿಕೊಂಡು ಶಿಕಾಗೋಕ್ಕೆ ಹೋದಳಲ್ಲ? ಅವಳು ಎಲ್ಲಿ ಹೋದಳು? ಮರಳಿ ಏಕೆ ಬರಲಿಲ್ಲ? ಎಂದು ಕೇಳಿದ್ದಾರೆ. ಮಾಗಿಯ ಬಂಗಾರದಲ್ಲಿ, ಹಳದಿ ಎಲೆಗಳನ್ನು ತುಳಿಯುತ್ತ, ವಾಲ್‌ನಟ್ ಗಿಡಗಳಿಗೆ ಕೋಲೆಸೆಯುತ್ತಿದ್ದ, ಹುಡುಗರೆಲ್ಲ ಎಲ್ಲಿ ಹೋದರು? ಎನ್ನುತ್ತಾರೆ. ಆ ಪದ್ಯದಲ್ಲಿ ಬರುವ ಈ ಸಾಲುಗಳನ್ನು ನೋಡಿರಿ:

ಕಾಯಿಗಳು ಪಾಡಿಗೆ ತಿರುಗುವಾಗಿನ
ಆ ಧ್ವನಿಗಳನ್ನು
ನಾನು ನೆನೆಯುತ್ತೇನೆ ಮತ್ತು ಕೆಲವರು,
ಮಶಿನ್
ಶಾಪಿನಲ್ಲಿದ್ದಾರೆ. ಕೆಲವರು ಹಡಗು
ಪಡೆಯಲ್ಲಿ, ಮತ್ತೆ
ಕೆಲವರು ಯಾವ ಸಂಬಳದ
ರಜಿಸ್ಟ್ರಿಯಲ್ಲೂ ಇಲ್ಲ.
ಅವರ ತಾಯಿಂದಿರು ಕಾದು-ಕಾದು
ಸೊರಗಿದ್ದಾರೆ.

ಅವರೊಂದಿಗೆ ಮನೆಗೆ ಮರಳಿ
ಬರುವವರೆಂದು.

ಇನ್ನೊಂದು ಪದ್ಯದಲ್ಲಿ ಸ್ಯಾಂಡ್‌ಬರ್ಗ್, ಸವ ವರ್ಗಭೇದಗಳನ್ನು ಹೀಗೆ ಚಿತ್ರಿದ್ದಾರೆ.

ನಾನು ನನ್ನನ್ನ ಕೊಂದುಕೊಳ್ಳಲು
ಯೋಚಿಸಿದೆ.
ಏಕೆಂದರೆ, ನಾನೊಬ್ಬ ಬರಿಯ ಇಟ್ಟಿಗೆ
ಏರಿಸುವ ಉಪ್ಪಾರ
ಮತ್ತು ನೀನು, ಒಂದು ಡ್ರಗ್ ಸ್ಟೋರ್
ನಡೆಸುವವನನ್ನು
ಪ್ರೀತಿಸುವ ಹೆಂಗಸು.

ಕಾರ್ಲ್, ಔದ್ಯೋಗಿಕ ಸಮಾಜದ ಇಂಥ ಚಿತ್ರಗಳನ್ನು ನೀಡಿದ್ದರೂ, ಅದರ ಕುರಿತು ಅವರಿಗೆ ತಿರಸ್ಕಾರವೇನಿಲ್ಲ. ಏಕೆಂದರೆ ಅದು ಹೊಸ ಬದುಕನ್ನು, ಸಾಧನೆಗಳನ್ನು, ಕಂಡಿದೆ. 'ಎತ್ತರದ ಸಾಧನೆಗಳ ನೆಟ್ಟಗಿನ ಲಿಪಿ'ಗಳನ್ನು ಬರೆದಿದೆ. 'ತಾರೆಗಳ ಹಾಗೂ ದಾರಿಗಳ ಬದಲಾಗುವ ಬೆಳ್ಳಿಯ ತ್ರಿಕೋನಗಳನ್ನು' ನಿರ್ಮಿಸಿದೆ. ಹಳೆಯದು ಕಣ್ಮರೆಯಾದರೂ ಕಾಲವು ಕ್ಷಣಕ್ಷಣಕ್ಕೆ ಹೊಸದಾಗಿದೆ. ಇನ್ನೊಂದು ಪದ್ಯದಲ್ಲಿ ರೈಲುಕಂಬಿಯ ಕೆಲಸಗಾರ ಜಾಕ್‌ನನ್ನು ಕುರಿತು ಹೇಳುತ್ತಾರೆ.

ಜಾಕ್, ಅನಾಥ ಗೃಹದಲ್ಲಿ ಸಾಯು
ಬಹುದು
ಬಿಸಿಲಲ್ಲಿ ಬೆಂಚಿನ ಮೇಲೆ ಕೂತು
ಹೆಂಗಸರನ್ನು
ಕಳೆದುಕೊಂಡ, ಮಕ್ಕಳೆಲ್ಲೋ ಚೆದುರಿದ
ಉಳಿದ ಮುದುಕರಿಗೆ, ತನ್ನ
ಸ್ಮೃತಿಗಳನ್ನು
ಹೇಳುತ್ತ, ಆದರೆ, ಅವನು ಬದುಕಿದ್ದಾಗ
ಯಾವ
ಸಂತೋಷ ಮುಖದಲ್ಲಿತ್ತೋ, ಅದೇ
ಸಂತೋಷವು
ಸಾಯುವಾಗಲೂ ಇರುವದು.

ಸ್ಯಾಂಡ್‌ಬರ್ಗ್ ಕವಿತೆಗಳ ಭಾವನೆಗಳ ನೆಯ್ಗೆಯಲ್ಲಿ ವೈವಿಧ್ಯವಿರುತ್ತದೆ. ಭಾಷೆಯು ಗ್ರಾಮ್ಯದ ಅಂಚಿನಲ್ಲೇ ಇರುತ್ತದೆ. ಸುಮಾರಾಗಿ ಸಂಭಾಷಣೆಯ ಧಾಟಿಯಲ್ಲೇ ಸಾಗುತ್ತದೆ. ಆದರೆ ಅಲ್ಲಿಯ ವರ್ಣಗಳ ವೈಭವ ಚನ್ನಾಗಿರುತ್ತದೆ. ಅವರ ಪದ್ಯಗಳಲ್ಲಿ ಟ್ರಾಫಿಕ್ ಪೋಲೀಸನು 'ನೀಲಿಯ ಗುರುತು' ಆಗುತ್ತಾನೆ. ತುಂಡು ನೆಲದಲ್ಲಿದ್ದ ಐದು ಚಳಿ ಮಳೆಗಳು 'ಒಂದು ಕೊಳಿವೆಯಿಂದ ಉರುಳಿಸಿದ ಐದು ಬಿಳಿ ದಾಳ'ಗಳಂತೆ ಕಾಣುತ್ತವೆ. ಮಕ್ಕಳು ಆಡುತ್ತಾರೆ. ಕೇರಿಯಲ್ಲಿ ಸ್ವರ್ಗವಿರುತ್ತದೆ. ಶಿಕಾಗೊ ಕವಿತೆಗಳಲ್ಲಿ ಸಮಾಜವಾದ ತುಂಬಿದ್ದರೆ, 'ಕಾರ್ನ್ ಬಸ್ಕರ್ಸ್'ದಲ್ಲಿ ಕಷ್ಟಗಳೊಂದಿಗೆ ಬಾಳಿದವರ ಬದುಕಿನ ವಿಷಾದ ತುಂಬಿದೆ. ೧೯೩೬ರಲ್ಲಿ ಪ್ರಕಟವಾದ 'ದಿ ಪೀಪಲ್-ಯಸ್'ದಲ್ಲಿ ಕಾರ್ಲ್ ಸ್ಯಾಂಡ್‌ಬರ್ಗ್ ಜನತೆಯೊಂದಿಗೆ ಸಂಬದ್ಧಗೊಂಡ ಧ್ವನಿಯಾದರು. ಈ ಸಂಬಂಧ ಬರಿಯ ರಾಜಕೀಯದ್ದಿರದೆ, ಆಧ್ಯಾತ್ಮಿಕವೂ ಇತ್ತು. ಅಂತೆಯೆ ಈ ಕಾವ್ಯ ಧ್ವನಿಯಲ್ಲಿ ಕೋಮಲತೆಯೂ ಇದೆ. ಕಠೋರತೆಯೂ ಇದೆ. ಇದರಲ್ಲಿ ಒಟ್ಟು ೧೦೭ ಪದ್ಯಗಳಿರುತ್ತವೆ. ಇಲ್ಲಿ ನಾಟಕೀಯ ಘಟನೆಗಳಿವೆ. ಸ್ವಗತದಲ್ಲಿ ಹೇಳಿದ ಚರಿತ್ರೆಯೂ ಇದೆ. ಇಲ್ಲಿ ಕವಿ ಪ್ರೇಮ, ಸಾವು, ಬದುಕು ಮತ್ತು ಕೆಲಸಗಳನ್ನು ಕುರಿತು ಬರೆದಿದ್ದಾನೆ. ರಾಜಕೀಯ ಹಾಗೂ ಸಾಮಾಜಿಕ ಧ್ವನಿಗಳೂ ಅಲ್ಲಲ್ಲಿ ನುಸುಳಿ ಬರುತ್ತವೆ, ಅಲೆಯೆಬ್ಬಿಸುತ್ತವೆ. 'ನ್ಯೂ ಹ್ಯಾಂಪ್‌ಶಾಯರ್ ಅಗೇನ್' ಎಂಬ ಪದ್ಯದಲ್ಲಿ ಕಾರ್ಲ್ ಅಮೆರಿಕದ ಇನ್ನೊಬ್ಬ ಕವಿ ರಾಬರ್ಟ್ ಫ್ರೋಸ್ಟ್‌ನನ್ನು ಕುರಿತು ಬರೆದ ಈ ನೋಡಿರಿ.

ನನಗೆ ನೆನಪಿದೆ, ಒಬ್ಬ ರಾಜಕೀಯದ
ಹುಡುಗಿ
ಹೇಳುತ್ತಿದ್ದದ್ದು. ಅವಳ ತಂದೆಯು
'ರಾಬರ್ಟ್ ಫ್ರೋಸ್ಟ್', ನ್ಯೂ
ಹ್ಯಾಂಪ್‌ಶಾಯರ್

ಎಂಬ ವಿಳಾಸ ಹೊತ್ತ, ಪತ್ರಗಳನ್ನು ಪಡೆಯುತ್ತಾರೆಂದು.
ನನಗೊಂದು ಹಳೆಯ ಐರಿಷ್ ಗಾದೆ ನೆನಪಾಗಿದೆ, "ಅವನ ಮುಖವು ಒಂದು ಪಿಟೀಲಿನಹಾಗಿದೆ, ಮತ್ತು ಅವನನ್ನು ಕಂಡವರೆಲ್ಲರೂ ಪ್ರೀತಿಸುತ್ತಾರೆ"

ಒಮ್ಮೆ ಕಾರ್ಲ್ ವಿನೋದವಾಗಿ ಹೇಳಿದರು, "ನನಗೂ, ಹಾಗೂ ದಾಂತೆ, ಮಿಲ್ಟನರಿಗೂ ಒಂದು ಸಣ್ಣ ಭೇದವಿದೆ. ಅವರು ನರಕದ ಬಗ್ಗೆ ಬರೆದರು. ಆದರೆ ಅದನ್ನು ಅವರೆಂದೂ ಕಂಡಿದ್ದಿಲ್ಲ. ನಾನು ಶಿಕಾಗೋವನ್ನು ಅನೇಕ ವರ್ಷ ಕಂಡಿದ್ದೇನೆ ಹಾಗು ಬರೆದಿದ್ದೇನೆ." ಔದ್ಯಮಿಕ ಪ್ರಗತಿ ಹಾಗೂ ಲೌಕಿಕ ಸಂಪತ್ತಿನಿಂದ ಸಮೃದ್ಧಗೊಂಡ ನಗರಗಳನ್ನೆಲ್ಲ, ನರಕಗಳನ್ನಾಗಿ ಪರಿವರ್ತಿಸಿದ್ದು, ಶೋಷಣೆಯ ನಿಷ್ಕರುಣ ವ್ಯವಸ್ಥೆಯಾಗಿದೆ. ಅಂತೆಯೆ, ಬಾಲ್ಯದಿಂದಲೂ ಸ್ಯಾಂಡ್‌ಬರ್ಗ್ ಸಮಾಜವಾದಿ ನಿಷ್ಠೆಯುಳ್ಳವರಾಗಿದ್ದರು. ಕಾರ್ಮಿಕರ ಸಂಘಟನೆಯಲ್ಲಿ ಶ್ರದ್ಧೆಯಿಂದ ದುಡಿದರು. ಅಂದಿನ ಪ್ರಮುಖ ಸಮಾಜವಾದಿ ಧುರೀಣರೆಲ್ಲರೂ ಕಾರ್ಲನ ಸ್ನೇಹಿತರಾಗಿದ್ದರು. ಜಾಕ್ ಲಿಂಡನ್, ಯುಜೀನ್ ಡೆಬ್ಸ್ ಮೊದಲಾದವರು ಬರೆಯುತ್ತಿದ್ದ 'ಸೋಶ್ಯಲಿಸ್ಟ್ ರಿವ್ಯೂ' ದಲ್ಲಿ ಕಾರ್ಲ್‌ರೂ ಒಬ್ಬ ಲೇಖಕರಾಗಿದ್ದರು. ಫ್ಯಾಸಿಸ್ಟ್ ವಿರೋಧಿಯಾಗಿದ್ದ ಕಾರ್ಲ್ ಸ್ಯಾಂಡ್‌ಬರ್ಗ್, ಬಡವರಲ್ಲಿ ತೀರ ಬಡವರಿಗೂ ಸ್ವಾತಂತ್ರ್ಯ ಹಾಗೂ ಸುಖಗಳನ್ನು ಕಲ್ಪಿಸುವ ಪ್ರಜಾಪ್ರಭುತ್ವದ ಕೈವಾರಿಯಾಗಿದ್ದರು. ತಮ್ಮ ಕಾಲೇಜು ದಿನಗಳಿಂದಲೂ ಕಾರ್ಲ್ ಪತ್ರಿಕೋದ್ಯಮದಲ್ಲಿ ಆಸಕ್ತಿ ಹೊಂದಿದ್ದರು. ಅವರು ಬೇರೆ ಬೇರೆ ಪತ್ರಿಕೆಗಳಲ್ಲಿ ವರದಿಗಾರರಾಗಿ, ಅಂಕಣ ಬರಹಗಾರರಾಗಿ. ಸಂಪಾದಕರಾಗಿ ದುಡಿದು ಅಪಾರ ಅನುಭವ ಹೊಂದಿದರು. ಅವರು ಸದಾಕಾಲವೂ ವೃತ್ತಿಬಂಧುಗಳ, ದುಡಿಯುವ ಜನರ ಹಾಗೂ ಅನ್ಯಾಯಕ್ಕೆ ಬಲಿಯಾದವರ ಪರವಾಗಿಯೆ ತಮ್ಮ ಲೇಖನಿಯೆತ್ತಿದರು. ವರ್ಣದ್ವೇಷ ಉಲ್ಬಣಗೊಂಡು, ಗಲಭೆಗಳಾದಾಗ ಅವರು, ನಿಗ್ರೋಗಳು ಸಮಾನತೆಗಾಗಿ ನಡೆಸಿದ ಹೋರಾಟವನ್ನು ಬೆಂಬಲಿಸಿ ವರದಿಮಾಡಿದರು. ದುಡಿಯುವ ಜನರು ಸಂಪು ಹೂಡಿದಾಗ, ಅವರ ಬೇಡಿಕೆಗಳು ನ್ಯಾಯಯುತವಾಗಿವೆಯೆಂದು ವಾದಿಸಿದರು. ಪತ್ರಿಕೆಯಲ್ಲಿ ದುಡಿಯುತ್ತಿದ್ದ ವೃತ್ತಿಬಂಧುಗಳು ಹಾಗು ರಾಜಕೀಯ ಮಿತ್ರರು, ನ್ಯಾಯಾಲಯದ ಕೇಸುಗಳಲ್ಲಿ ತೊಡಕಿಕೊಂಡಿದ್ದರೆ, ಕಾರ್ಲ್, ಅವರಿಗೆ ಜಾಮೀನು ನೀಡುತ್ತಿದ್ದರು ಹಾಗೂ ಬಿಡುಗಡೆಗೊಳಿಸಲು ನೆರವಾಗುತ್ತಿದ್ದರು. ಡೇಬುಕ್, ಡೇಲಿ ನ್ಯೂಜ್, ವರ್ಲ್ಡ್, ದಿ ಲೀಡರ್, ದಿ ನೇಶನ್ ಮೊದಲಾದ ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಇಲಿನಾಯ್‌ದ ಗಣಿ ಕೆಲಸಗಾರರನ್ನು ಸಂದರ್ಶಿಸಿ, ಅವರ ಹೋರಾಟವು ನ್ಯಾಯಯುತವಾದುದೆಂದು ತಮ್ಮ



"ಸ್ವಚ್ಛ ಆಡಳಿತ ನಡಸ್ತೀನಿ ಅಂತ ಮುಂಚೆ ಹೇಳಿ ಸೋತ್ಮೇಲೆ ಅದರರ್ಥಾನ ಹುಡುಕ್ತಿದೀರಾ?"

ಅಂತರ

ಅಡವಿಯನ್ನೇ ಹೊತ್ತು ನಿಂತ-
ಪೊಡವಿ ಬೇಸರವ
ಸೂಚಿಸಿದ್ದಿಲ್ಲ !

ಕೊಡವನ್ನು ಹೊತ್ತು ನಿಂತ-
ಬೆಡಗಿ ಬಾಯ್ಮಾಡಿದ್ದಾಳೆ
ಎಷ್ಟೆಲ್ಲಾ?

—ದೊಡ್ಡ ರಂಗೇಗೌಡ

ವರದಿಗಳಲ್ಲಿ ಅವರು ವಾದಿಸಿದರು. ಹೀಗೆ ಕಾರ್ಲ್ ಸ್ಯಾಂಡ್‌ಬರ್ಗ್, ಘಟನೆಗಳನ್ನೆಲ್ಲ ವಿಶ್ಲೇಷಿಸಿ ಕವಿಯಾಗಿ ವರದಿ ಮಾಡುತ್ತಿದ್ದರು.

ಕಾರ್ಲ್ ಸ್ಯಾಂಡ್‌ಬರ್ಗ್, ಕಾಲದೊಂದಿಗೆ, ಸಮಕಾಲೀನ ಬದುಕಿನೊಂದಿಗೆ, ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡು ಎಂದಿಗೂ ಜನಪರವಾಗಿದ್ದರು. ಅಂತೆಯೆ ಅವರಿಗೆ ಹಲವಾರು ಪ್ರಶಸ್ತಿಗಳೂ ಪುರಸ್ಕಾರಗಳೂ ಗೌರವಗಳೂ ತಾವಾಗಿ ಬಂದವು. ಕಾಂಗ್ರೆಸ್ಸು ಅವರನ್ನು ಆಹ್ವಾನಿಸಿ ಗೌರವಿಸಿತು. ಮೂರು ಬಾರಿಗೆ ಪುಲಿಟ್ಜರ್ ಬಹುಮಾನಗಳು ಅವರಿಗೆ ಕೊಡಲ್ಪಟ್ಟವು. ೧೯೫೮ರಲ್ಲಿ ರ್‍ಯಾಲಿಯಲ್ಲಿ ಅವರಿಗೆ ಸತ್ಕಾರವಿತ್ತು 'ಗೌರವ ರಾಯಭಾರಿ'ಯೆಂದು ಪದವಿಯನ್ನು ಕೊಡಲಾಯಿತು. ಅನೇಕ ಪತ್ರಿಕೆಗಳು ಅವರು ಬರೆದ ಪದ್ಯಗಳನ್ನು ಸಾವಿರ ಡಾಲರಗಳನ್ನಿತ್ತು ಪ್ರಕಟಿಸಲು ಆತುರಪಡುತ್ತಿದ್ದವು. ೧೯೫೯ರಲ್ಲಿ ಸ್ವೀಡನ್ನಿನ ದೊರೆ ಗುಸ್ತಾವ್-V, ಕಾರ್ಲ್‌ಸ್ಯಾಂಡ್‌ಬರ್ಗರಿಗೆ ಬಂಗಾರದ ಪದಕವಿತ್ತು ಸತ್ಕರಿಸಿದನು. ಆರು ಪ್ರೌಢ ಶಾಲೆಗಳು ಹಾಗು ಐದು ಪ್ರಾಥಮಿಕ ಶಾಲೆಗಳು ಕಾರ್ಲ್ ಸ್ಯಾಂಡ್‌ಬರ್ಗರ ಹೆಸರನ್ನು ಹೊಂದಿ ಅವರ ಕಾವ್ಯಪ್ರತಿಭೆಯನ್ನು ಗೌರವಿಸಿವೆ. ಸ್ಯಾಂಡ್‌ಬರ್ಗ್ ಒಮ್ಮೆ ರಶಿಯಕ್ಕೆ ಹೋಗಿದ್ದರು. ಅಲ್ಲಿಯ ಸ್ನೇಹಿತರು, ಅವರ ಅಪೇಕ್ಷೆಯಂತೆ ಒಂದು ಆರು ತಂತಿಯ ಗಿಟಾರ್ ದೊರಕಿಸಿ ಅವರ ಕಾರ್ಯಕ್ರಮವೊಂದನ್ನು ಏರ್ಪಡಿಸಿದ್ದರು. ಕಾರ್ಲ್ ನೆರೆದ ಸಭಿಕರನ್ನು ನೋಡುತ್ತ "ಕ್ಷಣಕಾಲ ಸ್ತಬ್ಧವಾಗಿರಿ, ನಿಮ್ಮ ಕಣ್ಣುಗಳನ್ನು ನೋಡುತ್ತೇನೆ" ಎಂದರು. ಆಮೇಲೆ, "ನಿಮ್ಮವು ಸ್ನೇಹಪೂರ್ವ ಕಣ್ಣುಗಳು. ಆದ್ದರಿಂದ ಹಾಡುತ್ತೇನೆ" ಎಂದು ಹೇಳಿ ತಮ್ಮ ಹಾಡುಗಳಿಂದ ಅವರನ್ನು ಸಂತೋಷಪಡಿಸಿದರು.

ಕಾರ್ಲ್ ಸ್ಯಾಂಡ್‌ಬರ್ಗ್, ಅಮೇರಿಕಕ್ಕೆ ಮಾತ್ರವಲ್ಲ, ಪ್ರಪಂಚಕ್ಕೆಲ್ಲ ಪ್ರಿಯವಾದ ಕವಿ. ಏಕೆಂದರೆ ಅವರು ಯಾವಾಗಲೂ ನೊಂದವರ ಪರವಾಗಿದ್ದರು. ಸ್ನೇಹದ ಕಣ್ಣುಗಳಿದ್ದಲ್ಲಿ, ತಮ್ಮ ಹಾಡುಗಳಿಂದ ತಣಿಸುತ್ತಿದ್ದರು. ಅವರು ೧೯೬೭ರಲ್ಲಿ, ತಮ್ಮ ೮೯ನೇ ವಯಸ್ಸಿನಲ್ಲಿ ತೀರಿಕೊಂಡಾಗ, ಪ್ರಪಂಚವು ಒಬ್ಬ ಶ್ರೇಷ್ಠ ಕವಿಯನ್ನು ಕಳೆದುಕೊಂಡಂತಾಯಿತು. ಸ್ಟೀಫನ್ ಬೆನೆಟ್ ಹೇಳಿದಂತೆ "ಅವರು ಜನರಿಂದ ಬಂದಿದ್ದರು. ತನ್ನ ಜೀವನವಿಡೀ ಪದ್ಯದಲ್ಲಿ, ಗದ್ಯದಲ್ಲಿ ಅವರು ಜನರ ಕುರಿತು, ಜನರಿಗಾಗಿ ಬರೆದರು. ಒಬ್ಬ ಶ್ರೇಷ್ಠ ಅಮೇರಿಕನ್ನರಾಗಿದ್ದ ಅವರು ನಮ್ಮ ಕಾಲದಲ್ಲಿ ಬದುಕಿದರು ಹಾಗೂ ಬರೆದರು ಎಂಬುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ.

(ವಿಶೇಷ ಸಂಚಿಕೆಗೆ ಆಮಂತ್ರಿತ ಲೇಖನ)

ಎತ್ತಣ ಮಾಮರ, ಎತ್ತಣ ಕೋಗಿಲೆ?... ಬೆಟ್ಟದ ನೆಲ್ಲಿಯ ಕಾಯಿ, ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧ?

—ಅಲ್ಲಮ ಪ್ರಭು

ಜೀವನ-ಸಂಧಿ

ಹೆರಿಗೆ ಮನೆಗೂ ಮಸಣವಾಟಿಕೆಗಂ ಮಧ್ಯದಲಿ
ಬದುಕೆಂಬ ಗೂಡುಂಟು; ಒಂದು ಕಡೆಗೆ
ಬರುವವನ ಚೀರಾಟ; ಇನ್ನೊಂದು ಕಡೆ ಕಳಿಸ-
ಬರುವವರ ಗೋಳಾಟವೆಲವೊ ಪೆಂಗೇ!

ಈ ನಡುವ ಸಂಧಿಯಲಿ ಅಳುವವರ ಸಂಗದಲಿ
ನೀ ಹಾಕು ಕಣ್ಣೀರ ನಾಲ್ಕು ಕಾಳು;
ನಗುವವರೊಡನೆ ಇಷ್ಟು ನಗು,- ಗಹಗಹಿಸಬೇಡ
ಗೋಳಾಡದಿರು ವಿದಕು ಎಲವೊ ಪೆಂಗೇ!

ಸತ್ತವನ ಜೊತೆಗೆ ನಾಲ್ಕಡಿ ಮಸಣದತ್ತ ನಡೆ;
ಹುಟ್ಟಿದಾತನ ನಾಮಕರಣದಲಿ ಸೇರು;
ಅವನ ಭಸ್ಮದ ರೇಣು ಇವನ ಮೈಯಿಂಗಾಲ-
ದಷ್ಟಂಶವಾಗಿಹುದೊ ಎಲವೊ ಪೆಂಗೇ.

ಅತ್ತು ಕರೆವುದಕಿಲ್ಲಿ ತಕ್ಕ ವಿಷಯಗಳಿಲ್ಲ-
ಸಾಕು ಕಂಗಳಲಿ ಸವಿಷಾದ ರೇಖೆ;
ಅಟ್ಟಹಾಸವ ಬೀಸುವಷ್ಟು ಮಜ ಇಲ್ಲಿಲ್ಲ-
ಸಾಕು ಮಸ್ಕೀರ ತುಟಿಯಲ್ಲೆಲವೊ ಪೆಂಗೇ.

ಸತ್ತವರಿಗತ್ತವರಿಗಾದುದು ವಿಯೋಗವೋ
ಬಿಡುಗಡೆಯೊ ಅಳುವವರಿಗೂ ಅರಿಯದಯ್ಯ
ಎಷ್ಟು ಪಾಡಿಕೆಯು ಕಣ್ಣೀರೊ ಎಷ್ಟೊಳಹಬೆಯೊ
ಏನಾದರು ಶರದ್ವೃಷ್ಟಿ ಎಲೊ ಪೆಂಗೇ.

ಸತ್ತವರ ಹೊತ್ತವರು ಮಸಣವಾಟಿಕೆಯಲ್ಲಿ
ಮಾಡುವ ವಿನೋದವನು ನೋಡಬಾರೋ!
ಸತ್ತಮನೆಯಲ್ಲಿ ಮರುದಿನ ಉಂಬ ರಾಪು ನೋ-
ಡೆತ್ತ ಮೃತ್ಯುವಿಗೆ ಜಯವೆಲವೊ ಪೆಂಗೆ?

-ಸಾ. ವೆಂ.


BINDU

ಧಾರವಾಡದ ವಕೀಲರು !

ಶ್ರೀನಿವಾಸ ಹಾವನೂರ

ಧಾರವಾಡದ ಯಾವ ಓಣಿಯನ್ನು ತೆಗೆದುಕೊಂಡರೂ, ಅಲ್ಲಿ ಒಬ್ಬನಾದರೂ ಸಾಹಿತಿ, ಒಬ್ಬನಾದರೂ ವಕೀಲ ವಾಸವಾಗಿದ್ದದ್ದು ಕಂಡುಬರುತ್ತದೆ. ಇದು ವಿನೋದೀ ಹೇಳಿಕೆಯೇನಲ್ಲ; ವಾಸ್ತವದ ಸಂಗತಿ. (ಇಬ್ಬರೂ ತಂತಮ್ಮ ಕ್ಷೇತ್ರಗಳಲ್ಲಿ ಜಗಳಕ್ಕೆ ಪ್ರಸಿದ್ಧರು!) ಸಾಹಿತಿಗಳು ಒಂದೆಡೆ ಕಲೆತು ಕೆಲಸ ಮಾಡುವ ಸಂದರ್ಭಗಳು ಕಡಮೆ. ಆದರೆ ನಗರದ ಎರಡು ಕೋರ್ಟುಗಳ ಆವಾರದಲ್ಲಿ ನಿಮಗೆ ವಕೀಲರ ಕರಿಯ ಕೋಟುಗಳು ಲೆಕ್ಕವಿಲ್ಲದಷ್ಟು ಸಿಗುತ್ತವೆ - ಕಕ್ಷಿಗಾರರಿಗಿಂತಲೂ ಹೆಚ್ಚಾಗಿ.

ಈ ವಕೀಲರ ಪೀಳಿಗೆಗೆ ಸುದೀರ್ಘವೆನಿಸುವ ಇತಿಹಾಸವಿದೆ. ಕ್ರಿ. ಶ. ೧೮೧೮ರಲ್ಲಿ ಬ್ರಿಟಿಶರು ಈಗಿನ ವಿಜಾಪುರ, ಬೆಳಗಾಂವಿ, ಧಾರವಾಡ ಜಿಲ್ಲೆಗಳ ಪ್ರದೇಶದಲ್ಲಿ ತಮ್ಮ ಆಡಳಿತವನ್ನು ಆರಂಭಿಸಿದಾಗ, ಭೂಮಿಯ ಒಡೆತನದ ವಿಷಯದಲ್ಲಿ ಸಾಕಷ್ಟು ಸಂದಿಗ್ಧತೆ, ತಿಕ್ಕಾಟಗಳು ಇದ್ದುವು. ಜೊತೆಗೆ ದೇಸಾಯಿ ಇನಾಂದಾರ ವರ್ಗದವರ ವತನೀ ವ್ಯಾಜ್ಯಗಳು. ಅವಾಗಿನಿಂದ ವಕೀಲಿ ವೃತ್ತಿ ಕ್ರಮೇಣ ಪ್ರಸಾರಗೊಂಡಿತು. ಶಿಕ್ಷಣ ವಿಚಾರದಲ್ಲಿ ಹೇಗೊ, ಹಾಗೆಯೇ ಕಾನೂನಿನ ವಿಚಾರದಲ್ಲಿಯೂ ಕೋರ್ಟುಗಳಲ್ಲಿ ಇಂಗ್ಲಂಡಿನ ಕ್ರಮವನ್ನೇ ರೂಢಿಸಲಾಯಿತು. ನ್ಯಾಯಾಧೀಶರು ಆಂಗ್ಲರು ತಾನೇ. ಅವರಿಗೆ ಅರ್ಥವಾಗುವ ರೀತಿಯಲ್ಲಿ ನ್ಯಾಯಮಂಡನೆಯಾಗಬೇಕು. ಹಾಗಾಗಿ ಪುಣೆ, ಮುಂಬಯಿಗಳಲ್ಲಿ ಲಾ ಕಾಲೇಜುಗಳು ಸ್ಥಾಪನೆಯಾದುವು. ದುಡ್ಡಿನ ಅನುಕೂಲತೆ ಇದ್ದ ಉತ್ತರ ಕರ್ನಾಟಕಸ್ಥರು (ಅನೇಕ ಹಳೆಯ ಮೈಸೂರಿಗರು ಸಹ) ಅಲ್ಲಿಗೆ ಹೋಗಿ ಕಲಿತು ಬಂದು, ವಕೀಲಿ ಬೋರ್ಡನ್ನು ಮನೆಯ ಮುಂದೆ ದೊಡ್ಡದಾಗಿ ತೂಗು ಹಾಕಿದರು. ಮುಂದಿನ ಒಂದು ಪೀಳಿಗೆಯೆಂಬಷ್ಟರಲ್ಲಿ ಧಾರವಾಡದ ವಕೀಲರು ಪ್ರಸಿದ್ಧರಾಗಿಬಿಟ್ಟರು. ಆ ಕಾಲದಲ್ಲಿ ಧಾರವಾಡವು ಮುಂಬಯಿ ಕರ್ನಾಟಕಕ್ಕೇನೆ ರಾಜಧಾನಿ ಆಗಿದ್ದಿತು. ಹೀಗಾಗಿ ಈ ಭಾಗದ ವಕೀಲಿಯ ಫಸಲಿಗೆ ಧಾರವಾಡವೇ ನರ್ಸರಿ ಆಗಿದ್ದಿತು.

(‘ವಿಶೇಷ ಸಂಚಿಕೆ’ಗೆ ಆಮಂತ್ರಿತ ಲೇಖನ)

ಈಗಿನವರು ಕಾನೂನಿನ ವಿಚಾರದಲ್ಲಿ ಮತ್ತು ಹಣ ಗಳಿಕೆಯಲ್ಲಿ ಹೆಚ್ಚು ನಿಷ್ಣಾತರಿರಬಹುದು. ಆದರೆ ಹಿಂದಿನವರ ವೈಭವ-ವೈಖರಿ ಇವರಿಗೆ ದಕ್ಕಿಲ್ಲ. ಆಗಿನವರ ದರ್ಪದ ಠೀವಿಯನ್ನು ನಾನು ಚಿಕ್ಕವನಿದ್ದಾಗ ತುಸು ಕಂಡಿದ್ದೇನೆ. ಹಳ್ಳಿಗರು ತಮ್ಮ ಜಮೀನುಗಳಲ್ಲಿ ಬೆಳೆದ ಕಾಳು-ಕಡಿ, ಕಾಯಿಪಲ್ಲೆ, ಮುಖ್ಯವಾಗಿ ಗಮ ಗಮಿಸುವ ತಾಜಾ ಬೆಣ್ಣೆ ತೆಗೆದುಕೊಂಡು ಹೋಗಬೇಕು. ಅದನ್ನೆಲ್ಲ ಒಳಗೆ ಸಾಗಿಸುತ್ತ 'ವಕೀಲಮ್ಮ' ಉಪಚಾರಕ್ಕೆ ಅವನ ಮನೆ ಜನರ ಯೋಗಕ್ಷೇಮವನ್ನು ವಿಚಾರಿಸಬೇಕು. ಆಮೇಲೆ ಈತ ಕಾರಕೂನನನ್ನು ತುಸು ಅನುನಯಿಸ ಬೇಕು. ವಕೀಲರು ಖುರ್ಚಿಯಲ್ಲಿ ಕುಳಿತ ಮೇಲೆ "ಯಪ್ಪಾ, ಯಪ್ಪಾ" ಅಂತ ಮೇಲಿಂದ ಮೇಲೆ ಉಚ್ಚರಿಸುತ್ತ ತನ್ನ ವ್ಯಾಜ್ಯವನ್ನು ವಿವರಿಸ ಬೇಕು. ಆಗ ವಕೀಲಪ್ಪನವರು ಅವನ ಮೇಲೆ 'ಮಿಹರ್ಬಾನಿಕೆ' ಮಾಡುವವರ ಹಾಗೆ ಕೇಸನ್ನು ಹಿಡಿಯಬೇಕು. ಮುಂದೊಂದು ದಿನ ಕೇಸಿನ ಮುದ್ದತು ಗೊತ್ತಾಗಿ, ಹಳ್ಳಿಗ ಮತ್ತೆ ಬಂದು ಅವರೊಡನೆ ಕೋರ್ಟಿಗೆ ಹೋಗುವಾಗ, ಅವರ ಬ್ಯಾಗನ್ನು ಹಿಡಿದುಕೊಂಡು ಹಿಂದೆ ವಿನೀತನಾಗಿ ಸಾಗಬೇಕು. ಕೋರ್ಟಿನಲ್ಲಿ ಅವರು ಇವನಿಗೆ ಅರ್ಥವಾಗದ ಇಂಗ್ಲಿಶ್‌ನಲ್ಲಿ ನಿರರ್ಗಳವಾಗಿ ಮಾತಾಡುತ್ತಿದ್ದಾಗ, ಈತ ತನ್ನ ಬಾಯಿ, ಕಣ್ಣುಗಳನ್ನು ತೆರೆದುಕೊಂಡೇ, ಬೆಕ್ಕಸ ಬೆರ ಗಾಗಿ ಕೇಳುತ್ತಿರಬೇಕು. ಮುಗ್ಧ ಹಳ್ಳಿಗನಿಗೆ (ಈಗಿನವನಲ್ಲ, ಮತ್ತೆ!) ವಕೀಲ ಎಂದರೆ ತನ್ನ ಮನೆತನದ ಉದ್ಧಾರಕ್ಕೆ, ಅವತರಿಸಿ ಬಂದ ಶಿವನ ಸಾಕಾರ!

ಹೀಗೆ ಹಳ್ಳಿಹಳ್ಳಿಗೂ ವಕೀಲರ ಪ್ರತಿಷ್ಠೆ ಹರಿದಿದ್ದರಿಂದ ಅವರನ್ನು (ಖಾಸ ಧಾರವಾಡ ದವರನ್ನು) ಕುರಿತು ದುಂದುಮೆಯ ಹಾಡೊಂದು ರಚಿತವಾಯ್ತು. ೧೮೬೦ರಷ್ಟು ಹಿಂದೆ ಆ ಜನ ಪದ ಹಾಡನ್ನು ಬರೆದವನ ಹೆಸರು ಚನಬಸಯ್ಯ ಬಸಲಿಂಗಯ್ಯಾ ಸಾಲಿಮಠ. ('ಸಾಲಿಮಠ ವಂತನು, ವಳ್ಳಿ ವೃಷಭಲಿಂಗಾಖ್ಯನರವರ ವರ ಪುತ್ರನು, ಚಂನ ವೃಷಭನು). ಕಲ್ಲಚ್ಚಿನಲ್ಲಿ ಮುದ್ರಿತವಾದ ಈ ಹಾಡನ್ನು (ಅದರ ೩೩ ಪದ್ಯಗಳಲ್ಲಿ ಕೆಲವನ್ನು ಬಿಟ್ಟು) ಕೊಡಲಾಗಿದೆ.

'ಧಾರವಾಡ ವಕೀಲರ ವರ್ಣನೆ.'

ಕ್ಷಿತಿಯೊಳಧಿಕ ಸಮ ಗತಿಯುತ
ರ್ಧಾರ್ವಾಡ
[ಯುತರು + ಧಾ[
ಪ್ರತಿ ಶಿವಮತ-ಸರ್ವ ಮತದವರು, ಭಕ್ತಿ
ಹಿತ-ಶತ್ರು ಮತಹತ ಸ್ಥಿತಿವಂತರು,
ಪರಮತಿಯ ಶೋಧಿಸುವಾ
ಸುಮತಿವಂತರು, ಮತಿ
ಸತಿ-ಸುತ ಬಂಧಗಳ್ತಳಿಸಿ ನೋಡಲ್ಸು-
ಮತದಿಂದ ನಡೆಯುವರ್ಕ್ಯಥೆಯುಂನು
ಪೇಳ್ವೆ ॥ ೧ ॥

ಸ್ಥಿತಿವಂತರು, ಪರರ ಮತಿಯನ್ನು ಶೋಧಿಸ ಬಲ್ಲವರು, ಸುಮತದಿಂದ ನಡೆಯುವವರು-- ಅಂತೂ ಈ ಜಾನಪದ ಕವಿ, ವಕೀಲರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಸುರುವಿನಿಂದೇ ಇಟ್ಟುಕೊಂಡಿದ್ದಾನೆ. ಆದರೂ-

ಮಂಡಲದೊಳಗೆ ಪ್ರಚಂಡವೆಂದೆನಿಸುವ-
ಖಂಡಿತ ಲಕ್ಷ್ಮಿ ಧಾರ್ವಾಡದವರು,
ಸುಪ್ರ-
ಚಂಡನಂತಿಹ ಕಾರಭಾರಸ್ತರು, ವಜ್ರ-
ದಂಡಿಯಂಥವರೆದಿವಡಿಸುವರು, ಬಹು
ಭಂಡಾಟ ವ್ಯಾಜ್ಯದಲ್ಯಂಡಾಟಗಳ [?]
ಜನು
ತ್ಪಂಡಿಸುವರು ತಂದು ಮಂಡಲಿಯೊಳಗೆ
॥ ೪ ॥

ಸಾ[ಸ]ರ್ವರೊಳಗೆ ಬಹು
ಧೀತಾನದಿಂದಲಿ
ಚಾರ್ವಾಕತನವಂನು ಸುರಿಸುವರು, ಚೆಲ್ವ
ಗೀರ್ವಾಣ ಭಾಷೆಯಿಂದೊರೆಯುವರು.
ಬಹು
ಪೂರ್ವರಿ[?] ನ್ಯಾಯುಗಳ್ಹರಿಯುವರು.
ಬುದ್ಧಿ
ತೋರ್ವರು-ಪೂರ್ವರು [?] ಜಾರ್ವರು
ಚತುರತೆ

ಪೂರ್ವರು ಜನರಿಗೆ
ಬೀರ್ವಸುಪರ್ವತಿಯಾ ||೬||

ವಕೀಲರ ಚತುರತೆ, ಚಾರ್ವಾಕತನ ಕವಿಗೆ ಚೆನ್ನಾಗಿ ವೇದ್ಯವಾಗಿದೆ! ಇಲ್ಲಿ ಗೀರ್ವಾಣ ಭಾಷೆ ಎಂದರೆ ಸಂಸ್ಕೃತವಲ್ಲ, ಆಂಗ್ಲ ಭಾಷೆ.

ಹಿಡಿವಾರು ಮೊಃಕ್ತ್ಯ್ರ ಕೊಡಿಸುವಶ-
ಮನವ. [ಸಮನ್ಸ್]
ತಡೆಯುದೆ ಪ್ರತಿವಾದಿ ಕರಿಸುತಲಿ, ತಂದು
ಮಡಿಯುಗ್ಗೀಳಿಸಿ ನಂಬರಿಡಿಸುತಲಿ, ವಾದಿ
[ಜಜ್]
ಕಡಿಯಿಂದ ಹಣಗಳ ಬಿಡಿಸುತಲಿ, ಮುಂದೆ
ಭಡಕೀಲಿ ಶಮನ್ಗ್ತಿ ಖಡಕೀಲಿ ತರಿಸುತ
ಶಡಕೀಲಿ [?] ಸಾಕ್ಷಿಯು
ನುಡಿಸುತಲಿಹರೂ ||೭||

ತುರಗವನೇರ್ಘರ! ಘುರ ಬಂಗ್ಲಿಗೊಗ್ಗೀಗ್ಯರ
ಸರವೆ ಅರ್ಜಿಗಳಂನು ಓದುವರು, ಹರ
ಹರಮುತ ಲಾಪ್ಗ[?] ನಡಿಸುವರು, ಥರ
ಥರದ ಸವಾಲ್ಜವಾಬ್ಸ್ರಿಸುವರು, ಗರ
ಗರ ಹುಕುಮಾದಷ್ಟು ಷಾರ್‌ಗಳ
ಬರಕೊಂಡು
ಧೊರೆಗಳಪ್ಪಣೆಗೊಂಡು
ತಿರುಗುವರ್ಮಣಿಗೆ ||೮||

ಹಿಡಿದ ನಂಬರವಂನು
ಜಡದಮುಲ್ಕಡಿಸುವ-
ರ್ನಡಿಯು ಗೊಡರು ಪ್ರತಿ-ಪ್ರಸ್ತಾಪವಾ,
ಸವಾ-
ಲ್ಯಡವೆ ಮಾಡರು ತಂಮ ನಂಬರವಾ,
ಫಿತೂ-
ರ್ನಡಿಸಿ ಮಾಡರು ಮೊಬ್ಬಘೋತಕವಾ,
ಪಂಥಾ-
ಖಿಡಿದವರ್ಮಾತಿಗಿಂನ್ಯಡರು ಬಾರದಂತೆ
(ಮಾತಿಗೆ ಇನ್ನು ಎರಡು)
ಗಡಗಾಥ [?] ಫೈಸಲ
ಮಾಡ್ಸುತ್ತಲಿಹರೂ ||೯||

ಫಿತೂರಿ ನಡೆಸಿ ಮೋಸ ಮಾಡುತ್ತಿದ್ದಿಲ್ಲ ಆಗಿನ ವಕೀಲರು! ಅಂತೂ ಒಳ್ಳೆಯ ಶಿಫಾರಸು.

ಫೈಸಲ ಮಾಡ್ಸುವೆ ಸಂಶಯವಿಲ್ಲದೆ
ಕೈಸಾಗಿದಷ್ಟೊಂನ ಕೊಡು ಯೆಂಬರು.
ಮಾತು
ಜೈಸಿರ್ದವರಿಗೆ ತಾ ಯೆಂಬರು, ಮುಂದೆ
ಸೈಸ್ಯೆಯೆಂಬುವ ಮಾತು ತೋರುವರು,
ವಂದು
ಕೈಸವರ್ಗಣೆಗೆ ತೋರಗೊಡದೆ ಸರ್ವ,
ಪೈಸವ ಕಳಕೊಂಡು
ಕಳುಹುತ್ತಲಿಹರೂ ||೧೦||

ಅಂತೂ ಎಷ್ಟೇ ಸು-ಮತಿಗಳಿದ್ದರೂ ವಕೀಲರು ಫೀ ಹಣದ ವಿಚಾರದಲ್ಲಿ ಯಾವ ಮುಲಾಜು-ಮರ್ಯಾದೆ ಇಲ್ಲದವರು!

ದಸ್ತಾಯ್ಮವಜವ ಸ್ವಹಸ್ತದಿ ಥೊರೆಗಳ
ಪ್ರ-
ಶಸ್ತದಿ ಹಿಡಿದೋದಿ ನೋಡುವರು, ಸ್ವಲ್ಪ
ಸುಸ್ತಿ ಮಾಡ್ಬೇಂಮವ ಪೇಳುವರು,
ಮಧ್ಯ-
ವಸ್ಥಿ ಪತ್ರವು ಯಿದು ಯೆಂಬುವರು,
ಯೆಷ್ಟು
ಕುಸ್ತಿ ಮಾಡಲು ಯಿದು ಸಕ್ಕವಾಗದು
ರದ್ದು.
ಸ್ವಸ್ಥದಿ ಫೈಸಲ ಮಾಡುತ್ತಲಿಹರು ||೧೧||
ರದ್ದಾದ ಮ್ಯಾಲ್ಪಜಾಸದ್ದಡಗಲ್ವಕೀಲ-
ರೊದ್ದ್ಯಾಡಿ ಧೊರೆಗಳ್ಗೆ ಪೇಳ್ಗುವರು,
ಯಿದು
ಖುದ್ದವನ ಸ್ತೂರು ಯೆಂಬುವರು ನಾವು
(ಖುದ್ದು ಅವನ ದಸ್ತೂರು)
ಕದ್ದಿಂದ ಬರಸಿಲ್ಲವೆಂಬುವರು, ಮತ್ತೆ
(= ಕಳವಿನಿಂದ)
ಶುದ್ಧವನ ಸ್ತೂರು ಮಧ್ಯಾನ್ಹದೊತ್ತೀಗೆ
ಸಥ್ಯಕ್ಕೆ ತರಿಯಿಸಿ ನೋಡಿರೆಂಬುವರೂ
||೧೨||

ದಸ್ತೂರ ತರಿಸಿ ಸಮಸ್ತ ಗೃಹಸ್ತ ಪ್ರ-
ಶಸ್ತದಿ ಚೌಕಶಿ ಮಾಡ್ಸುವರು, ಪ್ರತಿ
ಖಿಸ್ತಾರಾಕ್ಷರ ಮರಿ ಹಚ್ಚುವರು. ಅಸ್ತ-
ವ್ಯಸ್ತ ಖಿಲ್ವಾಸ್ರುಪ್ಯವೆಂಬುವರು, ಹೀಗೆ

(ವಿಲ್ಲ ಸಾರೂಪ್ಯ)
ಪ್ರಸ್ತುತದೊಳ್ದೊರೆಗ್ವಾಸ್ತವ್ಯ
ತೋರ್ವಿನ-
(ದೊಳ್ ದೊರೆಗೆ ವಾಸ್ತವ್ಯ ತೋರಿ ಮನ-)
ಸ್ವಸ್ಥದಿ ಘೈಸಲ
ಮಾಡುತಲಿಹರೂ ||೧೩||

ಪ್ರತಿವಾದಿ ವಕೀಲ್ಮತ್ತೆ ಮಥನಿಸಿ ನಿಂತ್ವಾದಿ
(ವಕೀಲ ಮತ್ತೆ) (ನಿಂತು ವಾದಿ)
ವ್ಯಥೆ ವಕಿ(ೀ)ಲ್ಮುಖವನಿಡುತಾ, ಸ್ಥಿತಿ-
ಗತಿಯರಿದುಭಯರು ಹಾಕ್ಯಾಡುತಾ,
ಮತ್ತೆ
ಮಥನಿಸಿ ವಾಕ್ವಾದಗಳ ಮಾಡುತಾ,
ಕಾಂಡು-
ಪತಿ ಮುಕ್ಕಳ್ವ್ಯರವರಿತಿ-ಹಾಸದೊಲ್ವಾಸ-
ಗತಿ-ವ್ಯಾಜ್ಯದಂತವರ್ಪೋರ್ಯಿದಾಡು-
ತಿಹರೂ ||೧೪||

ಇತಿಹಾಸ ಕಾಲದಲ್ಲಿ ಪಾಂಡವರು ಕೌರವರು ಬಡಿದಾಡಿದಂತೆ ಬಡಿದಾಡುವರು. ವಾದಿ-ಪ್ರತಿವಾದಿಗಳಲ್ಲ; ಅವರವರ ವಕೀಲರೇ! ಆದರೆ ಅದು ಮುಗಿದು, ಕೋರ್ಟಿನ ಹೊರಗಡೆ ಬಂದರೆಂದರೆ?

ಯಿಂತಿವರ್ಪೋರ್ಯಿದಾಡಿ ಸಂತಿಪ್ಪ [?]
ತಂದೊಳ್
ಸಂತ ಮದನ ಸಖರಂತಿಹರು. ಮತ್ತೆ
ಕಂಸು ಮಥನ ಕುಬೇರಂತಿಹರು. ತಂಮ
ಅಂತರಂಗಾರಿಗೆ ತೋರ್ಗೊಡರು. ಹೀಗೆ
ಪೀಥವ ಗೆಲಿದವರ್ಪೋನ್ನಳ ಶಳಕೋಡು
ಪಂಜ್ತ್ರಿಡಿದು ಘೈಲಿ
ಕುಂಬಿಡುತಿಹರೂ ||೧೫||

ತಮ್ಮ ಅಂತರಂಗವನ್ನು ಬಿಟ್ಟುಗೊಡರು! ಅಂತೂ ಹೀಗಿತ್ತು ಧಾರವಾಡದ ವಕೀಲರ ಸಿರಿ ಸಂಪಿಕೆ. ಆದರೆ ಅದನ್ನು ಆಗುಮಾಡಿದವರು ಹಳ್ಳಿಗರು.

ದುಡ್ಡಿನ ಮಾತಿಗೆ ವೊಡ್ಡೊಡ್ಡಿ,
ಹಣಗಳ್ಳು-
ಬಡ್ಡಿಯುಂತೆಣಿಸುವರ್ಪಂಥದಲಿ, ಮಂದು
ಗಡ್ಡಿ ಕಾಗದ ಲೈಬ್ಸ ಬರಿಯುತಲಿ. ಸೆರ-
ಗೊಡ್ಡಿ ವಕೀಲ್ಗೆ ಬೇಡ್ಕೊಂಬುತಲಿ,
ಮಾತು
ಕಡ್ಡಿಯು ಸಮಬಿದು ಗೆಲ್ಸಿದರೆ ಮತ್ತೂ
ಕಡ್ಡಿ ತುಂಬ್ಬಣ
ಜನರ್ಸರ್ಗರಿವೆವೆಂಬುವರೂ ||೧೬||

ಯಿವರಂತೆ ವ್ಯಾಜ್ಯದ
ಬವರದೊಳ್ಪಡದಾದಿ
ರವದಿಯಂತೆ ಮಾತು ಹಾರ್ಸುವರು. ನೆವ-
ನೆವದಿಂದ ನ್ಯಾಯಗಳ್ಬೆಳಸುವರು ಸರ್ವ
ರ್ಸವರಿ ಜನರ ಹಣ ತರಸುವರು. ಯಿವ
ರ್ಸವನಾದ ಚತುರರು
ಭವನದೊಳಿಲ್ಲೆಂದು, ತವೆ
ಸರ್ವ ಜನರಿಂದ
ಸ್ತುತಿಸಿಕೊಂಬುವರೂ ||೧೭||

ಹೀಗೆ ಸಂಪತ್ತು ಹರಿದು ಬಂದಾಗ, ತಮಗಾಗಿ ಬಂಗಲೆ ಕಟ್ಟಿಸಿಕೊಳ್ಳುವುದು ಕ್ರಮಪ್ರಾಪ್ತವಾದುದೇ.

ಕೊಡುವರ್ಸರು ಪೊಸ್ಗಳ
ಹಿಂದಿವರ್ಸುಜಾಗವ
ಬಡವನೇತರ ಕರಿಸುತಲಿ, ತಂಮ
ವಡಿಯಗ್ಗೀಳಿಸಿ ಸಾಮಾನ ತರಿಸುತಲಿ,
ಚಿತ್ರ
ಬಿದಿಕಿ ಮಾಡ್ಯನೆಯನ್ನು ಕಟ್ಸುತಲಿ
ಮತ್ತೆ
ಖಿಡಿಕಿಲಿ ಮಾಡ್ಯವೆ [?] ಗಡಕಿಲ್ಲದಂತೆ
ಸು-
ಘಡಕ್ಕ್ಚ್ಛಸುವರೇನು
ಪಡಕಿಲ್ಲದಂತೆ ||೧೮||

ದುಂದುಮೆ ಪದಗಳಲ್ಲಿ ಶೃಂಗಾರವು ಒಂದು ಅವಿಭಾಜ್ಯ ಅಂಗ. ಕವಿ ಇಲ್ಲಿ ಅದನ್ನು ತಂದಿದ್ದಾನೆ. ಅರ್ಥಾತ್ ವಕೀಲರಿಗೂ ಸ್ಥಳೀಯ ವೇಶ್ಯೆಯರಿಗೂ ತಳಕು ಹಾಕಿದ್ದಾನೆ!

ಈ ಪರಿಯೋಳ್ ಘನ ಮಾಪುತ್ರರಂತೆ ವು-

'ನ್ಯಾಯವನ್ನು ಬೆಳೆಸುವ' ವಕೀಲ ಜನರನ್ನು ಈಚೆಗೆ ನ್ಯಾಯವಾದಿಗಳೆಂದು ಕರೆಯುವುದು ಅನ್ವರ್ಥಕವೇ ಸೈ!

ಮಾಪತಿ ಕರುಣ ಪೂರಿತದಿಂದಲಿ, ತನು
ತಾಪತ್ರಯವ ಪರಿಹರಿಸುತಲಿ, ಬುದ್ಧಿ
ಚಾಪಲ್ಯದಿಂದಲಿ ಸ್ಫುರಿಸುತಲಿ, ಕೋಪ
ಲೋಪಾದಿ ಸೌಂದರ್ಯರೂಪುಳ್ಳ ಸ್ತ್ರೀಯರೊ-
ಳ್ವ್ಯಾಪಕದೊಳ್ ಕೃಷ್ಣಲೀಲದಂತಿಹರೂ ||೧೬||

ಪುಂಡರೀಕಾಕ್ಷಿಯರ್ಖಂಡೇಂದು ನಿಟಿಲೆಯ-
ರ್ಗಂಡವಣ್ಣಿಟ ತುರಗವೇರುವರು, ಬಾಳೆ
ದಿಂಡ್ಹೊಡೆ ಬಟುತರ ಕುಚದವರು, ನಳ-
ಲ್ವಂಡಿಯೊಲ್ತೋರುವ ಕುಂಡಿಯರು, ಯಿಂಥಾ
ಖಂಡಿಯರ್ಮನಸಿಜ ದಂಡಿಯರ್ಗಸುವ ಕೋ-
ದಂಡನಂಥಾ ವಿಟರ ಬಯಸುವರೂ ||೧೭||

ನೀರೇರು ವಿಟಜನಪ್ರೀರೇರು ಸುರತವಿ-
ಹಾರೇರು ಮದನ ವಿಕಾರಿಯರು, ಹೊಂತ-
ಕಾರೇರು ರತಿಕಳಾಪೂರಿಯರು, ಜ್ಞಾನ
ತೂರೇರು ಮರ್ಮನೋಹಾರಿಯರು, ಯಿಂಥಾ
ಧೀರೇರು ನಾರೇರು ಜೋರೇರು ಮುಕ್ತಿ ಸು-
ಖಾರರ ಮಾನವಂನು ಸೂರೆಗೊಂಬವರೂ ||೧೮||

ತರುಳೆಯರ್ ನೋಟದ ಸರಳೊಗೆವರು, ಕರ
ಬೆರಳು ಗುರಿ ನಖ ಖಡ್ಗದಿರಿಯುವರು, ಕುಚ
ವರಚಕ್ರಯುಗದಿಂದ ಪೊಡೆಯುವರು, ತಂಮ-
ವರ ಕದಪು ತಂನದಿ ತೋರುವರು, ಮಾರಾ-
ತರದ ಘಾಯವ ತಾಳಲಾರದೆ ತಂಮ ಸುಂ-
ದರ ಮಹಾಲಿಗೆ ಕರೆದೊಯ್ವರು ವಿಟರೂ ||೧೯||

ಕೊನೆಯ ಸಾಲಿನಲ್ಲಿ ಹೇಳಿದ ಪ್ರಕಾರ, ವಿಟರು ಯಾನೆ ವಕೀಲರು ತಮ್ಮ ಸುಂದರ ಮಹಲಿಗೆ ಜಾರೆಯರನ್ನು ಕರೆದೊಯ್ದುದ್ದೇ ಆದರೆ ಮನೆಯ ಗೃಹಿಣಿಯ ಪ್ರತಿಕ್ರಿಯೆ ಏನಾಗಬಹುದು? ಈ ದುಂದುಮೆಗಾರನೂ ಅದನ್ನು ಯೋಚಿಸಿಲ್ಲ! ಬದಲಾಗಿ ವಕೀಲರ ಧಾರ್ಮಿಕ ವೃತ್ತಿಯತ್ತ ನಮ್ಮ ಗಮನ ಸೆಳೆದಿದ್ದಾನೆ.

ಬಿಂದು ಮುಡಿಯನುಟ್ಟು ಗಂಧ ಕಸ್ತೂರಿಯಂನು
ಛಂದದಿ ಲೇಪನ ಮಾಡುವರು. ಮನ
ಬಂದಂತೆ ಪಕ್ವಾನ್ನ ಮಾಡ್ಸುವರು, ನಿತ್ಯ
ದಿಂದಲು ಗಣಪತಿ ಗುಣಿಸುವರು. ಬಂದ
ಬಂದ ಯಾಚಕರಿಗಾನಂದ ದಾನವ ಕೊಟ್ಟು
ಕುಂದದೆ ಸೂರ್ಯನ ನಂದನಂತಿಹರೂ ||೨೦||

ಜಾತಿ ಧರ್ಮಾಚಾರ ನೀತಿಯೊಳ್ ತಂತಮ್ಮ
[ನೀತಿಯೊಳ್ ತಂತಮ್ಮ]
ಪ್ರೀತಿ-ದೈವಗಳಂನು ಭಜಿಸುವರು ಸರ್ವ
ಜಾತಿಗಳರ್ತಿಯ ನಡಿಸುವರು, ಬಹು
ಪಾತಕರಿಗೆ ಧರ್ಮ ತಿಳಿಸುವರು, ಯಿವರ್-
ಖ್ಯಾತಿಗೆ ಪರಮೇಶ ಸೋತಿಹನಿವರ ಸ-
ತ್ಖ್ಯಾತಿತಯಂ ಪೇಳ್ವಧಾತುವಿಲ್ಲೆನಗೆ ||೨೧||

ಈ ವಿಷಯದಲ್ಲಿ ಅವರ ಪತ್ನಿಯರು ಇವರಿಗಿಂತ ಮಿಗಿಲು!

ಹಸನದ ವಸನದ ಪುರುಷರ ಪತ್ನಿಯ-
ರ್ಪಸಿದವರ್ಗೊಸಿದಂನ ನೀಡುವರು, ರಂಮ
[ಪತ್ನಿಯರ್ ಪಸಿದವರ್ಗೆ ಒಸಿದಂನ್ನ

ಕುಶಲ ಪುರುಷಗಾಜ್ಞ ನಡಿಸುವರು.
ಹಶ್ಯ
ಶಿಶುಗಳ್ಗೆ ಪಾಲ್ಪೆಂಣ ಕೊಡಿಸುವರು.
ಯಿಂಥಾ
ರ್ಭುಸವುಳ್ಳ ಸ್ತ್ರಿಯ್ಯಗ್ಗೆ ಶಶಿಧರ
ಮೆಚ್ಚುವ,
ಹಸರಿಸಿ ಕೇಳ್ಳದು ವಸುಧಿಯು
ಜನರೂ ।।೩೦।।

ಈ ವಕೀಲ ದಂಪತಿಗಳಿಗೆ ಸ್ವತಃ ಶಿವನೇ ಸೋತು ಮೆಚ್ಚಿದ್ದಾನೆಂದ ಮೇಲೆ, ಈ ಚೇಷ್ಟಾನ್ವಿತ ಟೀಕೆಯನ್ನು ಇಲ್ಲಿಗೆ ನಿಲ್ಲಿಸುವೆ.


ಸ್ವಯಂ ಶಿವನೇ ಈ ವಕೀಲರನ್ನು ಮೆಚ್ಚಿದ್ದಾನೆಂದ ಮೇಲೆ, ಚೇಷ್ಟೆಗಾಗಿಯೇ ಆಗಲಿ. ನಾನು ಅವರನ್ನು ಟೀಕಿಸ ಸಲ್ಲ! ಆದರೂ ವಿಷಯದ ಸಮಾರೋಪ ಮಾಡಬೇಕಲ್ಲವೆ. ನೂರು ವರ್ಷಗಳ ಹಿಂದಿನ ಚಿತ್ರಣ ಇದಾದರೆ, ಅವರ ಈ ವೈಭವ ದೇಶದ ಸ್ವಾತಂತ್ರ್ಯ ಬರುವ ವರೆಗೂ ಅನೂಚಾನವಾಗಿ ನಡೆದುಕೊಂಡು ಬಂತು. ಸಮಾಜದಲ್ಲಿ ಅವರ ಪ್ರತಿಷ್ಠೆ ಹೆಚ್ಚಿದುದಕ್ಕೆ ಇನ್ನೊಂದು ಕಾರಣ, ಅವರಲ್ಲಿ ಅನೇಕರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದುದು. ಮನೆತನದ ಮುನ್ನಿನ ಸಿರಿವಂತಿಕೆಯೂ, ವಾಗ್ಮಿತೆಯೂ, ವೃತ್ತಿಯಲ್ಲಿನ ಸ್ವಾತಂತ್ರ್ಯವೂ ಅವರಿಗೆ ಸೂಕ್ತ ಹಿನ್ನೆಲೆ ಒದಗಿಸಿದುವು.

ಸ್ವಾತಂತ್ರ್ಯ ಬಂದ ಅನಂತರವೂ ಅನೇಕರು ಬಿ.ಎ., ಎಲ್‌ಎಲ್.ಬಿ. ಬೋರ್ಡನ್ನು ಮನೆ ಮುಂದೆ ತೂಗಿಸಿದರು. 'ಬಿ.ಎ. ಆಯಿತು. ನೌಕರಿ ಇಲ್ಲ. ಏನು ಮಾಡಬೇಕು. ಲಾ ಕಲೀತು ಬರಲಿ' ಎಂಬ ಪರಿಸ್ಥಿತಿ, ಅಲ್ಲದೆ ಹಳೆಯ ಅನುಭವಿಕ ಲಾಯರರೇ ಜನರಿಗೆ ಬೇಕಾದಾಗ ಇವರಿಗೆ ಬೇಡಿಕೆ ಇರದು. ಆಗಿನ ತರುಣ ವಕೀಲರ (ಎಂದರೆ ಈಗಿನವರಿಗಿಂತ ಒಂದು ಪೀಳಿಗೆಯ ಹಿಂದಿನವರ) ಬಗ್ಗೆ ಇದೊಂದು ನಗೆ ಮಾತು, ಮೊನ್ನೆಮೊನ್ನಿನ ವರೆಗೂ ಧಾರವಾಡದಲ್ಲಿ ಪ್ರಚಲಿತವಿದ್ದಿತು. ಅದನ್ನು ಹೇಳಿ ಮುಗಿಸವೆ.

ಒಬ್ಬ ಕನ್ಯಾಪಿತೃವಿಗೆ ಅವನ ಗೆಳೆಯ ಒಬ್ಬ ವರನನ್ನು ಸೂಚಿಸಿದನಂತೆ. ಆಗ ವರಾರ್ಥಿ ಕೇಳಿದ:

"ಯಾವ ಉದ್ಯೋಗದಲ್ಲಿ ಇದ್ದಾನೆ?"
"ಧಾರವಾಡದಲ್ಲಿ ವಕೀಲ ಇದ್ದಾನೆ."
"ಉಪಜೀವನದ ವ್ಯವಸ್ಥೆ ಹೇಗೆ ?"
"ಹೇಳಿದೆನಲ್ಲ. ವಕೀಲ ಅಂತ."
"ಅದಾಯ್ತುಪಾ. ಹೊಟ್ಟೆ ಬಟ್ಟೆಗೆ ಏನು ಮಾಡ್ತಾನೆ ?"

★



ಪದಾರ್ಥ ಚಿಂತಾಮಣಿ

೮೦

ಊದುಬತ್ತಿ ಎಲ್ಲಿಂದ ಬಂತು?

ಊದುಬತ್ತಿ ನಮ್ಮ ಧಾರ್ಮಿಕ ಮತ್ತ ಲೌಕಿಕ ಸಮಾರಂಭಗಳಲ್ಲಿ ಎಷ್ಟು ಸಾಮಾನ್ಯವಾಗಿದೆಯೆಂದರೆ ಆ ಶಬ್ದ ಪರಕೀಯ ಇರಬಹುದೆಂಬುದು ನಮಗೆ ಹೊಳೆಯುಲಿಕ್ಕೇ ಇಲ್ಲ. ಆದರೂ **ಊದ್** ಶಬ್ದ ಅರಬ್ಬೀ ಮೂಲದ್ದಾಗಿದೆ. **ಬತ್ತಿ** ಮಾತ್ರ ಭಾರತೀಯ. ಸಂಸ್ಕೃತದ **ವರ್ತಿ**ಯ ತದ್ಭವ ಅದು. **ಊದ್** ಎಂಬುದು ಅರಬಿ ಭಾಷೆಯಲ್ಲಿ **ಅಗರು** ಎಂಬ ಸುಗಂಧ ವೃಕ್ಷದ ಹೆಸರು. **ಅಗರು, ಅಗುರು** ಎಂಬ ರೂಪದಲ್ಲಿ ಸಂಸ್ಕೃತದಲ್ಲಿದ್ದು ಅದರ ಮೂಲ ದ್ರಾವಿಡ ಭಾಷೆಯಲ್ಲಿದೆ ಎಂದು ಭಾವಿಸಲಾಗಿದೆ. ಹೀಗೆ ಊದು ಬತ್ತಿ ಅಥವಾ ಊದಿನ ಕಡ್ಡಿಗಿಂತ **ಅಗರು ಬತ್ತಿ** ಹೆಚ್ಚು ಭಾರತೀಯವಾಗಿದೆ. ದ್ರಾವಿಡದಲ್ಲಿ **ಅಗಿಲು** ಎಂಬ ರೂಪವೂ ಇದೆ. **ಅಗರು** ೧೦ ನೇ ಶತಮಾನದಿಂದಲೇ (ಪಂಪ) ಕನ್ನಡ ಸಾಹಿತ್ಯದಲ್ಲಿದೆ. ಕರಿ ಜಾತಿಯ ಗಂಧದ ಮರಕ್ಕೆ **ಅಗಿಲು ಗಂಧ** ಎಂಬ ಹೆಸರೂ ಇದೆ. **ಅಗಿಲ್** ಎಂಬುದು ಕನ್ನಡದಲ್ಲಿ ಬರೇ **ಪರಿಮಳ** ಎಂಬರ್ಥದಲ್ಲಿಯೂ ಪ್ರಯೋಗದಲ್ಲಿದ್ದು ೧೨ನೇ ಶತಮಾನದ "ಕಾವ್ಯಾವಲೋಕನ" ಗ್ರಂಥದಲ್ಲಿ ಪರಿಮಳ ರಹಿತ ಎಂಬರ್ಥದಲ್ಲಿ **ಅಗಿಲಿಲಿ** ಉದಾಹೃತವಾಗಿದೆ. **ಅಗರು** ಶಬ್ದ ಉತ್ತರ ದ್ರಾವಿಡ ಭಾಷೆಯಾದ ಪರ್ಜಿಯಿಂದ ಸಂಸ್ಕೃತದಲ್ಲಿ ಪ್ರವೇಶಿಸಿದಂತೆ ಕಾಣುತ್ತದೆ. ಈ ಅಗರು ವೃಕ್ಷ ಭಾರತದ್ದೇ ಆಗಿದೆಯಾದ್ದರಿಂದ ಅದರ ವೈಜ್ಞಾನಿಕ ಹೆಸರಾದ agallochaದಲ್ಲಿ ಅಗಿಲಿನ ಪ್ರತಿ ಧ್ವನಿ ಇದೆ. ಅಷ್ಟು ಮಾತ್ರವಲ್ಲ ಇಂಗ್ಲೀಷಿನ **ಈಗಲ್‌ವುಡ್** (Eaglewood) ಎಂಬ ಪರಿಮಳ ವೃಕ್ಷದ ಹೆಸರು ಕೂಡ ಲ್ಯಾಟಿನ್ನಿನ aauilla ಮೂಲಕ **ಅಗಿಲಿ**ನಿಂದಲೇ ಸ್ಫೂರ್ತವಾಗಿರಬೇಕೆಂದು ಇಂಗ್ಲೀಷ್ ಕೋಶಗಳಿಂದ ಸೂಚಿತವಾಗುತ್ತದೆ.

ಹಳೆಯ ಕನ್ನಡ ಕೋಶಗಳಲ್ಲಿ ಈ **ಊದಾ** ಬಗ್ಗೆ ಸ್ವಲ್ಪ ಗೊಂದಲವಿದೆ. ಅವುಗಳಲ್ಲಿ ಕೆಲವು **ಊದಾ**ವನ್ನು **ಲೋಬಾನ**ಕ್ಕೆ ಪರ್ಯಾಯವಾಗಿ ಕೊಡುತ್ತವೆ. ಆದರೆ ಉರ್ದು ಕೋಶಗಳಲ್ಲಿ **ಊದಾ** ಎಂದರೆ **ಅಗರಿ**ಗೆ ಅರಬ್ಬಿ ಹೆಸರೆಂದೂ **ಲೋಬಾನ** ಎಂಬುದು ಅರಬ್ಬೀ ದೇಶದಲ್ಲೇ ಬೆಳೆಯುವ ಪರಿಮಳ ದ್ರವ್ಯದ ಹೆಸರೆಂದೂ ಹೇಳುತ್ತವೆ. (**ಲೋಬಾನ** ಬಗ್ಗೆ "ಪದಾರ್ಥ ಚಿಂತಾಮಣಿ" - ೬೯ ನೋಡಿ). ಸುಗಂಧ ದ್ರವ್ಯಗಳ ವ್ಯಾಪಾರ ಮಧ್ಯ ಕಾಲದಲ್ಲಿ ಅರಬ್ಬೀ ವರ್ತಕರ ಕೈಗೆ ಹೋದದ್ದರಿಂದ ಈ ಗೊಂದಲ ಹುಟ್ಟಿರಬಹುದು. ಊದುಬತ್ತಿ ಕನ್ನಡದಲ್ಲಿ ತೀರ ಈಚಿನದು.

ಗಾಂಧೀಜಿಯಿಂದಾಗಿ **ಚರಕ, ಚರಖಾ** ನಮ್ಮ ಇತಿಹಾಸದಲ್ಲಿ ಚಿರಂತನವಾಗಿಬಿಟ್ಟಿದ್ದು **ಚರಖಾ** ಎಂಬುದು ಪಾರಸೀಕ ಶಬ್ದವೆಂಬ ಅಂಶ (ಚರ್ಖಹ್) ನಮಗೆ ಆಶ್ಚರ್ಯ ತರಬಹುದು. ಮೂಲತಃ ಇದು ಸಂಸ್ಕೃತದ **ಚಕ್ರ** ರೋಮನ್ ಸಂವಾದಿಯಾದ ಪ್ರಾಕ್ ಆರ್ಯನ್ ಪದದಿಂದ ಹೊರಟಿದ್ದರೂ ಹತ್ತಿ ನೂಲೂ, ಮತ್ತು ಹತ್ತಿ ಬಟ್ಟೆ, ನೇಯುವ ಕಲೆ ಬಹುಶಃ ಭಾರತದಲ್ಲೇ ತಲೆಯೆತ್ತಿರಬಹುದಾದರೂ ನೂಲು ತೆಗೆಯುವ ಚಕ್ರಕ್ಕೆ ಪಾರಸೀಕ ಪದ ಬಳಕೆಗೆ ಬರಲು ಮುಸ್ಲಿಂ ಆಳಿಕೆ ಕಾರಣ. ಆ ಕಾಲದಲ್ಲಿ ನೇಯ್ಗೆ ಉದ್ಯೋಗದಲ್ಲಿದ್ದ ಅಸಂಖ್ಯ ಜನರು ಇಸ್ಲಾಂ ಧರ್ಮ ಸ್ವೀಕರಿಸಿದ್ದರು.

ಚಾಕು ಮತ್ತು **ಚೂರಿ**ಗಳಲ್ಲಿ ಎರಡನೆಯದು ಭಾರತೀಯ, ಮೊದಲನೆಯದು ಪಾರಸೀಕ. **ಚೂರಿ**ಗೆ ಹಿಂದಿ **ಛುರೀ** ಮೂಲ; ಅದಕ್ಕೆ ಸಂಸ್ಕೃತ **ಕ್ಷುರ** ಮೂಲ. ಕ್ಷುರ ಎಂದರೆ ಕೊಯ್ಯುವ

ಆಯುಧ. "**ಕ್ಷುರ**ಸ್ಯ ಧಾರಾ ನಿಶಿತಾ" ಎಂದು ವೈದಿಕ ಸಾಹಿತ್ಯದಲ್ಲೇ ಬರುತ್ತದೆ. ಕ್ಷುರ ದಿಂದ ಮಾಡುವ ಕೆಲಸ ಕ್ಷೌರ; ಅದೇ **ಚೌಲ** (ಪ್ರಥಮತಃ ಕೂದಲು ತೆಗೆಯುವ ಸಮಾರಂಭ); ಅದೇ ಉತ್ತರ ಕರ್ನಾಟಕದ **ಜವಳ**.

ಚಕಮುಕಿ ಎಂಬುದು ಈಗ **ಕಿಕ್ಯಾಟಿ** ಎಂಬರ್ಥದಲ್ಲಿಪ್ಪ ಚಾರದಲ್ಲಿದೆ. ಮೂಲತಃ ಅದು ಬೆಂಕಿ ಕಡ್ಡಿ ಬರುವ ಮುಂಚೆ ಬೆಂಕಿ ಹೊತ್ತಿಸುವುದಕ್ಕೆ ಬಳಸುತ್ತಿದ್ದ ಬಿರುಸು ಕಲ್ಲು. ಪಾರಸೀಕ ಭಾಷೆಯಿಂದ ಅದು ಬಂತು. **ಚಕ್‌ಮುಕ್** ಅಥವಾ **ಚಕ್‌ಮಾಕ್** ಎಂಬ ಪದ ಮೂಲತಃ ತುರ್ಕಿ ಭಾಷೆಯದೆಂದು ಸುನೀತಿಕುಮಾರ ಚಟರ್ಜಿ ಹೇಳುತ್ತಾರೆ. ನಮ್ಮ ದೇಶದಲ್ಲಿ ಪ್ರಾಚೀನ ಕಾಲ ದಲ್ಲಿ ಬೆಂಕಿ ಮಾಡುವುದಕ್ಕೆ ಎರಡು ಗಟ್ಟಿ ಕಟ್ಟಿಗೆಯ ತುಂಡುಗಳನ್ನು ಬಳಸುತ್ತಿದ್ದು ಅದಕ್ಕೆ **ಅರಣಿ** ಎಂಬ ಹೆಸರಿತ್ತು. ಇದು ವೇದಕಾಲದಷ್ಟು ಹಳೆಯ ಪದವಾಗಿದ್ದರೂ ಬಹುಶಃ ದ್ರಾವಿಡ ಮೂಲದ್ದೆಂದು ಸುನೀತಿ ಚಟರ್ಜಿಯವರ ಊಹೆ. (ಅರೆ, ಒರೆ = ತಿಕ್ಕು, ಕಡೆ). **ಅರಣಿ, ಚಕ ಮುಕಿ** ಇವೆರಡರಿಂದಲೂ ಕಡೆದು ಅಥವಾ ತಿಕ್ಕಿ ಅಂದರೆ ಘರ್ಷಣೆಯಿಂದ ಕಿಡಿ ಹುಟ್ಟಿಸುವುದರಿಂದ ಚಕಮುಕಿ ಎಂಬುದಕ್ಕೆ **ಘರ್ಷಣೆ, ಕಿಕ್ಯಾಟಿ (ಮಾತಿನ ಚಕಮುಕಿ)** ಎಂಬ ಲಕ್ಷಣಾರ್ಥ ಬಂತು.

ಟೋಪಿ, ಟೊಪ್ಪಿಗೆ, ಟೊಪ್ಪಿ ಎಂಬ ಪದಗಳನ್ನು ನೋಡಿದರೆ ಇವು ವಿದೇಶದಿಂದ ಬಂದಿರಬಹುದೇ ಎಂಬ ಸಂಶಯ ಹುಟ್ಟಬಹುದು. ಆದರೆ ಇದು ಹುಡುಕಲು ಸಾಧ್ಯವಿರು ವಷ್ಟು ಹಿಂದೆ ಹೋದರೂ ಭಾರತೀಯ ಪದವೇ. ತೋಪಿ, ತೊಪ್ಪಿಗೆ ಇತ್ಯಾದಿ ತಕಾರ ಯುಕ್ತ ರೂಪಗಳೂ ಇವೆ. ಕನ್ನಡದಲ್ಲಿ ಬಸವದೇವರಾಜ ರಗಳೆ (ಹರಿಹರ), ಶಬ್ದಮಣಿ ದರ್ಪಣ ಮೊದಲಾದಲ್ಲಿ **ಟೋಪಿ** ಒಂದಲ್ಲ ಒಂದು ರೂಪದಲ್ಲಿ ಬರುವುದರಿಂದ ಅದಕ್ಕೆ ಎಂಟು ನೂರು ವರ್ಷಗಳಷ್ಟು ಪ್ರಾಚೀನತೆ ಇದೆ. **ಟೋಪಿಆ** ಎಂಬ ಪ್ರಾಕೃತ ರೂಪವೂ ಅದಕ್ಕಿದೆ. ಕೋಶಗಳಲ್ಲಿ ಇದಕ್ಕೆ **ಕುಲಾವಿ** ಎಂಬ ಸಮಾನ ಪದವಿದೆ. ಇಂಗ್ಲೀಷಿನಲ್ಲಿ topi, topee ಎಂದು ಈ ಪದವಿದೆ; ಅದಕ್ಕೆ ಹಿಂದೀ ಮೂಲವೆಂದು ಇಂಗ್ಲೀಷ್ ಕೋಶ ಹೇಳಿದರೂ ಅದು ಪೋರ್ಚುಗೀಸ್ topo = top = ಮೇಲ್ಭಾಗ, ತುದಿ ಎಂಬುದರಿಂದ ಬಂದಿರಬಹುದೇ ಎಂಬ ಅನುಮಾನ ವ್ಯಕ್ತಪಡಿಸಲಾಗಿದೆ. ಆದರೆ ಭಾರತದಲ್ಲಿ ಪೋರ್ಚುಗೀಸರು ಬರುವ ಮೊದಲೇ ಈ ಶಬ್ದ ಬಳಕೆಯಲ್ಲಿದ್ದುದರಿಂದ ಹಿಂದಿಗೆ ಪೋರ್ಚುಗೀಸಿನಿಂದ ಅದು ಬರುವ ಸಂಭವವಿಲ್ಲ.

ಮೋಸಮಾಡು ಎಂಬರ್ಥದಲ್ಲಿ **ಟೋಪಿ ಹಾಕು, ನಷ್ಟ ಹೋಗು** ಎಂಬರ್ಥದಲ್ಲಿ **ಟೋಪಿ ಬೀಳು** ಇಂಥಾ ಪ್ರಯೋಗಗಳು ಈಚಿನ ಹೊಸಗನ್ನಡದಲ್ಲಿ ತಾನೇ ತಲೆಯೆತ್ತಿವೆ. ಇದಕ್ಕೆ ಮೂಲ ಎಲ್ಲಿಂದ ಎಂದು ಪತ್ತೆ ಹಚ್ಚುವುದು ಕಷ್ಟ. ಇಂಗ್ಲೀಷಿನಲ್ಲಿ capಗೆ ಅಥವಾ hatಗೆ ಹೊಂದಿ ಇಂಥ ವ್ಯಂಗ್ಯ ಅರ್ಥವಿಲ್ಲ. Cap ಎಂಬುದಕ್ಕೆ ಮೀರಿಸು ಎಂಬೊಂದು ಅರ್ಥ ವಿದೆಯಷ್ಟೇ. ಸರ್ಕಸ್ ಅಥವಾ ಪ್ರಹಸನಗಳಲ್ಲಿ ಪೆದ್ದನಾಗಿ ವರ್ತಿಸುವ ಹಾಸ್ಯಗಾರನು ಧರಿಸುವ ವಿಚಿತ್ರ ಟೋಪ್ಪಿಗೆಗೆ ಫೂಲ್ಸ್ ಕ್ಯಾಪ (fools cap) ಎಂಬ ಹೆಸರಿದೆ. ಅದರ ಸಾಮ್ಯದಿಂದ **ಟೊಪ್ಪಿಗೆ ಬೀಳು** ಎಂಬುದು ಚಲಾವಣೆಗೆ ಬಂದಿರಲೂಬಹುದು. ಇನ್ನೊಂದು ಸಾಧ್ಯತೆ ಇದೆ. ಬಂಗಾಲಿಯಲ್ಲಿ **ಟೋಪ್** ಎಂದರೆ ಗಾಳದ ಕೊಕ್ಕೆ. **ಟೋಪ್ ಖಾವಾ** ಎಂದರೆ **ಗಾಳ ನುಂಗುವುದು** ಅರ್ಥಾತ್ ಮೋಸಹೋಗುವುದು. ಬಂಗಾಲಿ ಪ್ರಭಾವ ಆಧುನಿಕ ಸಾಹಿತ್ಯದ ಮೇಲೆ ಆಗುತ್ತಿದ್ದ ಸಮಯದಲ್ಲಿ ಈ ಬಂಗಾಲಿ ಟೋಪ್, ಇಂಗ್ಲೀಷಿನ ಕ್ಯಾಪ್ ಮತ್ತು ದೇಶಿ ಟೊಪಿ ಎಲ್ಲದರ ವ್ಯಂಗ್ಯಾರ್ಥ ಮಿಶ್ರಣವಾಗಿ **ಟೋಪಿ ಹಾಕುವುದು** ಹುಟ್ಟಿ-ದ್ದರೂ ಇರಬಹುದು.

-ಶಾ. ಮಂ.

ಬನಾರಸೀ ಬಾಬು ಅಂದಾಕ್ಷಣ ಮನಸ್ಸಿನಲ್ಲಿ ರಸವತ್ತಾದ ಚಿತ್ರ ಮೂಡಿ ಬರುತ್ತದೆ. ಬಿಳೀ ಪಂಜೆ, ಬಿಳೀ ಕುರ್ತಾ ಅಥವಾ ಜುಬ್ಬಾದ ಕೈಗಳ ಮೇಲೆ ಗೆರೆ ಗೆರೆ ಎದ್ದು ಕಾಣುವಂತೆ ಇಸ್ತ್ರೀ ಮಾಡಿರುವ ಥಳುಕು, ಹೆಗಲಿಗೆ ಲಾಲ್ ಗಮ್ಛಾ (ಕೆಂಪು ಗೆರೆಯ ವಸ್ತ್ರ) ಕತ್ತಿಗೆ ಸುತ್ತಿರುವ ಕೆಂಪು ಲಂಗೋಟಿ ಅಥವಾ ಬಟ್ಟೆಯ ತುಂಡು, ತಲೆಗೆ ಕೆಂಪು ಟೋಪಿ, ಬಾಯಲ್ಲಿ ಪಾನ್ ಅಥವಾ ಎಲೆ ಅಡಿಕೆ, ಬಾಯಿಯ ಎರಡೂ ತುದಿಗಳಲ್ಲಿ ಪಾನಿನ ರಸದಿಂದ ಮೂಡಿದ ಒಂದೆಳೆ ಸಣ್ಣದಾದ ಕೆಂಪು ಗೆರೆ, ಕಾಲಿಗೆ ಪಂಪ್ ಶೂಸ್, ಮತ್ತು ಇದೆಲ್ಲದರ ಒಳಗಿರುವ ಭೀಮಾಕೃತಿಯ ಎಣ್ಣೆಗಂಪು ಮುಖದ ವ್ಯಕ್ತಿ. ಬಿಳೀ ಕುರ್ತಾಕ್ಕಿಂತಲೂ ಹಳದೀ ಬಣ್ಣದ ಚುನಂದಾರ್ ಕುರ್ತವೇ ಹೆಚ್ಚು ಬಳಕೆ. ಎದುರಿಗೆ ಯಾರಾದರೂ ಸಿಕ್ಕಿ ಮಾತಾಡಬೇಕಾದಾಗ, ಎಲಿ ಬಾಯಲ್ಲಿಯ ಪಾನಿನ ರಸ ಹೊರಬೀಳು [illegible] ಎಂದು ಕತ್ತೆತ್ತಿಯೇ ಮಾತಾಡುವರು. [illegible] ಹೊರಡುವ ಶಬ್ದ 'ಭೈಯ್ಯಾ'. ಭೈಯ್ಯಾ ಎನ್ನುವದನ್ನು ಈಗ ಅನೇಕರು, ಅದರಲ್ಲೂ ಬೊಂಬಾಯಿ, ಡೆಲ್ಲಿ ಕಡೆ [illegible] ಹಾಸ್ಯಮಯವಾಗಿ, ನಿಕೃಷ್ಟವಾಗಿ, ಪಳ್ಳಿಗ - ಯುಪಿಯವ ಎಂದು ಸೂಚಿಸಲು ಉಪಯೋಗಿಸುತ್ತಾರೆ. ಆದರೆ ನಿಜವಾಗಲೂ ಭೈಯ್ಯಾ ಎನ್ನುವುದು ಬಹಳ ಪ್ರೇಮಮಯ ಶಬ್ದ. ಬಾಯಲ್ಲಿ ಪಾನಿನ ರಸ ಹೆಚ್ಚುವಂತೆ, ಹೃದಯದ ಪ್ರೇಮ ಉಕ್ಕಿ ಮೇಲೆ ಬರುವ ದ್ಯೋತಕವಾದ ಪ್ರೇಮಮಯ ಶಬ್ದ. ಈ ಶಬ್ದವನ್ನು ಬಿಟ್ಟರೆ ಹೆಚ್ಚಾಗಿ ಕೇಳಿಬರುವುದು "ಕಹೋ ರಾಜಾ" (ಏನಂತಿ ರಾಜಾ?) ಅನ್ನೋ ಮಾತುಗಳು.

ಪ್ರತಿ ಬನಾರಸೀ ಬಾಬುವಿಗೂ ಪೆಹಲ್‌ವಾನ್ ಆಗಿ ಮೆರೆಯಲು ಕಾತರ. ಚನ್ನಾಗಿ ತಿಂದು, ದೇಹ ಬೆಳೆಸಿಕೊಂಡು, ಪಾನ್ ತಿನ್ನುತ್ತಾ, ರಿಕ್ಷಾದಲ್ಲಿ ಓಡಾಡುತ್ತಾ ಅಥವಾ ಗಂಗಾ ತೀರದಲ್ಲಿ ನಾಲ್ಕು ಗಂಟೆ ಕಾಲ ಕಳೆದರೆ ಅವನಿಗೆ ಪ್ರೀತಿ. ದಶಾಶ್ವಮೇಧ ಘಾಟೇ ಆಗಲಿ ಅಥವಾ ಚೌಕ್ ಆಗಲಿ ಅಥವಾ ಇನ್ನಾವದೇ ಸಣ್ಣ ಮಾರುಕಟ್ಟೆಯೇ ಆಗಲಿ, ಸಿಹಿ ಅಂಗಡಿಗೆ

ಬನಾರಸೀ ಬಾಬು

ಕೆ. ಚಂದ್ರಮೌಳಿ

ಹೋಗಿ ರಬಡಿ, ಮಲಾಯಿ ಸಿಹಿಗಳನ್ನು ತಿನ್ನಬೇಕು. ದೊಡ್ಡ ದೊಡ್ಡ ಕಬ್ಬಿಣದ ಬಾಂಡಲೆಗಳಲ್ಲಿ ಗಂಟೆಗಟ್ಟಲೆ ಕಾಸಿದ ಹಾಲನ್ನು ಕುಡಿಯಬೇಕು. ಭಾಂಗ್ ಕುಡಿಯಬೇಕು. ತಂಬಾಕು ಬೆರೆಸಿದ ಪಾನ ತಿನ್ನಬೇಕು. ತಿರುಗಾಡಬೇಕು-ಇದು ಬನಾರಸೀ ಬಾಬುವಿನ ದಿನಚರಿ. ಇಂತಹ ದಿನಚರಿ ಸಾಧ್ಯವಾಗದ ಬಡವರಿಗೂ ಹೀಗೇ ಇರಬೇಕೆಂಬ ಕನಸು. ಭೈಯ್ಯಾ, ಕಹೋ ರಾಜಾ ಅನ್ನುವುದು ಸಂಭಾಷಣೆ ಶುರುಮಾಡುವ ಮಾತುಗಳಾದರೆ ಕ್ರಮೇಣ ಮಾತಿನ ಬಿಸಿಯೂ ಏರುತ್ತದೆ. ಬೈಗಳಗಳಿಲ್ಲದ ಮಾತು ಕಡಿಮೆ.

"ಬನಾರಸಕೀ ಗಾಲಿ, ಲಕ್ನೋ ಮಜಾಕ್", ಬನಾರಸಿನ ಬೈಗುಳ, ಲಕ್ನೋದ ತಮಾಷೆ ಅನ್ನುವದು ಪ್ರಸಿದ್ಧ.

ಬನಾರಸ ಅಂದಾಕ್ಷಣ ಮೂಡಿ ಬರುವ ಇನ್ನೊಂದು ಚಿತ್ರ ಅಲ್ಲಿಯ ಪಂಡಾಗಳದ್ದು. ಇವರ ಬಗ್ಗೆ ಆಗಲೇ ಸಾಕಷ್ಟು ಹೇಳಿದ್ದಾಗಿದೆ. ಬನಾರಸದಲ್ಲಿ ಜೀವನ ನಡೆಸಬೇಕಾದರೆ ಇವರುಗಳಿಂದ ತಪ್ಪಿಸಿಕೊಂಡಿರುವದು ಬಹಳ ಅಗತ್ಯ. ಇಲ್ಲಿಯ ವಾಡಿಕೆಯ ಗಾದೆಯೇ ಇವರ ಬಗ್ಗೆ ಜನರನ್ನು ಎಚ್ಚರಿಸುತ್ತದೆ-

ರಾಂಡ್ ಸಾಂಡ್ ಸೀಡೀ ಸನ್ಯಾಸೀ
ಇನಸೇ ಬಚೇತೋ ಸೇವೈ ಕಾಸೀ

ಅಂದರೆ, ವಿಧವೆ, ಸೂಳೆ, ಎತ್ತು. ಮೆಟ್ಟಲು, ಮತ್ತು ಪಂಡಾ ಇವರುಗಳ ಕೊಂಡಿಯಿಂದ ತಪ್ಪಿಸಿಕೊಂಡರೇ ಕಾಶೀವಾಸ. ಇಲ್ಲದಿದ್ದರೆ ಅಲ್ಲಿಯ ಜೀವನ ಬಲು ಕಷ್ಟ ಎಂದು ಅರ್ಥ. ಅದೇನೋ ನಿಜ. ಇಲ್ಲಿಯ ಎತ್ತುಗಳು ಮತ್ತು ಪಂಡಾಗಳು ಎರಡೂ ಒಂದೇ; ಯಾವ ಕ್ಷಣದಲ್ಲಿ ಎಲ್ಲಿಂದ ಬಂದು ಗುಮ್ಮುತ್ತಾರೋ ಗೊತ್ತಾಗುವುದೇ ಇಲ್ಲ. ಪಂಡಾಗಳು ಗಂಗಾ ಸ್ನಾನದ ಘಟ್ಟಗಳಲ್ಲಿ, ಮಂದಿರಗಳ ಮುಂದೆ ನಿಮ್ಮ ಬರುವಿಕೆಗಾಗಿ ಹೊಂಚು ಹಾಕಿ ಕಾಯುತ್ತಿದ್ದರೆ, ಇಲ್ಲಿಯ ಭೀಮಾಕಾರದ ಎತ್ತುಗಳು ಎಲ್ಲಿ ಅಂದರೆ ಅಲ್ಲಿ, ನಗರದ ಎಲ್ಲಾ ರಸ್ತೆಗಳಲ್ಲೂ ನಿರಾತಂಕವಾಗಿ ಓಡಾಡಿಕೊಂಡಿರುತ್ತವೆ. ರಸ್ತೆಯ ಮಧ್ಯದಲ್ಲಿ ಆರಾಮವಾಗಿ ಮಲಗಿ ಬಿಟ್ಟರೆ ಅಲ್ಲಿ ಓಡಾಡುವ ಸೈಕಲ್-ರಿಕ್ಷಾ, ಬಸ್ ಎಲ್ಲಾ ಅದನ್ನು ಸುತ್ತಿ ಬಳಸಿಕೊಂಡು ಹೋಗಬೇಕೇ ವಿನಾ ಅದನ್ನು ಎಬ್ಬಿಸುವ ಧೈರ್ಯ ಯಾರಿಗೂ ಬಾರದು. ವಿಶ್ವನಾಥ ಮಂದಿರಕ್ಕೆ ಅಥವಾ ವಿಶಾಲಾಕ್ಷಿ ಮಂದಿರಕ್ಕೆ ಹೋಗುವಾಗ ಕಿರಿದಾದ ಓಣಿಗಳು. ಆ ಓಣಿಗಳಿಗೆ ಎಡದಿಂದ ಬಲದಿಂದ ಅಲ್ಲಲ್ಲಿ ಸೇರಿಕೊಳ್ಳುವ ಇನ್ನೂ ಅಷ್ಟು ಓಣಿಗಳು. ಈ ಓಣಿಗಳಲ್ಲಿ ಎತ್ತು ಮಲಗಿದ್ದರೆ ಪರವಾಗಿಲ್ಲ. ಆದರೆ ಒಮ್ಮೊಮ್ಮೆ ಎಡದಿಂದಲೋ, ಬಲದಿಂದಲೋ ಅಥವಾ ಹಿಂದಿನಿಂದಲೋ ಒಂದೇ ಓಟ ಓಡಿ ಬರುವುದೂ ಸಾಮಾನ್ಯ. ಆಗ ಓಣಿಯಲ್ಲಿ ಓಡುವ ಜನಗಳು, ಹೆಂಗಸರು, ಮಕ್ಕಳು ಎಲ್ಲರೂ ಯದ್ವಾತದ್ವಾ ಓಡಿ ಅಲ್ಲಿಯ ಅಂಗಡಿ ಮುಂಗಟ್ಟುಗಳೊಳಗೆ ನುಗ್ಗುವದು ಸಾಮಾನ್ಯ. ಎಷ್ಟೋ ಸಲ ಅನಾಹುತಗಳಾಗುವುದೂ ಉಂಟು. ಇನ್ನು ಇಲ್ಲಿಯ ಸೂಳೆಯರೂ, ಇಲ್ಲಿಯ ಗಂಗಾತೀರದ ಕಡಿದಾದ ಮೆಟ್ಟಲುಗಳಂತೆ ಜಾರಿಕೆಯವರಿರಬೇಕು- ಎಲ್ಲಿ ಹೇಗೆ ಆಯತಪ್ಪಿ ಜಾರಿ ಮುಳುಗಿ ಹೋಗುತ್ತೀರೋ ಗೊತ್ತಾಗುವುದೇ ಇಲ್ಲವಂತೆ. ಇಲ್ಲಿಯ ಪಂಡಾಗಳು ಮೋಸ ಮಾಡಿ ನಿಮ್ಮಲ್ಲಿರುವ ಕೊನೆ ಪುಡಿಗಾಸೂ ಕೀಳುತ್ತಾರೆ, ಬೇಕಾದಲ್ಲಿ ಕತ್ತು ಹಿಸುಕುವುದಕ್ಕೂ ಹಿಂಜರಿಯುವುದಿಲ್ಲ ಅನ್ನುವದು ಇವರ ಬಗ್ಗೆ ಇರುವ ಹೆದರಿಕೆ ತೋರಿಸುತ್ತದೆ. ಇದೇ ರೀತಿ ಇಲ್ಲಿಯ ಪಂಡಾಗಳು ನಿಮ್ಮನ್ನು ಒಲಿಸಿಕೊಳ್ಳಲು ನಿಮ್ಮ ಭಾಷೆ ಮಾತಾಡಲು ಪ್ರಯತ್ನ ಮಾಡುವುದೇ ಅಲ್ಲದೆ ನಿಮ್ಮ ಹೆಸರು, ಊರಿನಿಂದ ನಿಮ್ಮ ಕುಲದ ಹಿಂದಿನ ಚರಿತ್ರೆಯನ್ನು ಹೇಳಲು ಶುರು ಮಾಡುತ್ತಾರೆ ಅನ್ನುವದು ಇನ್ನೊಂದು ನಂಬಿಕೆ. ಯಾರು ಏನೇ ಅನ್ನಲಿ, ನಂಬಿಕೆ ಏನೇ ಇರಲಿ, ಕಾಶಿಯ ಸೂಳೆ, ಎತ್ತು, ಮೆಟ್ಟಲು, ಪಂಡಾಗಳನ್ನು ಕಂಡಾಗ ಎಚ್ಚರಿಕೆಯಿಂದ ಇರಿ.

ಇಲ್ಲಿಯ ಜನ ಹಳ್ಳಿಯಲ್ಲೇ ಇರಲಿ, ಪಟ್ಟಣದಲ್ಲೇ ಇರಲಿ, ಇರುವ ರೀತಿ ನೀತಿ, ಇರುಸರಿಕೆಗಳು ಸುಮಾರು ಒಂದೇ ತರಹ. ಹೊರ ಊರುಗಳಲ್ಲಿ, ದೂರ ದೇಶದಲ್ಲಿ ದೊಡ್ಡ ಕೆಲಸಗಳಲ್ಲಿದ್ದು ಮೆರೆದು ಬಂದವರೂ ತಮ್ಮ ಊರಿಗೆ ಅಥವಾ ಹಳ್ಳಿಗೆ ಬಂದಾಗ ಪ್ಯಾಂಟ್ ಸೂಟು ಬೂಟು ಬಿಟ್ಟು ಇಲ್ಲಿಯ ಸಾದಾ ಉಡುಪು ಧರಿಸಿ ಇಲ್ಲಿಯ ಇತರರಂತೇ ಇರಬೇಕಾಗುತ್ತದೆ. ಅಂಧವಿಶ್ವಾಸ, ಮೂಢ ನಂಬಿಕೆಗಳು, ಸಾಧು ಸನ್ಯಾಸಿಗಳಲ್ಲಿ ಗೌರವ, ಮಂತ್ರ ತಂತ್ರ [illegible] ಆಸಕ್ತಿ, ಚಮತ್ಕಾರ-ಢೋಂಗಿಗಳಿಗೆ ಮಾರುಹೋಗುವಿಕೆ, ಇವುಗಳನ್ನು ನೋಡಿದರೆ ಇಲ್ಲಿಯ

ಜನ ಯಾವ ಹಳ್ಳಿಗನಿಗೂ ಮುಂದೆ ನಡೆದಿಲ್ಲ ಅನಿಸುತ್ತದೆ. ಆದರೆ ಇವರು ಅಲ್ಪ ಸಂತೋಷಿಗಳು. ಆತ್ಮ ಗೌರವಕ್ಕಾಗಿ ಇವರು ನಡೆಸುವ ಮುಷ ಕಾ ಲಡಾಯಿ (ಮೀಸೆಗಾಗಿ ಜಗಳ), ಬಡತನ ಅಥವಾ ಹುಳುಕು ಮುಚ್ಚಲು ಮಾಡುವ ಪ್ರಯತ್ನ ಇವನ್ನು ನೋಡಿದಾಗ ನಗು ಬರದೆ ಇರುವದಿಲ್ಲ. ಜಮಿನ್ದಾರರ ಹಮ್ಮು ಬಿಮ್ಮು, ಗೌರವ ಶೋಷಣೆ, ಸಾಮಾಜಿಕ ಪ್ರತಿಷ್ಠೆ ಉಳಿಸಿಕೊಳ್ಳಲು ಹಬ್ಬ ಹರಿದಿನಗಳಲ್ಲಿ ಮಾಡುವ ಮಿತಿಮೀರಿದ ದುಂದು ಖರ್ಚು, ಇವುಗಳನ್ನು ನೋಡಿದಾಗ ಇವರು ನಗರದ ಪ್ರತಿಷ್ಠಿತ ವ್ಯಕ್ತಿಗಳಿಗೆ ಯಾವುದರಲ್ಲೂ ಕಮ್ಮಿಯಿಲ್ಲ ಅನ್ನಿಸುತ್ತಿದೆ. 'ದಸ್ ಮುಕದ್ದಮಾ ಲಡಾ ಹೂಂ' ಅನ್ನುವದು ಏನು ಹೆಮ್ಮೆಯ ವಿಷಯವೊ! ಎಷ್ಟೇ ಬಡವನಿರಲಿ ಅಥವಾ ಶ್ರೀಮಂತನೇ ಇರಲೀ, ಬನಾರಸೀ ಬಾಬುವಿನ ಮನೆಗೆ ಹೋದರೆ ಅವರ ಆತಿಥ್ಯ ಭಾವನೆ, ಇವರು ಮಾಡುವ ಸನ್ಮಾನ ಇವುಗಳು ಅವರ ಭಾಷೆಯಲ್ಲಿ, ಅವರು ಬಲವಂತವಾಗಿ ತಿನ್ನಿಸುವ ರೀತಿಯಲ್ಲಿ ಎದ್ದು ಕಾಣುತ್ತದೆ. ಏನಿಲ್ಲದಿದ್ದರೂ ಬೆಲ್ಲದುಂಡೆ, ನೀರಾದರೂ ಸಿಕ್ಕೇ ಸಿಗುತ್ತದೆ. ಇದುವರೆಗೂ ಉಚ್ಚ ವರ್ಗದ ಮನೆಗಳಲ್ಲೂ ಹೆಂಗಸರು ಅತಿಥಿಗಳಿದ್ದಾಗ ಹೊರಬರುವುದೇ ಇಲ್ಲ. ಚಿರಪರಿಚಿತರು ಬಂದಾಗ ಮನೆಯೊಡತಿ ಹೊರಬರಬಹುದು. ಇಲ್ಲದಿದ್ದರೆ ಮುದುಕಿಯರು ಹೊರ ಬಂದಾರು. ಬನಾರಸೀ ಬಾಬು ಸ್ತ್ರೀಯರಿಗೆ ಕೊಡುವ ಗೌರವವೂ ಹಾಗೆಯೇ. ಹೆಂಗಸೊಬ್ಬಳ ಬಗ್ಗೆ ಒಳ್ಳೆಯ ಭಾವನೆ, ಗೌರವವಿದ್ದು ಅವಳು ರೀತಿನೀತಿಯಲ್ಲಿ ಒಳ್ಳೆಯವಳೆನಿಸಿಕೊಂಡಿದ್ದರೆ ಅವಳ ಮಾನ ಉಳಿಸಲು ಪ್ರಾಣ ಕೊಡಲೂ ಸಿದ್ಧ. ಅದೇ ಇನ್ನೊಬ್ಬ ಹೆಂಗಸು ಜಾರಿ ಬಿದ್ದವಳು ಅನಿಸಿದರೆ ಅವಳನ್ನು ರಸ್ತೆಯ ಮಧ್ಯದಿಂದಲೇ ಹಾರಿಸಿಕೊಂಡು ಹೋಗಲೂ ಸಿದ್ಧ.

ಬನಾರಸೀ ಬಾಬು ಆಚರಿಸುವ ಹಬ್ಬಗಳು ಅನೇಕ. ಮುಖ್ಯವಾದವು ಕೆಲವು— ದಸರ, ರಾಮಲೀಲಾ, ದುರ್ಗಾ, ದೀಪಾವಳಿ, ಶಿವ ರಾತ್ರಿ, ಹೋಲಿ, ರಾಮನವಮಿ ಮತ್ತು ಮಾತಾಜಿ (ಶೀತಳಾ ಮಾ) ಪೂಜಾ. ರಾಮಲೀಲಾ, ದುರ್ಗಾಪೂಜೆ ಮೊಹಲ್ಲಾಗಳಲ್ಲೆಲ್ಲಾ ನಡೆದರೆ, ದೀಪಾವಳಿ ಮನೆಮನೆಯಲ್ಲಿ ಆದರೂ ದೀಪಾವಳಿಯ ದೀಪದ ಅಲಂಕಾರ ವೈಭವ ಪೂರ್ಣವಾಗಿ ಕಾಣುವುದು ಕಾಶೀ ಹಿಂದೂ ವಿಶ್ವವಿದ್ಯಾಲಯದ ಮಂದಿರದ ಗೋಪುರಗಳಂತೆ ಕಟ್ಟಿರುವ ಹಾಸ್ಟೆಲುಗಳ ಮೇಲೆ. ಒಮ್ಮೆ ಇಂಗ್ಲೀಷ್ ಅಧಿಕಾರಿಯೊಬ್ಬ ರಾಮಲೀಲಾ ನಡೆಸುತ್ತಿದ್ದ ಗುಂಪಿಗೆ ಅದನ್ನು ನಡೆಸಲು ಒಪ್ಪಿಗೆ ಕೊಡಲಿಲ್ಲವಂತೆ, ಬಲವಂತ ಮಾಡಿದಾಗ ಅರೆ, ನಿಮ್ಮ ಹನುಮಾನ ಸಮುದ್ರ ಹಾರಿದ. ಆದರೆ ನಿಮ್ಮ ಗುಂಪಿನ ಈ ಹನುಮಾನ ನದಿಯನ್ನಾದರೂ ಹಾರಿದರೆ ರಾಮಲೀಲಾ ನಡೆಸಲು ನನ್ನ ಒಪ್ಪಿಗೆ ಎಂದು ಕರಾರು ಹಾಕಿದಂತೆ. ಈ ಕರಾರು ಒಪ್ಪಿದ ಹನುಮಾನ ವರುಣಾ ನದಿಯನ್ನು ಹಾರಿದ. ಆದರೆ ಅಸು ನೀಗಿದ. ಅಂದು ಅವನೇನೋ ಸತ್ತ. ಆದರೆ ರಾಮಲೀಲಾ ಎಂದೆಂದಿಗೂ ಉಳಿಯಿತು ಅನ್ನುತ್ತಾರೆ, ಬನಾರಸಿಗಳು. ಇದೇ ರೀತಿ ರಾಮನಗರದಲ್ಲಿ ನಡೆಯುವ ರಥ ಯಾತ್ರಾ, ಸಾರನಾಥದಲ್ಲಿ ನಡೆಯುವ ರೋರಿಕ್, ನಾಟೀ ಇಮ್ಲಿಯಲ್ಲಿ ನಡೆಯುವ ಭರತ ಮಿಲಾಪ್, ಚೇತ್‌ಗಂಜಿನಲ್ಲಿ ನಡೆಯುವ ನಾಕ್‌ಕಟೀಯ (ಶೂರ್ಪಣಕಳ ಮೂಗು ಕತ್ತರಿಸುವ ನಾಟಕ), ಪ್ರತಿ ದಿನ ಸಂಜೆ ಗಂಗಾ ತೀರದಲ್ಲಿ ಮಾಡುವ ಗಂಗಾಜೀಕೀ ಆರತಿ ಇವು ನೋಡಲು ಚೆನ್ನ. ಹೋಲಿಯಲ್ಲಿ ಭಾಂಗ್ ಮತ್ತು ಟಂಡಾಯಿ ಕುಡಿದು ಆಡುವುದೇ ಒಂದು ಸಂಭ್ರಮ. ಸೋಂಫ್, ಏಲಕ್ಕಿ, ಮೆಣಸು, ಜೀರೆ, ಕರಬೂಜದ ಬೀಜಗಳು, ಬಾದಾಮಿ, ಅಡೌ, ಹಾಲು- ಸಕ್ಕರೆ ಇವು

ಗಳಿಂದ ಮಾಡಿದ ಟಂಡಾಯಿ ಕುಡಿಯಲು ಬಹಳ ಸ್ವಾದಿಷ್ಟವಾಗಿರುತ್ತದೆ. ಗಂಗಾ ನದಿಯ ಆಚೆ ದಡದಲ್ಲಿ ರಾಮನಗರದಲ್ಲಿ ಕಾಶೀ ರಾಜನ ಅರಮನೆಯಿದೆ. ಅಲ್ಲಿಯ ದಸರಾ ಸಂಭ್ರಮ, ಆಚರಣೆಯೇ ಮೈಸೂರಿನ ದಸರಾಕ್ಕೂ ಮಾದರಿಯಾಗಿದೆ ಎಂದು ಹೇಳು ತ್ತಾರೆ. ಇದರ ಸತ್ಯಾಸತ್ಯತೆಯನ್ನು ವಿಚಾರಿಸ ಲಾಗಿಲ್ಲ.

ಬನಾರಸೀ ಬಾಬುಗಳ ಕೆಲವು ವೈಶಿಷ್ಟ್ಯ ಗಳನ್ನು ಹೇಳಿದ ಮೇಲೆ, ಇವರೇನು ಮಹಾ ಇಡೀ ಪೂರ್ವ ಭಾಗದ ಉತ್ತರ ಪ್ರದೇಶದ ಜನವೆಲ್ಲಾ ಹೀಗೆಯೇ ಅನ್ನಬಹುದು. ಒಂದು ವಿಧದಲ್ಲಿ ಇದು ನಿಜವೇ ಸರಿ, ಆದರೆ ಇನ್ನೊಂದು ರೀತಿಯಲ್ಲಿ ಅಷ್ಟು ಸರಿಯಿಲ್ಲ. ಬಲಿಯಾ, ದೇವರಿಯಾ, ಅಜಮಗರ, ಗೋರಖ ಪುರ, ಗಾಜೀಪುರ, ಮಿರ್ಜಾಪುರ ಎಲ್ಲೆಲ್ಲೂ ಜನಗಳು ಇದೇ ರೀತಿಯೇ ಆದರೆ ಇನ್ನೂ-ಒರಟರು, ಬುದ್ಧಿಮಂಕರು, ಜಗಳಗಂಟರು, ರಟ್ಟೆ ಬಲವೇ ದೊಡ್ಡದೆಂದು ನಂಬಿರುವವರು. ಬಲಿಯಾದಲ್ಲಿ ಪ್ರತಿಯೊಬ್ಬ ಒರಟನ ಕೈಯಲ್ಲೂ ಎಂಟಡಿ ಎತ್ತರದ ದಪ್ಪನೆಯ ಕೋಲು ಇದ್ದೇ ಇರುತ್ತದೆ. ಕೋಲು ಹಿಡಿದುಕೊಳ್ಳದೆ ಅವರ ಓಡಾಟವೇ ಇಲ್ಲ. ಬುದ್ಧಿಯಿಂದಾಗದ್ದನ್ನು ಕೋಲಿನಿಂದ ನಡೆಸಲು ಪ್ರಯತ್ನಪಡುತ್ತಾರೆ. ಆದ್ದರಿಂದ 'ಬಲಿಯಾದಿಂದ ಬಂದವನು' ಅಂದರೆ ತಕ್ಷಣ ಒರಟ, ಬುದ್ಧಿಗೇಡಿ, ಎಂದು ಬೈದ ಹಾಗೆಂದು ಬನಾರಸೀ ಬಾಬುಗಳ ತಮಾಷೆ ಮಾಡುತ್ತಾರೆ. ಬಲಿಯಾದವರು, ಅವರ ಎಂಟಡಿ ಕೋಲು ಇವುಗಳನ್ನು ನೋಡಿಯೇ 'ಜಿಸ್‌ಕಾ ಲಾಟೀ ಉಸೀಕಾ ಭೈಂಸ್,' (ಯಾರ ಕೋಲೋ ಅವರದೆ ಎಮ್ಮೆ) ಎನ್ನುವ ಗಾದೆ ಮಾತು ಹುಟ್ಟಿ ಕೊಂಡದ್ದು ಅನಿಸುತ್ತದೆ. ಇವರ ಕೋಲಿನ ಮಹತ್ವ ಎಷ್ಟೆಂದರೆ, ಮದುವೆಗೆ ಹೆಣ್ಣನ್ನು ನೋಡಲು ಹೋದಾಗಲೂ ಇವರು ಕೋಲು ತಗೊಂಡೇ ಹೋಗುತ್ತಾರಂತೆ - ಹುಡುಗಿಯ ಎತ್ತರವನ್ನು ಕೋಲಿನಿಂದ ಅಳಿಯುವದಕ್ಕೆ. ಬಲಿಯಾದವರನ್ನು ಬಿಟ್ಟು ಮಿಕ್ಕ ಪೂರ್ವ ಪ್ರದೇಶದ ಜನ 'ಹುಡುಗಿ ಹದಿಮೂರು ಮುಷ್ಟಿ,' ಹುಡುಗ ಹದಿನಾರು ಮುಷ್ಟಿ' ಎಂದು ಲೆಕ್ಕ ಹಾಕುವುದು ಸಾಮಾನ್ಯ. ಸಣ್ಣ ವಯಸ್ಸಿನ ಮದುವೆಗಳೇ ಹೆಚ್ಚಾದ್ದರಿಂದ ವಧುವರರನ್ನು ಹೆಗಲಿನ ಮೇಲೆ ಕೂರಿಸಿಕೊಂಡು ಹೋಗು ತ್ತಾರೆ. ಹುಡುಗಿಯನ್ನು ಗಂಡನ ಮನೆಗೆ ಕಳಿಸುವುದು ಒಂದು, ಮೂರು, ಐದು, ಏಳು ವರ್ಷಗಳ ನಂತರ ಹುಡುಗಿ ವಯಸ್ಸಿಗೆ ಬಂದ ಮೇಲೆ. ಶ್ರೀಮಂತರ ಮನೆಯ ಮದುವೆ ಯಾದರೆ ಬರಾತ್, ಬಿಡಹಾರ್ ಬದಾಯಿ ಎಂದು ಮೂರು ದಿನ, ಐದು ಊಟಗಳ ಮದುವೆ ಆಗುತ್ತದೆ. ಬರಾತ್‌ಗಾಗಿ ಬಾಜಾ ಬಜಂತ್ರಿ, ಟೆಂಟ್, ನೃತ್ಯ ಸಂಗೀತ ಎಲ್ಲ ಏರ್ಪಾಡಾಗಿರುತ್ತದೆ.

ಬನಾರಸೀ ಬಾಬುಗಳು ಅವರವರಲ್ಲಿ ಆಡಿ ಕೊಳ್ಳುವ ಮಾತು, ಗಾದೆ, ಚಾಟು ಉಕ್ತಿ ಗಳಿಂದ ಪೂರ್ವ ಭಾಗದ ಉತ್ತರ ಪ್ರದೇಶದ ಜನರ ಬಗ್ಗೆ ಜಾತಿ ಮತಗಳ ಬಗ್ಗೆ ಸ್ವಲ್ಪ ವಿವರ ತಿಳಿದುಕೊಳ್ಳಬಹುದು. ಈ ಮಾತು ಇಡೀ ಉತ್ತರ ಭಾರತದ ಬೇರೆ ಬೇರೆ ಜಾತಿಗಳ ಜನರಿಗೂ ಅನ್ವಯಿಸುತ್ತದೆ. ಇಲ್ಲಿ ಬ್ರಾಹ್ಮಣ ರಿಗೆ ಸನ್ಮಾನವೇನೋ ಇದೆ. ಬ್ರಾಹ್ಮಣ ಆರ್ಥಿಕ ವಾಗಿ ಹಿಂದುಳಿದು ಯಾವ ಪೈಪೋಟಿಗೂ ತಲೆ ಹಾಕದೆ ಇರೋದರಿಂದ ಅವನ ಬಗ್ಗೆ ಕೊಂಚ ಗೌರವ ಇದೆ. ಆದರೆ ಅವರ ಬಗ್ಗೆ ಹಾಸ್ಯ ತಪ್ಪಿದ್ದಲ್ಲ-

ಬಾಮನ್ ಕಾ ಗಾಂವ್ ಉಜಾಡ್
ಕಾ ಗಾಂವ್

(ಬ್ರಾಹ್ಮಣನ ಗೂಡು ಅಶಿಸ್ತಿನ ಬೀಡು.)

ಬ್ರಾಹ್ಮಣರಾಗಿದ್ದು, ಪೂಜಾ ಪಾಠಗಳನ್ನು ಮರೆತು, ಭೂಮಿ ಉಳಲು ಶುರು ಮಾಡಿದ

ಭೂಮಿಯಾರ್ ಚತುರತೆಯಲ್ಲಿ ಕಾಯಸ್ಥನಿಗಿಂತ ಒಂದು ಹೆಜ್ಜೆ ಹಿಂದೆ ಅಷ್ಟೆ.

ಧೂಲ್ ಕೀ ಜೇಮರ್ ಬಸ್ತೇ ಹೈ
-ಧೂಳಿನ ಹಗ್ಗ ಹೊಸೆಯುತ್ತಾರೆ-

ಭೂಮಿಯಾರರು. ಇನ್ನು ಕಾಯಸ್ಥರು ಯಾವಾಗಲೂ ನಯವಿನಯ ಚತುರರು, ಮಾತಿನಲ್ಲೇ ಮಣೆ ಹಾಕುವ ಜನ ಎಂದು ಪ್ರಸಿದ್ಧಿ. ಅವರ ಬಗ್ಗೆ ಬನಾರಸೀ ಬಾಬು ಹೇಳುವ "ಕಾಯಸ್ಥ ಕಾ ಬಚ್ಚಾ ಕಭೀ ನಹಿ ಸಚ್ಚಾ ಹೋತೊ -" ಅನ್ನುವ ಮಾತುಗಳು ಎಲ್ಲೆಲ್ಲೂ ಕೇಳಿ ಬರುತ್ತದೆ. ಹಳ್ಳಿಯಲ್ಲೊಬ್ಬ ಕಾಯಸ್ಥ ಇದ್ದರೂ ಸಾಕು, ಜಗಳದಿಂದ ಹಳ್ಳಿ ನೂರು ಪಾಲು ಅನ್ನುತ್ತಾರೆ. ಈ ಪ್ರದೇಶಗಳಲ್ಲಿ ಕಾಣುವ ಅಹೀರ್, ಜಾಧವ್, ಯಾದವ್ ಅವರನ್ನು ಕಂಡರೆ ಬನಾರಸೀ ಬಾಬುಗಳಿಗೆ ನಿಕೃಷ್ಟ.

ಅಹೀರ್ ಕಾ ಬೇಟಾ ಜಬ್ ಸಾಟಾ ತಬ್ ಪಾಟಾ
- ಅಹೀರ್‌ನ ಮಗನಿಗೆ ಅರವತ್ತಾದಾಗ ಬುದ್ಧಿ ಬಲಿಯಿತು. ಹೀಗೆ ಬನಾರಸೀ ಬಾಬುವಿನ ವಿಚಾರಗಳು ಅನೇಕ.

ಬನಾರಸೀ ಬಾಬು ಹೇಳುವ ಇನ್ನೊಂದು ಗಾದೆ ಮಾತು ಹೀಗಿದೆ:

ಚಾರ್ ಕೋಸ್ ಪರ್ ಬಾನೀ ಬದಲೇ
ಏಕ್ ಕೋಸ್ ಪರ್ ಪಾನೀ
ನಾಲ್ಕು ಕೋಸಿಗೆ ವಾಣಿ ಬದಲು, ಒಂದು
ಕೋಸಿಗೆ ನೀರು ಬದಲು

ಒಂದು ಕೋಸೆಂದರೆ ಸುಮಾರು ನಾಲ್ಕು ಕಿಲ್ಲೋ ಮೀಟರ್ ದೂರ. ಈ ಮಾತೇನೋ ನಿಜ. ಇಲ್ಲಿ ಜಾಗದಿಂದ ಜಾಗಕ್ಕೆ ಮಾತಾಡುವ ಭಾಷೆಗೆ ಬದಲಾಗುತ್ತದೆ. ಬನಾರಸೀ ಬಾಬು ಮತ್ತು ಪೂರ್ವ ಭಾಗದ ಉತ್ತರ ಪ್ರದೇಶದವರು ಮಾತಾಡುವ ಹಿಂದಿಗೆ ಒಟ್ಟಿನಲ್ಲಿ ಭೋಜಪುರಿ ಎಂದು ಕರೆದರೂ ಅವರಲ್ಲಿ ಇನ್ನೂ ಸಣ್ಣ ವಿಭಾಗಗಳಿವೆ. ಉತ್ತರ ಪ್ರದೇಶದ ಬಲಿಯಾ ಮತ್ತು ಬಿಹಾರದ ಛಪ್ರಾಗಳ ಮಾತಾಡುವ ಭಾಷೆಗೆ ಮಲ್ಲಿಕಾ ಮತ್ತು ಛಿಲ್ಲಿಕಾ ಎಂದೂ, ಬನಾರಸೀ ಬಾಬು ಮಾತಾಡುವ ಭಾಷೆಗೆ ಕಾಶಿಕಾ ಎಂದೂ ಕರೆಯುತ್ತಾರೆ. ಪೂರ್ವ ಭಾಗದ ಉತ್ತರ ಪ್ರದೇಶ ಮತ್ತು ಪಶ್ಚಿಮ ಭಾಗದ ಬಿಹಾರಿಗಳ ಸುಮಾರು ಒಂದು ಕೋಟಿ ಜನ ಭೋಜಪುರಿ ಮಾತಾಡುತ್ತಾರೆ. ಈ ಭಾಷೆಯ ಲಿಪಿಗೆ ಕೈತಿ ಎಂದೂ ಇದನ್ನು ಕಾಯಸ್ಥರು ತಂದರೆಂದೂ ಹೇಳುತ್ತಾರೆ. ಭೋಜಪುರಿ ಭಾಷೆಯು ಹಾಡುಗಳಿಗೆ ಪ್ರಸಿದ್ಧ ಅನ್ನಬಹುದು. ಮಗು ಹುಟ್ಟುವಾಗ ಹಾಡುವುದು ಮತ್ತು ಋತುಗಳಲ್ಲಿ ಹಾಡುವಂತಹವು ಎಂದು ಎರಡು ರೀತಿಯ ಹಾಡುಗಳು ಮುಖ್ಯ. ಮಗು ಹುಟ್ಟುವಾಗ ಹಾಡುಗಳನ್ನು ಸೊಹಾರ್ (ಹುಟ್ಟುವ ಮೊದಲು ಆತಂಕ, ನೋವು ಇತ್ಯಾದಿ) ಮತ್ತು ಖಿಲೋನಾ (ಹುಟ್ಟಿದ ನಂತರದ ಸಂತಸ, ಉತ್ಸಾಹ)ಗಳೆಂದು ಎರಡು ವಿಧ. ಒಂದು ಭೋಜಪುರಿ ಹಾಡಿನ ಸ್ಥೂಲ ಅರ್ಥ ಹೀಗಿದೆ - ಮನೆಯಿಂದ ಹೆಣ್ಣು ಮಗಳು ಗಂಡನ ಮನೆಗೆ ಹೊರಟಾಗಿನ ಹಾಡು-

ಸಪ್ತ ಗಂಗೆಗಳುಕ್ಕಿದುವು ತಾಯಿಯತ್ತಾಗ,
ಸಪ್ತ ಸಾಗರಗಳಬ್ಬರ ತಂದೆಯತ್ತಾಗ
ಉಡಿಗೆ ತೊಯ್ದುವು ಅಣ್ಣನತ್ತಾಗ, ಅಳ-
ಲಿಲ್ಲ ಹೃದಯವಿಹೀನೆ ಅತ್ತಿಗೆ.
ದಿನದಿನವೂ ಬಾರೆಂದಳು ತಾಯಿ, ಆರು
ತಿಂಗಳಿಗೊಮ್ಮೆ ಬಾರೆಂದರು ತಂದೆ
ಹಬ್ಬ ಹರಿದಿನಗಳಲ್ಲಿ ಪಲ್ಲಕ್ಕಿ ಕಳಿಸುವೆ ನೀ
ಬಾರೆಂದ ಅವಳಣ್ಣ
ಕಚ್ಚಿದ ತುಟಿ ಬಿಚ್ಚಲಿಲ್ಲ. ಆ ಅತ್ತಿಗೆ,
ಅವಳು ಬರುವುದು ಅವಳಿಗೆ ಬೇಡಣ್ಣ.

ಹೀಗೆ ರೂಪ - ರೇಷೆ, ಆಚಾರ- ವಿಚಾರ ಮಾತು ಕತೆಗಳಲ್ಲಿ ಬನಾರಸೀ ಬಾಬುವಿನದೇ ಒಂದು ವಿಭಿನ್ನ ರೀತಿ! ★

ಒಂದು ಊರಿನ ಕಥೆ

ಚಂದ್ರಕಾಂತ ಕುಸನೂರ

ಚನ್ನಪ್ಪ ಗೌಡರೆಂದರೆ ಈ ಭಾಗಕ್ಕೆ ರಾಜರಿದ್ದಂತೆ. ಒಂದು ದೃಷ್ಟಿಯಿಂದ ಅವರು ರಾಜರೇ ಹೌದು. ಬ್ರಿಟಿಷರ ಕಾಲದಲ್ಲಿ ಅವರ ಮನೆತನಕ್ಕೆ ವಿಶೇಷ ಮಾನ ಮರ್ಯಾದೆಯಿತ್ತು. ೧೮೫೭ರ ನಂತರ ದೇಶದಲ್ಲಿ ಬ್ರಿಟಿಷರ ವಿರುದ್ಧ ಜನಾಭಿಪ್ರಾಯ ರೂಪಗೊಳ್ಳುತ್ತಿತ್ತು. ಅನೇಕ ರಾಜ ಮಹಾರಾಜರು, ಸಂಸ್ಥಾನಿಕರು, ಬ್ರಿಟಿಷರ ನೀತಿ ಧೋರಣೆಗಳಿಂದ ಬೇಸರಪಟ್ಟುಕೊಂಡಿದ್ದರು. ಅಂತಹ ವಾತಾವರಣದಲ್ಲಿ, ಆಳರಸರಾಗುವ ಬಯಕೆಯನ್ನು ಹೊತ್ತುಕೊಂಡ ಬ್ರಿಟಿಷರಿಗೆ, ವಿಶ್ವಾಸದ, ತಮಗೆ ಸಹಾಯ ಮಾಡುವಂತಹ 'ನೇಟಿಪ್ಪ' ಬೇಕಾಗಿದ್ದರು. ಆ ಸಮಯದಲ್ಲಿ ಚನ್ನಪ್ಪಗೌಡರ ಮನೆತನದವರು ಬ್ರಿಟಿಷರಿಗೆ ಬಹಳಷ್ಟು ಸಹಾಯ ಮಾಡಿದ್ದರು. ಗೌಡರ ಮನೆತನದವರು ತಮ್ಮ ಪ್ರಭಾವಕ್ಕೊಳಪಟ್ಟ ಕ್ಷೇತ್ರದಲ್ಲಿ ಅಶಾಂತಿಗೆ ನೆಲೆ ಕೊಡಲಿಲ್ಲ. ಬ್ರಿಟಿಷರಿಗೆ ದ್ರೋಹ ಬಗೆಯುವ ಜನರನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಅಕ್ಕ ಪಕ್ಕದ ಪ್ರಾಂತದಲ್ಲಿ, ಯಾರಾದರೂ ಸರಕಾರದ ವಿರುದ್ಧ ವಿಚಾರ ಮಾಡುತ್ತಿರುವ ಸುಳಿವು ಸಿಕ್ಕಕೂಡಲೇ ಚನ್ನಪ್ಪಗೌಡರ ಪೂರ್ವಜರು, ಸರಕಾರಕ್ಕೆ ಖುದ್ದಾಗಿ ಹೋಗಿ ತಿಳಿಸುತ್ತಿದ್ದರು. ಆದ್ದರಿಂದ ಬ್ರಿಟಿಷರು ದೇಶದಲ್ಲಿ ಭದ್ರವಾಗಿ ಕಾಲೂರಿನಿಂತ ನಂತರ, ಸದಾ ತಮ್ಮ ಬೆಂಬಲಕ್ಕೆ ನಿಂತ ಚನ್ನಪ್ಪಗೌಡರ, ತಾತನ ತಾತನಾದ ವೀರಭದ್ರಗೌಡರಿಗೆ, ಎರಡು ಸಾವಿರ ಎಕರೆಗಳಷ್ಟು ಭೂಮಿ 'ಇನಾಮು' ಎಂದು ಕೊಟ್ಟು ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದರು. ಈ ಎರಡು ಸಾವಿರ ಎಕರೆ ವ್ಯಾಪ್ತಿಯಲ್ಲಿದ್ದ ಎಲ್ಲ ಊರುಗಳು, ಗೌಡರ ಆಡಳಿತಕ್ಕೊಳಪಟ್ಟಿದ್ದವು. ಈ ಕ್ಷೇತ್ರದಲ್ಲಿ ಗೌಡರ ಮನೆತನದವರು ಮಾಡಿದ ಕಾಯದೇ ಕಾನೂನುಗಳೇ ಜಾರಿಯಲ್ಲಿದ್ದವು. ನ್ಯಾಯ, ಪಂಚಾಯತಿಗಳೆಂದರೆ, ಗೌಡರೇ, ಕೋರ್ಟು ಕಚೇರಿಗಳೆಂದರೂ ಗೌಡರೇ. ಇಂತಹ ಭವ್ಯ ಪರಂಪರೆ ಮತ್ತು ಶ್ರೀಮಂತಿಕೆಯನ್ನು ಪಡೆದ ಚನ್ನಪ್ಪಗೌಡರು, ಹೇಗಿದ್ದಾರೆಂದು ಊಹಿಸುವದು, ತುಂಬ ಸರಳವಾದಂತಹ ವಿಷಯ.

ತಲೆಯ ಮೇಲೆ ಹಳದಿ ಅಥವ ಗುಲಾಬಿ ರೇಶಮಿ ರುಮಾಲು, ಮೈಯಲ್ಲಿ ಬೆರಳು ಮುಚ್ಚುವಷ್ಟು ಉದ್ದ ತೋಳಿನ ರೇಶಮಿ ಅಂಗಿ, 'ಪರಮಸುಖ' ಧೋತರ, ಟೊಂಕಕ್ಕೆ ಕಾಣಿಸುವಂತಹ ಹತ್ತುತೊಲೆಯ ಬಂಗಾರದ ಉಡುದಾರ, ಕಾಲಲ್ಲಿ ಸದಾ ಪಂಪ್ ಶೂ, ಮೇಲ್ತುಟಿಗಳ ಮೇಲೆ ಚೋಟುದ್ದ ಮೀಸೆ, ಕೊರಳಲ್ಲಿ ಬಂಗಾರದ ಚೈನು,

ಬಲಗೈ ಬೆರಳುಗಳಲ್ಲಿ ಮೂರು ವಜ್ರದ ಉಂಗುರು, ಎಡಗೈ ಬೆರಳುಗಳಲ್ಲಿ ಗಟ್ಟಿ ಬಂಗಾರದ ಮೂರು ಸುತ್ತುಂಗುರು, ಬಂಗಾರದ ಸರಪಳಿಯಲ್ಲಿಯೇ ನೇತಾಡುವ ಲಿಂಗದ ಕಾಯಿ. ಇಂತಹ ಥಾಟಿನ ಗೌಡರು ಹೊರಗೆ ಹೊರಟರೆ, ಜನ ರಸ್ತೆ ಪಕ್ಕಕ್ಕೆ ಸರಿದು ನಿಂತು ಸಲಾಮ ಹಾಕುತ್ತಿದ್ದರು. ಹೆಣ್ಣುಮಕ್ಕಳು ಮುಖದ ತುಂಬ ಸೆರಗು ಎಳೆದುಕೊಂಡು ನಿಲ್ಲುತ್ತಿದ್ದರು.

ಇನ್ನು ಗೌಡರ ಮನೆಯ ಕಡೆಗೆ ಒಂದಿಷ್ಟು ಹೋಗಿ ನೋಡಬೇಕು. ಗೌಡರ ಮನೆ ಯಾವ ಮಹಾರಾಜರ ಅರಮನೆಯಕಿಂತ ಕಮ್ಮಿ ಇರಲಿಲ್ಲ. ಅರವತ್ತು ಎಪ್ಪತ್ತು ಕೋಣೆಗಳುಳ್ಳ ಮನೆ. ಭವ್ಯವಾದ ಪಟಾಂಗಳ, ಪ್ರತಿಯೊಂದು ಕೋಣೆಯಲ್ಲಿಯೂ ನೇತಾಡುತ್ತಿರುವ ಹಂಡೆ ಝುಂಬರಗಳು. ಗೋಡೆಗಳ ಮೇಲೆ ವಿವಿಧ ರೀತಿಯ ಚಿತ್ರಗಳು. ಗೌಡರ ಶಯನ ಗೃಹದ ಗೋಡೆಗಳ ಮೇಲೆ 'ಚೌರ್‍ಯಾಂಯಸಿ' ಆಸನದ ಚಿತ್ರಗಳು. ಒಂದು ಗೋಡೆಯ ಮೇಲೆ ದ್ರೌಪದಿಯ ವಸ್ತ್ರಾಪಹರಣದ ದೃಶ್ಯ. ಇನ್ನೊಂದರ ಮೇಲೆ, ಯಮುನಾ ನದಿಯಲ್ಲಿ ಅಸಹಾಯಕರಾಗಿ ನಿಂತ ನಗ್ನ ಹೆಂಗಸರು, ಆಲದ ಗಿಡದ ಮೇಲೆ, ಸೀರೆಯ ಗಂಟೊಂದನ್ನು ಹಿಡಿದುಕೊಂಡು ಕುಳಿತ ಕೃಷ್ಣ ಪರಮಾತ್ಮ. ಲೌಕಿಕ ಮತ್ತು ಅಧ್ಯಾತ್ಮದ ಬೆಸುಗೆಯ ವಾತಾವರಣ. ನಾಲ್ಕು ಜನ ಮಲಗಿದರೂ, ಇನ್ನೂ ನಾಲ್ಕು ಮಂದಿ ಮಲಗುವಷ್ಟು ದೊಪ್ಪ ದೊಡ್ಡ ಸಾಗವಾನಿ ಮಂಚಗಳು. ಆಳೆತ್ತರದ ಕನ್ನಡಿಗಳು. ಛೇ ಛೇ- ಏನೇನಂತ ಬಣ್ಣಿಸಬೇಕು.

ಪರಂಪರೆ ಮತ್ತು ವಾತಾವರಣಕ್ಕೆ ತಕ್ಕಂತೆ ಗೌಡರು ರಸಿಕರಿದ್ದರು. ಮೂರು ಮಂದಿ ಹೆಂಡಂದಿರು. ಮೂವ್ವರಿಗೂ ಪ್ರತ್ಯೇಕ ವ್ಯವಸ್ಥೆ. ಈ ಧರ್ಮಪತ್ನಿಯರ ಬಗ್ಗೆ ಆಮೇಲೆ ನೋಡಿದರಾಯಿತು. ಸಧ್ಯ ಗೌಡರ ದರಬಾರಕ್ಕೆ ಬರೋಣು.

ಭವ್ಯ, ದೊಡ್ಡದಾದ ಪ್ರಶಸ್ತ ದರಬಾರ ಹಾಲ್. ಗೋಡೆಗಳ ಮೇಲೆ ಭಕ್ತಮಾರ್ಕಂಡೇಯ, ಹೇಮರಡ್ಡಿ ಮಲ್ಲಮ್ಮ, ಸಂತ ಸಖೂಬಾಯಿ, ಅಲ್ಲಮ ಪ್ರಭು, ಜ್ಞಾನೇಶ್ವರ, ಇಂತಹ ವ್ಯಕ್ತಿಗಳ ಜೀವನಕ್ಕೆ ಸಂಬಂಧಿಸಿದ ಚಿತ್ರಗಳಿದ್ದವು. ಸಿಂಹಾಸನವಿತ್ತು, ಆಸನಗಳಿದ್ದವು. ಹಂಡೆ ಝುಂಬರಗಳಿದ್ದವು. ವರ್ಷಕ್ಕೆ ಮೂರು ಸಲ ದರಬಾರ ಸೇರುತ್ತಿತ್ತು. ವಿಜಯದಶಮಿಯ ದಿನ ಸಂಜೆ ಸಮಯ ನೂರಾರು ಪೆಟ್ರೋಮ್ಯಾಕ್ಸಿನ ಬೆಳಕಿನಲ್ಲಿ ದರಬಾರ ಝಗಝಗಿಸುತ್ತಿತ್ತು. ಅತಿಥಿಗಳು, ಊರ ಪ್ರಮುಖರು, ಸರಕಾರಿ ಅಧಿಕಾರಿಗಳು, ನೆರೆಹೊರೆಯ ಪ್ರಾಂತದಿಂದ ಬಂದ ಆಮಂತ್ರಿತರು, ದರಬಾರಿನಲ್ಲಿ ಕುಳಿತಿರುತ್ತಿದ್ದರು. ಬೆಳ್ಳಿಯ ತಟ್ಟೆಗಳಲ್ಲಿ 'ಬನ್ನಿ' ಇಟ್ಟಿರುತ್ತಿದ್ದರು. ಗೌಡರು, ಸರಿಯಾಗಿ ಏಳು ಗಂಟೆಗೆ ದರಬಾರಕ್ಕೆ ಬರುತ್ತಿದ್ದರು. ಆಗ ಎಲ್ಲರೂ ಎದ್ದು ನಿಲ್ಲುತ್ತಿದ್ದರು. ಗೌಡರು ತಮ್ಮ 'ಆಸನ' ಅಥವ ಸಿಂಹಾಸನದ ಮೇಲೆ ವಿರಾಜಮಾನರಾದ ನಂತರ ಒಬ್ಬೊಬ್ಬರೇ ಬಂದು ಅವರಿಗೆ 'ಬನ್ನಿ' ಕೊಡುತ್ತಿದ್ದರು. ಬನ್ನಿ ಕೊಡುವ ಕಾರ್ಯಕ್ರಮ ನಡೆಯುವಾಗ ಗೌಡರ ಸೇವಕರು, ಪ್ರತಿಯೊಬ್ಬರ ಮುಂದೆ ಬಂದು ನಿಂತು, ತಾಂಬೂಲದ ತಟ್ಟೆಯಲ್ಲಿದ್ದ ತಾಂಬೂಲ ಸೇವಿಸಲು ವಿನಂತಿ ಮಾಡುತ್ತಿದ್ದರು. ಅತಿಥಿಗಳು ತಾಂಬೂಲ ಸ್ವೀಕರಿಸಿದ ನಂತರ, ಇಬ್ಬರು ಹುಡುಗಿಯರು, ಅತಿಥಿಗಳ ಮೇಲೆ ಪನ್ನೀರು ಸಿಂಪಡಿಸಿ, ಮುಂಗೈ ಮೇಲೆ ಅತ್ತರ ಎಣ್ಣೆ ಹಚ್ಚುತ್ತಿದ್ದರು. ಈ ಕಾರ್ಯಕ್ರಮ ಮುಗಿದ ನಂತರ, ಗೌಡರ ಮಾಳಿಗೆಯ ಮೇಲೆ 'ಮೇಜವಾನಿ'. ನಂತರ ಸಂಗೀತ, ನೃತ್ಯದ ಕಾರ್ಯಕ್ರಮ. ಸಂಗೀತ ನೃತ್ಯ ಕಾರ್ಯಕ್ರಮ ಕೊಡಲು ದೂರದ ಲಖನೌದಿಂದ, ಹೈದ್ರಾಬಾದದಿಂದ, ಬನಾರಸದಿಂದ ಕಲಾವಿದರು ಬರುತ್ತಿದ್ದರು. ಸೂರ್ಯೋದಯದವರೆಗೆ ಕಾರ್ಯಕ್ರಮ ನಡೆಯುತ್ತಿದ್ದವು.

ದಸರಾ ಹಬ್ಬದ ಕಾರ್ಯಕ್ರಮಗಳಂತೆಯೇ ಶಿವರಾತ್ರಿಯ ದಿನವೂ ಕಾರ್ಯಕ್ರಮದ

ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಶಿವ ರಾತ್ರಿಯು ಕಾರ್ಯಕ್ರಮದಲ್ಲಿ 'ಭಕ್ತಿ'ಗೆ ಪ್ರಾಧಾನ್ಯವಿರುತ್ತಿತ್ತು. ಭಜನೆ, ಗಾಯನ, ಕೀರ್ತನ ಇತ್ಯಾದಿ ಕಾರ್ಯಕ್ರಮಗಳಿಂದ ದರ ಬಾರ ಪುನೀತಗೊಳ್ಳುತ್ತಿತ್ತು.

ಹೋಳಿಹಬ್ಬದ ದರಬಾರವೆಂದರೆ, ಹೇಳುವು ದೇನಿದೆ? ಅದ್ಭುತವಾದಂತಹ ಕಾರ್ಯಕ್ರಮ ಗಳು ಜರುಗುತ್ತಿದ್ದವು. ಆ ದಿನ ಗೌಡರ ದರ ಬಾರಿನಲ್ಲಿ 'ಬಾರಾಖೂನ ಮಾಫ್' ಇರು ತ್ತಿತ್ತು. ಈ ದರಬಾರಕ್ಕೆಂದೇ ಅನೇಕಾನೇಕ ಕಲಾವಿದೆಯರು, ಗೌಡರ ಊರಿಗೆ ಬರುತ್ತಿ ದ್ದರು.

ಗೌಡರು ಕೊಡುವ ಇನಾಮು ಇಕರಾಮು ಗಳಿಂದ ಸಂತುಷ್ಟರಾಗಿ ಹೋಗುತ್ತಿದ್ದರು. ಗೌಡರ ಪ್ರಜಾ ಗೌಡರಿಗೆ 'ರಾಜಾಸಾಹೇಬ' ಎಂದು ಕರೆಯುತ್ತಿದ್ದರು. ಅವರ ಧರ್ಮಪತ್ನಿಯರನ್ನು 'ರಾಣಿಸಾಹೇಬ' ಎಂದು ಕರೆಯುತ್ತಿದ್ದರು. ಗೌಡರಿಗೆ ಯಾವುದರ ಕೊರತೆಯೂ ಇರಲಿಲ್ಲ, ಚಿಂತೆ ಇರಲಿಲ್ಲ.

ಗೌಡರ ಒಟ್ಟು ಮೂರು ಹೆಂಡಂದಿರಲ್ಲಿ, ಇಬ್ಬರು ಮಕ್ಕಳಿದ್ದರು. ದೊಡ್ಡ ಹೆಂಡತಿಯ ಮಗ ಕುಮಾರ ಮಲ್ಲ, ಮತ್ತು ಕೊನೆಯ, ಅಲ್ಲಲ್ಲ, ಮೂರನೇ ಹೆಂಡತಿಗೆ ರಾಜಕುಮಾರ. ನಡುವಿನ, ಅಂದರೆ ಎರಡನೇ ನಂಬರಿನ ಹೆಂಡ ತಿಗೆ ಸಂತಾನ ಭಾಗ್ಯವಿರಲಿಲ್ಲ.

"ಇರಲಿಲ್ಲ-ಇಲ್ಲ. ಪಾಡಾಯ್ತು. ಒಂಭತ್ತ ತಿಂಗಳ ಹೊಟ್ಟೆ ಉಬ್ಬಿಸಿಕೊಂಡು, ಒಂಭತ್ತ ತಾಸ ಹೆರಗಿಬ್ಯಾನಿ ತಿಂದು, ಮಾಂಸದ ಮುದ್ದಿ ಹೊರಗ್ಹಾಕಿ, ಮುಂದ ಅದರ ಹೇಲು ಉಚ್ಚಿ ಮಾಡೋದು, ಯಾರಿಗಿ ಬೇಕs ತಾಯಿ. ಸುಮ್ನ, ನೀವಾಂತ ಅದೀನಿ, ಸಾಕು. ಶಿವ ಪರಮಾತ್ಮಾ ಏನ್ ಕೊಟ್ಟಿಲ್ಲ, ಏನ್ ಬಿಟ್ಟಿಲ್ಲ. ಬೇಡಿದ ಭಾಗ್ಯ ಬಾಕಲದಾಗೇ ನಿಂತಾಯ್ತಿ- ಸಾಕು" ಎಂದು ಸಣ್ ಗೌಡ್ತಿ, ಸಾವಂತ್ರಿ ಬಾಯಿ, ಕೇಳಿದವರ ಮುಂದೆ ಹೀಗೆ ಹೇಳು ತ್ತಿದ್ದಳೆಂದು, ಕೇಳಿದವರು ಹೇಳುತ್ತಿದ್ದರು.

"ಪಾಳೀಮ್ಯಾಲ ಗೌಡರ 'ಸಾವಾಸಾ' ಸಿಗ ಬೇಕಂದ್ರ, ವರ್ಸದಾಗ ಒಂದಿನಾ ಆದ್ರೂ ಅಪ ರೂಪಕ್ಕ ಸಿಗ್ತಾಯ್ತೋ, ಇಲ್ಲೋ" ಎಂದು ಕುಂಬಾರ ಪಾರವ್ವ ತಮಾಷೆ ಮಾಡುತ್ತಿದ್ದಳು.

ಏನಿದ್ದರೂ ಸರಿ, ಸಾವಂತ್ರಿಬಾಯಿಗೆ ಯಾವ ದರ ಚಿಂತೆಯೂ ಇರಲಿಲ್ಲ. ಅರ್ಧ ವಯಸ್ಸು ದಾಟುವ ತನಕ ಗೌಡರ ದರಬಾರ ಸಾಂಗ ವಾಗಿಯೇ ನಡೆದಿತ್ತು. ಮುಂದೆ ಕಾಲಕ್ರಮೇಣ, ಗೌಡರ ಮನಸ್ಸಿನಲ್ಲಿರದಿದ್ದರೂ ದೇಶಕ್ಕೆ ಸ್ವಾತಂತ್ರ್ಯ ಬಂತು. ಇಡೀ ದೇಶಕ್ಕ ದೇಶವೇ ಸ್ವಾತಂತ್ರ್ಯದ ಉತ್ಸಾಹದಲ್ಲಿ ಮುಳುಗಿ ಹೋಗಿರುವಾಗ, ಗೌಡರು ಹಣೆಗೆ ಕೈಹಚ್ಚಿ ಕುಳಿತುಕೊಂಡಿದ್ದರು. ತಮ್ಮ ಮನೆತನದವರು ಮತ್ತು ತಾವು ಯಾರನ್ನು ನಂಬಿ ಜೀವಿಸು ತ್ತಿದ್ದರೊ, ಅವರು ದೇಶ ಬಿಟ್ಟು ಹೋಗುತ್ತಿರು ವದನ್ನು ಕಂಡು ಗಾಬರಿಗೊಂಡಿದ್ದರು.

"ಇನ್ನ ಮ್ಯಾಲ ಕರೀಮೋತಿ ಮತ್ತ ಬಿಳೀ ಟೊಪ್ಗಿ ಮಂದಿ ಬರ್‍ತಾರ. ತಾಯಿಗಂಡ ಸೂಳೇ ಮಕ್ಕಳು ರಾಜ್ಯ ಆಳ್ತಾರ, ನಮ್ಮಂಥ ಮಾನಾ ಮರ್ಯಾದಸ್ಥರ ಕಾಲ ಹೋಗ್ತಾಯ್ತಿ." ಎಂದು ಗೌಡರು ತಮ್ಮ ಆಪ್ತ ಮಿತ್ರನಾದ, ಶಂಕರಪ್ಪ ಸಾಹುಕಾರನ ಮುಂದೆ ಹೇಳಿದರು.

"ಹೌಂದ್ರಿ ಗೌಡ್ರ. ನಿಮ್ಮ ಮಾತು ಸೋಳಾಣೆ ಚಾರ ಪೈ ಖರೇ ಅದ. ಆದ್ರ ಏನ್ಮಾಡೋದು ಹೇಳ್ರಿ. ಅಲ್ಲ ಗೌಡ್ರ ಯಾ ಮಂದಿ ತಮ್ಗ ಇರೋಧ ಮಾಡ್ತು, ಯಾ ಮಂದಿ ತಮ್ಮ 'ದುಷ್ಮನ್' ಅಂತು. ಅದೇ ಮಂದೀ ಕೈಯಾಗ ಕಾರಭಾರ ಕೊಟ್ಟು, ಆ ನಮ್ಮ ಇಂಗ್ರೇಜಿ ಮಂದಿ ಹೋಗ್ಯಾಕತ್ಯಾರಲ್ಲ? ಅವರೆಂಥಾ ಹುಚ್ ಪ್ಯಾಲೀ ಮಂದೀ ಅಂತೀನಿ. ದೇಶದಾಗ ನೀವು, ನಿಮ್ಮಂಥ ಎಷ್ಟೋ ಮಂದಿ ಅವ್ರಿಗಿ ಫ್ರೆಂಡ ಆಗಿದ್ರಿ. ನಿಮ್ಮಂಥವರ ಕೈಯಾಗ ಹುಕುಮತ್ ಕೊಡಬಹುದಾಗಿತ್ತಲ್ಲ- ಕೊಡಲಿಲ್ಲ. ಆ ನೆಚ್ಚಿ ಕೊಂಡ ಮಂದೀನೇ ನಿಮ್ಮ ಕುತ್ತಿ ಕೊಯ್ದ್ರೂ

ಅಂದ ವ್ಯಾಲ, ಈ ನೀತಿ ನೀಯತ್ತು ಇಲ್ಲದ, ನಮ್ಮ ದೇಶದ ಮಂದಿ, ನಮ್ಮ ಹಿತಾ ಮಾಡ್ತಾರಂತ, ನನಗ ಖಾತ್ರಿ ಇಲ್ಲ." ಎಂದು ಶಂಕರಪ್ಪ ಸಾವುಕಾರ ತನ್ನ ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಗೌಡರು ಮೀಸೆಯಲ್ಲಿಯೇ ಮುಗುಳು ನಗು ನಕ್ಕು "ಶಂಕರಪ್ಪ, ಇನ್ನ ನಮ್ಮ ಹಿತದ ಮಾತು ಹೋಯ್ತಪ್ಪ.- ನಮ್ಮ- ನಿನ್ನೆತನಕ ಹೆಗಲಿಗಿ ಜೋಳ್ಗಿ ಹಾಯಕೊಂಡ ಮಂದಿ ಇಂದ ರಾಜ್ಯ ಆಳ್ತಾರಂದ್ರ, ಎಂಥಾ ಇಪರೀತ ಕಾಲ ಬಂತೂ ಅಂತ ನೀನೇ ಇಚಾರ ಮಾಡು." ಎಂದು ಹೇಳಿ ಸುಮ್ಮನಾಗಿದ್ದರು.

ದ್ಯಾಂಪೂರದ ವೆಂಕಟರಾಯ ಸ್ವಾತಂತ್ರ್ಯ ಚಳುವಳಿಯಲ್ಲಿ ದುಡಿದ ವ್ಯಕ್ತಿ. ನಲವತ್ತೆರಡರಲ್ಲಿ ಪೋಲೀಸರ ಕೈಗೆ ಸಿಕ್ಕು ಜೈಲುವಾಸ ಪಡೆದಿದ್ದ. ತನ್ನ ಹೆಸರಿಗಿದ್ದ ಹನ್ನೆರಡು ಎಕರೆ ಜಮೀನು, ತನ್ನ ರೈತ ಶಿವಲಿಂಗಪ್ಪಗೇ ಬಿಟ್ಟು ಕೊಟ್ಟಿದ್ದ. ಗೌಡರ ಆಡಳಿತಕ್ಕೇ ಸೇರಿದ್ದ ದ್ಯಾಂಪೂರ, ವೆಂಕಟರಾಯನ ಕಿತಾಪತಿಯಿಂದ, ಬೆಂಕಿ ಕೆಂಡದಂತಹ ಗೌಡರ ಮುಂದೆ ನಿಗಿರಿ ನಿಲ್ಲುವ ಸಾಹಸ ಮಾಡುತ್ತಿತ್ತು. ದ್ಯಾಂಪೂರದ ನೆಲ ಬಿರುಸಾಗುತ್ತಿರುವದನ್ನು ಕಂಡು, ಅದನ್ನು ಹದಗೊಳಿಸಬೇಕೆಂದು, ಸಾಮ, ದಾಮ, ದಂಡ, ಭೇದ ನೀತಿಗಳನ್ನು ಪ್ರಯೋಗಿಸಿ ನೋಡಿದರೂ ವೆಂಕಟರಾಯನ ಪರಿಶ್ರಮದಿಂದ ದಿನೇ ದಿನೇ ಇನ್ನಷ್ಟು ಬಿರುಸಾಗುತ್ತ ಬಂತು. "ಅಪ್ಪನ್ನ ಅಪ್ಪ ಅನ್ನಲಾರದಂವ, ತಿಂದ ತಟ್ಟಿಯೊಳ್ಗ ಉಚ್ಚಿ ಹೊಯ್ಯುಂವ" ಎಂದು ಗೌಡರು ಅನೇಕ ಸಲ ವೆಂಕಟರಾಯನನ್ನು ಬೈದಿದ್ದುಂಟು. ಆದರೆ ವೆಂಕಟರಾಯ, ಯಾವದೂ ತಲೆಗೆ ಹಚ್ಚಿಕೊಳ್ಳಲಾರದೇ ತನ್ನ 'ಜನ ಪ್ರಬೋಧನ'ದ ಕೆಲಸ ಮಾಡುತ್ತಲಿದ್ದ. ವೆಂಕಟರಾಯನ ಪ್ರಯತ್ನದಿಂದ ದ್ಯಾಂಪೂರದ ಜನರಲ್ಲಿ ಸ್ವಲ್ಪ ಸಾಹಸ ಮೂಡಿತ್ತು. ದ್ಯಾಂಪೂರದ ಕತೆ ಅಲ್ಲಲ್ಲಿ ಕೇಳಿಸಿಕೊಂಡ ಜನ ತಮ್ಮೂರಿನಲ್ಲಿಯೂ ಅಂಥ ಬದಲಾವಣೆ ಯಾಕಾಗಬಾರದೆಂದು ವಿಚಾರ ಮಾಡತೊಡಗಿದ್ದರು. ಅಂತೂ ೪೭ ರಿಂದ ಗೌಡರ ಪಾಲಿಗೆ ಪ್ರತಿಕೂಲ ಗಾಳಿ ಬೀಸಲಾರಂಭಿಸಿತು. ಮುಂದೆ ಸಿಡಿಲು ಬಡಿದಂತೆ ಸ್ವಾತಂತ್ರ್ಯ ಬೇರೆ ಬಂತು. ಗೌಡರು ತೊಡೆಯಲ್ಲಿಯೇ ನಡುಗಿದರು.

ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವುದರಲ್ಲಿಯೇ ಬುದ್ಧಿವಂತಿಕೆ ಇರುವುದೆಂದು ತಿಳಿದು ಗೌಡರು, ಹೊಂದಾಣಿಕೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದರು. ನಿಧಾನವಾಗಿ ಗೌಡರು ತಮ್ಮ ಮೊದಲಿನ ಗತ್ತು ಗಮ್ಮತ್ತು ಪತೋಟಿಯಲ್ಲಿಡಲಾರಂಭಿಸಿದರು. ಮೊದಲಿಗಾದ ಬದಲಾವಣೆ ವೇಷ ಭೂಷಣದಲ್ಲಿ. ಗೌಡರು ತಮ್ಮ ಜರತಾರಿ ಮುಂಡಾಸು, ಡಾಂಬರ ಗುಳಿಗೆಗಳನ್ನು ಹಾಕಿ ಸುತ್ತಿ, ಕಪಾಟಿನಲ್ಲಿಟ್ಟರು. ನಂತರ ತಮ್ಮ ರೇಶಿಮಿ ಅಂಗಿಗಳನ್ನೆಲ್ಲ, ತಮ್ಮ ಆಳುಮಗಾ ಮಾರುದ್ರನಿಗೆ ಕೊಟ್ಟು- "ಮಾರುದ್ರಾ ಈ ಅಂಗಿಗೋಳು ನನ್ನ ಮೈಯಾಗ ಬಿಗಿ ಆಗಾಕತ್ಯಾವ, ಆದ್ಕ ನೀ ತೋಗೋ" ಎಂದು ಕೊಟ್ಟರು. ಉಟ್ಟರೂ ಉಡಲಾರದಂತೇ ಸುಖಾನುಭವ ಕೊಡುವ, ಪರಮಸುಖ ಧೋತರಕ್ಕೂ ಸೋಡಚೀಟಿ ಕೊಟ್ಟರು. ಕಲಬುರ್ಗಿ ಪಟ್ಟಣಕ್ಕೆ ಹೋಗಿ ಖಾದಿ ಭಾಂಡಾರದಲ್ಲಿ ನಾಲ್ಕು ಗಾಂಧೀ ಟೋಪಿ, ನಾಲ್ಕು ಜೋಡು ಖಾದಿ ಧೋತರ, ನಾಲ್ಕು ಜೋಡು ಅಂಗಿ ಆಗುವಷ್ಟು ಬಿಳೀ ಬಟ್ಟೆಯನ್ನು ಖರೀದಿಸಿದರು. ಅಷ್ಟು. ಕೆಲವೇ ದಿನಗಳಲ್ಲಿ ಗೌಡರು ವೇಶಾಂತರ ಮಾಡಿಕೊಂಡು, ದೇಶಭಕ್ತರಾದರು.

ಹಾಲು ಮಠದ ಸ್ವಾಮಿಗಳಾದ ಶಿವಲಿಂಗ ಶಿವಾಚಾರ್ಯರು ಮತ್ತು ಗೌಡರು ಆತ್ಮೀಯ ಮಿತ್ರರಿದ್ದರು. ಗೌಡರ ಅಧ್ಯಾತ್ಮ ಜೀವನದ ಮೇಲ್ವಿಚಾರಣೆ ಶಿವಲಿಂಗ ಸ್ವಾಮಿಗಳೇ ನೋಡಿಕೊಳ್ಳುತ್ತಿದ್ದರು. ಶಿವಲಿಂಗ ಶಿವಾಚಾರ್ಯರು ರಸಿಕ ಶಿಖಾಮಣಿ. ದೇಹಕ್ಕೆ ಪೀಡಿಸುವ ಅಧ್ಯಾತ್ಮ, ಅಧ್ಯಾತ್ಮ ಆಗುವದಿಲ್ಲವೆಂದು ಬಲ

ವಾಗಿ ನಂಬಿದ್ದರು. ಈ ಸ್ವಾಮಿಗಳ ಮಾರ್ಗ ದರ್ಶನದಲ್ಲಿ ಮುಂದೆ ಸಾಗುವದು ಸುಲಭವೆಂದು ಗೌಡರು ತಿಳಿದುಕೊಂಡರು.

ಒಂದು ದಿನ ಹೊಸ ವೇಶ ಹಾಕಿಕೊಂಡು ಗೌಡರು ಕನ್ನಡಿ ಮುಂದೆ ನಿಂತರು. ತಾವು ದೇಶದ ಯಾವ ದೇಶಭಕ್ತನಿಗಿಂತಲೂ ಒಂದು ಇಂಚೂ ಕಡಿಮೆಯಿಲ್ಲೆಂದು ಭಾವಿಸಿದರು. ಒರಟಾದ ಖದ್ದರದಿಂದ ಮೈಯಲ್ಲಿ ಸಿಡಿಮಿಡಿ ಯಾಗುತ್ತಿತ್ತು. ಗೋಣಿ ಚೀಲವನ್ನೇ ಮೈಮೇಲೆ ಧರಿಸಿಕೊಂಡಂತಾಯಿತು. ನಡೆದರೆ, ಎಲ್ಲಿ ಕಚ್ಚೆ ಉಚ್ಚಿ ಬೀಳುತ್ತದೆಂದು ಭಯಪಟ್ಟರು. ಹೊರಗೆ ಹೋದಲ್ಲಿ ಅಂತಹ ಅನಾಹುತ ಆಗಬಾರದೆಂದು ಸಾವಂತ್ರಿಬಾಯಿಯ ಜರದಂಚಿನ ಹಳೆಯ ಸೀರೆಯ ಅಂಚು ಹರಿದು, ಬೆಲ್ಟಿನಂತೆ ಟೊಂಕಕ್ಕೆ ಬಿಗಿದುಕೊಂಡರು. ಕಡಕ್ ಇಸ್ತ್ರಿಯ ಅಂಗಿ ತಗಡು ತೊಟ್ಟಂತೆ ಮೈ ಪರಚುತ್ತಿತ್ತು. ಬಿಳಿ ಟೊಪ್ಪಿಗೆಯಿಂದ ಮುಖದ ಮೇಲಿನ ಲಕ್ಷಣವೇ ಮಾಯವಾದಂತಾಗಿತ್ತು. ಆದರೆ ಎಲ್ಲ ಅನಾನು ಕೂಲತೆಯನ್ನು ಸಹಿಸಿಕೊಂಡಿರುವದು ಅನಿ-ವಾರ್ಯವಾಗಿತ್ತು. ಮಾತೆತ್ತಿದರೆ ಸಾಕು ಗೌಡರು ದೇಶದ ಬಗ್ಗೆ ಮಾತಾಡಲು ಪ್ರಾರಂಭಿಸಿದರು-ಗೌಡರ ದರಬಾರ ಕಾರ್ಯಕ್ರಮಗಳು ನಿಂತು ಹೋದವು. ಶ್ರೀಮಂತಿಕೆಯ, ಅಧಿಕಾರದ, ಸಾರ್ವ ಜನಿಕ ಪ್ರದರ್ಶನ ನಡೆದಂತಾಯಿತು. ಸ್ವಲ್ಪ ಸಮಯದಲ್ಲಿಯೇ ಚನ್ನಪ್ಪ ಗೌಡರು, ಜನಪ್ರಿಯ 'ನೇತಾ' ಆದರು.

''ಏನ ಮಲ್ಲಪ್ಪಣ್ಣಾ, ಹ್ಯಾಂಗಿದ್ದೀ? ಎಲ್ಲಾ ಆರಾಮಾಯ್ತಿಲ್ಲೋ? ನೋಡು ತಮ್ಮ,ಏನಾದ್ರೂ ತ್ರಾಸಿದ್ರ ನಂಗ್ಹೇಳು. ಯಾಕವ್ವ ಕಲ್ಲವ್ವ, ಗಂಡ ಪಾಡದಾನಲ್ಲ? ಬಾಡ್ಯಾನ ಮಗ ಕುಡೇದು ಬಿಟ್ಟಾನಿಲ್ಲ? ಭಾರಿ ಕೆಟ್ಟ ಚಟಾ ಹಾಯಕೊಂಡಾನ. ನಮ್ಮ ಗಾಂಧಿ ಮಹಾತ್ಮಾ ಹೇಳ್ಯಾರು ಕುಡಿಬ್ಯಾಡ್ರಿ ಅಂತ, ಅವರ ಮಾತಿನ ಮ್ಯಾಲ ಇಸ್ವಾಸಿಡಬೇಕು. ಆದ್ರ ಈ ಚಟದ ಮಂದೀ ಹಣೇಬಾರನೇ ಅಂಥಾದ್ದು, ಬಿಡೋದೇ ಇಲ್ಲ. ಅಂವಾ ಬಂದ್ನಂದ್ರ, ನನ್ನ ಹಂತ್ಯಾಕ ಕಳಿಸು, ನಾಕ್ ಬುದ್ಧಿ ಮಾತು ಹೇಳ್ತೀನಿ. ಏನೋ ಪರಮಾ. ಸಾಲಿ ಛಲೋ ಓದಾಕತ್ತೀದಿಲ್ಲ! ಮಗನಾ, ಓದಿ ಬರೆದು ಶ್ಯಾಣ್ಯಾ ಆಗಬೇಕು'' ಹೀಗೆ ಕಂಡ ಕಂಡವರೊಂದಿಗೆ ಗೌಡರು ಮಾತಾಡತೊಡಗಿ-



ದರು. ಸ್ವಾತಂತ್ರ್ಯ ಬಂದಿದ್ದರಿಂದ ಗೌಡರ ತಲೆ ಕೆಟ್ಟಿರಬೇಕೆಂದು ಜನ ತಿಳಿದುಕೊಂಡರು. ಆದರೆ, ತಾವು ಹುಚ್ಚರಲ್ಲ ಎಂದು ತೋರಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಗೌಡರು ಮಾಡುತ್ತಿದ್ದ-ರಿಂದ ಅವರ ಬಗ್ಗೆ ಜನ ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು.

ಹಬ್ಬ ಹುಣ್ಣಿಮೆಯ ದಿನ ಗೌಡರ ಮನೆಯಿಂದ ಬಿದಿರು ಬುಟ್ಟಿಗಳ ತುಂಬ ಎಣ್ಣೆ ಹೋಳಿಗೆ ಹೊಲೆಯರ ಕೇರಿಯಲ್ಲಿ ಬರುತ್ತಿದ್ದವು. ದೀಪಾವಳಿಗೆ ಗೌಡರು ಬಡವರಿಗೆ ಧೋತರ ಕೊಡುತ್ತಿದ್ದರು. ಸಂಕ್ರಾಂತಿ ಹಬ್ಬಕ್ಕೆ ಬಡ ಹೆಂಗಸರಿಗೆ ಇಲಕಲ್ ಸೀರೆ, ಗುಳೇದ ಗುಡ್ಡ ಖಣ ಕೊಡುತ್ತಿದ್ದರು. ಮಕ್ಕಳಿಗೆ ಚಡ್ಡಿ ಅಂಗಿ ಕೊಡಿಸುತ್ತಿದ್ದರು. ಹೀಗೆ ಗೌಡರು ಧರ್ಮಾತ್ಮನ ಇಮೇಜು ಬೆಳೆಸಿಕೊಂಡರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ, ಜನಜಾಗೃತಿಗೆ ಕಾರಣನಾದ ವೆಂಕಟರಾಯನ ಪ್ರಭಾವವೂ ಬೆಳೆಯಿತು. ವೆಂಕಟರಾಯನ ಪ್ರಾಮಾಣಿಕತೆಯ ಬಗ್ಗೆ ಯಾರೂ ಅನುಮಾನ ಪಡುತ್ತಿರಲಿಲ್ಲ. ಅವನು ಹೇಳಿದ ಮಾತು ಶ್ರದ್ಧೆಯಿಂದ ಜನ ಕೇಳುತ್ತಿದ್ದರು. ವೆಂಕಟರಾಯ ಬಂದರೆ ಸಾಕು ಯಾವ ಊರಾಗಲಿ, ಹಳ್ಳಿಯಾಗಲಿ ಜನ ಕಿಕ್ಕಿರಿದು ಸೇರುತ್ತಿದ್ದರು. ಜನ ತಮ್ಮ ಆಶೆ ಆಕಾಂಕ್ಷೆಗಳಿಗೆ, ಕನಸುಗಳಿಗೆ ಸಾಕಾರಗೊಳಿಸುವ ವ್ಯಕ್ತಿ ವೆಂಕಟರಾಯನೆಂದು ನಂಬಿದ್ದರು. ವೆಂಕಟರಾಯ ಜೇಲಿನಲ್ಲಿದ್ದಾಗ, ಅವನ ಹೆಂಡತಿ ತೀರಿಕೊಂಡಿದ್ದಳು. ಮಕ್ಕಳೂ ಇರಲಿಲ್ಲ. ವೆಂಕಟರಾಯ ಈಗ ದೇಶ ಸೇವೆಯಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡಿದ್ದನು. ಸರಳ ಜೀವನದ ಬಗ್ಗೆ, ಶಿಕ್ಷಣದ ಮಹತ್ವದ ಬಗ್ಗೆ, ದೀನ ದಲಿತರ ಸೇವೆಯ ಬಗ್ಗೆ ಮಾತಾಡುವುದು, ತನ್ನ ಜೀವನದ ಗುರಿಯೆಂದು ಭಾವಿಸಿದ್ದನು.

ಒಂದು ದಿನ ಮಧ್ಯಾಹ್ನದ ಊಟ ಮುಗಿಸಿಕೊಂಡು ಚನ್ನಪ್ಪಗೌಡರು ಮಂಚದ ಮೇಲೆ ಹಾಯಾಗಿ ಮಲಗಿಕೊಂಡಿದ್ದರು. ಕಣ್ಣು ರೆಪ್ಪೆಗಳು ಭಾರವಾಗಿದ್ದವು. ಇನ್ನೇನು ಮಲಗಿದ ರಾಯಿತೆಂದು ವಿಚಾರ ಮಾಡಿ ಗೌಡರು ಮಗ್ನರಾದರು. ಅಷ್ಟರಲ್ಲಿ ಗೌಡರ ಮನೆಯಾಳು, ಫಕೀರ ಬಂದು "ಗೌಡರೆ, ಮಠಪತಿ ಬಂದಾನು. ಸ್ವಾಮಿಗೋಳು, ನೀವು ಬರಬೇಕಂತ ಹೇಳ್ಯಾರಂತ" ಎಂದು ಹೇಳಿದ.

ಸ್ವಾಮಿಗಳು ಈ ಹೊತ್ತು ಯಾಕ ಕರೆಸಿದ್ದಾರೆಂದು ತಿಳಿಯಲಿಲ್ಲ- "ಬರ್ತೀನಂತ ಹೇಳು" ಎಂದು ಗೌಡರು ಮಂಚದಿಂದ ಎದ್ದರು. ಖದ್ದರಿನ ಅಂಗಿ ಸೇರಿಸಿಕೊಂಡು ಮಠದ ಕಡೆಗೆ ನಡೆದರು. ದಾರಿಯಲ್ಲಿ ಯಾವದೋ ಒಂದು ಬೀದಿನಾಯಿ ಗೌಡರನ್ನು ನೋಡಿ 'ಬೌ ಬೌ' ಎಂದು ಬೊಗಳಿತು.

"ಯಾಕಲೇ ಮಗನಾ, ಗುರ್ತಾ ಹತ್ತಲಿಲ್ಲೇನು?" ಎಂದು ಗೌಡರು ಕೇಳಿದರು. ಗೌಡರ ದನಿ ಗುರುತಿಸಿ ನಾಯಿ, ಬಾಲ ಮುದುಡಿಕೊಂಡು ಗಲ್ಲಿಯಲ್ಲಿ ಸೇರಿತು.

ಮಠದಲ್ಲಿ ಸ್ವಾಮಿಗಳು ಗೌಡರ ದಾರಿಯನ್ನೇ ಕಾಯುತ್ತ ಕುಳಿತಿದ್ದರು.

"ಬಾ ಚನ್ನಪ್ಪಗೌಡ, ಕುಂದ್ರು. ಶಿವಾಯ ನಮಃ ಊಟಾ ಆಯ್ತಾ?" ಎಂದು ಸ್ವಾಮಿಗಳು ಮಾತಾಡಿಸಿದರು.

ಗೌಡರು ಸ್ವಾಮಿಗಳ ಪಾದದ ಹತ್ತಿರವೇ ಕುಳಿತುಕೊಳ್ಳುತ್ತ, "ಆಯ್ತು" ಎಂದರು.

"ಗೌಡ, ನಮ್ಮ ಮಠದ ತೇರು ಭಾಳ ಹಳೇದಾಗೇದ. ಈ ವರ್ಷ ಹೊಸಾ ತೇರೇ ಎಳೀಬೇಕಂತ ಇಚಾರದ-" ಎಂದು ಸ್ವಾಮಿಗಳು ಹೇಳಿದರು.

"ಅದಕ್ಕೇನಂತ ಸ್ವಾಮಿಗಳೇ, ತಾವು ಅಪ್ಪಣೆ ಕೊಡಿಸಿದ್ರಾಯ್ತು. ಹೊಸ ತೇರು ಮಾಡಿಸ್ತೀನಿ," ಎಂದು ಗೌಡರು ಭರವಸೆ ಕೊಟ್ಟರು.

"ಪ್ರಜಾಪ್ರಭುತ್ವ ಅಂದ್ರೆ ಗೊತ್ತಾ ಗೌಡ?" ಎಂದು ಶಾಲೆಯ ಹುಡುಗನಿಗೆ ಪ್ರಶ್ನೆ ಕೇಳುವಂತೆ ಸ್ವಾಮಿಗಳು ಕೇಳಿದರು.



"ಹಾಂಗಂದ್ರೇನ್ರಿ?" ಎಂದು ಗೌಡರು ತಮ್ಮ ಅಜ್ಞಾನವನ್ನು ಮುಚ್ಚಿಡದೆ ಕೇಳಿದರು.

"ಹಾಂಗಂದ್ರ, ತಮ್ಮಾ, ರಾಜ್ಯ ಆಳೋ ಅಧಿಕಾರ ಪ್ರಜೆಗಳ ಕೈಯಾಗೇ ಅಂತ ತಿಳಿ. ಇನ್ನ ಪ್ರಜಾ ಅಂದ್ರ ಯಾರೂ ಅಂತ ಹೇಳ್ತೀನಿ ಕೇಳು. ಪ್ರಜಾ ಅಂದ್ರ ಚನ್ನಪ್ಪಗೌಡಲ್ಲ, ಈ ಮಠದ ಸ್ವಾಮಿಗಳಲ್ಲ, ನಿಮ್ಮ ಸಾವಕಾರ ಶಂಕರಪ್ಪಲ್ಲ. ಪ್ರಜಾ ಅಂದ್ರ ಸಾಮಾನ್ಯ ಮಂದಿ. ರೈತರು, ಕೂಲಿಕಾರರು, ಹಟ್ಟಿ ಗುಡ ಸಲದೊಳ್ಗ ಇರೋರು. ತಿಳೀತಾ. ಅವ್ರು ಇನ್ನ ಮ್ಯಾಲ ರಾಜೇರಾಗ್ತಾರ. ಸಿಂಹಾಸನದ ಮ್ಯಾಲ ಕುಂದ್ರುತಾರ, ಹುಕುಂ ಕೊಡ್ತಾರ." ಎಂದು ಸ್ವಾಮಿಗಳು ಪ್ರಶ್ನಾರ್ಥಕ ದೃಷ್ಟಿಯಿಂದ ಚನ್ನಪ್ಪಗೌಡರ ಕಡೆಗೆ ನೋಡಿದರು.

ಸ್ವಾಮಿಗಳು, ಈ ಮಟ ಮಟ ಮಧ್ಯಾಹ್ನ ಇಂಥ ಪಾಠ ಯಾಕೆ ಹೇಳುತ್ತಿದ್ದಾರೆಂದು ಗೌಡರಿಗೆ ಅರ್ಥವಾಗಲಿಲ್ಲ. ಅವರು ಸ್ವಾಮಿಗಳ ಮುಖ ನೋಡಿದರು.

ಗೌಡರಿಗೆ ಏನೂ ಅರ್ಥವಾಗಿಲ್ಲವೆಂದು ಸ್ವಾಮಿಗಳಿಗೆ ಅರ್ಥವಾಯಿತು.

"ಗೌಡ, ಇನ್ನ ಮ್ಯಾಲ ನೀ ಹುಷಾರಾಗಿರಬೇಕು. ಇಷ್ಟು ದಿನ ನಿನ್ನ ದರಬಾರದಾಗ ಯಾರ ಪ್ರವೇಶ ಇರಲಿಲ್ಲ, ಅಂಥವರನ್ನ ನಿನ್ನ ದರಬಾರಕ್ಕ ಬರೋ ಹಾಂಗ ಮಾಡಬೇಕು. ಅಂದ್ರ ಊರ ಹೊರಗಿದ್ದ ಮಂದಿ ನಿನ್ನ ಅಂಗಳಕ್ಕೂ ಬರಲಿಕ್ಕೆ ಅಂಜೋ ಮಂದಿನ್ನ, ನೀ ಸ್ವತಃ ಹೋಗಿ ಕರೆದುಕೊಂಡು ಬರಬೇಕು. ಅವರು ನಿನ್ನ ದರಬಾರ ನೋಡಬೇಕು, ನಿನ್ನ ಮನೀ ನೋಡಬೇಕು, ನಿನ್ನ ಅಡಗಿ ಮನೀ ನೋಡಬೇಕು. ಬರೀ ಬಿಳಿ ಬಟ್ಟೆ ತೊಟ್ಟ ಬ್ರಾಂಬ್ರು

ಲಿಂಗಾಯುತರು, ಮುಸಲ್ಮಾನರು ನಿನ್ನ ಹತ್ತಿರದವರಲ್ಲ, ಅವರೂ, ಆ ಮಂದೀನೂ ನಿನ್ನವರಂತ ತಿಳೀಬೇಕು. ಹಾಂಗ ಮಾಡದೀ ಅಂದ್ರು ನಿನ್ಗ ಉಳಿಗಾಲ, ಇಲ್ಲಾಂದ್ರ ಸರ್ವನಾಶ ಆಗಿ ಹೋಗ್ತದ" ಎಂದು ಸ್ವಾಮಿಗಳು ದೊಡ್ಡ ಉಪದೇಶ ಮಾಡಿದರು.

"ನಿಮ್ಮ ಮಾತು ಖರೇ ಅದ ಸ್ವಾಮೀಜಿ. ಅದ್ಕಂತೆ ನಾನು ಹಬ್ಬ ಹುಣ್ಣವಿ ದಿನ ಆ ಮಂದೀ ವಸ್ತಿವಳ್ಗ ಹೋಳ್ಗಿ ಹಂಚ್ತೇನಿ. ಆ ಮಂದಿಗಿ ಸೀರಿ ಕುಪ್ಪಸಾ ಕೊಡಲಿಕತ್ತೀನಿ, ಅವರ ಹುಡುಗರಿಗೆ ಅಂಗಿ ಚಡ್ಡಿ ಹೊಲ್ಸಲೀಕತ್ತೀನಿ. ಅವರು ಆ ಪುಢಾರಿ ಸೂಳೀಮಗ ವೆಂಕಟರಾಯನ ಬಲೀಗಿ ಬೀಳಬಾರದೂ, ಅಂತ ಎಲ್ಲಾ ಪ್ರಯತ್ನ ಮಾಡ್ಲಿಕತ್ತೀನಿ." ಎಂದು ಗೌಡರು ವರದಿ ಒಪ್ಪಿಸಿದರು.

"ಆದಾಯ್ತು ಚನ್ನಪ್ಪಗೌಡಾ. ಏನಿದ್ರೂ ನೀ ನಮ್ಮ ಈ ಪುಢಾರಿ ಮಂದಿ ವಿರುದ್ಧ ಅದೀ ಅಂತ ಜನ ತಿಳಕೊಂಡದ. ದೇಶದ ತುಂಬೆಲ್ಲ ಸ್ವಾತಂತ್ರ್ಯದ ಚಳವಳಿ ನಡೆದಾಗ, ನಿನ್ನ ಸೀಮಿವಳಗಿನ ಮಂದಿ ಸುಮ್ನ ಕುಂತಿದ್ರು. ನಿನ್ನ ಅಂಜ್ಕಲಿಂದ ಅವರು ಮುಂದ ಬರಲಿಲ್ಲಾಂತ ಪುಕಾರದ. ಆದ್ದರಿಂದ ಜನರ ಮನಸ್ಸಿನ್ಯಾಗಿಂದು ಈ ಇಚಾರ ಹೋಗೋ ಹಾಂಗ ಮಾಡಬೇಕು." ಎಂದು ಸ್ವಾಮಿಗಳು ಹೇಳಿದರು.

"ಹ್ಯಾಂಗ ಮಾಡಬೇಕು, ಹೇಳ್ರಿ- ನೀವು ಹೇಳಿದ್ಹಾಂಗ ಮಾಡ್ತೇನಿ" ಎಂದು ಗೌಡರು ತಿಳಿಸಿದರು.

"ಆ ಇಚಾರ ಎಲ್ಲ ಮಾಡಿಟ್ಟೇನಿ. ನೀ ಕಾಳಜಿ ಮಾಡಬ್ಯಾಡ. ಈಗ ಬರೋ ಪಂಧರಾ ಆಗಸ್ಟಕ್ಕ, ನಮ ಮಠದಾಗ ಒಂದು ಭರ್ಜರಿ ಸಭಾ ಮಾಡೋಣು. ಆ ಸಭಾದೊಳ್ಗ, ಚನ್ನಪ್ಪಗೌಡ ಎಂಥವರು, ಅವರ ಮನೆತನ ಎಂಥದ್ದೂ ಅಂತ ಜನರಿಗೆ ತಿಳಿಸಿ ಕೊಡಬೇಕು. ಆ ಕೆಲಸಾ ನನ್ಗ ಬಿಟ್ಟುಬಿಡು. ಖರ್ಚಿನ ವ್ಯವಸ್ಥಾ ಮಾಡು" ಎಂದು ಸ್ವಾಮಿಗಳು ಹೇಳಿದರು.

ಚನ್ನಪ್ಪಗೌಡರು ತಲೆ ಹಾಕಿ ಸಮ್ಮತಿಸಿದರು.

"ಪಂಧರಾ ಆಗಸ್ಟದ ಸಮಾರಂಭಕ್ಕ ಆ ದೇಶಭಕ್ತ ವೆಂಕಟರಾಯನೇ ಮುಖ್ಯ ಅತಿಥಿಯಾಗಿ ಬರೋಹಾಂಗ ಮಾಡಬೇಕು" ಎಂದು ಸ್ವಾಮಿಗಳು ತಿಳಿಸಿದರು. ಅನಿರೀಕ್ಷಿತವಾಗಿ ಬಂದ ಈ ಸಲಹೆಯಿಂದ ಗೌಡರು ಕಕ್ಕಾಬಿಕ್ಕಿಯಾದರು. ಗೌಡರ ಅವಸ್ಥೆಯನ್ನು ನೋಡಿ, "ಗಾಬರಿಯಾಗಬೇಡ ಗೌಡ, ನಾ ಹೇಳಿದ್ಹಾಂಗ ಮಾಡು ಎಲ್ಲಾ ಬರೋಬರಿ ಆಗ್ತದ" ಎಂದು ಸ್ವಾಮಿಗಳು ಸಮಾಧಾನಪಡಿಸಿದರು.

*

ವೆಂಕಟರಾಯರನ್ನು ಕರೆ ಕಳಿಸಬೇಕೆಂದು ವಿಚಾರ ಮಾಡಿದರು, ಗೌಡರು. ಮರುಕ್ಷಣ ಇನ್ನೊಂದು ವಿಚಾರ ಹೊಳೆಯಿತು. ತಾವೇ ಹೋದರೆ ಇನ್ನಷ್ಟು ಚನ್ನಾಗಿರುತ್ತದೆಂದು ಭಾವಿಸಿ — "ಶಂಕರಲಿಂಗ, ಊಟಾ ಮುಗಿಸಿಗೊಂಡು ದ್ಯಾಂಪೂರಕ್ಕೆ ಹೋಗೋಣು, ತಯಾರಾಗು" ಎಂದು ತಮ್ಮ ಖಾಸಾ ಮುನೀಮಗೆ ಹೇಳಿದರು.

"ಆ ಊರ್‍ಯಾಕ್ರೀ ಗೌಡ್ರು? ನಮ್ನ - ಆ ಊರ ಮಂದಿ ನಮ್ಮನ್ನ ಕಂಡ್ರು ಹುಚ್ನಾಯಿ ಬೊಗಳದ್ಹಾಂಗ ಬೊಗುಳ್ತಾರ" ಎಂದು ಕೇಳಿದ.

"ನಾಯಿ ಬೊಗಳ್ತಾವಂತ ಅಂಜಿ ಕುಂದ್ರಾಕಾಗ್ತದೇನೋ ಶಂಕರಲಿಂಗ? ನಡಿ, ಜಲ್ದಿ ತಯಾರಾಗು" ಎಂದು ಗೌಡರು ಹೇಳಿದರು.

ಸ್ನಾನ ಪೂಜೆ, ಊಟ ಮುಗಿಸಿಕೊಂಡು ಗೌಡರು ತಮ್ಮ ಫಟ ಫಟಿಯ ಮೇಲೆ ಸವಾರಾದರು, ಶಂಕರಲಿಂಗ ಹಿಂದೆ ಕುಳಿತುಕೊಂಡ. ಫಟಫಟಿ ಭುರ್ರೆಂದು ಓಡಿತು. ಶಂಕರಲಿಂಗ ಹಿಂದೆ ಕುಳಿತುಕೊಂಡು ಕಣ್ಣು ಮುಚ್ಚಿದ. ಗಾಡಿ ಯಾವ ದಿಕ್ಕಿಗೆ ಹೊರಟಿದೆ, ಹೇಗೆ ಹೊರಟಿದೆ, ಯಾವದೂ ಅರ್ಥವಾಗದಷ್ಟು ವೇಗದಿಂದ ಗಾಡಿ ಹೊರಟಿತ್ತು. ಫಟಫಟಿ ಡುಸ್ ಘುಸ್ಸೆಂದು ನಿಂತಾಗಲೇ ಶಂಕರಲಿಂಗ ಕಣ್ಣು

ತೆರೆದು,

"ಎಲಾ, ಇಷ್ನ ದ್ಯಾಂಪೂರ ಬಂದೇಬಿಟ್ರೇನ್ರಿ ಗೌಡ್ರು?" ಎಂದು ಕೇಳುತ್ತ ಕೆಳಗಿಳಿದ.

ಗಾಡಿ ವೆಂಕಟರಾಯನ ಮನೆಯ ಮುಂದೆ ನಿಂತಿತು. ಮನೆಯ ಬಾಗಿಲು ಮುಚ್ಚಿತ್ತು. ಹೊರಗೀಲಿ ಇರಲಿಲ್ಲ. ಅಂದರೆ ವೆಂಕಟರಾಯ ಮನೆಯಲ್ಲಿ ಇರಬಹುದೆಂದು ಖಾತ್ರಿಯಾಯಿತು.

ಸ್ವತಃ ಚನ್ನಪ್ಪಗೌಡರೆ "ರಾಯರೆ, ವೆಂಕಟ ರಾಯರೇ. ಅದೀರೇನ್ರೆಪಾ?" ಎಂದು ಬಾಗಿಲು ತಟ್ಟುತ್ತ ಕೇಳಿದರು.

ವೆಂಕಟರಾಯ ಮನೆಯಲ್ಲಿದ್ದ. ಅವನೇ ಬಂದು "ಯಾರು?" ಎಂದು ಕೇಳಿ ಬಾಗಿಲ ತೆರೆದ. ಮನೆ ತಲೆಬಾಗಿಲಿನಲ್ಲಿ ಚನ್ನಪ್ಪಗೌಡರು ನಿಂತಿದ್ದನ್ನು ಕಂಡು ಆಶ್ಚರ್ಯವಾಯಿತು.

"ಅರೇ, ಗೌಡ್ರು. ಬರ್ರಿ ಬರ್ರಿ, ಬರ್ರಿ—ಯಾಕೋ ಅಪರೂಪಕ್ಕ ಬಂದ್ರಿ?" ಎಂದು ಒಳಗೆ ಕರೆದುಕೊಂಡು ಹೋಗಿ, ಪಡಸಾಲೆಯಲ್ಲಿ ಜಮಖಾನೆ ಹಾಸಿ, ಕುಳಿತುಕೊಳ್ಳಲು ಹೇಳಿದ.

ಚೆನ್ನಪ್ಪಗೌಡ ಮತ್ತು ಶಂಕರಲಿಂಗ ಕುಳಿತು ಕೊಂಡರು. ವೆಂಕಟರಾಯ ತಾನೂ ಗೌಡರ ಪಕ್ಕದಲ್ಲಿ ಕುಳಿತುಕೊಂಡು, ಮಾತು ಯಾರು ಸುರು ಮಾಡಬೇಕೆಂದು ತಿಳಿಯಲಿಲ್ಲ. ಒಂದೈದು ನಿಮಿಷ ಮೌನ ಆವರಿಸಿತು. ನಂತರ ಗೌಡರೇ ಬಾಯಿ ಬಿಟ್ಟರು.

"ವೆಂಕಟರಾಯ, ಒಂದು ಕೆಲಸಕ್ಕಂತ ಬಂದೀನಿ. ನೀವು ನಡಿಸಿಕೊಡಬೇಕು" ಎಂದು ಗೌಡರು ಪ್ರಸ್ತಾಪಿಸಿದರು.

"ಹೇಳ್ರಿ ಗೌಡ್ರೆ, ನನ್ನ ಕೈಲಿಂದ ಆಗ್ತಿತ್ತೂ ಅಂದ್ರು ಮಾಡಿಕೊಡ್ತೀನಿ" ಎಂದು ವೆಂಕಟರಾಯ ಹೇಳಿದ.

"ಏನಿಲ್ಲ. ನೋಡ್ರೆಪ, ದೇಶ ಸ್ವತಂತ್ರ ಆಯಿತು. ಅದು ಹಾಂಗಾಗ ಬೇಕಂತ ನೀವು ಮಾಡಿದ ಪ್ರಯತ್ನ ಏನೋಂತ ಎಲ್ಲರಿಗೂ ಗೊತ್ತು. ಒಂದು ರೀತೀಲಿ ನೀವು ನಮ್ಮ ಭಾಗದ ಜವಾಹರ ಲಾಲ ನೆಹರೂ ಇದ್ದಂಗ. ಇನ್ನ ಹತ್ತು ದಿವಸದಾಗ ಪಂಧರಾ ಆಗಸ್ಟ ಬರ್ತದ. ಅಂದ ನಮ್ಮೂರಾಗ ಒಂದು ಸಭಾ ಮಾಡಬೇಕಂತ ಇಚಾರ ಹಾಯಿಕೊಂಡೀವಿ. ಆ ಸಭಾದೊಳ್ಗ ನೀವು ಬಂದು ನಾಕು ಉಪದೇಶದ ಮಾತು ಹೇಳ ಬೇಕಂತ ನಮ್ಮೆಲ್ಲರ ಇಚ್ಛಾ ಅದ" ಎಂದು ಗೌಡರು ಒಂದೇ ಉಸಿರಿನಲ್ಲಿ ತಮ್ಮ ಮನೋಗತ ತಿಳಿಸಿದರು.

"ಗೌಡ್ರು, ನಾನು ಉಪದೇಶ ಮಾಡುವಂಥ ದೊಡ್ಡ ಮನುಷ್ಯ ಅಲ್ಲ. ಎಲ್ಲೀ ಜವಾಹರಲಾಲ ನೆಹರೂ, ಎಲ್ಲಿ ಈ ಭಿಕಾರಿ ವೆಂಕಟ, ನಾನು ಪಂಡಿತಜೀಯ ಪಾದದ ಧೂಳಿನಷ್ಟು ದೊಡ್ಡವ ನಲ್ಲ. ಹಾಂಗೆಲ್ಲ ಅಂದು ನೀವು ನನ್ನ ಖಜೀಲ ಮಾಡ್ತೀರಿ. ಏನೋ ಪ್ರೀತಿಲಿಂದ ಕರೀತೀರಿ ಅಂದ ವ್ಯಾಲ ಬರ್ತೀನಿ" ಎಂದು ವಿನಯದಿಂದ ವೆಂಕಟರಾಯ ಹೇಳಿದ. "ಕೂಡ್ರಿ ಚಾ ಮಾಡಿ ತರ್ತೀನಿ" ಎಂದು ವೆಂಕಟರಾಯ ಏಳುತ್ತಿರು ವಾಗ— "ಬ್ಯಾಡ ವೆಂಕಟರಾಯರ, 'ಚ್ಯಾ' ಬ್ಯಾಡ" ಎಂದು ಗೌಡರು ಎದ್ದರು. ಗೌಡರ ಮುನೀಮ ಶಂಕರಲಿಂಗನೂ ಅವರ ಹಿಂದೆ ಎದ್ದ. ಘಟಘಟಿ ಪುನಃ ಗೌಡರ ಊರ ಕಡೆಗೆ ಹೊರ ಟಿತು.

•

ಸ್ವಾತಂತ್ರ್ಯ ದಿನೋತ್ಸವ. ಮಠದ ಮುಂದಿನ ಬೈಲಿನಲ್ಲಿ ಬಾಳಿದಿಂಡು, ತೆಂಗಿನಗರಿ, ಮಾವಿನ ತೋರಣ, ಫರಫರಿಯಿಂದ ಅಲಂಕೃತವಾದ ಮಂಟಪ. ಸ್ವಾಮಿಗಳು ಸ್ವತಃ ನಿಂತು ಎಲ್ಲ ವ್ಯವಸ್ಥೆ ಮಾಡಿಸಿದ್ದರು. ಸಂಜೆ ಏಳು ಗಂಟೆಗೆ ಸಾರ್ವಜನಿಕರ ಸಭೆ, ಬೆಳಿಗ್ಗೆ ಧ್ವಜ ವಂದನ ಇತ್ಯಾದಿ ಕಾರ್ಯಕ್ರಮಗಳ ಬಗ್ಗೆ ಒಂದುದಿನ ಮುಂಚಿತವೇ ಊರಲ್ಲಿ ಡಂಗುರ ಸಾರ ಲಾಗಿತ್ತು.

ಬೆಳಿಗ್ಗೆ ಸ್ವಾಮಿಗಳ ಅಮೃತ ಹಸ್ತದಿಂದ ಧ್ವಜಾರೋಹಣವಾಯಿತು. ಜನ ಕಿಕ್ಕಿರಿದು ನೆರ ದಿದ್ದರು. ಹೆಂಗಸರು, ಮಕ್ಕಳು, ಮಾತ್ಯಾ ಗಾಂಧಿಜೀಕೀ ಜಿಂದಾಬಾದ, ಭಾರತ ಮಾತಾಕಿ

ಜೈ! ಸ್ವಾಮಿಗಳು ಅಮರರಾಗಲಿ ಎಂದು ಕೂಗುತ್ತಿದ್ದರು. ಉತ್ಸಾಹ ಉಕ್ಕೇರಿ ಬಂದಿತ್ತು. ಸಂಜೆ ಕಾರ್ಯಕ್ರಮಕ್ಕೆ ವೆಂಕಟರಾಯರು ಬಂದರು. ನೂರಾರು ಬಿಜಲಿಗಳು ಝಗಝಗಿ ಸುತ್ತಿದ್ದವು. ಬೈಲಿನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಜನ ನೆರೆದಿದ್ದರು. ಸ್ವಾಗತ ಭಾಷಣ ಶಂಕರಲಿಂಗನ ಪಾಲಿಗೆ ಬಂದಿತ್ತು. ಅವನು, ಶಾಲೆಯ ಮಾಸ್ತರ ಸಿದ್ರಾಮಪ್ಪನವರಿಂದ ಸ್ವಾಗತ ಭಾಷಣ ಬರೆಸಿಕೊಂಡು ಬಾಯಿಪಾಠ ಮಾಡಿದ್ದನು. ಸ್ವಾಗತ ಪದ್ಯ ಸಿದ್ರಾಮಪ್ಪ ಮಾಸ್ತರರೇ ಸ್ವತಃ ರಚಿಸಿ, ತಮ್ಮ ಶಾಲೆಯ ಪ್ರತಿಭಾವಂತ ಹುಡಿಗಿ ಕಾಮಿನಿಕುಮಾರಿಯ ಕಂಠದಿಂದ ಹಾಡಿಸುವ ವ್ಯವಸ್ಥೆ ಮಾಡಿದ್ದರು. ಕಾಮಿನಿಕುಮಾರಿ ಮತ್ತು ಮಲ್ಲವ್ವ ಈ ಇಬ್ಬರು ಜೊತೆಗೂಡಿ ಸ್ವಾಗತ ಪದ್ಯ ಹಾಡಲು ಬಂದರು. ಸಿದ್ರಾಮಪ್ಪ ಮಾಸ್ತರ ಸ್ವತಃ 'ಪೇಟಿ' ಬಾರಿಸಲು ಕುಳಿತುಕೊಂಡರು, ತಬಲಾ, ಡಗ್ಗಾ ಮುಂದಿಟ್ಟುಕೊಂಡು ಲಾಡಲೇಖಾಂ ಸಿದ್ಧನಾದ.

"ಬಾಬಾರೊ ವೆಂಕಯ್ಯಾ,
ನಮ್ಮ ಊರಿಗೆ ಬಾರಯ್ಯಾ,
ದ್ಯಾಂಪೂರದ ಚೋರಯ್ಯ,
ಸ್ವಾಗತ ನಿನಗೆ ವೆಂಕಯ್ಯಾ"

ಎಂದು ದೊಡ್ಡದನಿ ತೆಗೆದು ಕಾಮಿನಿ ಕುಮಾರಿ ಹಾಡಲಾರಂಭಿಸಿದಳು. ಈಗ ಒಮ್ಮಿಂದೊಮ್ಮೆಲೇ ಹುಡಿಗಿಯರ ಮುಂದಿದ್ದ 'ಮೈಕು' ತಮ್ಮ ಮುಂದೆ ಸರಿಸಿಕೊಂಡು ಸಿದ್ರಾಮಪ್ಪ ಮಾಸ್ತರ "ಕವಿತಾದೊಳ್ಗ ವೆಂಕಯ್ಯ ಅಂದ್ರ ನಮ್ಮ 'ಮುಕ್ಯ' ಅತಿಥಿ ಶ್ರೀ ವೆಂಕಟರಾಯರೆಂದು ಮಹಾಜನರು ತಿಳೀಬೇಕು. ಕಾವ್ಯಂದ್ರ ಏನಂತ ತಿಳಿದ್ರಿ? ಅದು ಸಾಮಾನ್ಯ ಇರೋದಿಲ್ಲ. ಭಾಳ ಕಠೀಣ ಇರ್ತದ. ಕವಿ ಏನ್ ಬೇಕಾದ್ರೂ ಬರೀಬೋದು ಅವನಿಗೇ ಆ ಸ್ವಾತಂತ್ರ್ಯ ಇರ್ತದ. ಕವಿತಾ ಬರೆಯುವರ್ಗಿಂತಾ ಓದೋರು ಭಾಳಾ ಶಾಣ್ಯಾ ಇರಬೇಕಾಗ್ತದ. ಈಗ ಮುಂದ ಕೇಳ್ರೀ..." ಎಂದು ಸಿದ್ರಾಮಪ್ಪ 'ಮೈಕು' ಹುಡಿಗಿಯರ ಮುಂದೆ ಸರಿಸಿದರು. ಹುಡಿಗಿಯರು ಮತ್ತೆ ಹಾಡಲಾರಂಭಿಸಿದರು.

"ಸ್ವಾಮಿಗಳ ಮುಂದೆ ನೀ ದ್ವಾಮಿ
ಇದ್ದಂತೆಯೋ
ಸಂಕಟಹರಣ ನೀ ವೆಂಕಟರಮಣಾ-
ಬಾ ಬಾರೋ ವೆಂಕಟರಮಣಾ
ಹರಿ ಎಂದರೆ, ನೀ ಹರಗೋಲಾದಿ,
ಕುರಿ ಎಂದರೆ ನೀ ನರಿಯಾದಿ
ಆದಿಕೇಶವರಾಯನ ಭಕುತಿಗೆ
ಮರುಳಾದೀ ನೀ ವೆಂಕಟರಮಣಾ
ಸ್ವಾಗತ ನಿನಗೆ ತೋರೋ ಕರುಣಾ

ಈ ರೀತಿ ಸ್ವಾಗತ ಮುಗಿದ ನಂತರ- ಶಂಕರಲಿಂಗ ಸ್ವಾಗತ ಭಾಷಣಕ್ಕೆ ಮುಂದೆ ಬಂದ.

"ನಮ್ಮ ಸೋತಂತ್ರ ಭಾರತದ ಸೊತಂತ್ರ ಬಂಧು ಬಾಂಧವರೆ, ಅಕ್ಕ ತಂಗೀರೆ, ಮತ್ತು ಉಪಸ್ಥಿತ ಮಾನುಭಾವರೆ, ಮತ್ತು ಪರಮ ಪೂಜ್ಯ ಮಾಸ್ವಾಮಿಗಳೇ.

ನಮ್ಮ ಭಾರತ ಸೋತಂತ್ರ ಆಗಾಕ, ನಮ್ಮ ಎಂಕಟರಾಯರು, ನಮ್ಮ ಚನ್ನಪ್ಪ ಗೌಡರು, ನಮ್ಮ ಪೂಜ್ಯ ಸ್ವಾಮಿಗಳು, ಮಾಡಿದ ತ್ಯಾಗ ಭಾರಿ ಮಹಾನ ಐತಿ. ಇದರ ವರ್ಣನಾ ಸಾಕ್ಷಾತ ಬ್ರಹ್ಮನಿಗೂ ಮಾಡಲಿಕ್ಕೆ ಬರಾಕ್ಕಿಲ್ಲ. ಒಂದು ವ್ಯಾಳ್ಯಾಕ್ಕ ನಮ್ಮ ದ್ಯಾಂಪುರ ವೆಂಕಟರಾವ ಹುಟ್ಟಿರಲಿಲ್ಲಾಂದ್ರ ನಮ್ಗ ಸ್ವಾತಂತ್ರ ಸಿಗ್ತಿರಲಿಲ್ಲಾಂತ ನನ್ನ ಖಂಡ ತುಂಡ ಅಭಿಪ್ರಾಯ ಐತಿ. ವೆಂಕಟರಾಯರಿಗೆ, ಬೆನ್ನಲುಬಾಗಿ ನಿಂತ ನಮ್ಗ ಚನ್ನಪ್ಪಗೌಡರು, ಚನ್ನಪ್ಪಗೌಡರಿಗೆ, ಬೆನ್ನಲುಬಾದಂಥ ನಮ್ಮ ಮಾಸ್ವಾಮಿಗಳಿಂದಲೇ ನಮ್ಗ ಸ್ವಾತಂತ್ರ್ಯ ಸಿಕ್ಕಾಯ್ತು. ಗಾಂಧೀ ಮಾತ್ಮಾ ಅಗ್ಲಿ, ಪಂಡಿತ ನೆಹರೂಜೀ ಆಗ್ಲಿ ದಿಲ್ಲಿ ಪಟ್ಟಣದಾಗ ಸ್ವಾತಂತ್ರ್ಯ ಕೊಡ್ಸಿರಬೇಕು. ಆದ್ರ ನಮ್ಮೀ

ಭಾಗಕ್ಕ 'ಫ್ರೀಡಂ' ಕೊಡಿಸಿದವರು ನಮ್ಮ ವೆಂಕಟರಾಯರೂ ಅಂತ ನಾ ಹೇಳಿದ್ರ ತಪ್ಪಾಗಿಕ್ಕಿಲ್ಲ, ಅಂಥವರು, ಇಂದ, ನಮ್ಮ ಸಭಾಕ್ಕ ಬಂದಾರು, ಅವರಿಗೆ ನಾ ಸ್ವಾಗತ ಹೇಳ್ತೀನಿ ಎಂದು ತಮ್ಮ ಭಾಷಣ ಮುಗಿಸಿ ಶಂಕರಲಿಂಗ ವಿಂಗಿನಲ್ಲಿ ಹೋದನು.

"ಭಲೋ ಮಾತಾಡ್ತಾನ್ರೀ" ಎಂದು ಲಾಡ ಲೇಖಾಂ ಹೇಳಿದ. ಆಗ ಸಿದ್ರಾಮಪ್ಪ ಮಾಸ್ತರ "ಅಂವಾ ಏನ್ಮಾತಾಡ್ತಾನು? ನಾನೇ ಭಾಷಣ ಬರೆದು ಕೊಟ್ಟಿದ್ದು" ಎಂದು ಮಾತಾಡಿದ್ದ ಶಬ್ದ ಮೈಕಿನಲ್ಲಿ ಎಲ್ಲರೂ ಕೇಳಿಸಿಕೊಂಡರು. ಗೌಡರು ಮಾತಾಡಲು ನಿಂತರು.

"ಅಠರಾಸೇ ಸತ್ತಾವನದಿಂದ ನಮ್ಮ ಮನೆತನದವರು ಈ ಸ್ವಾತಂತ್ರ್ಯ ಹೋರಾಟದಲ್ಲಿದ್ದಾರು. ನಮ್ಮ ತಾತನ ತಾತರಾದ ಶ್ರೀ ವಿರಭದ್ರ ಗೌಡರು ಸ್ವತಃ ಝಾಂಸಿ ಲಕ್ಷ್ಮೀಬಾಯಿ ಸಂಗಾಟ ನಿಂತು ಯುದ್ಧ ಮಾಡಿದ್ದು ಇತಿಹಾಸದೊಳ್ಗ ಬರೆದಿಟ್ಟದೆ. ತಾತ್ಯಾಟೋಪೆ ಎಂಬ ಒಬ್ಬ ಸೇನಾಧಿಪತಿ ಇಂಗ್ರೇಜರ ಸಂಗಾಟ ಹೋರಾಡಿ, ತನ್ನ ಗಂಡಸತನ ತೋರಿಸಿದ. ಅವನು ಮುಂದೆ ಬರಬೇಕಂತ ಸಹಾಯ ಮಾಡಿದವರು, ನಮ್ಮ ಯಜಮಾನರಾದ ಶ್ರೀ ವೀರಭದ್ರ ಗೌಡರೇ. ಖರಾಬ ನಸೀಬಲಿಂದ ಆ ಯುದ್ಧದೊಳ್ಗ ನಮ್ಮ ಮಂದೀಗಿ ಸೋಲಾಯ್ತು. ಆಗ ತಾತ್ಯಾಟೋಪೆ ಇಂಗ್ರೇಜರ ಕಣ್ಣುತಪ್ಪಿಸಿ, ನಮ್ಮ ಈ ಊರಿನ ಇದೇ ಮಠದೊಳ್ಗ ಮೂರು ತಿಂಗಳಿದ್ದ ವಿಷಯ ಈಗ ನಿಮ್ಮ ಮುಂದಿಡುತ್ತಿದ್ದೇನೆ. ನಂತರ ನಮ್ಮ ಹಿರಿಯ ತಾತಗಳವರ ಕುದುರಿ ಮ್ಯಾಲ ಕುಂತ್ರೇ ಆ ಟೋಪೆ ಇಲ್ಲಿಂದ ಹಿಮಾಲಯ ಪರ್ವತದಲ್ಲಿದ್ದ ನೇಪಾಳ ದೇಶಕ್ಕೆ ಹೋಗಿದ್ದು ಈಗ ನಾ ಬಹಿರಂಗ ಮಾಡ್ಲಿಕತ್ತೀನಿ.

"ನಾ ಸ್ವತಃ ಈ ಸ್ವಾತಂತ್ರಕ್ಕೆ ಎಷ್ಟು ಕಷ್ಟ ಪಟ್ಟೀನಿ ಅದು ಈ ಮಠದ ಸ್ವಾಮಿಗಳಿಗೇ ಗೊತ್ತು ಮತ್ತು ಆ ಶಿವಪರಮಾತ್ಮನಿಗೆ ಗೊತ್ತು. ಹಮೇಶಾ ಮ್ಯಾಲಿಂದ ಇಂಗ್ರೇಜರ ದೋಸ್ತನಂತೆ ಇದ್ದು, ಅವರ ಗುಟ್ಟೆಲ್ಲ ತಿಳಿದುಕೊಂಡು, ನಮ್ಮ ಸ್ವಾತಂತ್ರ್ಯದ ಮಂದಿಗೆ ಹೇಳಿ ಸಹಾಯ ಮಾಡ್ತಿದ್ದೆ. ದರ ಅಠವಡಾಕ್ಕೊಮ್ಮೆ ನಾ ಮಾತ್ಮಾ ಗಾಂಧೀಜಿ ಅವರಿಗೆ ಸುದ್ದಿ ಮುಟ್ಟಿಸ್ತಿದ್ದೆ. ಈ ಮಾತು ನಮ್ಮ ವೆಂಕಟರಾಯರಿಗೆ ಗೊತ್ತದಾಂತ ನಾ ತಿಳಕೊಂಡೀನಿ. ಜೈ ಹಿಂದ ಜೈ ಭಾರತ ಮಾತಾ" ಎಂದು ಚನಪ್ಪಗೌಡರು ತಮ್ಮ ಭಾಷಣವನ್ನು ಮುಗಿಸಿದರು.

*

ಸಭೆ ಮುಗಿದ ನಂತರ ರಾತ್ರಿ ಊಟ ಮಾಡುವಾಗ ಸ್ವಾಮಿಗಳು- "ವೆಂಕಟರಾಯರ, ಪಾರ್ಟಿ ವಳ್ಗ ನಿಮ್ಮ ವಜನಾಯ್ತು, ನಿಮ್ಮ ಮಾತು ಯಾರೂ ಮೀರಾಂಗಿಲ್ಲ. ಇನ್ನ ಮ್ಯಾಲ ಇಲೆಕ್ಷನ್ ಗಿಲೆಕ್ಷನಂತ ಬಂದೇ ಬರ್ತಾವು. ಆಗ, ನೀವು, ನಮ್ಮ ಚನ್ನಪ್ಪಗೌಡರ ಪರವಾಗಿ ಮಾತಾಡಬೇಕು. ಇವ್ರಿಗೇ ತಿಕೀಟ ಸಿಗ್ಹಾಂಗ ಮಾಡಬೇಕು. ಹಾಂಗ ನೋಡಿದ್ರ, ನಮ್ಮ ಭಾಗಕ್ಕ ನೀವೇ ಖರೇ ಪ್ರತಿನಿಧಿ ಆದೀರಿ, ಆದ್ರ ನಿಮ್ಮ ಸ್ವಭಾವ ಗೊತ್ತು. ನಿಮ್ಗ ಕೇವಲ ಸೇವಾ ಬೇಕು. ಯಾವ ಅಧಿಕಾರ, ಕುರ್ಚಿಯ ಆಸಿ ನಿಮಗಿಲ್ಲ. ಒಂದು ವೇಳ್ಯಾ ನಿಮ್ಗೇ ತಿಕೀಟು ಕೊಡಬೇಕಂತ ಪಾರ್ಟಿ ,ಇಚಾರ ಮಾಡಿದ್ರೂ ನೀವು ಬ್ಯಾಡಂತ ಹೇಳ್ತೀರಿ, ಆಗ, ಮತ್ತೊಬ್ಬ ಘಟಿಂಗ ತಿಕೀಟ ಪಡೀಬಹುದು. ಅದ್ಕಂತ, ಈಗೇ ಇಷಾರಾ ಕೊಡಾಕತ್ತೀನಿ. ನಮ್ಮ ಗೌಡರ ಹೆಸರು ಬರಬೇಕು. ಅವರು ನಮ್ಮ ಲೀಡರ ಆಗಬೇಕು. ನಮ್ಮ ಮಂತ್ರಿ ಆಗಬೇಕು." ಎಂದೆಲ್ಲ ವಿಸ್ತಾರದಿಂದ ಸ್ವಾಮಿಗಳು ತಿಳಿಸಿ ಹೇಳಿದರು.

"ಗೌಡರೆ ನೀವು ಭಾಷಣ ಮಾಡುವಾಗ ಏನೇನೋ ಹೇಳಿದ್ರಿ. ಅದೆಲ್ಲ ಖರೇ ಅಂತ ಹ್ಯಾಂಗ ನಂಬೋದು?" ಎಂದು ವೆಂಕಟರಾಯ ಬೇರೆ ಪ್ರಶ್ನೆ ಕೇಳಿದ.

"ನಮ್ಮ ಮಠದಾಗ ಅಂಥಾ ದಾಖಲೆ ಪತ್ರ

ಗಳವೆ. ಗೌಡರ ಮನಿವಳಗ್ಗ ಹಳೀ ಕಾಗದ ಪತ್ರ ಗಳವೆ." ಎಂದು ಸ್ವಾಮಿಗಳು ಹೇಳಿದರು.

"ಹಾಂಗಿದ್ರ ಭಾಳ ಛಲೋ ಆಯ್ತು. ಇತಿ ಹಾಸದ ಮ್ಯಾಲ ಹೊಸ ಬೆಳಕು ಚಲ್ಲಿದಂತಾಗ್ತದ. ನೀವು ಆ ಕಾಗದ ಪತ್ರಗಳನ್ನೆಲ್ಲ, ಸರಕಾರಕ್ಕೆ ಕೊಡ್ರಿ. ಇತಿಹಾಸ ಸಂಶೋಧಕರಿಗೆ ಕೊಡ್ರಿ." ಎಂದು ವೆಂಕಟರಾಯ ಸೂಚಿಸಿದ.

"ಅದೆಲ್ಲ ಮುಂದಿನ ಮಾತಾಯ್ತು ವೆಂಕಟ ರಾಯ, ಸದ್ಯ ನಮ್ಮ ಗೌಡರ ಮನೆತನ ಸ್ವಾತಂತ್ರ್ಯ ಹೋರಾಟದಲ್ಲಿತ್ತೂ ಅಂಬೋ ಮಾತು, ಜನರಿಗೆ ಗೊತ್ತಾಗಬೇಕು. ಇದು ಮುಖ್ಯ ವಿಷಯ ಐತಿ" ಎಂದು ಸ್ವಾಮಿಗಳು ಹೇಳಿದರು.

"ಸತ್ಯ ಮುಚ್ಚಿಡಬಾರದೂ ಅಂತ ನನ್ನ ಅಭಿಪ್ರಾಯ" ಎಂದು ವೆಂಕಟರಾಯ ನುಡಿದ.

"ನಾ ಕಂಡ ಸತ್ಯ ನೀನೇನು ಕಂಡೀದಿ? ನನ್ನ ವಯಸ್ಸೆಷ್ಟು ಅನುಭವ ಅಂತಸ್ತು, ದೊಡ್ಡಸ್ತಿಕೆ, ನಿನಗೇನು ಗೊತ್ತದ?" ಎಂದು ಗೌಡರು ಕೇಳಿದರು.

"ನಾ ನಂಬೋದು ಅದಲ್ಲ. ಸತ್ಯ ಜನರಿಗೆ ಗೊತ್ತಾಗಬೇಕು. ಅದನ್ನು ನಾವು ಮುಚ್ಚಿಡಬಾರದೂ, ಮುಚ್ಚಿಟ್ಟ ಸತ್ಯ ಸತ್ಯ ಆಗೋದಿಲ್ಲ. ಜನರಿಗೆ ಏನೋ ಹೇಳಿ ಮೋಸ ಮಾಡಬಾರದು. ಜನ, ಸಾಮಾನ್ಯಜನ, ನಮ್ಮ ಪ್ರಭುಗಳು, ಅವರನ್ನ ಮೋಸಗೊಳಿಸಬಾರದು, ದ್ರೋಹ ಬಗೀಬಾರದು" ಎಂದು ವೆಂಕಟರಾಯ ಚಿಕ್ಕದೊಂದು ಭಾಷಣವನ್ನೇ ಬಿಗಿದ.

"ಭಾಷಣ ಪಸಂದ ಮಾಡ್ತೀರಿ ವೆಂಕಟ ರಾಯರ. ಅದು ನಿಮ್ಮ ಕಸಬು. ಅದರಲ್ಲಿ ನಿಮ್ಮ ಕೈಹಿಡಿದವರ್‍ಯಾರು?" ಎಂದು ಗೌಡರು ವ್ಯಂಗದಿಂದ ನುಡಿದರು.

ಊಟ ಮುಗಿದ ನಂತರ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ವೆಂಕಟರಾಯ ದ್ಯಾಂಪೂರಕ್ಕೆ ಹೊರಡಲು ಸಿದ್ಧವಾದ.

"ಇಂಥಾ ರಾತ್ರಿ ಯಾಕ ಹೋಗ್ತೀರಿ ಇಂದ ನಮ್ಮ ಮನ್ಯಾಗೇ ವಿಶ್ರಾಂತಿ ತೊಗೋಳ್ರಿ ನಾಳಿ ಬೆಳಗ್ಗೆ ನಮ್ಮ ಜೀಪಿನ್ಯಾಗ ಬಿಟ್ಟು ಬರ್‍ತೀನಿ" ಎಂದು ಗೌಡರು ಹೇಳಿದರು.

"ಬ್ಯಾಡ, ಭಾಳ ಕೆಲಸಾ ಅದಾವು. ಹೋಗ ಬೇಕು" ಎಂದು ವೆಂಕಟರಾಯ ಹೇಳಿದ.

ಮುನೀಮ ಶಂಕರಲಿಂಗ, ಗೌಡರ ಘಟಘಟಿಯ ಮೇಲೆ ಕೂಡಿಸಿಕೊಂಡು, ವೆಂಕಟರಾಯರನ್ನು ದ್ಯಾಂಪೂರಕ್ಕೆ ಬಿಟ್ಟು ಬಂದ.

■

ಗೌಡರ ಸ್ವಾತಂತ್ರ್ಯ ಹೊರಾಟದ ಕಥೆ ದ್ಯಾಂಪೂರ ತುಂಬೆಲ್ಲ ಹರಡಿತು. ಜನ ಸ್ವಾರಸ್ಯ ಪೂರ್ಣ ಕಥೆಗಳನ್ನು ಕಟ್ಟಿ, ಗೌಡರ ಗೇಲಿ ಮಾಡ ತೊಡಗಿದರು.

"ಸದಾ ಸೂಳೇರ ಮಗ್ಗಾಲ್ಕ ಮಲಕೋ ಮಂವ ಗೌಡ, ಸ್ವಾತಂತ್ರ್ಯ ಚಳುವಳಿ ಹ್ಯಾಂಗ ಮಾಡಿದ್ನೋ?" ಎಂದು ಮ್ಯಾಲಿನಮನಿ ಗವಿ ರಾಮಪ್ಪ ಕೇಳಿದ. "ಅದೂ ಒಂದ್ ರೀತಿ ಸ್ವಾತಂತ್ರ್ಯ ಚಳುವಳಿಯಪ್ಪಾ" ಎಂದು ಬುಡನ್ ಸಾಬ ನಗುತ್ತ ಹೇಳಿದ.

"ಇಡೀ ಜೀವಮಾನನೇ ಇಂಗ್ರೇಜರ್ ತೇಲು ಹೊರೋದ್ರಾಗ ಹೋಯ್ತು. ಈಗ ತಾನು ಸಾಚಾ ಅದೀನಿ ಅಂತ ತೋರಸ್ಲಾಕ, ನಾಟಕಾ ಹೂಡ್ಯಾನ" ಎಂದ ತಳವಾರ ರಾಮಪ್ಪ.

■

ನಿಧಾನವಾಗಿ ಗೌಡರ ವಿರುದ್ಧದ ಗಾಳಿ, ಗೌಡರ ಸ್ವಂತ ಊರಾದ ದೊಡ್ನೂರಲ್ಲಿಯೂ ಹರಡಿ ಕೊಂಡಿತು. ಜನರಲ್ಲಿ ಅಸಮಾಧಾನದ ಹೊಗೆಯಾಡತೊಡಗಿತು. ಎರಡು ಸಾವಿರ ಎಕರೆ ಭೂಮಿಯ ಒಡೆತನ ಹೊಂದಿದ್ದ ಗೌಡರ ಸಿಂಹಾಸನ ಅಲುಗಾಡುವ ಲಕ್ಷಣಗಳು ಕಾಣಿಸ ತೊಡಗಿದವು.

"ಜಮೀನು ನೀವು ಹಸನಗೊಳಿಸ್ತಿರಿ. ಕುಂಟೆ, ರಂಟೆ ನೇಗಿಲು, ನೀವು ಹೊಡೀತೀರಿ. ಬಿತ್ತೀರಿ ಬೆಳೀತೀರಿ, ಮಳೀ ಬಿಸಲು ಅನ್ನಲಾರದೇ ಹಗಲು ರಾತ್ರಿ ದುಡೀತೀರಿ. ಮಣ್ಣಿನ

ಮಕ್ಕಳು ನೀವು ಶ್ರಮ ಪಡ್ತೀರಿ. ಕಷ್ಟ ಪಡ್ತೀರಿ, ಆದ್ರ ಫಲ ಭೋಗಿಸುವರ್‍ಯಾರು? ಬರೀ ಹೆಸರು, ಮಾಲೀಕರದಿದೇ ಎಂದ ಮಾತ್ರಕ್ಕೆ ಅವರು ಒಡೆಯರಾಗಿ ಬಿಡ್ತಾರ? ನೀವು ಬಿತ್ತಿ ಬೆಳೆದಿವ್ರ, ಫಸಲು ಅವರು ಪಡೀತಾರ. ನಿಮಗೆ ಕೂಲಿಕಾಳು ಮಾತ್ರ ದೊರಕ್ತದೆ. ಹೊಲ ಊಳುವವನೇ ನಿಜವಾದ ಆ ಹೊಲದ ಒಡೆಯಾ," ಎಂದೆಲ್ಲ ವೆಂಕಟರಾಯ ಪ್ರಚಾರ ಮಾಡತೊಡಗಿದ. ವೆಂಕಟರಾಯನ ಹಿಂದೆ ನೂರಾರು ಯುವಕರು ತಯಾರಾದರು. ಜಮೀನಿನ ಮಾಲಿಕರಿಗೆ ಸವಾಲಾಗಿ ನಿಂತರು. ಸಾಹುಕಾರರ, ಮಠ ಮಾನ್ಯಗಳ, ಜಮೀನ್ದಾರರ ಶೋಷಣೆಯ ಕಥೆಗಳು ಊರೂರಲ್ಲಿ ಹರಡ ತೊಡಗಿದವು. ಮುಗ್ಧ ಜನರ ಮನಸ್ಸಿನಲ್ಲಿ ಕೋಲಾಹಲ ಉಂಟಾಯಿತು.

•

ಹೊಸ ಸರಕಾರ ಬಂತು. ಹೊಸ ಕಾನೂನುಗಳು ಬಂದವು. ಊಳುವವನೇ ಭೂಮಾಲೀಕನೆಂದು ನಿರ್ಧರಿಸಲಾಯಿತು. ರೈತರು ತಾವು ಊಳುತ್ತಿರುವ ಜಮೀನಿನ ಮಾಲಕೀ ಹಕ್ಕಿಗಾಗಿ ಟೆನನ್ಸಿ ಅರ್ಜಿಗಳನ್ನು ಸಂಬಂಧಿತ ಅಧಿಕಾರಿಗಳಿಂದ ಪಡೆದು ಸಲ್ಲಿಸಬೇಕೆಂದು ತಿಳಿಸಲಾಯಿತು.

ಚನ್ನಪ್ಪಗೌಡರು ಹೌಹಾರಿದರು. ಸ್ವಾಮಿಗಳು ಗಾಬರಿಗೊಂಡರು. ಸರಕಾರಿ ಕಾನೂನಿನ ಬಗ್ಗೆ ಗೌಡರ ರೈತರಿಗೂ ಮಾಹಿತಿ ದೊರಕಿತು. ಗೌಡರ ತೋಟದಲ್ಲಿ ತಲೆತಲಾಂತರದಿಂದ ದುಡಿಯುತ್ತ ಬಂದ ಶಾಂತಪ್ಪನ ಕುಟುಂಬ ಆ ತೋಟದ ಒಂದು ಮೂಲೆಯಲ್ಲಿಯೇ ಗುಡಿಸಲು ಹಾಕಿಕೊಂಡು ವಾಸಿಸುತ್ತಿತ್ತು. ಶಾಂತಪ್ಪನ ತಂದೆ, ಅವನ ತಂದೆ, ಹೀಗೆ ಎಷ್ಟೋ ವರ್ಷದಿಂದ ಜೀತದಾಳಾಗಿ ದುಡಿದಿದ್ದ ಈ ಭೂಸುಧಾರಣೆಯ ಕಾಯದೆಯಿಂದ ಪುಲಕಿತಗೊಂಡನು. ಅವನು ಗುಟ್ಟಾಗಿಯೇ



ಗೌಡರ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಜನರನ್ನು ಭೇಟಿಯಾಗಿ, ಅರ್ಜಿಸಲ್ಲಿಸುವ ಬಗ್ಗೆ ಅವರ ಅಭಿಪ್ರಾಯ ಕೇಳಿಕೊಂಡ.

"ಯಾವ ಸರಕಾರ ಏನಿದ್ದರೂ ನಮ್ಮ ಚನ್ನಪ್ಪಗೌಡರ ಸರಕಾರ, ಭೂಮಿ ಒಡೆತನ ಬಿಟ್ಟು ಕೊಡಬಹುದಾ?" ಎಂದು ಲಂಬಾಡಿ ಹೇಮಲು ಕೇಳಿದ. "ಅಲ್ಲಪ್ಪ ಹೇಮಲಣ್ಣ, ಚನ್ನಪ್ಪಗೌಡರು ತಮ್ಮ ಒಡೆತನ ಬಿಟ್ಟಾರೋ, ಹಿಡಕೊಂಡಿರ್ತಾರೋ ಆ ಇಚಾರ ನಾವ್ಯಾಕ ಮಾಡಬೇಕು? ಗೌಡರ ಹೊಲದೊಳಗ ನಾವು ದುಡೀತಾ ಆದೀವಲ್ಲ? ಆಯ್ತು. ನಾವೇ ದುಡೀತಾ ಆದೀವಿ ಅಂತ ಸರಕಾರಕ್ಕೆ ಗೊತ್ತು ಮಾಡಿಸಿದ್ರಾಯ್ತು, ಮುಂದ ಸರಕಾರ ತಾನೇ ನ್ಯಾಯ ಕೊಡ್ತಾಯ್ತಿ" ಎಂದು ಶಾಂತಪ್ಪ ಹೇಳಿದ.

ತನ್ನ ಜೀತದಾಳುಗಳಲ್ಲಿ ಒಂದು ರೀತಿಯ ಗುಸುಗುಸ ನಡೆದಿದೆ ಎಂದು ಗೌಡರಿಗೆ ಗೊತ್ತಾಯಿತು.

ಒಂದುದಿನ ಗೌಡರೇ ಸ್ವತಃ ತಮ್ಮ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಆಳುಗಳನ್ನು ತಮ್ಮ ಮನೆಗೆ ಬರಬೇಕೆಂದು ಹೇಳಿ ಕಳಿಸಿದರು. ಗೌಡರು ಆಜ್ಞಾಪಿಸಿದಂತೆ ಎಲ್ಲರೂ ಶನಿವಾರದಂದು ಸಂಜೆ ಆರೂವರೆ ಸುಮಾರಿಗೆ ಗೌಡರ ಅಂಗಳದಲ್ಲಿ ಬಂದು ಸೇರಿದರು. ಗೌಡರು ಬಂದವರೆಲ್ಲರಿಗೆ 'ಸೂಸಲಾ' ಮತ್ತು ಬೆಲ್ಲದ ಚಾ ಕೊಟ್ಟರು. ಗೌಡರ ಮನೆಯಲ್ಲಿ ಕೆಲಸಕ್ಕಿದ್ದ ಹತ್ತಾರು ಮಂದಿ, ಹೆಣ್ಣುಗಂಡು ಆಳುಗಳು, ಪೇಪರಿನ ತುಂಡುಗಳ ಮೇಲೆ ಸೂಸಲಾ ಹಾಕಿ ಕೊಡುತ್ತಿದ್ದರು. ಚಿಕ್ಕ ಚಿಕ್ಕ ಅಲ್ಯೂಮೇನಿಯಂ ಬಟ್ಟಲುಗಳಲ್ಲಿ ಚಹಾ ಕೊಡುತ್ತಿದ್ದರು. ಎಲ್ಲರೂ 'ಚಹಾ ಪಾಣಿ' ಮುಗಿದ ನಂತರ ಗೌಡರ ಆಗಮನದ ದಾರಿ ಕಾಯುತ್ತ ಕುಳಿತರು. ಸ್ವಲ್ಪ ಹೊತ್ತಿನ ಮೇಲೆ ಒಂದು ಕಡೆಯಿಂದ ರಹಮಾನ ಇನ್ನೊಂದು ಕಡೆಯಿಂದ ಕಲ್ಲ್ಯಾ ಹೆಗಲಿಗೆ ಬಂದೂಕಗಳನ್ನು ಹಾಕಿಕೊಂಡು, ಪಡಸಾಲೆಯಲ್ಲಿ, ಎಲ್ಲರಿಗೆ ಕಾಣುವಂತೆ ಬಂದು ನಿಂತರು. ಗುಜುಗುಜು ಮಾತಾಡುತ್ತ ಕುಳಿತ ಜನ ಒಮ್ಮಿಂದೊಮ್ಮಿಲೇ ಸುಮ್ಮನಾದರು.

ಗೌಡರು ಬಂದರು. ಕೆಂಪು ಜರದ ರೂಮಾಲು, ರೇಶಮಿ ಅಂಗಿ ಪರಮಸುಖ ಧೋತರ, ಬಂಗಾರದ ಚೇನು, ವಜ್ರದ ಉಂಗರು ಮತ್ತು ಅವರ ಮೈ ಮೇಲೆ ಕಂಡು ರೈತರೆಲ್ಲರೂ ಗಾಬರಿಗೊಂಡರು.

ಈ ನಡುವೆ ಅನೇಕ ದಿನಗಳವರೆಗೆ ಗೌಡರು ಖದ್ದರಿನಲ್ಲಿಯೇ ಕಾಣಿಸಿಕೊಳ್ಳುತ್ತಿದ್ದರು. ಆದರೆ ಇಂದು ಮತ್ತೆ ಅದೇ ಅವತಾರ ಪ್ರಕಟವಾಗಿದ್ದನ್ನು ನಿರೀಕ್ಷಿಸಿ ಸಾಮಾನ್ಯವಾಗಿ ಎಲ್ಲರೂ ಒಳಗಿಂದೊಳಗೆ ನಡುಗಿದ್ದರು.

"ಈ ಛಂಜಿ ಹೊತ್ತು, ನಾ ನಿಮ್ಮನ್ಯಾಕ ಕರೇಸಿದ್ದೇನಿ ಅಂತ ನಿಮ್ಗ ತಿಳಿದಿರಲೇಬೇಕು" ಗೌಡರು ಗಂಭೀರ ದನಿಯಲ್ಲಿ ಮಾತನಾಡಲು ಪ್ರಾರಂಭಿಸಿದರು. ಮಾತು ಮುಂದೊರೆಸುತ್ತ—"ಸರಕಾರ ಹೊಸ ಕಾಯದೆ ಮಾಡೇದಂತ ನೀವು ಕೇಳಿರಬೇಕು. ಊಳುವವನೇ ಜಮೀನಿನ ಒಡೆಯಾ ಅಂತ. ಅಂದ್ರ-ಗಂಡಿದ್ರೂ ಮಿಂಡಗಾರನೇ ಗಂಡ ಅಂತ ಅದರರ್ಥ ತಿಳಿತೇನ್ರಪ? ನನ್ನ ಎಷ್ಟು ಜಮೀನಾಯ್ತೆಂತ ನಂಗೇ ಗೊತ್ತಿಲ್ಲ. ಹ್ಯಾಂಗ, ನಾ ಏರಿದ ಕುದುರಿ, ನಾ ಏರಿದ ಹೆಂಗಸರ ಲೆಕ್ಕಾ ಇಟ್ಟಿಲ್ಲೋ ಹಂಗೇ ನನ್ನ ಜಮೀನಿನ ಬಗ್ಗೆ ಲೆಕ್ಕಾ ಇಟ್ಟಿಲ್ಲ. ವರ್ಷಕ್ಕೊಂದು ಸಲ 'ಗೌಡರ, ಇದು ನಿಮ್ಮ ಈ ಫಲಾಣಿ ಜಮೀನಿನ ಫಸಲೂ' ಅಂತ, ನೀವು ತಂದುಕೊಟ್ಟಾಗ ಹೂಂ ಸರಿ, ಗೋದಾಮದಾಗ ಹಾಕು" ಅಂತ ಸುಮ್ನುಕುಂತಾವ. ನೀವು ಯಾರು ಎಷ್ಟು ಬೆಳಿದ್ರೀ ಎಷ್ಟು ಬಿಟ್ರಿ ಅಂತ ಲೆಕ್ಕಾ ಇಡಲಿಕ್ಕ ನನ್ನ ಬಲ್ಲಿ ಟೈಮೂ ಇರಲಿಲ್ಲ. ನಿಯತ್ತಿನಿಂದ ಸಾಗುವಳಿ ಮಾಡಿದವರೆಷ್ಟು, ಮಾಡಲಾರದವರೆಷ್ಟೂ ಅಂತನೂ ನಾ ಕೇಳಿಲ್ಲ. ನಿಮ್ನ ನಾ



ಏಷ್ಟು ಕೊಟ್ಟೇನಿ ಅಂತನೂ ಲೆಕ್ಕಾ ಬರದಿಟ್ಟಿಲ್ಲ. ನನ್ನ ಜಮೀನಿನ್ಯಾಗ ನಿಮ್ಮ ಅಜ್ಜ ದುಡೀತಿದ್ದ, ನಿಮ್ಮ ಅಪ್ಪ ದುಡೀತಿದ್ದ, ನೀವು ದುಡೀತಿದ್ದೀರಿ, ಇನ್ನಮ್ಯಾಲೆ ನಿಮ್ಮ ಮಕ್ಕಳೂ ದುಡೀತಾರ ಅಂತ ಅಂದ್ಕೊಂಡೀನಿ.

"ನಿಮ್ಮ ಬ್ಯಾನಿಬ್ಯಾಸರಕಿ, ನಿಮ್ಮ ಸಾವು ನೋವು. ನಿಮ್ಮ ಮದುವಿ ಮುಹೂರ್ತಕ್ಕ ನಾನೆಷು ಕೊಟೀನಿ ಅಂತ ನೀವೆ ಹೇಳಬೇಕು. ಆ ವಿಷಯ ಒತ್ತಟ್ಟೆ ಇರಲಿ, ಅದನೆಲ್ಲ ಜಮಾ ಖರ್ಚುಮಾಡಿ ನಿಮ್ಮಿಂದ ವಸೂಲ ಮಾಡಬೇಕಂತ ನನ್ನ ಮನಸಿಲ್ಲ.

"ಆದ್ರ ಸರಕಾರದ ಹುಕುಂ ಮೀರಿ ನಡೆಯುವ ಮನಷ್ಯಾ ನಾನಲ್ಲ. ಈಗಂತೂ ನಮ್ಮ ಸರಕಾರ ಬಂದದ. ನಮ್ಮ ಸರಕಾರಂದ್ರ ನಿಮ್ಮ

ಸರಕಾರ. ಬಡವಬಗ್ಗರ ಸರಕಾರ, ದೀನದಲಿತರ ಸರಕಾರ. ಆ ಸರಕಾರಕ್ಕ ಸಹಾಯ ಮಾಡೊದು ನಮ್ಮ ಕರ್ತವ್ಯ ಅದ. ಅದ್ಕಂತ ಈಗ ನಾ ಹೇಳೋದೇನಂದ್ರು ನೀವು ಯಾವ ಜಮೀನಿನ ಮೇಲೆ ಸಾಗುವಳಿ ಮಾಡಾಕತ್ತೀರಿ, ಆ ಜಮೀನು ಇಂದಿನ ಮಿತಿಯಿಂದ ನಿಮ್ಮದೇ ಜಮೀನೆಂದು ತಿಳಿದುಕೊಳ್ರಿ. ನೀವೇ ಆ ಜಮೀನಿನ ಮಾಲೀಕರು, ಒಡೆಯರು, ಹಕ್ಕುದಾರರು, ಪಟ್ಟೇದಾರರು," ಎಂದು ಹೇಳಿ ಗೌಡರು ದಡಕ್ಕನೇ ಎದ್ದು ಒಳಗೆ ಹೋಗಿಬಿಟ್ಟರು.

ಅಂಗಳದಲ್ಲಿ ನೆರೆದಂಥ ಎಲ್ಲರೂ ಮೂಕ ವಿಸ್ಮಿತರಾದರು. ಏನು ಮಾತಾಡಬೇಕೆಂದು ಯಾರಿಗೂ ತಿಳಿಯಲಿಲ್ಲ. ಎಲ್ಲರೂ ಸುಮ್ಮನೆ ತಮ್ಮ ಮನೆಯ ಕಡೆ ಹೋರಟರು.

"ಗೌಡರು ಇಂಥಾ ದೊಡ್ಡ ಮನಸ್ಸಿನವರಿದ್ದಾರಂತ ನನಗೆ ಅನಿಸಿರಲಿಲ್ಲ" ತೋಟದ ಬದುವಿಗೆ ಕುಳಿತ್ತಿದ್ದ ರಾಮೋಜಿ ಹೇಳಿದ.

"ಭಾರಿ ದೊಡ್ಡ ಮನಸ್ಸು" ಎಂದ ಶಾಂತಪ್ಪ.

"ನಾವೆಲ್ಲರೂ ಇನ್ನಮ್ಯಾಲೆ ಟೆನನ್ಸಿ ಫಾರ್ಮ ತುಂಬಬೇಕ?" ರಾಮೋಜಿ ಕೇಳಿದ.

"ಕಾಯದೆ ಕಾನೂನಿನ ಪ್ರಕಾರ ತುಂಬಲೇ ಬೇಕಲ್ಲ ರಾಮೋಜಿ" ಶಾಂತಪ್ಪ ಗದ್ದೆಗೆ ನೀರುಣಿಸುತ್ತ ಹೇಳಿದ.

"ನಮ್ಮ ಜಮೀನಿನ ನಂಬರ ಯಾವುದು? ಎಷ್ಟು ಎಕರೆ ಆಯ್ತಿ! ಒಂದೂ ಗೊತ್ತಿಲ್ಲಲ್ಲ ಶಾಂತಣ್ಣ?" ರಾಮೋಜಿ ಕೇಳಿದ.

"ತಹಶೀಲ ಕಚೇರಿಗೆ ಹೋಗಿ, ತಲಾಟಿಗಿ, ಇನ್ಸಪೆಕ್ಟರಗೋಳಿಗಿ ಭೇಟಿಯಾದರ ಗೊತ್ತಾಗಬಹುದು," ಎಂದು ಶಾಂತಪ್ಪ ತಿಳಿಸಿದ.

■

ಗುಂಪು ಗುಂಪಾಗಿ ರೈತರು ತಹಸೀಲ ಕಚೇರಿಗೆ, ಬಂದರು. ಅಲ್ಲಿ ಅವರಿಗೆ ಸಮರ್ಪಕ ಉತ್ತರ ಸಿಗಲಿಲ್ಲ.

"ಗೌಡರ ಜಮೀನಂದ್ರು ಯಾವದಂತ ತಿಳೀಬೇಕಪ್ಪಾ ಯಜಮಾನ. ಸುತ್ತ ಹತ್ತು ಹಳ್ಳಿವಳಗ ಇದ್ದೆಲ್ಲ ಜಮೀನ ಗೌಡರದ್ದೇ ಆಯ್ತಿ. ಬರೋಬರಿ ನಂಬರ, ಎಕರೆ, ಆಕಾರ ಬರಕೊಂಡ ಬರ್ರಿ" ಎಂದು ಶಿರಸ್ತೆದಾರ ಸ್ವಾಮೀರಾಯರು ಹೇಳಿದರು.

ಗೌಡರಲ್ಲಿಗೇ ಹೋಗಿ ಈ ವಿಷಯ ಕೇಳುವದೆಂದರೆ ಎಲ್ಲರಿಗೂ ಒಂದು ತರಹದ ಮುಜುಗರ.

ರೈತರ ಪರದಾಟದ ಸುದ್ದಿ ಗೌಡರ ಕಿವಿಗೆ ಬಿತ್ತು. ಅವರು ತಾವೇ ಪರಿಹಾರ ಸೂಚಿಸಿದರು.

ಶಾಂತಪ್ಪನೇ ಎಲ್ಲರ ಮುಖಂಡತ್ವ ಹೊತ್ತಿತ್ತು. ಗೌಡರು ಅವನನ್ನು ಕರೆದು- "ನೋಡ, ಶಾಂತಪ್ಪಾ- ನಿಮ್ಮ ತೊಂದರೆ ಏನಾಯ್ತಂತ ನಂಗೊತ್ತು. ಹುಚ್‌ಪ್ಯಾಲಿ ಹಾಂಗ ಕಚೇರಿ ಮುಂದ ನಿಂತ್ರs ಕೆಲಸಾ ಆಗ್ತಾಯ್ತೇನಪಾ? ನೋಡು, ನಿಮ್ಮ ಕಾಗದಾ ಪತ್ರಾ ನಾನೇ ತಯಾರ ಮಾಡಿಟ್ಟಿರ್ತೀನಿ. ಒಂದು ವಾರ ಟೈಮ ಕೊಡು. ಮುಂದಿನ ಸುಕ್ರವಾರ ನೀವೆಲ್ಲರೂ ಬಂದು ಕಾಗದ ಮ್ಯಾಲ 'ದಸಖತ್' ಮಾಡಿ ಹೋಗ್ರಿ. ಮುಂದ ಸರಕಾರದಾಗ ಫೈಸ್ಲಾ ಆದ ನಂತರ ನಿಮ್‌ನಿಮ್ ಪಟ್ಟಾ ನಿಮ್ಗೆ ಕೊಡ್ತೀನಿ" ಎಂದು ಹೇಳಿದರು.

ತಿಳಿಸಿದಂತೆ ಶುಕ್ರವಾರದಂದು ಎಲ್ಲ ರೈತರು ಬಂದು ಫಾರ್ಮಿನ ಮೇಲೆ ಹೆಬ್ಬೆರಳಿನ ಗುರುತು ಹಾಕಿಹೋದರು.

ಈ ನಡುವೆ ಚುನಾವಣೆ ಬಂತು. ನಿರೀಕ್ಷಿಸಿದಂತ ಗೌಡರಿಗೆ ತಿಕೀಟು ಸಿಗಲಿಲ್ಲ. ದ್ಯಾಂಪುರದ ವೆಂಕಟರಾಯನಿಗೆ ಟಿಕೇಟು ದೊರಕಿತು. ಆಯ್ತು. ವೆಂಕಟರಾಯನ ಮಂದಿ, ಅವನ ಪಾರ್ಟಿ ತುಂಬ ಉತ್ಸಾಹದಿಂದ ಪ್ರಚಾರ ಮಾಡಲಾರಂಭಿಸಿದರು.

ಸಭೆಗಳೇನು, ಭಾಷಣಗಳೇನು, ಪೋಸ್ಟರುಗಳೇನು. ಥೇ ಥೇ-ಗದ್ಲೋಗದ್ದಲು. ವೆಂಕಟರಾಯನ ಜನಪ್ರಿಯತೆ ಹೇಳಬೇಕೆ? ವೆಂಕಟರಾಯ ಆರಿಸಿ ಬರುವದು ಖಾತ್ರಿಯಾಯಿತು.

ವೆಂಕಟರಾಯರ ವಿರುದ್ಧ ಚುನಾವಣೆಗೆ, ಗೌಡರು ನಿಲ್ಲಲಿಲ್ಲ. ಗೌಡರ ಎರಡನೇ ನಂಬರಿನ

ಹೆಂಡತಿ ಸಾವಂತ್ರಿಬಾಯಿ ನಿಂತುಕೊಂಡಳು. ಸಾವಂತ್ರಿಬಾಯಿ ಚುನಾವಣಾ ಸಭೆಗಳಲ್ಲಿ ಜನ ಸೇರುತ್ತಿರಲಿಲ್ಲ. ಆ ಕಡೆಗೆ ವೆಂಕಟರಾಯನ ಸಭೆಗಳಲ್ಲಿ ಸಾವಿರಾರು ಮಂದಿ ಸೇರುತ್ತಿದ್ದರು. ಸಾವಂತ್ರಿಬಾಯಿ ಚುನಾವಣೆಯಕಿಂತ ಮುಂಚೆಯೇ ಸೋಲೊಪ್ಪಿಕೊಂಡಂತೆ ಸುಸ್ತಾಗಿದ್ದಳು.

ಚುನಾವಣೆ ಮುಗಿಯಿತು. ಓಟುಗಳ ಎಣಿಕೆ ಪ್ರಾರಂಭವಾಯಿತು. ಸಂಜೆ ಹೊತ್ತು ಫಲಿತಾಂಶ ಪ್ರಕಟವಾಯಿತು. ಸಾವಂತ್ರಿಬಾಯಿ ಆರಿಸಿ ಬಂದಿದ್ದಳು. ವೆಂಕಟರಾಯರ 'ಡಿಪಾಜಿಟ್' ಜಪ್ತಾಗಿತ್ತು.

ಎಳ್ಳಮಾಸಿ, ಔತ್ರಾಮಾಸಿ, ಶಿವರಾತ್ರಿ, ಹೀಗೆ ದಿನ ಹೋದಂತೆ ರೈತರ ಹೊಲದಲ್ಲಿನ ಬೆಳೆ ಮೈತುಂಬಿಕೊಳ್ಳುತ್ತ, ಕಟಾವು ಮಾಡುವ ಸಮಯಕ್ಕೆ ಕಾದು ನಿಂತಿತ್ತು. ಈ ಸಲದ ಬೆಳೆ ತಮ್ಮದೆಂದು ರೈತರೆಲ್ಲರೂ ಅಭಿಮಾನಪಟ್ಟುಕೊಂಡರು.

ರಾಶಿಯ ಹೊತ್ತಿನಲ್ಲಿ, ರಾತ್ರಿಯಲ್ಲಿ ಹಂತಿ ಹಾಡು ಹಾಡುತ್ತ ಕುಣಿಯುತ್ತ ಕೇಕೇ ಹಾಕುತ್ತ ತಮ್ಮ ತಮ್ಮ ಹೊಲಗಳಲ್ಲಿ ರೈತರು ಮೈ ಮರೆತಿದ್ದರು. ಭೂಮಿತಾಯಿ ತಮ್ಮವಳೆಂಬ ಆತ್ಮೀಯ ಭಾವದಿಂದ ಸಂತೋಷಪಟ್ಟುಕೊಂಡಿದ್ದರು.

ಕಟಾವು ಪ್ರಾರಂಭವಾಯಿತು. ನಾಲ್ಕಾರು ದಿನಗಳ ಅಂತರದಲ್ಲಿ ಸುಮಾರಾಗಿ ಎಲ್ಲ ಹೊಲಗಳಲ್ಲಿ ರಾಶಿಯ ಕಾರ್ಯ ಪೂರ್ಣಗೊಂಡಿತು. ಕಣಜದಲ್ಲಿ ಗುಡ್ಡಗಳಂತೆ ರಾಶಿ ರಾಶಿಯಾಗಿ ಕಾಳು ಬಿದ್ದಿದ್ದನ್ನು ಕಂಡು ರೈತರು ಭಾವ ವಿಭೋರರಾದರು.

ಒಂದು ದಿನ ಬೆಳಿಗ್ಗೆ, ಗೌಡರು ಸ್ನಾನ ಮಾಡಿಕೊಂಡು ಮಾಳಿಗೆಯ ಮೇಲೇರಿ ಸುತ್ತೆಲ್ಲ ನೋಡಿದರು. ನಾಲ್ಕು ದಿಕ್ಕುಗಳಲ್ಲಿ ತಮ್ಮ ಜಮೀನಿನಲ್ಲಿ ರಾಶಿ ರಾಶಿ ಬಿದ್ದ ಕಾಳುಕಡಿ ನೋಡಿದರು. ಸೀರಿಸಿಂದ ತೊಯು, ಮೀಸೆಯ ಮೇಲೆ ಕೈಯಾಡಿಸಿಕೊಂಡು ಕೆಳಗೆ ಬಂದರು.

ಸಾವಂತ್ರಿಬಾಯಿ ರಾಜಧಾನಿಗೆ ಹೋಗಿದ್ದಳು. ಎರಡನೇ ಹೆಂಡತಿ ಸಾವಂತ್ರಿಬಾಯಿಯ ಕಾರ್ಯಕ್ರಮ ಬದಲಾಗಿತ್ತು. ದೊಡ್ಡ ಹೆಂಡತಿ ಮಾಯಾದೇವಿ ಬಂದು ಉಪ್ಪಿಟ್ಟು ಚಹಾ ಕೊಟ್ಟಳು. ಗೌಡರು ಹೊಟ್ಟೆ ತುಂಬ ಉಪ್ಪಿಟ್ಟು ತಿಂದು ಚಹಾ ಕುಡಿದರು. ಅಷ್ಟರಲ್ಲಿ ಅವರ ಅಂಗರಕ್ಷಕನಂತಿದ್ದ ಸಲಾಮತ ಅಲಿ ಬಂದ. ಸಲಾಮು ಹಾಕಿ ನಿಂತುಕೊಂಡ.

"ನಮ್ಮ ಎಲ್ಲ ಜಮೀನದಾಗ ರಾಶಿ ಮುಗಿದಾಯ್ತೇನೋ ಸಲಾಮ್ಯಾ?" ಎಂದು ಗೌಡರು ಕೇಳಿದರು.

"ಹೂಂನ್ರಿ ಧಣಿ, ರಾಶಿ ಮುಗಿದು ಮೂರು-ನಾಕ ದಿನಾ ಆಯ್ತು. ಮಂದಿ ಬಂಡಿ ಕಟ್ಗೊಂಡು, ಮಾಲು ಅಡ್ತಿಗಿ ಹಾಯಕೊಂಡು ಹೋಗಬೇಕಂತ ಇಚಾರ ಮಾಡಾಕತ್ಯಾರ."

"ಅಡ್ತಿಗಿ ಒಯ್ತ್ಯಾರ?" ಎಂದು ಗೌಡರು ಕೇಳಿದರು.

"ಹೂಂನ್ರೀ. ಮೊದಲು ಬಂಡಿ ಯಾರು ಹೂಡಬೇಕಂತ ಇಚಾರ ಮಾಡಾಕತ್ಯಾರ. ಭಾಳ



ಸುಪುತ್ರ

ಮಾಡಿ ನಮ್ಮ ಶಾಂತಪ್ಪನೇ ಪೈಲಾಪಟ್ ಗಾಡೀ ಹೂಡಬಹುದು."

"ಮಾಲು, ನಮ್ಮ ಮನೀಗಿ ತರಾಣೆಲ್ಲಂತ?" ಎಂದು ಗೌಡರು ಕೇಳಿದರು. "ಅದ್ಹ್ಯಾಂಗ ತಂದಾರು ಗೌಡ್ರುs? ಜಮೀನ ಅವರ್‍ದಾಯ್ತು. ಅವರು ಬೇಕಾದ್ದು ಮಾಡ್ತಾರ." ಎಂದು ಸಲಾಮತ ಅಲಿ ಹೇಳಿದ.

"ಬಾಯಿ ಮುಚ್ಚಲೇ ಹ್ಚೋದಿ ಮಗನಾ"- ಎಂದು ಗೌಡರು ಗದರಿಸಿದರು. ಸಲಾಮತ ಆಲಿ ಗದಗದಾ ನಡುಗಲಾರಂಭಿಸಿದ. ಗೌಡರು ಶಾಂತ ದನಿಯಲ್ಲಿ- "ಆ ಶಾಂತಪ್ಪ ಆದಾನೇನು, ಕರ ಕೊಂಡ ಬಾ" ಎಂದು ಹೇಳಿದರು.

ಸಲಾಮತ ಅಲಿ ಓಡಿದ.

"ಶಾಂತಪ್ಪ, ಬಾ ಕುಂದ್ರು, ರಾಶಿ ಆಯ್ತಾ?" ಎಂದು ಗೌಡರು ಕೇಳಿದರು.

"ಆಯ್ತು ಧನಿ" ಎಂದ ಶಾಂತಪ್ಪ.

"ಎಷ್ಟ ಚೀಲಾ ಆಯ್ತು?" ಪುನಃ ಗೌಡರು ಕೇಳಿದರು.

"ಸತ್ತರಿ ಚೀಲ ಬಂತರೀ" ಎಂದ ಶಾಂತಪ್ಪ.

"ವಾ: ಭೇಷ. ಭಲೋ ಬಂದಾಯ್ತಿ. ವರ್ಷಾ ವರ್ಷಾ ಭಾಳಂದ್ರು ಪಂಚವೀಸ, ತೀಸ ಆಗತಿತ್ತು. ಈ ಸಲ ಸತ್ತರಿ ತಗೆದೀ" ಎಂದು ಗೌಡರು ನಗುತ್ತ "ಯಾಕಾಗಬಾರದೂ ಈಗ ಜಮೀನ ನಿಂದು. ಮನಸ್ಸು ಕೊಟ್ಟು ದುಡದೀ" ಎಂದು ಗೌಡರು ಸುಮ್ಮನಾದರು.

"ಆದೆಲ್ಲ ತಮ್ಮ ದಯಾ ಧಣಿ" ಎಂದ ಶಾಂತಪ್ಪಾ.

"ನೋಡ ಶಾಂತಪ್ಪ, ರಾಶಿ ಆಗಿ ನಾಲ್ಕು ದಿನಾ ಆಯ್ತಂತ. ಇನ್ನೂ ಯಾರೂ ಬಂದು ಮಾರಿ ತೋರ್‍ಸಿಲ್ಲ. ಯಾಕ್ರೆಪ? ನೋಡ ತಮ್ಮಾ, ನೀ ಎಲ್ಲಾ ಮಂದೀ ಲೀಡರ್ ಆದಿ. ನಿನ್ಗೆ ಹೇಳ್ತೀನಿ. ಕೇಳು, ಎಲ್ಲಾರು ನಾಳೆ ಭಂಜಿ ಆಗೋದ್ರೊಳ್ಗ ಹೊಲದಾಗಿನ ರಾಶಿಯಲ್ಲ ನನ್ನ ಮನೀಗಿ ತಂದು ಹಚ್ಚಬೇಕಂತ ಹೇಳು" ಎಂದರು.

"ಆದ್ರ ಗೌಡ್ರ, ಹೊಲಾ...? ಎಂದು ಶಾಂತಪ್ಪ ತಡವರಿಸಿದ.

"ಭೋಸ್ಡಿಮಗನಾ, ಹೇಳಿದಷ್ಟು ಮಾಡು" ಎಂದು ಗೌಡರು ಎದ್ದರು.

ಶಾಂತಪ್ಪ ತನ್ನ ಗುಡಸಲಿಗೆ ಬಂದ. ಈರಪ್ಪ ಭರಮಾ ಅವನ ದಾರಿ ಕಾಯುತ್ತ ಕುಳಿತ್ತಿದ್ದರು. ಶಾಂತಪ್ಪ ಬಂದು ಗೌಡರು ಹೇಳಿದನ್ನು ತಿಳಿಸಿದ.

"ಅದ್ಹ್ಯಾಂಗ ಆಗ್ತದ ಶಾಂತಪ್ಪಣ್ಣಾ, ಈಗ ಜಮೀನು ನಮ್ದು, ಬೆಳಿ, ನಮ್ದು" ಎಂದ ಈರಪ್ಪ.

"ಗೌಡನ ಬಣ್ಣಾ ಬಯಲಾಯಿತು. ನಾವು ಅಂಜಬಾರದು, ಸರಕಾರ ನಮ್ಮದಾಯ್ತಿ, ನಾಳೆ ನೀನೂ ಗಾಡಿ ಕಟ್ಟು, ನಾನೂ ಕಟ್ತೇನಿ, ಈರಪ್ಪನೂ ಕಟ್ತಾನ. ನಾವು ನಮ್ಮ ಕಾಳುಕಡಿ ಹೇರಿ ಕೊಂಡು ಅಡ್ತಿಗಿ ಹೋಗೋಣು" ಎಂದ ಭರಮಾ.

*

ರಾತ್ರಿ ಮೂರು ಮೂರೂವರೆಯಾಗಿರಬೇಕು. ಶಾಂತಪ್ಪ, ಈರಪ್ಪ, ಮತ್ತು ಭರಮಾ ತಮ್ಮ ಗಾಡಿಗಳನ್ನು ಸಿದ್ಧಮಾಡಿಕೊಂಡು, ಐವ್ವತ್ತು ಚೀಲ ಜೋಳ ಹೇರಿಕೊಂಡು ಪಟ್ಟಣದ ಕಡೆಗೆ ಹೊರಟರು. ಇನ್ನೂ ಕತ್ತಲೆಯಿತ್ತು. ಬೆಳಚುಕ್ಕಿ ಮೂಡಿತ್ತು. ದೀವಟಿ ಹಳ್ಳದ ದಂಡಿಗೆ ಗಾಡಿಗಳು ಬಂದವು. ಹಳ್ಳದಲ್ಲಿ ಅಷ್ಟೊಂದು ನೀರಿರಲಿಲ್ಲ.

ಅಗಳಿ

ಬುದ್ಧಿ -
ಜೀವಿಗಳ ಮೌನ
ಜಡರೆದೆಯ ಬಾಗಿಲಿಗೆ
ಜಡಿದ ಅಗಳಿ.

ಬಿ. ಎ. ಸನದಿ

ಶಾಂತಪ್ಪ, ಈರಪ್ಪ ಮತ್ತು ಭರಮಾ ಕೆಳಗಿಳಿದು ನಡೆದರು. ಗಾಡಿಗಳು ನಿಧಾನವಾಗಿ ಹಳ್ಳಕ್ಕಿಳಿದವು. ಇನ್ನೇನು ಆ ದಂಡೆ ತಲಪಬೇಕು ಅನ್ನುವಷ್ಟರಲ್ಲಿ, ಸಲೀಮತ ಅಲಿ, ರಹಮಾನ, ಕಲ್ಯಾ, ಪೀರ್ಯಾ ಬಂದರು. ಅವರ ಕೈಯಲ್ಲಿ ಬಂದೂಕಗಳಿದ್ದವು.

"ಸೂಳೇಮಕ್ಕಳ್ರಾ, ಹರಾಮಖೋರ, ಗಾಡಿ ತಿರುವಿರಿ" ಎಂದ ರಹಮಾನ. ಶಾಂತಪ್ಪ ಮುಂದೆ ಬಂದ—"ಯಾಕಪಾ ರಹಮಾನಣ್ಣ, ಏನ್ ಸುದ್ದೀ? ಗಾಡಿ ಯಾಕ ತರುಬೀದಿ?" ಎಂದು ಕೇಳಿದ.

"ಗೌಡರ ಹುಕುಂ ಆಯ್ತಿ" ಎಂದ ರಹಮಾನ.

"ಇಲ್ಲಾ ತರಬೋದಿಲ್ಲ," ಎಂದು ಶಾಂತಪ್ಪ ತನ್ನ ಎತ್ತಿನ ಭುಜದ ಮೇಲೆ ಕೈಯಿಟ್ಟ, ಅಷ್ಟರಲ್ಲಿ 'ಢಂ' ಎಂದು ಶಬ್ದ ಕೇಳಿಸಿತು. 'ಅಯ್ಯೋ' ಎಂದು ಶಾಂತಪ್ಪ ನೆಲಕ್ಕುರುಳಿದ. ಹಸಿ ನೆಲ ಕೆಂಪಾಯಿತು.

ಈರಪ್ಪಾ ಮತ್ತು ಭರಮಾ, ಜೀವುಳಿಸಿಕೊಳ್ಳಲು, ದಿಕ್ಕು ತೋಚಿದ ಕಡೆಗೆ ಓಡಿದರು. ಕತ್ತಲೆಯಲ್ಲಿ ಮತ್ತೊಂದೆರಡು ಸಲ ಬಂದೂಕು ಹಾರಿಸಿದ ಶಬ್ದ ಕೇಳಿಸಿತು.

*

ಬೆಳಗಾಗುವಷ್ಟರಲ್ಲಿ ಶಾಂತಪ್ಪನ ಸಾವಿನ ಸುದ್ದಿ ತಿಳಿಯಿತು. ಶಾಂತಪ್ಪನ ಹೆಂಡತಿ ರಾಮವ್ವಗೆ ಸುದ್ದಿ ತಿಳಿದು ಕೂಡಲೇ ಅವಳು ಎಚ್ಚರ ತಪ್ಪಿ ಬಿದ್ದಳು. ಶಾಂತಪ್ಪನ ಎರಡು ಮಕ್ಕಳು ಅಳಲಾರಂಭಿಸಿದವು.

ಅಷ್ಟರಲ್ಲಿ ಗೌಡರ ಜೀಪು ಶಾಂತಪ್ಪನ ಗುಡಿಸಲು ಮುಂದೆ ಬಂದು ನಿಂತಿತು. ಇಬ್ಬರು ಒಳಗೆ ಬಂದು ರಾಮವ್ವನನ್ನು ಹೊತ್ತುಕೊಂಡು ಜೀಪಿನಲ್ಲಿ ಹಾಕಿದರು. ಎರಡೂ ಮಕ್ಕಳನ್ನು ಜೀಪಿನಲ್ಲಿ ತುರಿಕಿದರು. ಜೀಪು ಗೌಡರ ಮನೆಯ ಕಡೆಗೆ ಸಾಗಿತು.

*

ಮರುದಿನ ದೊಡ್ಡೂರಿಗೆ, ಸಾವಂತ್ರಿಬಾಯಿಯ ಆಮಂತ್ರಣದ ಮೇರೆಗೆ ಮಂತ್ರಿಗಳು ಬಂದರು. ಬಂದೋಬಸ್ತಿಗಾಗಿ ಪೋಲೀಸರು ಬಂದರು.

*

ಬೆಳಗ್ಗೆಯಿಂದಲೇ ಸಾಲುಸಾಲಾಗಿ ರೈತರ ಗಾಡಿಗಳು ಚೀಲಗಳನ್ನು ಹೇರಿಕೊಂಡು ಗೌಡರ ಮನೆಯ ಕಡೆಗೆ ನಡೆದವು.

ಸಂಜೆಯಾಗುವದರೊಳಗಾಗಿ, ಎಲ್ಲ ಮಾಲು ಮನೆಗೆ ಬಂದಂತಾಯಿತು. ಗೌಡರು ಸಮಾಧಾನದ ಉಸಿರು ಬಿಟ್ಟರು.

ಮಂತ್ರಿಗಳು ಮಹಡಿಯ ಕೋಣೆಯಲ್ಲಿ ಕುಳಿತಿದ್ದರು. ಸಾವಂತ್ರಿಬಾಯಿ ತನ್ನ ಗಂಡನ ಪರಿಚಯ ಮಾಡಿಸಿಕೊಟ್ಟಳು. ಗೌಡರು, ಮಂತ್ರಿಗಳ ಪರಿಚಯ ಮಾಡಿಕೊಂಡು ಕೆಳಗಿಳಿದರು—ಚಿಕ್ಕ ಹೆಂಡತಿ ಊಟ ಬಡಿಸಿಳು, ಊಟ ಮಾಡಿ ಗೌಡರು ಮಂಚದ ಮೇಲೆ ಮಲಗಿದರು.

*

ರಾತ್ರಿ ಹನ್ನೊಂದು ಗಂಟೆಯಾಗಿರಬೇಕು. ಮಂತ್ರಿಗಳು, ಸಾವಂತ್ರಿಬಾಯಿಯೊಂದಿಗೆ ಮಂತ್ರಾಲೋಚನೆಯಲ್ಲಿದ್ದರು.

ಸಾವಂತ್ರಿಬಾಯಿ— "ನಿಂದರ್ರಿ, ಬಂಗಾರದ ಡಾಬ ತಗೀತೀನಿ. ಟೊಂಕಕ್ಕ ಒತ್ತಾಯ್ತಿ-" ಎಂದು ಡಾಬ ತೆಗೆದು ಮಂತ್ರಿಗಳ ಮಗ್ಗಲದಲ್ಲಿ ಮಲಗಿದಳು.

ಗೌಡರ ಗೊರಕೆ ಶುರು ಆದವು.

ದೀವಟ ಹಳ್ಳದಲ್ಲಿ ಶಾಂತಪ್ಪನ ಹೆಣದ ಮೇಲೆ ಎರಡು ನಾಯಿಗಳು ಹಕ್ಕು ಪ್ರಸ್ತಾಪಿಸಲು ಹೊಡದಾಡುತ್ತಲೇ, ಮಾಂಸ ತಿನ್ನುತ್ತಿದ್ದವು.

ಪೋಲೀಸರು, ಗೌಡರ ಮನೆಯ ಹೊರಬಾಗಿಲಿನಲ್ಲಿ ಪಹರೆ ಮಾಡುತ್ತ ನಿಂತಿದ್ದರು. ✡

('ವಿಶೇಷ ಸಂಚಿಕೆ'ಗೆ ಆಮಂತ್ರಿತ ಕಥೆ)

ನೀವು ನಿಮ್ಮ ಹೆಂಡತಿಯನ್ನು ಪ್ರೀತಿಸುವಿರಾದರೆ ಪ್ರೆಸ್ಟೀಜ್ ಕೊಳ್ಳುವುದು ಖರೆ



ಪ್ರೆಸ್ಟೀಜ್


ಕೇವಲ ಹೊಸ ಪ್ರೆಸ್ಟೀಜ್ ಮಾತ್ರ ಶೇ 100 ಸುರಕ್ಷಿತ.
ಕೇವಲ ಹೊಸ ಪ್ರೆಸ್ಟೀಜ್ ಮಾತ್ರ ಜಿ.ಆರ್.ಎಸ್. ಹೊಂದಿವೆ.

ಆರ್ಶಾದ್ ಇಸ್ಮಾಯಿಲ್ ಸಾಹೇಬ್

ನಾಲ್ಕು ಕಣ್ಣಿನ ಮೀನು- ಒಂದು ವಿಚಿತ್ರ ಸೃಷ್ಟಿ

ನೀರಿನ ಬೋಗುಣಿಯೊಳಕ್ಕೆ ತಲೆ ಮುಳುಗಿಸಿ ಏನನ್ನಾದರೂ ದೃಷ್ಟಿಸಲು ಪ್ರಯತ್ನಿಸಿದ್ದೀರಾ? ಹಾಗಿದ್ದರೆ ನೀರಿನಲ್ಲಿನ ವಸ್ತುಗಳು ಮಂಕಾಗಿ ಗೋಚರವಾದವಲ್ಲವೆ? ಹಾಗೆಯೇ ನೀರಿನಲ್ಲಿ ವಾಸಿಸುವ ಮೀನು ಸಹ ತನ್ನ ವಾಸಸ್ಥಾನದಿಂದ ಬೇರ್ಪಟ್ಟಾಗ ನಿಖರವಾಗಿ ವಸ್ತುಗಳನ್ನು ನೋಡಲಾಗುವುದಿಲ್ಲ. ಇದು ಸರ್ವ ವಿದಿತ ನಿಯಮ. ಮೆಕ್ಸಿಕೊ ಮತ್ತು ದಕ್ಷಿಣ ಅಮೇರಿಕದ ನದಿಗಳಲ್ಲಿ ಹಾಗೂ ನದಿ-ಸಾಗರ ಸಂಗಮಗಳಲ್ಲಿ ವಾಸಿಸುವ 'ಅನಾಬ್ಲೆಪ್ಸ್' ಎಂಬ ಮೀನು ಈ ನಿಯಮಕ್ಕೆ ಹೊರತಾಗಿದೆ. ನಾಲ್ಕು ಕಣ್ಣಿನ ಮೀನೆಂದೇ ಪ್ರಸಿದ್ಧಿಯಾಗಿರುವ ಈ ಜಲಚರ—ನೀರೊಳಗಿನ ಹಾಗೂ ನೀರ ಹೊರಗಿನ ವಸ್ತುಗಳನ್ನು ಏಕ ಕಾಲದಲ್ಲಿ ನೋಡಬಲ್ಲದು.

ನಾಲ್ಕು ಕಣ್ಣಿನ ಮೀನಿಗೆ ಕೇವಲ ಎರಡೇ ಕಂಗಳಿದ್ದರೂ ಪ್ರತಿ ಕಣ್ಣು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಪ್ರತಿ ಭಾಗವೂ ತನ್ನದೇ ಆದ ದೃಷ್ಟಿಕೋನವನ್ನು ಹೊಂದಿರುತ್ತದೆ. ತಲೆ



ಅನಾಬ್ಲೆಪ್ಸ್‌ನ ವೀಕ್ಷಣಾಕ್ರಮ

ಯನ್ನು ಅರ್ಧ ಮುಳುಗಿಸಿಕೊಂಡು ಈಜಾಡುವು ದರಿಂದ ನೀರಿನಲ್ಲಿ ಈಜಾಡುವ ಪ್ರಾಣಿ ಮತ್ತು ನೀರ ಹೊರಗಿನ ಕೀಟಗಳನ್ನು ಗುರುತಿಸಿ ಬೇಟೆ ಯಾಡುತ್ತದೆ. ಬಹು ಸಂಖ್ಯೆಯ ದೃಷ್ಟಿ ನರ ಗಳು ಎರಡೂ ಕಣ್ಣುಗಳಿಂದ ಹೊರಟು ಕೇಂದ್ರ ನರವ್ಯೂಹವನ್ನು ಸೇರುತ್ತವೆ. ಕತ್ತಲೆಯಲ್ಲಿ ಇವುಗಳ ಮೇಲೆ ಬೆಳಕು ಚೆಲ್ಲಿದಾಗ ಈ ನರಗಳು ಗೋಚರವಾಗುತ್ತವೆ.

'ಅನಾಬ್ಲೆಪ್ಸ್'ನ ಅಂತರ್ ರಚಿತ ದ್ವಿ ದೃಷ್ಟಿ ಕೋನದಿಂದಾಗಿ ಈ ಅಸಾಧಾರಣ ಶಕ್ತಿ ಸಾಧ್ಯ ವಾಗಿದೆ. ವರ್ಣಕೋಶಗಳು ಮತ್ತು ಐರಿಸ್‌ನ ಮುಚ್ಚಳಗಳು ಜಲರೇಖೆಯ ಬಳಿ ಕಣ್ಣನ್ನು ಎರಡು ಭಾಗಗಳಾಗಿ ವಿಂಗಡಿಸುತ್ತವೆ. ಮೇಲ್ಭಾಗ ನೀರ ಹೊರಗಿನ ದೃಷ್ಟಿಗಾದರೆ ಕೆಳ ಭಾಗವು ನೀರೊಳಗಿನ ವಸ್ತುಗಳನ್ನು ವೀಕ್ಷಿಸಲು ಉಪಯು ಕ್ತವಾಗಿದೆ. ಕಣ್ಣಿನ ಮೇಲ್ಮೈ ಅಥವಾ ಕಾರ್ನಿಯಾ ಮತ್ತು ನೀರಿನ ವಕ್ರೀಭವನ ಗುಣಗ ಳಲ್ಲಿ ವ್ಯತ್ಯಾಸ ಇಲ್ಲದಿರುವುದರಿಂದ ನೀರಿನಲ್ಲಿರುವ ವಸ್ತುವಿನಿಂದ ಹೊರಟ ಬೆಳಕಿನ ರೇಖೆಗಳು ನೇರವಾಗಿ ಕಾರ್ನಿಯಾದ ಮೂಲಕ ಹಾಯು ತ್ತವೆ. ಕಣ್ಣಿನ ಮಸೂರದ ಮೂಲಕ ಹಾಯು ವಾಗ ಬಾಗಿ ರೆಟಿನಾದ ಮೇಲೆ ಕರಾರುವಕ್ಕಾದ ವಸ್ತುವಿನ ಚಿತ್ರ ಮೂಡುತ್ತದೆ. ನೀರಿನ ಹೊರ ಭಾಗದ ವಸ್ತುಗಳಿಂದ ಹೊರಟ ಬೆಳಕಿನ ರೇಖೆ ಗಳು ಕಾರ್ನಿಯಾದ ಮೂಲಕ ಹಾದು ಹೋಗು ವಾಗ ಬಾಗುತ್ತದೆ. ಏಕೆಂದರೆ 'ಕಾರ್ನಿಯಾ' ಮಾಧ್ಯಮದ ಸಾಂಧ್ರತೆ ಗಾಳಿಗಿಂತ ಹೆಚ್ಚಾಗಿರು ತ್ತದೆ. ಆನಂತರ ಮಸೂರದ ಮೂಲಕ ಹಾಯು ವಾಗ ಮತ್ತೂ ಬಾಗಿದ ರೇಖೆಗಳು ರೆಟಿನಾದ ಮೇಲೆ ಚಿತ್ರವನ್ನು ಮೂಡಿಸುತ್ತವೆ.


ಅನಾಬ್ಲೆಪ್ಸ್‌ನ ಕಣ್ಣಿನ ಮಸೂರವು ಅಂಡಾಕಾ ರವಾಗಿರುತ್ತದೆ. ನೀರಿನೊಳಗಣ ವೀಕ್ಷಣೆಗೆ ಉಪ ಯೋಗಿಸಲ್ಪಡುವ ಮಸೂರದ ಭಾಗವು ಹೆಚ್ಚು ವಕ್ರತೆಯನ್ನು ಪಡೆದಿದ್ದು ಮೇಲ್ಭಾಗವು ಕಡಿಮೆ ವಕ್ರತೆಯನ್ನು ಹೊಂದಿ ಮಾಧ್ಯಮಗಳ ವಕ್ರೀ ಭವನ ವ್ಯತ್ಯಾಸದ ಪರಿಣಾಮವನ್ನು ಕಡಿಮೆ ಮಾಡುತ್ತದೆ. ಕೆಳ ಭಾಗವು ಮೀನಿನ ಮಾದ ರಿಯದಾದರೆ ಮೇಲ್ಭಾಗದ ಮಸೂರ ಮನು ಷ್ಯನ ಅಕ್ಷಿ ಮಸೂರವನ್ನು ಹೋಲುತ್ತದೆ. ಕಡಿಮೆ ಆಳ ಪ್ರದೇಶಗಳಲ್ಲಿ ಈ ಮೀನುಗಳು ಈಜಾಡುತ್ತಾ ನೀರೊಳಗಿನ ಆಲ್ಗಾಗಳು, ಸಣ್ಣ ಡೆಕಾಪೋಡ್ ಜಲಚರಗಳನ್ನು ಮತ್ತು ನೀರ ಹೊರಗಿನ ಕ್ರಿಮಿಕೀಟಗಳನ್ನು ಹಿಡಿದು ತಿನ್ನು ತ್ತದೆ.

ನಾಲ್ಕು ಕಣ್ಣಿನ ಮೀನಿನ ನೀರೊಳಗಿನ ವೀಕ್ಷಣಾ ಸಾಮರ್ಥ್ಯಕ್ಕಿಂತಲೂ ನೀರ ಹೊರಗಿನ ವೀಕ್ಷಣಾ ಸಾಮರ್ಥ್ಯ ಹೆಚ್ಚಾಗಿರುತ್ತದೆಂದು ಮತ್ಸ್ಯವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಕೆಲವೊಮ್ಮೆ ಮಾತ್ರ ನೀರೊಳಗಿನ ಜೀವಿಗಳನ್ನು ತಿನ್ನುತ್ತದೆ ಮತ್ತು ತನ್ನ ಶತ್ರುಗಳಿಂದ ತಪ್ಪಿಸಿ ಕೊಳ್ಳಲು ಆಳ ಸಮುದ್ರಗಳಿಗೆ ಮುಳುಗುತ್ತದೆ. ನೀರಿನಲ್ಲಿರುವಾಗ ಆಗಾಗ್ಗೆ ತನ್ನ ತಲೆಯನ್ನು ತೇಲು ಮುಳುಗಿಸಿ ಮೇಲ್ಭಾಗದ ಕಣ್ಣಿನ ತೇವಾಂಶವನ್ನು ಕಾಪಾಡುತ್ತದೆ.

ಸಮುದ್ರ ತೀರದಲ್ಲಿ ಅಥವಾ ನದೀ ತೀರದಲ್ಲಿ ಹಿಂಡು ಹಿಂಡಾಗಿ ಅನಾಬ್ಲೆಪ್ಸ್‌ಗಳು ಬರುವಾಗ ನೂರಾರು ಜೊತೆ ಕಣ್ಣುಗಳು ದೂರದರ್ಶಕಗ ಳಂತೆ ಗೋಚರಿಸುತ್ತವೆ. ನದಿಯ ಉಬ್ಬರ ಅತಿ ಕಡಿಮೆಯಾಗುವವರೆಗೆ ಕಾದಿದ್ದು ಆ ಕ್ಷಣದಲ್ಲಿ ನದಿಯ ತೀರಕ್ಕೆ ಬಿದ್ದು ಬಾಯಿ ತುಂಬಾ ಪೋಷಕಾಂಶಯುಕ್ತ ಮಣ್ಣನ್ನು ತುಂಬಿಕೊಂಡು ವಾಪಸ್ಸು ನದಿಗೆ ಧುಮುಕುತ್ತವೆ. ಮತ್ಸ್ಯ ಹಾರಿ ಪಕ್ಷಿಗಳಾದ ಗಿಡುಗ, ಕಿಂಗ್‌ಫಿಶರ್ ಮುಂತಾದವು ಗಳು ಎರಗುವ ಮುನ್ನವೇ ಇವು ನೀರಿನಾಳಕ್ಕೆ ಮಾಯವಾಗುತ್ತವೆ. ತೀರದಲ್ಲಿರುವಾಗ ಬೆಸ್ತರು ಬಲೆ ಬೀಸುವ ಮೊದಲೇ ತಮ್ಮ ಸೂಕ್ಷ್ಮ ಮತ್ತು ಚುರುಕು ಕಣ್ಣುಗಳಿಂದ ಗ್ರಹಿಸಿ ಪಾರಾಗು ತ್ತವೆ.

★

ರಾಜ್ಯದ ನಿಸ್ಸಹಾಯಕ ಹೆಣ್ಣುಮಕ್ಕಳಿಗೆ "ಅರಿಶಿನ-ಕುಂಕುಮ"ದ ಕೊಡುಗೆ.



ದೇವದಾಸಿ ಪದ್ಧತಿಯ ನಿರ್ಮೂಲನ ಹಾಗೂ ಅವರ ಪುನರುದ್ಧಾರ

ತಲೆ ತಲಾಂತರದಿಂದ ಬಂದಿದ್ದ ದೇವದಾಸಿ ಪದ್ಧತಿಯಂಥ ಹೀನ ಸಂಪ್ರದಾಯದ ಸಾಮಾಜಿಕ ಪಿಡುಗನ್ನು ತೊಡೆದು ಹಾಕಲೆಂದು ಕರ್ನಾಟಕ ದೇವದಾಸೀ (ಸಮರ್ಪಣಾ ನಿಷೇಧ) ಕಾನೂನನ್ನು ಜಾರಿಗೊಳಿಸಲಾಗಿದೆ.

ಯಾವ ಸ್ತ್ರೀಯನ್ನೂ ದೇವರು, ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಹೆಸರಿನಲ್ಲಿ ಸಮರ್ಪಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ. ಅಲ್ಲದೆ ಅಂತಹ ಅಪರಾಧಗಳ ಶೋಧನೆ, ವಿಮುಕ್ತಿಗೊಂಡ ಮಹಿಳೆಯರ ಪಾಲನೆ, ರಕ್ಷಣೆ, ಆರೋಗ್ಯ ಕಲ್ಯಾಣ ಹಾಗೂ ಪುನರುದ್ಧಾರಕ್ಕೆ ಈ ಕಾನೂನು ಅನುವು ಮಾಡಿಕೊಡುತ್ತದೆ. ಈ ಕಾನೂನಿನ ಉಲ್ಲಂಘನೆಯ ಅಪರಾಧಿಗಳಿಗೆ ರೂ. 2000 ದಿಂದ 5000 ರೂ.ಗಳವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಹೀಗೆ ವಿಮುಕ್ತಿಗೊಂಡ ಮಹಿಳೆಯ ವಿವಾಹ ಅವರ ಪುನರುದ್ಧಾರದ ಶ್ರೇಷ್ಠ ಮಾರ್ಗ. ಇಂತಹ ಮದುವೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರ ಈ ದಂಪತಿಗಳಿಗೆ 3000/- ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತದೆ. ಈ ಪ್ರೋತ್ಸಾಹ ಧನವನ್ನು ಪಡೆಯಲು ಯುವಕರು 21 ವರ್ಷದ ಮೇಲ್ಪಟ್ಟವರಾಗಿದ್ದು ಮಾಹೆಯಾನ 500 ರೂ.ಗಳ ನಿಶ್ಚಿತ ಸಂಪಾದನೆಯುಳ್ಳವರಾಗಿರಬೇಕು. ವಿವಾಹವಾಗುವ ದೇವದಾಸಿಯರು 18 ರಿಂದ 35 ವರ್ಷ ವಯಸ್ಸಿನವರಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 2 ವರ್ಷಗಳಿಂದ ವಾಸವಾಗಿರಬೇಕು.

ಇದರೊಂದಿಗೆ, ಇನ್ನೂ ಅನೇಕ ಯೋಜನೆಗಳನ್ನು ರಾಜ್ಯ ಸರ್ಕಾರ ದೇವದಾಸಿಯರ ಪುನರುದ್ಧಾರಕ್ಕಾಗಿ ಹಮ್ಮಿಕೊಂಡಿದೆ. ಜನತಾ ಮನೆಗಳ ನೀಡಿಕೆ ಈ ಯೋಜನೆಗಳಲ್ಲೊಂದು. ಇದರೊಂದಿಗೆ ದೇವದಾಸಿಯರಿಗೆ ಸಾಲಗಳನ್ನು ಹಾಗೂ ಪ್ರೋತ್ಸಾಹ ಧನವನ್ನು ನೀಡಿ ತನ್ಮೂಲಕ ಅವರು ಸಣ್ಣ ಕೈಗಾರಿಕೆ, ಹೈನುಗಾರಿಕೆ ಮುಂತಾದ ವ್ಯಾಪಾರ, ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡಲಾಗುವುದು.


ಅಲ್ಲದೆ ಸೌಂದತ್ತಿ ಮತ್ತು ಅಥಣಿಗಳಲ್ಲಿ ಅಬಲಾಶ್ರಮಗಳನ್ನು ರಾಜ್ಯ ಸರ್ಕಾರ ಸ್ಥಾಪಿಸಿದೆ. ಇಲ್ಲಿ ದೇವದಾಸಿ ಜೀವನವನ್ನು ತೊರೆದ ಮಹಿಳೆಯರಿಗೆ ಆಶ್ರಯ ನೀಡಲಾಗುತ್ತಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ಅಸಹಾಯಕರಿಗೊಂದು ಸಹಾಯದ ಯೋಜನೆ.

ಕರ್ನಾಟಕ ವಾರ್ತೆ

ನೀಲ್ಸ್ ಬೋರ್



ಜಿ.ಟಿ.ನಾರಾಯಣರಾವ್

ನೀಲ್ಸ್ ಬೋರ್

ಪರಮಾಣು ಪ್ರಪಂಚದ ದಾರ್ಶನಿಕ ವಿಜ್ಞಾನಿ ನೀಲ್ಸ್ ಬೋರ್. ಅವರೊಬ್ಬ ಯುಗಪ್ರವರ್ತಕ ಮೇಧಾವಿ, 'ಲೋಕವೇ ನನ್ನ ಮನೆ' ಎಂಬ ಮಾತನ್ನು ಅಕ್ಷರಶಃ ಪಾಲಿಸಿದ ವ್ಯಕ್ತಿ. ಹೀಗಾಗಿ ಬೋರ್ ಎಲ್ಲರಿಗೂ ಸೇರಿದವರು.

ಇಂಥ ಅಪರೂಪದ ವ್ಯಕ್ತಿಯ ಜನ್ಮಶತಾಬ್ದಿ ವರ್ಷವಿದು. ಖ್ಯಾತ ವಿಜ್ಞಾನ ಲೇಖಕ ಜಿ ಟಿ. ನಾರಾಯಣರಾಯರು ನಿಮಗಾಗಿ ಈ ಜೀವನ ಚರಿತ್ರೆ ನೀಡಿದ್ದಾರೆ.

ಆಧುನಿಕ ವಿಜ್ಞಾನಯುಗವನ್ನು ಆವಾಹಿಸಿದ ಐದಸೀಮಾ ಪುರುಷರನ್ನು ಆಯುವುದು ನಮ್ಮ ಉದ್ದೇಶವಾಗಿರಲಿ. ಹಲವು ನೂರು ಅಭ್ಯರ್ಥಿಗಳ ಕೊಡುಗೆಗಳನ್ನು ತೀವ್ರ ವಸ್ತುನಿಷ್ಠ ವಿಮರ್ಶೆಗೆ ಗುರಿಪಡಿಸಿ ಈ ಯಾದಿಯನ್ನು ತಯಾರಿಸಿದ್ದೇವೆಂದು ಭಾವಿಸೋಣ. ಇಂಥ ಆಯ್ಕೆಗೆ ನಾವು ವಿಧಿಸಿಕೊಳ್ಳಬಹುದಾದ ಪರತ್ತುಗಳು ಏನೇ ಇದ್ದರೂ ನಮ್ಮ ಯಾದಿಯಲ್ಲಿ ಬರುವ ನಾಲ್ಕು ಮಹಾವಿಜ್ಞಾನಿಗಳಿವರು (ಹೆಸರುಗಳನ್ನು ಕಾಲಾನುಕ್ರಮಾನುಸಾರ ಅಳವಡಿಸಿದೆ) : ತಳಿವಿಜ್ಞಾನದ ಪಿತಾಮಹ ಗ್ರೆಗರ್ ಯೋಹನ್ ಮೆಂಡಲ್ (೧೮೨೨-೮೪), ಶಕಲ ಸಿದ್ಧಾಂತದ ಜನಕ ಮ್ಯಾಕ್ಸ್ ಕಾರ್ಲ್ ಅರ್ನ್ಸ್ಟ್ ಲುಡ್ವಿಗ್ ಪ್ಲ್ಯಾಂಕ್ (೧೮೫೮-೧೯೪೭), ಸಾಪೇಕ್ಷತಾ ಸಿದ್ಧಾಂತದ ಪ್ರವರ್ತಕ ಆಲ್ಬರ್ಟ್ ಐನ್‌ಸ್ಟೈನ್ (೧೮೭೯-೧೯೫೫) ಮತ್ತು ಪರಮಾಣು ಪ್ರಪಂಚದ ದಾರ್ಶನಿಕ ನೀಲ್ಸ್ ಹೆನ್ರಿಕ್ ಡೇವಿಡ್ ಬೋರ್ (೧೮೮೫-೧೯೬೨). ನಿಂತು ಮಡುಗಟ್ಟಿದ್ದ ವಿಜ್ಞಾನವಾಹಿನಿಗೆ ಇವರು ಹೊಸ ನೀರು ತಂದರು, ಹೊಸ ತಿರುವು ಕೊಟ್ಟರು, ಹೊಸ ಜಾಡು ತೋರಿಸಿದರು—ವಿಜ್ಞಾನೇತಿಹಾಸ ತನ್ನ ಅವತಾರಪುರುಷರನ್ನು ಇವರಲ್ಲಿ ಕಂಡುಕೊಂಡಿತೋ ಎಂಬಂತೆ.

ಪರಂಪರೆಯ ಶಿಶು

ಡೆನ್ಮಾರ್ಕ್ ದೇಶದ ಕೋಪನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಶರೀರ ವಿಜ್ಞಾನ ಪ್ರಾಧ್ಯಾಪಕರಾಗಿದ್ದ ಕ್ರಿಶ್ಚಿಯನ್ ಬೋರ್ ಮತ್ತು ಇವರ ಪತ್ನಿ ಎಲನ್ ಬೋರ್ ದಂಪತಿಗಳ ಮೊದಲ ಮಗುವಾಗಿ ನೀಲ್ಸ್ ಬೋರ್ ೧೮೮೫ ಅಕ್ಟೋಬರ್ ೭ರಂದು ಜನಿಸಿದರು. ಎರಡು ವರ್ಷಗಳ ಅನಂತರ ಈ ದಂಪತಿಗಳಿಗೆ ಇನ್ನೊಂದು ಗಂಡು ಮಗುವಾಯಿತು: ಹೆರಾಲ್ಡ್ ಬೋರ್. ಈ ಅಣ್ಣ ತಮ್ಮಂದಿರು ಒಂದು ಭವ್ಯ ಪರಂಪರೆಯ ಅದೃಷ್ಟಶಾಲಿ ಶಿಶುಗಳಾಗಿ ಹುಟ್ಟಿದರು ಮಾತ್ರವೇ ಅಲ್ಲ, ವಿಜ್ಞಾನೇತಿಹಾಸದ ಒಂದು ಸೀಮೋಲ್ಲಂಘನ ಘಟ್ಟದಲ್ಲಿ ಬೆಳೆದು ಅರಳಿದವರು ಕೂಡ.

ನೀಲ್ಸ್ ಆಗ ಮೂರು ವರ್ಷ ವಯಸ್ಸಿನ ಅಣುಗ. ತಂದೆ ಇವನನ್ನು ಅಡ್ಡಾಡಿಸಲು

ಬಯಲಿಗೆ ಕರೆದುಕೊಂಡು ಹೋಗಿದ್ದಾರೆ. ಎದುರಿದ್ದ ದೊಡ್ಡ ಮರ ತೋರಿಸುತ್ತ ಅದರ ದಪ್ಪ ಕಾಂಡ ಕೊಂಬೆರೆಂಬೆಗಳಾಗಿ ಕವಲೊಡೆದು ಕೊನೆಯಲ್ಲಿ ಹಸಿರುಡೆಯಾಗಿ ಹರಡಿ ಹೋಗುವುದರ ಸೌಂದರ್ಯ ವರ್ಣಿಸಿದ್ದಾರೆ.

"ಹೌದು ಅದು ಹಾಗಿರದ್ದರೆ ಮರವೇ ಇರುತ್ತಿರಲಿಲ್ಲ!" ಮಗುವಿನ ಥಟ್ಟನೆ ಪ್ರತಿಕ್ರಿಯೆ.

ಬಂಧು ಬಾಂಧವರ ಅಭಿಪ್ರಾಯದಲ್ಲಿ ನೀಲ್ಸ್‌ನಿಗಿಂತ ಹೆರಾಲ್ಡನೇ ಹೆಚ್ಚು ಬುದ್ಧಿವಂತ ಎಂದಿದ್ದರೂ ತಂದೆ ಮಾತ್ರ ಹಾಗೆ ಭಾವಿಸಿರಲಿಲ್ಲ. ಅಣ್ಣನ ಸೃಜನಶೀಲತೆ, ಕಾರ್ಯಕ್ಷಮತೆ ಮತ್ತು ಧುರೀಣತ್ವ ಗುಣಗಳ ಬಗ್ಗೆ ಅವರಿಗೆ ಪೂರ್ಣ ಭರವಸೆ ಇತ್ತು. ಚಿಕ್ಕಂದಿನಿಂದಲೂ ಇವನಿಗೆ ಮರಗೆಲಸ, ಲೋಹಕೆತ್ತನೆ ಮುಂತಾದ ಕುಸುರಿ ಕೆಲಸಗಳಲ್ಲಿ ವಿಶೇಷ ಆಸಕ್ತಿ.

ಒಮ್ಮೆ ಇವನ ಸೈಕಲ್ಲಿನ ಗುಂಬದ ಹಲ್ಲುಗಾಲಿಯಲ್ಲಿ ಏನೋ ಕಟಪಟ ತೊಂದರೆ ಹಣಕಿತು. ಅದನ್ನು ದುರಸ್ತಿ ಮಾಡಲು ತಕ್ಕ ಅನುಭವ ಇವನಿಗಿರಲಿಲ್ಲ, ಪ್ರಾಯವೂ ಆಗಿರಲಿಲ್ಲ. ಹಿರಿಯರ ಮಾತು ಕೇಳದೇ ಇವನು ಸೈಕಲ್ಲನ್ನು ಕಳಚಿಯೇ ಬಿಟ್ಟ. ಬಿಡಿ ಭಾಗಗಳನ್ನು ತಪಾಸಿಸಿ ಕಟಪಟವನ್ನು ಸರಿಪಡಿಸಿ ಇಡೀ ಸೈಕಲ್ಲನ್ನು ಮರುಜೋಡಿಸಿದ. ಆಗ ಅದು ಹೊಸದರಂತೆಯೇ ಆಗಿತ್ತು. "ಆ ಹುಡುಗನನ್ನು ಅವನಷ್ಟಕ್ಕೆ ಬಿಡಿ. ತಾನೇನು ಮಾಡುವೆನೆಂಬುದು ಅವನಿಗೆ ಗೊತ್ತು." ಇದು ತಂದೆಗೆ ಮಗನ ಬಗ್ಗೆ ಇದ್ದ ವಿಶ್ವಾಸ.

ಅವನಿನ್ನೂ ಎಳೆ ಹುಡುಗ. ವಯಸ್ಸು ಹನ್ನೊಂದು. ಶಾಲೆಯಲ್ಲಿ ಚಿತ್ರ ಕೆಲಸದ ಪಾಠ. ಎದುರಿಗೆ ಕಾಣುತ್ತಿದ್ದ ಮನೆಯನ್ನೂ ಅದರ ಸುತ್ತಲಿನ ದಪ್ಪ ಬೇಲಿಯನ್ನೂ ಚಿತ್ರಿಸಬೇಕೆಂದು ಉಪಾಧ್ಯಾಯರ ಆಣತಿ. ಮನೆಯ ಚಿತ್ರವನ್ನೇನೋ ಬಿಡಿಸಿದ್ದಾಗಿದೆ. ಆದರೆ ಬೇಲಿ ಚಿತ್ರಿಸುವ ಮೊದಲು ಅದರಲ್ಲಿ ಒಟ್ಟು ಎಷ್ಟು ದಸಿಗಳಿವೆ ಎಂಬುದನ್ನು ವಾಸ್ತವವಾಗಿ ಎಣಿಸಿ ಅಷ್ಟು ಸೀಟಿ ಗೀಟುಗಳನ್ನು ಚಿತ್ರದಲ್ಲಿ ಎಳೆದಿದ್ದಾನೆ—ಚಿತ್ರ ವಾಸ್ತವತೆಯ ಯಥಾ ಪ್ರತಿಬಿಂಬವಾಗಿರಬೇಕೆಂಬುದು ಅವನ ವಾದ.

ಏಳು ವರ್ಷ ಕಿರಿಯ ಸಂಬಂಧಿಯೊಬ್ಬನ ಮಾತಿನಲ್ಲಿ "ನೀಲ್ಸ್ ಒಂದು ಕೆಲಸದಲ್ಲಿ ಮಗ್ನನಾದನೆಂದರೆ ಬಾಹ್ಯ ಪ್ರಪಂಚದ ಅಸ್ತಿತ್ವವನ್ನೇ ಮರೆತುಬಿಡುತ್ತಿದ್ದ. ನಾವೆಲ್ಲರೂ ಅವನ ಕಾರ್ಯವೈಖರಿ ಗಮನಿಸುತ್ತ ನಿಂತಿರುತ್ತಿದ್ದೆವು, ಅಷ್ಟೆ. ಹೀಗಿದ್ದರೂ ನಾವು ಕೂಡ ಅದರಲ್ಲಿ ಅವನಷ್ಟೇ ಭಾಗಿಗಳಾಗಿದ್ದೇವೆಂಬ ಅರಿವನ್ನು ಅವನು ನಮ್ಮಲ್ಲಿ ಮೂಡಿಸುತ್ತಿದ್ದ."

ಶಾಲೆಯಲ್ಲಿ ಇವನು ಮಹೋಜ್ಜ್ವಲ ಪ್ರತಿಭೆಯಾಗಿ ಬೆಳಗಿದನೆಂಬುದಕ್ಕೆ ದಾಖಲೆಗಳೇನೂ ಇಲ್ಲ. ಆದರೆ ಖಂಡಿತವಾಗಿಯೂ ಇವನು ಬಲು ಚೂಟಿ ಹುಡುಗ. ಪಾಠವಾಗಲಿ ಆಟವಾಗಲಿ ಗಾಢವಾಗಿ ಅದರಲ್ಲಿ ಲೀನನಾಗುತ್ತಿದ್ದ. ಒಮ್ಮೆ ಇವನು ತಮ್ಮನಿಗಾಗಿ ಮರದ ಒಂದು ಆಟಿಕೆ ನಾಟಕ ಮಂದಿರ ನಿರ್ಮಿಸಿದ. ಬಲು ಸುಂದರವಾಗಿ ಮೈವೆತ್ತ ಆ ಕೃತಿಯನ್ನು ಮನೆಗೆ ಒಯ್ಯಲು ಮಾತ್ರ ಶಾಲಾಧಿಕಾರಿಗಳು ಬಿಡಲಿಲ್ಲ—ಅದು ಶಾಲೆಯ ಆಸ್ತಿ. ಮಕ್ಕಳ ಹತಾಶೆ ಗಮನಿಸಿದ ತಂದೆ ಮನೆಯಲ್ಲೇ ಇವರಿಗಾಗಿ ಪುಟ್ಟ ಕರ್ಮಾಗಾರ ಕಟ್ಟಿಕೊಟ್ಟರು.

ಪ್ರಕೃತಿ ವಿಜ್ಞಾನದಲ್ಲಿ ಇವನ ಒಲವು ಬೇಗನೆ ಪ್ರಕಟವಾಯಿತು—ಅಲ್ಲಿಯೂ ಭೌತ ಮತ್ತು ಗಣಿ ವಿಜ್ಞಾನಗಳಲ್ಲಿ. ಇವನ ವೀಕ್ಷಣ, ವಿಶ್ಲೇಷಣ ಮತ್ತು ವಿಮರ್ಶನ ಪ್ರಜ್ಞೆ ನಿಶಿತವಾಗಿತ್ತು. ಪಠ್ಯ ಪುಸ್ತಕಗಳಲ್ಲಿ ಕಂಡುಬರುತ್ತಿದ್ದ ವಿಷಯ ಸ್ಖಾಲಿತ್ಯವನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಿದ್ದ.

"ಆ ದೋಷಪೂರ್ಣ ನಿರೂಪಣೆಗಳೇ ಪ್ರಶ್ನಾಪತ್ರಿಕೆಯಲ್ಲಿ ಬಂದರೆ ಏನು ಮಾಡುವೆ?" ಸ್ನೇಹಿತನ ಸಂದೇಹ.

"ವಸ್ತುಗಳು ನಿಜಕ್ಕೂ ಹೇಗಿವೆ ಎನ್ನುವುದನ್ನು ತಿಳಿಯಪಡಿಸುತ್ತೇನೆ" ನೀಲ್ಸ್‌ನ ಸಹಜ ಆಶ್ವಾಸನೆ.

ಇತಿಹಾಸ, ಲ್ಯಾಟಿನ್ ಮುಂತಾದ ವಿಜ್ಞಾನೇತರ ಪ್ರಕಾರಗಳಲ್ಲಿಯೂ ಈತ ಉತ್ತಮ ವಿದ್ಯಾರ್ಥಿ ಆಗಿದ್ದ. ಆದರೆ ಡೇನಿಶ್ ಭಾಷೆಯ ಅಂಕುಡೊಂಕು ವಂಕಿಗಳಲ್ಲಿ ಸಲೀಸಾಗಿ ಮುಂದುವರಿಯಲಾಗದೆ ಚಡಪಡಿಸುತ್ತಿದ್ದ. ಆ ಭಾಷೆಯಲ್ಲಿ ಸಾಂಪ್ರದಾಯಿಕ ಪ್ರಬಂಧ ರಚನೆ

ಇವನ ಮೂಲವನ್ನೇ ಹಂದಾಡಿಸಿಬಿಡುತ್ತಿತ್ತು: ಪ್ರಬಂಧಕ್ಕೊಂದು ಪ್ರಸ್ತಾವನೆ ಇರಬೇಕು, ವಸ್ತು ಇರಬೇಕು, ಓಘ ಇರಬೇಕು, ಕೊನೆಯಲ್ಲಿ ಸಮಾರೋಪವೂ ಇರಬೇಕು, ಅದೊಂದು ಶಿಸ್ತಿನ ಕವಾಯತಿ ಪ್ರದರ್ಶನದಂತೆ ಅಚ್ಚುಕಟ್ಟಾಗಿರತಕ್ಕದ್ದು.

'ಬಂದರಿನ ಸುತ್ತ ಅಡ್ಡಾಟ' ಎಂಬ ಪ್ರಬಂಧವನ್ನು ಈತ ಡೇನಿಶ್ ಭಾಷೆಯಲ್ಲಿ ರಚಿಸಿದ. "ನನ್ನ ತಮ್ಮನೂ ನಾನೂ ಬಂದರಿನ ಸುತ್ತ ಅಡ್ಡಾಡುತ್ತ ಹೋದೆವು. ಅಲ್ಲಿ ಹಡಗು ರೇವು ಮುಟ್ಟುವುದನ್ನೂ ಅದರಲ್ಲಿ ಸರಕು ಒಟ್ಟುವುದನ್ನೂ ನೋಡಿದೆವು."

'ರೇವು ಮುಟ್ಟು' ಮತ್ತು 'ಸರಕು ಒಟ್ಟು' (landing and lading) ಎಂಬ ಪದಗಳಲ್ಲಿದ್ದ ಅಂತ್ಯ ಪ್ರಾಸದಿಂದ ಈತ ಉತ್ತೇಜಿತನಾಗಿದ್ದ. ಆದರೆ ಉಪಾಧ್ಯಾಯ ಮಾತ್ರ ಈ ಪ್ರಬಂಧವನ್ನು ರುಂಡ ಮತ್ತು ಅವಯುವ ರಹಿತ ಶರೀರ, ಇದಕ್ಕೊಂದು ಪ್ರಸ್ತಾವನೆ ಬೇಕು, ಸಮಾರೋಪವೂ ಬೇಕು ಎಂದು ಆಗ್ರಹಪಡಿಸಿದ. ಈ ವೃಥಾ ಒತ್ತಾಯ ನೀಲ್ಸ್‌ನ ಸುಹಾಸಪ್ರಜ್ಞೆಗೆ ವಿಪುಲಗ್ರಾಸ ಒದಗಿಸಿತು. ತನ್ನ ಪ್ರಬಂಧಕ್ಕೆ ಆ ಅಗತ್ಯಗಳನ್ನು ಪೋಣಿಸಿದ: "ಈ ಪ್ರಬಂಧಕ್ಕೆ ಪೀಠಿಕೆಯಾಗಿ 'ಮನೆಯಲ್ಲಿ ನಿಸರ್ಗ ಬಲಗಳ ಉಪಯೋಗ' ಎಂಬುದರ ಬಗ್ಗೆ ಹೇಳಬಯಸುವೆನು. ವಾಸ್ತವವಾಗಿ ನಮ್ಮ ಮನೆಯಲ್ಲಿ ನಿಸರ್ಗ ಬಲಗಳನ್ನು ಬಳಸುವುದೇ ಇಲ್ಲ. ಇನ್ನು ಮುಕ್ತಾಯ

ನನ್ನ ಹೆಸರೀಗ ಬೇಕರ್

ಪರಮಾಣುಬಾಂಬ್ ನಿರ್ಮಾಣದ ಹೊಣೆ ಹೊತ್ತಿದ್ದ ಮನಹಟ್ಟನ್ ಪ್ರೊಜೆಕ್ಟ್ ಅತ್ಯಂತ ಗೋಪ್ಯವಾಗಿ ಕಾರ್ಯನಿರತವಾಗಿತ್ತು. ಅಲ್ಲಿದ್ದ ಎಲ್ಲ ವಿಜ್ಞಾನಿಗಳ ಹೆಸರುಗಳನ್ನೂ ರಹಸ್ಯ ರಕ್ಷಣೆಯ ಸಲುವಾಗಿ ಬದಲುಮಾಡಲಾಗಿತ್ತು. ಹೀಗೆ ನೀಲ್ಸ್ ಬೋರ್ ಮತ್ತು ಆಗೇ ಬೋರ್ ಅಲ್ಲಿ ನಿಕೊಲಾಸ್ ಬೇಕರ್ ಮತ್ತು ಜೇಮ್ಸ್ ಬೇಕರ್ ಆಗಿದ್ದರು. ಆನೆಯ ಹೆಸರು ಬದಲಾಯಿಸಿದ ಮಾತ್ರಕ್ಕೆ ಗಾತ್ರ ಬದಲಾದೀತೇ? ಭೌತವಿಜ್ಞಾನಿಗಳ ರಾಜನಾದ ಬೋರ್ ಅವರ ಸ್ಫಟಿಕ ನಿರ್ಮಲ ಮತ್ತು ತೀವ್ರ ಕ್ರಿಯಾಶೀಲ ವ್ಯಕ್ತಿತ್ವವನ್ನು ಮರೆಮಾಡುವುದು ಅಧಿಕಾರಿಗಳಿಗೆ ಸಾಧ್ಯವೇ ಆಗಲಿಲ್ಲ.

ಅಲ್ಲಿಯ ರಹಸ್ಯಮಯ ವಾತಾವರಣದಲ್ಲಿ ಬೋರ್ ಒಮ್ಮೆ ಹಳೆಯ ಸುಪರಿಚಿತ ಮಹಿಳೆಯೊಬ್ಬಳನ್ನು ಗುರುತಿಸಿದರು. ತಮ್ಮ ಮಾಜಿ ಸಹೋದ್ಯೋಗಿ ಹಾಲ್ಬನ್ ಅವರ ಪತ್ನಿಯಾಗಿದ್ದ ಈಕೆ ಈಚೆಗೆ ವಿವಾಹ ವಿಚ್ಛೇದನ ಪಡೆದದ್ದು ಇವರಿಗೆ ಗೊತ್ತಿರಲಿಲ್ಲ. ಅಪರಿಚಿತ ನೆಲೆಯಲ್ಲಿ ಪರಿಚಿತ ಮುಖವನ್ನು ಅಕಸ್ಮಾತ್ತಾಗಿ ಕಂಡಾಗ ಉಕ್ಕುವ ಉತ್ಸಾಹಾತಿಶಯದಿಂದ ಬೋರ್ ನುಡಿದರು ಅತ್ಯಂತ ವಿನಯಪೂರ್ವಕವಾಗಿ, "ನೀವು ಫ್ರಾ ಫಾನ್ ಹಾಲ್ಬನ್ ಅಲ್ಲವೇ?"

ಮಹಿಳೆ ಕೋಪಿಷ್ಠ ಸರ್ಪದಂತೆ ಕಟುವಾಗಿ ಕುಕ್ಕಿದಳು, "ಅಲ್ಲ ನೀವು ತಪ್ಪಿದ್ದೀರಿ. ನನ್ನ ಹೆಸರೀಗ ಪ್ಲಾಕ್ಸೆಕ್." ತಲೆ ಎತ್ತಿ ಪ್ರಶ್ನಾಕಾರರ ಮುಖ ನೋಡಿದಳು. ಒಡನೆ ಅವರ ಗುರುತು ಹಿಡಿದು "ಆದರೆ ನೀವಂತೂ ಪ್ರೊಫೆಸರ್ ಬೋರ್" ಎಂದಳು ಹರ್ಷವದನೆಯಾಗಿ.

"ಅಲ್ಲ. ನೀವು ತಪ್ಪಿದ್ದೀರಿ. ನನ್ನ ಹೆಸರೀಗ್ ಬೇಕರ್."

ವಾಗಿ ಅಲ್ಯೂಮಿನಿಯಮ್ ಕುರಿತು ಬರೆಯಲು ಇಚ್ಛಿಸುವೆನು."

ಈ ಧಾರ್ಷ್ಟ್ಯದ ತಳದಲ್ಲಿ ಮರಸು ಕುಳಿತಿರುವ ಕುಹಕ ಧ್ವನಿ ಆ ಉಪಾಧ್ಯಾಯನ ಜಡಮತಿಗೆ ತಟ್ಟಿತೋ ಇಲ್ಲವೋ ವರದಿ ಆಗಿಲ್ಲ.

ಪ್ರತಿಭಾವಿಕಾಸ

"ಬಾಲಪ್ರತಿಭೆಯನ್ನು ತಿಳಿದಿರುವುದು ಎಂಥ ಹೆಮ್ಮೆಯ ಸಂಗತಿ ಗೊತ್ತೇ? ನನಗೆ ಇಂಥವನೊಬ್ಬನ ಪರಿಚಯವಿದೆ. ಇವನು ನನ್ನ ಸಹಪಾಠಿ, ಹೆಸರು ನೀಲ್ಸ್ ಬೋರ್. ದಿನ ದಿನ ಇವನ ಪ್ರತಿಭೆ ಅಧಿಕಾಧಿಕ ಉಜ್ವಲವಾಗುತ್ತಿದೆ. ಇನ್ನು ವರ್ತನೆ? ನೀನು ಊಹಿಸಬಹುದಾದಂಥ ಅತ್ಯಂತ ಕರುಣಾಹೃದಯಿ ಮತ್ತು ವಿನಯಶೀಲ. ಇವನ ವಯಸ್ಸು ಕೇವಲ ಹತ್ತೊಂಬತ್ತು. ಇವನಿಗೊಬ್ಬ ಹದಿನೇಳು ವಯಸ್ಸಿನ ತಮ್ಮ ಇದ್ದಾನೆ—ಹೆರಾಲ್ಡ್ ಬೋರ್. ಇವನೂ ಗಣಿತದಲ್ಲಿ ಮಹಾ ಪ್ರಚಂಡ. ಈ ಅಣ್ಣ ತಮ್ಮಂದಿರಲ್ಲಿ ಎಂಥ ಸಾಮರಸ್ಯ! ಎಂದೂ ಅಗಲದ ಯುಮಳ ತಾರೆಗಳಿವರು. ಯಾರು ಹೆಚ್ಚು ಉಜ್ವಲ ಎಂದು ನಿರ್ಧರಿಸುವುದು ಕಷ್ಟ." ನೀಲ್ಸ್ ಬೋರ್ ಅವರ ಸಹಪಾಠಿ ಹೆಲ್ಗಾ ಲಿಂಡ್ ಎಂಬಾಕೆ ತನ್ನ ಜ್ಞಾತಿ ಸಂಬಂಧಿಗೆ ಬರೆದ ಪತ್ರದಿಂದ ಉದ್ಧರಿಸಿದ ಅಂಶವಿದು.

ಈತನ ಆಸಕ್ತಿ ಭೌತವಿಜ್ಞಾನ ಕ್ಷೇತ್ರದಲ್ಲಿ ಕುದುರಿತು. ಆದರೆ ವಿಶ್ವವಿದ್ಯಾಲಯದಲ್ಲಿ ಪ್ರಯೋಗ ನಡೆಸಲು ತಕ್ಕಷ್ಟು ಸೌಕರ್ಯವಿರಲಿಲ್ಲ. ಹೀಗಾಗಿ ಇವನು ಬಿಡು ವೇಳೆಯನ್ನೆಲ್ಲ ತಂದೆಯ ಶರೀರ-ವೈಜ್ಞಾನಿಕ ಪ್ರಯೋಗಾಲಯದಲ್ಲಿ ಕಳೆಯುತ್ತಿದ್ದ: ಸ್ವಂತ ಪ್ರಯೋಗಗಳನ್ನು ರೂಪಿಸಿ

ಗುರಿ ಹೊಡೆತ

ಎಳೆಯ ನೀಲ್ಸ್ ಗುರಿ ಹೊಡೆಯುವುದರಲ್ಲಿ ಬಲು ಜಾಣ. ಫಲಭರಿತ ವೃಕ್ಷದಿಂದ ಬಿಡಿ ಹಣ್ಣನ್ನು ಉದುರಿಸಬೇಕೆ? ನೀಲ್ಸ್ ಕಲ್ಲೆಸೆದರೆ ಅದು ಬಿತ್ತೆಂದೇ ಲೆಕ್ಕ. ಒಮ್ಮೆ ಇವನು ಪಾಳುಬಿದ್ದಿದ್ದ ಒಂದು ಇಗರ್ಜಿ ನೋಡಲೆಂದು ಗೆಳೆಯರೊಡನೆ ದೂರದ ಹಳ್ಳಿಗೆ ಹೋದ. ಆ ಕಟ್ಟಡದ ಅರ್ಧಾಂಶವನ್ನು ಮರಳು ಕಬಳಿಸಿತ್ತು. ಮಾಳಿಗೆ, ತಾರಸಿ ಮತ್ತು ಗುಂಬಜ ಮಾತ್ರ ಇನ್ನೂ ಅಂತರ್ಧಾನವಾಗದೇ ಉಳಿದಿದ್ದವು. ನೀಲ್ಸ್‌ನ ಕೈಚಳಕ ಪ್ರದರ್ಶನಕ್ಕೆ ಪಂಥಾಹ್ವಾನ ಒಡ್ಡುವಂತೆ ಸೆಟೆದು ನಿಂತಿತ್ತು ಇಗರ್ಜಿ.


ಮೊದಲು ಕಲ್ಲೆಸೆತಗಳು ಅಂತರ್‌ಖಂಡ ಉತ್ಕ್ಷೇಪಿತ ಕ್ಷಿಪಣಿಗಳ (inter-continental ballistic missile) ತೆರದಲ್ಲಿ ಇಗರ್ಜಿಯನ್ನು ಸೋಂಕದೆ ಮೇಲಿನಿಂದ ಸವರಿ ಆ ಕಡೆಗೆ ಚಿಮ್ಮಿದುವು. ಈಗ ಅವನ ಲಕ್ಷ್ಯ ಮಾಳಿಗೆಯ ಕಿಟಕಿ ಪಡಿಗಳಲ್ಲಿದ್ದ ತೂತುಗಳತ್ತ ಹರಿಯಿತು. ನೇರ ಅವುಗಳೆಡೆಗೆ ಹರಳುಗಲ್ಲುಗಳನ್ನೆಸೆದ. ಅವು ಪಡಿಗಳಿಗೆ ಇನಿತೂ ಗಾಸಿಮಾಡದೆ ತೂತುಗಳ ಮೂಲಕ ಸೋರಿ ಒಳಬಿದ್ದವು. ಊರುಗೋಲುಗಳನ್ನೆಸೆದು ಕಿಟಕಿಗಳ ದಾರವಂದದಲ್ಲಿ ಸಿಕ್ಕಿಸಬೇಕೆಂಬುದು ಮುಂದಿನ ಸವಾಲು. ಇದನ್ನು ಅವನು ಸಾಧಿಸಿದ್ದು ಮಾತ್ರವಲ್ಲ, ಮತ್ತೆ ಅವುಗಳಿಗೆ ಕಲ್ಲೆಸೆದು ಆ ಕೋಲುಗಳು ಹಿಂದೆ ಬೀಳುವಂತೆಯೂ ಮಾಡಿದ. ಇನ್ನು ಕೊನೆಯ ಪರೀಕ್ಷೆ: ಊರುಗೋಲಿನ ಕೊಂಕುಹಿಡಿ ಕಿಟಕಿ ಪಡಿಯ ತೂತಿನೊಳಗೆ ಪೋಣಿಕೆಯಾಗುವಂತೆ ಅದನ್ನು ಎಸೆಯುವುದು ಸಾಧ್ಯವೇ? ನೀಲ್ಸ್ ಈ ಪವಾಡವನ್ನು ಲೀಲಾಜಾಲವಾಗಿ ಮಾಡಿತೋರಿಸಿದ. ಇಷ್ಟೇ ಅಲ್ಲ, ಹೀಗೆ ಪೋಣಿಕೆಗೊಂಡ ಊರುಗೋಲಿಗೆ ಪುನಃ ಕಲ್ಲು ಬೀರಿ ಅದನ್ನು ಬಂಧಮುಕ್ತಗೊಳಿಸಿದ ಕೂಡ.

ನಿರ್ವಹಿಸಿ ಫಲಿತಾಂಶ ಪಡೆಯುವ ಕಾರ್ಯ. ಇವು ಸಾಂಪ್ರದಾಯಿಕ ಪಾಠ ಪ್ರವಚನಗಳಿಗೆ ಸಂಬಂಧಿಸಿದ ಪ್ರಯೋಗಗಳಾಗಿರಲಿಲ್ಲ—ಪ್ರಚಲಿತ ಭೌತವಿಜ್ಞಾನ ಪ್ರಪಂಚದ ಮುಂಚೂಣಿಯಲ್ಲಿದ್ದ ಸಂಶೋಧನ ಸಮಸ್ಯೆಗಳೇ ಆಗಿದ್ದುವು.

ಮೇಲ್ಮೈ ಕರ್ಷಣ (surface tension) ಎನ್ನುವುದು ದ್ರವಗಳ ಒಂದು ವಿಶಿಷ್ಟ ಗುಣ. ನಿಶ್ಚಲ ನೀರಿನ ಮೇಲ್ಮೈಯಲ್ಲಿ ತೆಳ್ಳಗಿನ ಸೂಜಿಯನ್ನೋ ಲೋಹದ ತೆಳು ಅಲಗನ್ನೋ ಮೆತ್ತಗೆ ಹಾಸಿದರೆ ಅವು ತೇಲುತ್ತವೆ. ಇದರ ಕಾರಣ ನೀರಿನ ಮೇಲ್ಮೈ ಕರ್ಷಣ. ತನ್ನ ಮೇಲ್ಮೈಯಲ್ಲಿ ನೀರು ಬಿಗಿಯಾಗಿ ಎಳೆದು ಹಿಡಿದ ರಬ್ಬರ್ ಹಾಳೆಯಂತೆ ವರ್ತಿಸುತ್ತಿದೆಯೋ ಈ ಕಾರಣದಿಂದ ಅದಕ್ಕೆ ಬಿಗಿತನ ಅಥವಾ ಕರ್ಷಣ ಒದಗಿದೆಯೋ ಎಂಬಂತೆ.

ದ್ರವಗಳ ಮೇಲ್ಮೈ ಕರ್ಷಣವನ್ನು ಪ್ರಯೋಗ ರೀತ್ಯ ಅಳೆದು ಲಭ್ಯ ಫಲಿತಾಂಶಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಪರೀಕ್ಷಿಸುವುದು ಭೌತವಿಜ್ಞಾನದ ಒಂದು ಮಾಮೂಲಿ ವಿಧಾನ. ಮೇಲ್ಮೈ ಕರ್ಷಣದ ಬಗ್ಗೆ ಆಗ ಲಭ್ಯವಿದ್ದ ಸೈದ್ಧಾಂತಿಕ ಫಲಿತಾಂಶಗಳನ್ನು ಧಾರಾಕಂಪನಗಳ ಮೂಲಕ ಸೂಕ್ಷ್ಮವಾಗಿ ಪರಿಶೀಲಿಸಿ ಪರಿಷ್ಕರಿಸುವುದು ಸದ್ಯ ಸಂಶೋಧಕರ ಎದುರಿದ್ದ ಸಮಸ್ಯೆ. (ಧಾರಾಕಂಪನಗಳು: jet vibrations— ಕಾರಂಜಿಯ ಬುರುಡೆಯನ್ನು ಆವರ್ತಿಸಲು ವಿಧಿಸಿದಾಗ ಹೊರಚಿಮ್ಮುವ ಚಾಮರ ಧಾರೆಗಳು.)

ನೀಲ್ಸ್ ಈ ಸಮಸ್ಯೆಯನ್ನು ಕೈಗೆತ್ತಿಕೊಂಡ. ತನಗೆ ಅವಶ್ಯವಾಗುವ ಉಪಕರಣಗಳನ್ನು ಅಕ್ಕಸಾಲೆಯ ನವುರು ನಾಜೂಕಿನಿಂದ ರಚಿಸಿ ಪ್ರಯೋಗ ಮಾಡಿದ. ಇದರಿಂದ ಸಿದ್ಧಾಂತ ಇನ್ನಷ್ಟು ಪರಿಪೂರ್ಣವಾಯಿತು: ಜೊತೆಗೆ ಅದಕ್ಕೆ ಹೆಚ್ಚಿನ ವ್ಯಾಪ್ತಿಯೂ ಪ್ರಾಪ್ತವಾಯಿತು. The Royal Danish Academy of Sciences and Letters ಈ ಸಂಶೋಧನ ಪ್ರಬಂಧಕ್ಕೆ ಸುವರ್ಣ ಪದಕವಿತ್ತು ನೀಲ್ಸ್‌ನ ಪ್ರತಿಭೆಯನ್ನು ಪುರಸ್ಕರಿಸಿತು (೧೯೦೭).



ನೀಲ್ಸ್ ಬೋರ್

ವಿಕಿರಣಪಟುತ್ವ

ಜರ್ಮನ್ ಭೌತವಿಜ್ಞಾನಿ ವಿಲ್‌ಹೆಲ್ಮ್ ಕೊನ್ರಾಡ್ ರಂಟ್ಜನ್ (೧೮೪೫-೧೯೨೩) ಎಕ್ಸ್ ಕಿರಣಗಳನ್ನು ಆವಿಷ್ಕರಿಸಿದ (೧೮೯೫). ಸಾಮಾನ್ಯ ಬೆಳಕಿಗೆ ಖಚಿತವಾಗಿಯೂ ಅಪಾರದರ್ಶಕವಾಗಿದ್ದ ಹಲಗೆ ಗೋಡೆ ಮುಂತಾದವನ್ನು 'ಕತ್ತರಿಸಿ' ತೂರುತ್ತಿದ್ದ ಈ ಕಿರಣಗಳು ಕಣ್ಣಿಗೆ ಕಾಣದ (ದೃಗಗೋಚರ) ಸ್ಥೂಲ ಮತ್ತು ಸೂಕ್ಷ್ಮ ಜಗತ್ತಿನ ಬಗೆಗೆ ಸುಳುವು ನೀಡಿದುವು. ಬೆಳಕಿಗೆ ಅಪಾರದರ್ಶಕವಾದ ಮಾನವ ದೇಹ ಎಕ್ಸ್ ಕಿರಣಗಳಿಗೆ, ಎಲುಬುಗಳು ಹೊರತಾಗಿ, ಪಾರದರ್ಶಕವೆಂಬ ವೈದ್ಯಕೀಯ ಅಸ್ವಾಯ ಶೀಘ್ರದಲ್ಲೇ ವೇದ್ಯವಾಯಿತು. ದೃಗಗೋಚರ ಎಕ್ಸ್ ಕಿರಣಗಳು ಛಾಯಾಗ್ರಾಹಕ ಪೊರೆಯ (photographic film) ಮೇಲೆ ರಾಸಾಯನಿಕವಾಗಿ ವರ್ತಿಸಿ ಅದನ್ನು ಮಬ್ಬುಗೊಳಿಸಿ ತಮ್ಮ ಇರವಿಗೆ ಸಾಕ್ಷ್ಯ ಒದಗಿಸುತ್ತಿದ್ದುವು.

ಈ ಮಾಯಾ ಕಿರಣಗಳ ವಿಚಿತ್ರ ವರ್ತನೆಯಿಂದ ಆಕರ್ಷಿತರಾದ ಸಮಕಾಲೀನ ಭೌತ

ವಿಜ್ಞಾನಿಗಳ ಪೈಕಿ ಫ್ರಾನ್ಸಿನ ಆ್ಯಂಟೋಯಿನ್ ಹೆನ್ರಿ ಬೆಕೆರಲ್ (೧೮೫೨-೧೯೦೮) ಒಬ್ಬ. ಯಾವುದೋ ಒಂದು ವಿಶಿಷ್ಟ ರಾಸಾಯನಿಕ ಪದಾರ್ಥ ತಂತಾನೇ ಎಕ್ಸ್ ಕಿರಣಗಳನ್ನು—ಅಂದರೆ ವಸ್ತುಗಳನ್ನು ಕತ್ತರಿಸುತ್ತ ದಾಟುವ ಶಕ್ತಿ ವಿಶೇಷವನ್ನು—ಉತ್ಸರ್ಜಿಸುವುದಾಗಿರಲಾರದೆ (ಉತ್ಸರ್ಜನೆ: **emission**) ಎಂದು ಈತ ಸಂದೇಹಿಸಿದ. ಅಮಾವಾಸ್ಯೆಯ ಕಗ್ಗತ್ತಲಲ್ಲೂ ಸ್ವಯಂಪ್ರಭೆ ಬೀರುವ ನೈಸರ್ಗಿಕ ವಸ್ತುಗಳ ಪರಿಚಯ ವಿಜ್ಞಾನಿಗಳಿಗಿದ್ದುದರಿಂದ ಈ ಸಂದೇಹ ಸಾಧಾರವಾದುದಾಗಿತ್ತು. ಯುರೇನಿಯಮ್ ಧಾತುವಿನ ಆಕರವಾದ ಪಿಚ್‌ಬ್ಲೆಂಡ್ ಎಂಬ ಅದುರನ್ನು ಈತ ಆಯ್ದು ಅದರ ಮೇಲೆ ನೇರ ಬಿಸಿಲಿನಲ್ಲಿ ಕೆಲವು ಪ್ರಯೋಗ ಮಾಡಿದ. ಸಂದೇಹ ನಿರಾಧಾರವಾದದ್ದಲ್ಲವೆಂದು ವೇದ್ಯವಾದರೂ ನೂತನ ಆಧಾರವೇನೂ ಲಭಿಸಲಿಲ್ಲ. ಸರಿ, ಸಾಮಾನ್ಯವಾಗಿ ಎಲ್ಲರೂ ಮಾಡುವಂತೆ ಆ ಅದುರಿನ ಹರಳುಗಳನ್ನು ನಿರ್ಲಕ್ಷ್ಯಭಾವದಿಂದ ಮೇಜದ ಖಾನೆಯೊಳಗೆ ತುರುಕಿದ, ಎಸೆಯಲು ಮನ ಒಪ್ಪದ್ದರಿಂದ. ಅದೇ ಖಾನೆಯೊಳಗೆ ಒಂದಿಷ್ಟು ಛಾಯಾಗ್ರಾಹಕ ಫಲಕಗಳೂ ಇದ್ದುವು. ಇವನ್ನು ದಪ್ಪ ಕಪ್ಪು ಕಾಗದದಿಂದ ಭದ್ರವಾಗಿ ಸುತ್ತಲಾಗಿತ್ತು. ಹೀಗಾಗಿ ತುಣುಕು ಬೆಳಕು ಕೂಡ ಇವುಗಳ ಒಳ ಸುಳಿಯುವಂತಿರಲಿಲ್ಲ. ಕೆಲವು ದಿನಗಳ ತರುವಾಯ ಬೆಕೆರಲ್ ಈ ಫಲಕಗಳನ್ನು ಉಪಯೋಗಿಸಲೆಂದು ಹೊರತೆಗೆದಾಗ ಅವು ವಿನಾಕಾರಣ ಮಬ್ಬಾಗಿದ್ದುದನ್ನು ಕಂಡು ಚಕಿತನಾದ. ದಪ್ಪ ಕಾಗದದ ಗಟ್ಟಿ ಕವಚ ಭೇದಿಸಿ ಒಳಹೊಕ್ಕ ಈ ತಕ್ಷಕ ಯಾರು? ರಾಸಾಯನಿಕ ಪದಾರ್ಥ ಪಿಚ್‌ಬ್ಲೆಂಡ್ ಇದರ ಆವಾಸ ಸ್ಥಾನವೆಂದು ಆತ ವಿಸರ್ಜನ ಪ್ರಕ್ರಿಯೆಯಿಂದ ಕಂಡುಕೊಂಡ (ವಿಸರ್ಜನ ಪ್ರಕ್ರಿಯೆ: **elimination process** ದತ್ತ ವಿದ್ಯಮಾನಕ್ಕೆ ಕಾರಣವಾಗಿರಬಹುದಾದ ವಿವಿಧ ಪದಾರ್ಥಗಳನ್ನು ಒಂದಾದ ಬಳಿಕ ಇನ್ನೊಂದರಂತೆ ಅದೇ ಪರೀಕ್ಷೆಗೆ ಒಳಪಡಿಸುತ್ತ ಸರಿಹೊಂದುವ ಪದಾರ್ಥವನ್ನು ಆಯುವ ಮತ್ತು ಉಳಿದವನ್ನು ವಿಸರ್ಜಿಸುವ ಕ್ರಮ.) ಅದುರಿನೊಳಗೆ ಯುರೇನಿಯಮ್ ತಂತಾನೇ ಒಡೆದು ಇಲ್ಲವೇ ಕುಸಿದು ಅದರಿಂದ ಅನಂತಾಲ್ಪ ಕಿರಣಗಳು ಹೊರ ರಟ್ಟುತ್ತವೆ, ಇವು ಬೆಳಕಿಗೆ ಅಪಾರದರ್ಶಕ ವಸ್ತುಗಳನ್ನು ಎಕ್ಸ್ ಕಿರಣಗಳ ತೆರವಲ್ಲಿಯೇ ಅಡ್ಡಹಾಯ್ದು ಛಾಯಾಗ್ರಾಹಕ ಫಲಕದ ಮೇಲೆ ವರ್ತಿಸಿ ತಮ್ಮ ಇರವಿಗೆ ಸಾಕ್ಷ್ಯ



ನೀಲ್ಸ್ ಬೋರ್ ಮತ್ತು

ಒದಗಿಸುತ್ತವೆ ಎಂಬುದಾಗಿ ತರ್ಕಿಸಿದ.

ಈ ವಿಶಿಷ್ಟ ನೈಸರ್ಗಿಕ ವಿದ್ಯಮಾನಕ್ಕೆ ಫ್ರಾನ್ಸಿನ ರಸಾಯನವಿಜ್ಞಾನಿ ಮೇರಿ ಕ್ಯೂರಿ (೧೮೬೭-೧೯೩೪) radioactivity (ವಿಕಿರಣ ಪಟುತ್ವ) ಎಂಬ ಹೆಸರು ನೀಡಿದಳು. ಒಣಗಿದ ಔಡಲಕಾಯಿ ಬಿರಿದಾಗ ಬೀಜಗಳು ರಟ್ಟುವಂತೆ ಅದುರಿನಿಂದ ವಿಕಿರಣ (radiation—ಶಕ್ತಿಯ ಒಂದು ರೂಪ) ಸಿಡಿಯುವುದರ ರಹಸ್ಯಶೋಧನೆ ಈ ತ್ಯಾಗಮಯಿ ಮಹಿಳೆಯ ಬದುಕಿನ ಗುರಿಯಾಯಿತು. ಟನ್ ತೂಕದ

ಸಾವಿನ ಜೊತೆ ಸರಸ

ಡೆನ್ಮಾರ್ಕ್ ಪತನಾನಂತರ (೧೯೪೦) ನೀಲ್ಸ್ ಬೋರ್ ಮತ್ತು ಅವರ ಕುಟುಂಬದವರಿಗೆ ಅಲ್ಲಿಯ ವಾಸ್ತವ್ಯ ಪ್ರಾಣಾಪಾಯಕಾರಿಯಾಗಿತ್ತು. ಆದರೂ ಅವರು ಅಲ್ಲಿಯೇ ತಂಗಿದ್ದು ನಿರಾಶ್ರಿತರಿಗೆ ನೆರವು ನೀಡುವುದರಲ್ಲೂ ಸಂಶೋಧನೆ ಮುಂದುವರಿಸುವುದರಲ್ಲೂ ಮಗ್ನರಾಗಿದ್ದರು. ಪರಿಸ್ಥಿತಿ ತೀರ ಉಲ್ಬಣಿಸಿದಾಗ ಅವರೆಲ್ಲರೂ ನೆರೆರಾಷ್ಟ್ರ ಸ್ವೀಡನ್ನಿಗೆ ಗೋಪ್ಯವಾಗಿ ವಲಸೆ ಹೋದರು (೧೯೪೩). ಇದು ತಟಸ್ಥ ರಾಷ್ಟ್ರ ನಿಜ. ಆದರೆ ಜರ್ಮನ್ನರ ಅಮೂಲ್ಯ ಕೊಳ್ಳೆ ಬೋರ್ ಅವರಿಗೆ ಸಂರಕ್ಷಣೆ ಒದಗಿಸುವ ತಾಕತ್ತು ಇದಕ್ಕಿರಲಿಲ್ಲ. ಅವರನ್ನು ಇಂಗ್ಲೆಂಡಿಗೆ ಗುಟ್ಟಾಗಿ ಸಾಗಹಾಕುವುದೊಂದೇ ಸದ್ಯದ ಉಪಾಯ. ಹೇಗೆ? ಕಡಲಯಾನ ಖಾತ್ರಿ ಮರಣಾಹ್ವಾನ. ಅನ್ಯಮಾರ್ಗ?

ಆಗ ಕೇವಲ ಒಂದು ಮಸ್ಕಿಟೋ ವಿಮಾನ (ಚಿಕ್ಕ ಗಾತ್ರದ ಹಿರಿ ವೇಗದ ವಿಮಾನ) ಸ್ವೀಡನ್ - ಸ್ಕಾಟ್ಲೆಂಡ್ ನಡುವೆ ಹಾರುತ್ತಿತ್ತು. ರಾಜನೈತಿಕ ಉದ್ದೇಶಗಳಿಗೆ (ಮುಖ್ಯವಾಗಿ ಟಪ್ಪಾಲು ಸಾಗಣೆ) ಮಾತ್ರ ಇದರ ಬಳಕೆ. ಶತ್ರುರಾಷ್ಟ್ರದ ಮೇಲೆ ಹಾರಬೇಕಾಗಿದ್ದ ಇದಕ್ಕೆ ಯಾವುದೇ ತೆರನಾದ ಶಸ್ತ್ರರಕ್ಷಣೆ ಇರಲಿಲ್ಲ. ಇದರ ಒಡಲಿನ ಹಿಂದುಗಡೆ ತಳಭಾಗದಲ್ಲಿದ್ದ ಬಾಂಬ್ ಕೋಠಿಯಲ್ಲಿ ಒಬ್ಬ ವ್ಯಕ್ತಿ ಇರುಕಿ ಕೂರಬಹುದಾಗಿತ್ತು ಅಷ್ಟೆ. ಬೋರ್ ಅವರನ್ನು ಇದರಲ್ಲಿ ಸಾಗಿಸುವುದೆಂದೂ ಶತ್ರುವಲಯದ ಮೇಲೆ ಹಾಯುವಾಗ ವಿಮಾನವನ್ನು ವಾಯುಮಂಡಲದ ಉನ್ನತಸ್ತರದಲ್ಲಿ ಅತಿ ವೇಗವಾಗಿ ಹಾರಿಸುವುದೆಂದೂ ನಿರ್ಧರಿಸಲಾಯಿತು.

ಸರಿ, ಇದೇ ಪ್ರಕಾರ ವಿಮಾನ ತನ್ನ ಅತ್ಯಮೂಲ್ಯ ಸರಕನ್ನು ಹೊತ್ತು ಧಾವಿಸಿತು. ವಾಯುಮಂಡಲದ ಉನ್ನತ ಸ್ತರಕ್ಕೆ ಅದು ಏರುತ್ತಿದ್ದಂತೆ ಪೈಲಟ್ ಅಂತರ್ ಸಂಪರ್ಕದ ಮೂಲಕ ಬೋರ್ ಅವರಿಗೆ ಆಕ್ಸಿಜನ್ ಸರಬರಾಜು ತೊಡಗಿಕೊಳ್ಳುವಂತೆ ಸೂಚನೆ ನೀಡಿದ. ಆದರೆ ಇದರಿಂದ ಅವರಿಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಇಲ್ಲೇನೋ ಎಡವಟ್ಟಾಗಿದೆ ಎಂದು ಗ್ರಹಿಸಿದ ಆತ ಶತ್ರುವಲಯವಾದ ನಾರ್ವೇ ದೇಶವನ್ನು ಕ್ರಮಿಸಿದ. ಒಡನೆ ಕೆಳಸ್ತರಕ್ಕೆ ಇಳಿದು ಉತ್ತರ ಸಮುದ್ರದ ಮೇಲೆ ಹಾರಿ ಸ್ಕಾಟ್ಲೆಂಡ್ ತಲಪಿದ. ಅಲ್ಲಿಯತನಕ ಮೂರ್ಛಾಗತರಾಗಿದ್ದ ಬೋರ್ ಆಗ ಪ್ರಜ್ಞೆ ಗಳಿಸಿದರು.

ಆದದ್ದೇನು? ಕರ್ಣವಾಣಿ (earphone) ಸಹಿತವಾದ ಶಿರಸ್ತ್ರಾಣ ಅವರ ತಲೆಗೆ ಹಿಡಿಸಲಿಲ್ಲ. ಹೀಗಾಗಿ ಪೈಲಟ್ ನೀಡಿದ ಸೂಚನೆ ಅವರಿಗೆ ತಲಪಲಿಲ್ಲ. ಇತ್ತ ಉನ್ನತ ಸ್ತರದಲ್ಲಿಯ ವಿರಳ ಆಕ್ಸಿಜನ್ ವಲಯದಲ್ಲಿ ವಿಮಾನ ಹಾರುತ್ತಿರುವಾಗ ಅವರು ಉಸಿರಾಡಲು ಚಡಪಡಿಸಿ ಪ್ರಜ್ಞಾಶೂನ್ಯರಾದರು. ಎಲ್ಲವೂ ಅತ್ಯಂತ ಕ್ಷಿಪ್ರಗತಿಯಲ್ಲಿ ಸಂಭವಿಸಿದುದರಿಂದ ಮರಣದಿಂದ ಪಾರಾದರು.

ರದ್ದಿ ಅದುರನ್ನು ಶುದ್ಧೀಕರಿಸಿ ಗ್ರಾಮ್ ತೂಕದ ತೀವ್ರ ವಿಕಿರಣಪಟು ಧಾತುವನ್ನು ಈಕೆ ಉದ್ಧರಿಸಿದಳು (೧೯೧೦). ಇದೇ ರೇಡಿಯಮ್. ನಿಸರ್ಗದ ಅತ್ಯಂತ ಸಂಕೀರ್ಣ ತಂತ್ರಕೌಶಲವಾದ, ಇಂದಿಗೂ ಯಾವುದೇ ಪ್ರಬಲ ಸೂಕ್ಷ್ಮದರ್ಶಕಕ್ಕೂ ಗೋಚರವಾಗದ, ಪರಮಾಣುಗರ್ಭದ ಜೀವಖಂಡಿಗೆ (biopsy) ಪರೀಕ್ಷೆ ಹೀಗೆ ಸಾಧ್ಯವಾಯಿತು.

ಅಣು-ಪರಮಾಣು ಸಂಬಂಧ ಕುರಿತು ಒಂದು ಮಾತು ಹೇಳಬೇಕು. ನಿಸರ್ಗದಲ್ಲಿ ಪದಾರ್ಥಗಳು ಸಾಧಾರಣವಾಗಿ ಮೂರು ಸ್ಥಿತಿಗಳಲ್ಲಿರುತ್ತವೆ: ಘನ—ಕಲ್ಲಿನಂತೆ:—ದ್ರವ ನೀರಿನಂತೆ; ಅನಿಲ—ಗಾಳಿಯಂತೆ. ಉದಾಹರಣೆಗೆ ಉಪ್ಪಿನ ಹರಳು, ಎಣ್ಣೆಯ ಹುಂಡು, ಹೊಗೆಯ ತುಣುಕು ಇವನ್ನು ಪರಿಶೀಲಿಸೋಣ. ಈ ಒಂದೊಂದು ಬಾಬನ್ನೂ ವಿಭಜಿಸುತ್ತ ಇದರ ಸಾಧ್ಯ ಸೂಕ್ಷ್ಮತಮ ಘಟಕ ದೊರೆಯುವವರೆಗೂ ಸಾಗೋಣ. ಈ ಪರಮಾಂತಿಮ ಘಟಕದ ಹೆಸರು ಅಣು (molecule). ಆಯಾ ಪದಾರ್ಥದ ಸಮಸ್ತ ಗುಣಲಕ್ಷಣಗಳನ್ನೂ ಒಳಗೊಂಡಿರುವ ಅತ್ಯಂತ ಸೂಕ್ಷ್ಮ ಘಟಕವೇ (ಆದರ) ಅಣು. ಇದನ್ನು ಮತ್ತೂ ವಿಭಜಿಸಿದ್ದಾದರೆ ಇದರ ವ್ಯಕ್ತಿತ್ವನಾಶವಾಗಿ ಬೇರೆ ಪದಾರ್ಥಗಳು ಮೈದಳೆಯುತ್ತವೆ. ಉದಾಹರಣೆಗೆ ಉಪ್ಪಿನ ಅಣು ಸೋಡಿಯಮ್ ಎಂಬ ಘನ ಪದಾರ್ಥವನ್ನೂ ಕ್ಲೋರೀನ್ ಎಂಬ ಅನಿಲ ಪದಾರ್ಥವನ್ನೂ ಕೂಡುತ್ತದೆ. ಎಣ್ಣೆಯ ಅಣುವಿನ ಘಟಕಗಳು ಇಂಗಾಲ, ಹೈಡ್ರೊಜನ್, ಆಕ್ಸಿಜನ್ ಮುಂತಾದವು. ಹೊಗೆಯ ಅಣುವನ್ನು ರೂಪಿಸುವ ಪರಿಕರಗಳು ಸೀಸ, ಇಂಗಾಲ, ಹೈಡ್ರೊಜನ್, ಆಕ್ಸಿಜನ್ ಇತ್ಯಾದಿ. ವಿವಿಧ ಪದಾರ್ಥಗಳ ಈ ಮೂಲ ಘಟಕಗಳಿಗೆ ಧಾತುಗಳೆಂದು (elements) ಹೆಸರು.

ಯಾವುದೇ ಧಾತುವನ್ನು ವಿಭಜಿಸುತ್ತ ಅದರ ಸಾಧ್ಯ ಸೂಕ್ಷ್ಮತಮ ಘಟಕ ದೊರೆಯುವವರೆಗೆ ಸಾಗೋಣ. ಈ ಪರಮಾಂತಿಮ ಘಟಕದ ಹೆಸರು ಪರಮಾಣು (atom): ಆಯಾ ಧಾತುವಿನ ಸಮಸ್ತ ಗುಣಲಕ್ಷಣಗಳನ್ನೂ ಒಳಗೊಂಡಿರುವ ಅತ್ಯಂತ ಸೂಕ್ಷ್ಮ ಘಟಕವೇ (ಆದರ) ಪರಮಾಣು. ನಿಸರ್ಗದಲ್ಲಿ ೯೨ ಬಗೆಯ ಧಾತುಗಳಿವೆ. ಆದ್ದರಿಂದ ಅಷ್ಟೇ ಬಗೆಯ ಪರಮಾಣುಗಳೂ ಇವೆ ಎಂದಾಯಿತು. ವಿಶ್ವದ ನಿರ್ಮಾಣ ಘಟಕಗಳಿವು (building blocks). ಇವುಗಳ ವಿವಿಧ ಸಂಯೋಜನೆಗಳೇ ವಿಶ್ವ ಪ್ರದರ್ಶಿಸುವ ಅಸಂಖ್ಯ ವಸ್ತುವೈವಿಧ್ಯಗಳು. ವಿಶ್ವವನ್ನು ಒಂದು ಪಾಕಶಾಲೆ ಎಂದು ಭಾವಿಸಿದರೆ ಇಲ್ಲಿಯ ಪರಿಕರಗಳು ವಿವಿಧ ಪರಮಾಣುಗಳೆಂದೂ ಸಿದ್ಧಪಾಕಗಳು ವಿವಿಧ ವಸ್ತುಗಳೆಂದೂ ವರ್ಣಿಸಬಹುದು.

ರೇಡಿಯಮ್ ಪರಮಾಣುವಿಗೆ ವಿಕಿರಣಪಟುತ್ವವಿದೆ. ಇದು ತಂತಾನೇ — ಬಾಹ್ಯಕಾರಕದ ಪ್ರಚೋದನೆ ಇಲ್ಲದೆ ಎಂದರ್ಥ — ವಿಕಿರಣ ಬೀರಿ ಸ್ವಂತತ್ವ ಕಳೆದುಕೊಳ್ಳುತ್ತದೆ. ವಿಕಿರಣದ ಉತ್ಸರ್ಜನಾನಂತರ ಉಳಿಯುವ ಶೇಷ ರೇಡಿಯಮ್ ಆಗಿರುವುದಿಲ್ಲ. ಚಿನ್ನ, ಕಬ್ಬಿಣ, ಇಂಗಾಲ, ಹೈಡ್ರೊಜನ್ ಮುಂತಾದವು ಹೀಗಲ್ಲ. ರಾಚನಿಕವಾಗಿ ಇವು ಯಾವುದೇ ತೆರನಾದ ಅಸ್ಥಿರತೆಯನ್ನೂ ಪ್ರದರ್ಶಿಸುವುದಿಲ್ಲ. ಬಾಹ್ಯಕಾರಕದ ಪ್ರಚೋದನೆ ಒದಗಿದಾಗಲೂ ಇವು ಸ್ಥಿರವಾಗಿಯೇ ಉಳಿದಿರುತ್ತವೆ. ಆದ್ದರಿಂದ ಚಿನ್ನದಂಥ ಸ್ಥಿರ ಧಾತುಗಳಿಗೆ ಹೋಲಿಸಿದಾಗ ರೇಡಿಯಮ್ಮಿನಂಥ ಧಾತುಗಳು ಅಸ್ಥಿರವೆಂದೂ ಈ ಅಸ್ಥಿರತೆಯ ರಹಸ್ಯ ಇವುಗಳ ಪರಮಾಣು ಸಂರಚನೆಗಳಲ್ಲಿ ಹುದುಗಿರಬೇಕೆಂದೂ ತರ್ಕಿಸಬಹುದು.

ನೀಲ್ಸ್ ಬೋರ್ ವಿಜ್ಞಾನ ಪ್ರಪಂಚದಲ್ಲಿ ತಮ್ಮ ಅಸ್ತಿತ್ವವನ್ನು ಮೊದಲ ಬಾರಿಗೆ ಟಂಕಿಸಿದ ಸಂದರ್ಭದಲ್ಲಿ — ೨೦ನೆಯ ಶತಮಾನದ ಆರಂಭದ ವರ್ಷಗಳು — ಪರಮಾಣುವಿನ ಹೂರಣದ ಶೋಧನೆ ವಿಜ್ಞಾನಿಗಳ ಎದುರಿದ್ದ ಜ್ವಲಂತ ಸಮಸ್ಯೆಯಾಗಿತ್ತು.

ಶಕಲ ಮತ್ತು ವಿಶೇಷ ಸಾಪೇಕ್ಷತಾ ಸಿದ್ಧಾಂತಗಳು

ಬೆಳಕಿನ ಸ್ವರೂಪ, ವೇಗ ಮುಂತಾದವನ್ನು ಕುರಿತಂತೆ ೧೯ನೆಯ ಶತಮಾನದ ಉತ್ತರಾರ್ಧ

ಭಾಷಣಕಾರ ಬೋರ್

ಬಾಯಿಬಡಕ ಮಾತಾಳಿಯ ಬಗ್ಗೆ ಇಂಗ್ಲೀಷಿನಲ್ಲಿ ಒಂದು ನುಡಿಕಟ್ಟು ಉಂಟು. **He is suffering from constipation of ideas and diarrhoea of words.** (ಭಾವನಾರಿಕ್ತತೆ ಮತ್ತು ಪದಾತಿಸಾರದಿಂದ ಆತ ನರಳುತ್ತಿದ್ದಾನೆ.) ಇದಕ್ಕೆ ವಿರುದ್ಧವಾದ ಸ್ಥಿತಿಯೊಂದಿದ್ದರೆ ಅದು ಹೇಗಿದ್ದೀತು? ಭಾವನೆಗಳ ಚಿಗರೆ ಓಟದೊಡನೆ ಹೊಂದಾಣಿಕೆ ಆಗದಂಥ ಪದಗಳ ಆಮೆನಡಿಗೆ ಪ್ರದರ್ಶಿಸುವ ವಿಚಿತ್ರ ದೃಶ್ಯ. ಬೋರ್ ಮಹಾಶಯ ಇದಕ್ಕೆ ದಿವ್ಯ ನಿದರ್ಶನ.

ಈ ಜಗದ್ಭವ್ಯ ವಿಜ್ಞಾನಿ ಸಾರ್ವಜನಿಕ ಭಾಷಣ ಮಾಡಲು ಎದ್ದುನಿಂತರೆ ಅದು ಬಹುತೇಕ ಅಂಗೋಪಾಂಗಗಳ ವಿವಿಧ ವಿಚಿತ್ರ ಭಂಗಿಗಳಾಗಿಯೂ ''ಮತ್ತು...ಮತ್ತು...'' ಇಲ್ಲವೆ ''ಆದರೆ...ಆದರೆ...'' ಎಂಬ ಸಮುಚ್ಚಯಗಳ ವಿಚ್ಛಿನ್ನ ಶ್ರೇಣಿಯಾಗಿಯೂ ಪ್ರಕಟವಾಗುತ್ತಿದ್ದುದೇ ವಾಡಿಕೆ— ಮಾತಿಗಿಂತ ಉದ್ಗಾರ ಜಾಸ್ತಿ.

ಇದರ ಕಾರಣ ಸ್ಪಷ್ಟ. ಅವರಲ್ಲಿ ಭಾವನೆಗಳು ಪ್ರವಾಹಗಾತ್ರದಲ್ಲಿಯೂ ವಿದ್ಯುದ್ವೇಗ ದಲ್ಲಿಯೂ ಧಾವಿಸುತ್ತಿದ್ದುವು- ಉಚ್ಚಸಾಮರ್ಥ್ಯ ವಿದ್ಯುಜ್ಜನಕದಂತೆ. ಪರಿಪೂರ್ಣತಾವಾದಿ ಯಾದ ಅವರು ಮಾನಸಿಕವಾಗಿ ಅವುಗಳಿಗೆ ಅತ್ಯುತ್ಕೃಷ್ಟ ಭಾಷಾ ಪೋಷಾಕು ತೊಡಿಸಲು ಸೆಣಸುತ್ತಿದ್ದರು— ತಂತಿಯಲ್ಲಿ ಹರಿಯುವ ಉನ್ನತ ವೋಲ್ಟೇಜ್ ವಿದ್ಯುತ್ತನ್ನು ಸಮರ್ಥ ವಾಗಿ ಬಳಿಯಲು ಯುಕ್ತ ಬಲ್ಬನ್ನು ಅರಸುವ ತಾಂತ್ರಿಕನಂತೆ. ಸಾಧಾರಣವಾಗಿ ಇವು ಪರಸ್ಪರ ವಿರುದ್ಧ ಕ್ರಿಯೆಗಳು. ಬೋರ್ ಅವರಲ್ಲಂತೂ. ಇವುಗಳ ನಡುವೆ ಎಂದೂ ಹೊಂದಾಣಿಕೆ ಏರ್ಪಡುತ್ತಿರಲಿಲ್ಲ. ಫಲಿತಾಂಶ? ಅಲ್ಲೊಂದು ವಿನೋದಮಯ ಸನ್ನಿ- ವೇಶದ ಸೃಷ್ಟಿ.

ಪರಿಸ್ಥಿತಿ ಹೀಗಿದ್ದರೂ ಅವರ ನಿಕಟ ಅನುಯಾಯಿಗಳಿಗೆ ಈ ಸಮುಚ್ಚಗಳ ನಡು ವಿನ ತೆರಪುಗಳನ್ನು ಭರ್ತಿ ಮಾಡಬಲ್ಲ ಭಾವನೆಗಳು ಸ್ಫುರಿಸುತ್ತಿದ್ದುವು ಮತ್ತು ಈ ಕಾರಣದಿಂದ ಭಾಷಣದಲ್ಲಿಯ ವಿಚ್ಛಿನ್ನತೆ ಗೊತ್ತೇ ಆಗುತ್ತಿರಲಿಲ್ಲ — ಮನಸ್ಸು-ಮನಸ್ಸುಗಳು ಮೂರ್ತ ಮಾತಿನ ಆಚೆಗಿನ ಅಮೂರ್ತ ಭಾವಸಂವಹನತೆಯಲ್ಲಿ ಕೊಂಡಿಕೊಂಡಿರುವಂಥ ಪರಿಸ್ಥಿತಿ.

ತಮ್ಮ ಈ ದೌರ್ಬಲ್ಯದ ಅರಿವು ಅವರಿಗಿತ್ತು. ಪ್ರತಿಸಲವೂ ಭಾಷಣಾನಂತರ ಆಪ್ತ ಶಿಷ್ಯರನ್ನು ಪ್ರಶ್ನಿಸುವುದಿತ್ತು. ''ಈ ಸಲ ಪರವಾ ಇಲ್ಲ ಎಂದು ಭಾವಿಸಲೇ?''

''ಪರವಾ ಇಲ್ಲ ಮಾತ್ರವಲ್ಲ, ಎಷ್ಟೋ ಉತ್ತಮವಾಗಿತ್ತು'' ಎಂದು ಶಿಷ್ಯರು ಹೇಳಿದರೆ ಅವರಿಗೆ ಸಮಾಧಾನ.

ಈ ಸಾರ್ವಜನಿಕ ಭಾಷಣ ಭಯಂಕರ ವ್ಯಕ್ತಿ ಅತಿ ಚತುರ ಸಂವಾದಕುಶಲಿಯಾಗಿ ದ್ದರು. ನಿಜಕ್ಕೂ ವೈಯಕ್ತಿಕ ಸಂವಾದದಲ್ಲಿ- ತಮ್ಮ ಅಂತರಂಗವನ್ನು ಅತ್ಯಂತ ಸ್ಫುಟ ವಾಗಿ ಬಹಿರಂಗಗೊಳಿಸುವುದರಲ್ಲೂ ಎದುರಿನವನ ಭಾವನೆಯನ್ನು ಅವನಿಗಿಂತ ಚೆನ್ನಾಗಿ ಅದರ ಎಲ್ಲ ಮೂಲಗಳಲ್ಲಿ ಅರ್ಥಮಾಡಿಕೊಳ್ಳುವುದರಲ್ಲೂ- ಇವರಿಗೆ ಸಗೆಲೆಣೆ ಆಗಬಲ್ಲ ವಿಜ್ಞಾನಿ ಇನ್ನೊಬ್ಬ ಇರಲಿಲ್ಲ.

ವಲ್ಲಿ ಹಲವಾರು ನೂತನ ಮತ್ತು ಕ್ರಾಂತಿ ಕಾರಕ ಪ್ರಯೋಗಗಳನ್ನು ಮಾಡಲಾಯಿತು. ಅಂದು ವಿಜ್ಞಾನಿಗಳು ಅಂಗೀಕರಿಸಿದ್ದ ಕೆಲವು ಮೂಲ ಭಾವನೆಗಳಿವು: ಬೆಳಕು ಒಂದು ಶಕ್ತಿ ವಿಶೇಷ — ಶಬ್ದದಂತೆ, ಇದು ಅಲೆರೂಪದಲ್ಲಿ ಚಲಿಸುತ್ತದೆ — ಪುನಃ ಶಬ್ದದಂತೆ ಈ ಅಲೆ ಯನ್ನು ಒಯ್ಯುವ ಮಾಧ್ಯಮ ಈತರ್ — ಶಬ್ದದ ಸಂಚರಣೆಗೆ (propagation) ವಾಯುಮಾಧ್ಯಮವಾಗಿರುವಂತೆ. ಪ್ರಯೋಗ ಲಭ್ಯ ಮಾಹಿತಿಗಳನ್ನು ವ್ಯಾಖ್ಯಾನಿಸಲು ಅವರು ಐಸಾಕ್ ನ್ಯೂಟನ್ (೧೬೪೨-೧೭೨೭) ಸ್ಥಾಪಿಸಿದ್ದ ಸರ್ವಾಪೋಶಕ ವಿಧಿ ಸೂತ್ರ ನಿಯಮಗಳನ್ನು ಆಧರಿಸಿದ್ದರು. ನ್ಯೂಟೋನಿ ಯನ್ ಸಿದ್ಧಾಂತವೆಂಬ ಹೆಸರಿನ ಈ ವ್ಯಾಖ್ಯಾನ ವಿವರಿಸಲಾರದ ಮತ್ತು ವಿವರಿಸ ಲಾಗದ ವಿಶ್ವವ್ಯಾಪಾರವೇ ಇಲ್ಲ ಎಂಬುದು ಪ್ರಚಲಿತ ದೃಢವಿಶ್ವಾಸ. ಆದರೆ ವಿಶ್ವ ಇಂಥ ಯಾವುದೇ ಸಾಚೆಸಿದ್ಧ (stereotyped) ಆಲೇಖ್ಯಕ್ಕೂ ಅಳವಡುವುದಿಲ್ಲ ಎಂಬ ಸಂಗತಿ ವಿಜ್ಞಾನಿಗಳ ಗಮನಕ್ಕೆ ಬಂದಿತು: ಪ್ರಯೋಗ ಹೊರಗೆಡಹಿದ ವಿವರಗಳನ್ನು ನ್ಯೂಟೋನಿ ಯನ್ ಸಿದ್ಧಾಂತ ಸಮರ್ಪಕವಾಗಿ ಅರ್ಥವಿಸ ಲಾಗದೆ ಸೋಲುತ್ತಿತ್ತು. ಈ ವಿಪರ್ಯಾಸ ಪ್ರಯೋಗಾಂತರ್ಗತ ದೋಷದ ಫಲ ಅಲ್ಲ, ಸಿದ್ಧಾಂತಾಂತರ್ಗತ ಸೀಮಿತದ ಸ್ಪಷ್ಟ ಸೂಚನೆ ಎಂಬ ಸಂಗತಿ ಮುಂಚೂಣಿ ಸಂಶೋಧಕರಿಗೆ ವೇದ್ಯವಾಗಿತ್ತು. ನ್ಯೂಟನ್-ಉತ್ತರ ಸಿದ್ಧಾಂತ ವೊಂದರ ಮಂಡನೆಗೆ ಕಾಲ ಪಕ್ವವಾಗಿದ್ದಂತೆ ತೋರಿತು.

೧೯೦೦ ರಲ್ಲಿ ಮ್ಯಾಕ್ಸ್ ಪ್ಲ್ಯಾಂಕ್ ಶಕಲ ಸಿದ್ಧಾಂತವನ್ನೂ (Quantum theory) ೧೯೦೫ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ವಿಶೇಷ ಸಾಪೇಕ್ಷತಾ ಸಿದ್ಧಾಂತವನ್ನೂ (Special theory of Relativity) ಮಂಡಿಸಿದಾಗ ಈ ವಿಪರ್ಯಾಸ ಕೊನೆಗೊಂಡಿತು. ಅಂದರೆ ಪ್ರಯೋಗಲಭ್ಯ ಪುರಾವೆಗಳನ್ನು ಸಂಗತವಾಗಿ ಬೆಸೆದು ಸಮರ್ಪಕವಾಗಿ ವಿವರಿಸಬಲ್ಲ ನೂತನ ಸಿದ್ಧಾಂತಗಳು ಜನಿಸಿದುವು. ಇವು ಶ್ರುತ ಪಡಿಸಿದ ಮುಖ್ಯ ಅಂಶಗಳಿವು:

೧ ವಿಕಿರಣ ಅಲೆರೂಪಿಯಾಗಿಲ್ಲ, ಅದು ವಿವಿಕ್ತ ಶಕ್ತಿ ಪೊಟ್ಟಣಗಳ ಸಂತತ ಧಾರೆ ಯಾಗಿದೆ. ಸ್ವಯಂಚಾಲಿತ ತುಪಾಕಿನಳಿಗೆಯ ಕೊನೆಯಿಂದ ರಟ್ಟುವ ಬಿದಿಗೋಲಿಗಳ ಪ್ರವಾ ಹದ ತೆರದಲ್ಲಿ ವಿಕಿರಣದ ಶಕ್ತಿ ಪೊಟ್ಟಣ ಗಳು ಅದರ ಆಕರದಿಂದ ಸಿಡಿಯುತ್ತವೆ. ಗೋಲಿಯ ಚಲನ ಶಕ್ತಿ ಅಳೆಯಲು ಸಿದ್ಧ ಸೂತ್ರವಿರುವಂತೆ ಪೊಟ್ಟಣದ ಶಕ್ತಿ E ಯನ್ನು ತಿಳಿಯಲು ನೂತನ ಸೂತ್ರವಿದೆ: **E = vh**. ಇಲ್ಲಿ **v** ಆಕಾರದ ಆವರ್ತಾಂಕ (frequency), **h** ಪ್ಲ್ಯಾಂಕನ ನಿಯತಾಂಕ (ಈ ಸೂತ್ರ ಕೊಟ್ಟ ಪ್ಲ್ಯಾಂಕರ ಗೌರ- ವಾರ್ಥ). (ವಸ್ತು ೧ ಸೆಕೆಂಡಿನಲ್ಲಿ ಎಷ್ಟು ಸಲ ಕಂಪಿಸುವುದೋ ಆ ಸಂಖ್ಯೆ ಅದರ ಆವರ್ತಾಂಕ.) ಉದಾಹರಣೆಗೆ ವಿಕಿರಣವನ್ನು ಉತ್ಸರ್ಜಿಸುವ ಮೂರು ಬೇರೆ ಬೇರೆ ಶಕ್ತಿ ಆಕರಗಳನ್ನು ಪರಿ ಶೀಲಿಸೋಣ: ಮೊದಲನೆಯದು ಉಷ್ಣವನ್ನೂ ಎರಡನೆಯದು ಬೆಳಕನ್ನೂ ಮೂರನೆಯದು ಎಕ್ಸ್ ಕಿರಣಗಳನ್ನೂ ಪ್ರಸರಿಸಲಿ. ಈ ಮೂರು ಆಕರಗಳ ಪೈಕಿ ಉಷ್ಣದ ಆವರ್ತಾಂಕ ಕನಿಷ್ಠ, ಬೆಳಕಿನದು ಮಧ್ಯಮ, ಎಕ್ಸ್‌ಕಿರಣಗಳದು ಗರಿಷ್ಠ. **E = vh** ಸೂತ್ರ ಆಯಾ ವಿಕಿರಣ ಪ್ರಕಾರದ ಶಕ್ತಿಯ ಮೊತ್ತವನ್ನು ಸೂಚಿಸುತ್ತದೆ.

೨ ವಿಕಿರಣದ ಒಂದು ಪ್ರಕಾರವಾದ ಬೆಳಕು ಕೂಡ ಕಣರೂಪಿಯಾಗಿದೆ. ಇದರ ಕಣಗಳಿಗೆ ಫೋಟಾನು(ದ್ಯುತಿಕಣ)ಗಳೆಂದು ಹೆಸರು. ಫೋಟಾನಿನ ವೇಗ ಒಂದೋ — ಚಲನ ರಾಹಿತ್ಯ; ಇಲ್ಲವೇ c - ಪೂರ್ಣ ಚಲನೆ (c = ಸೆಕೆಂಡಿಗೆ ೩೦೦,೦೦೦ ಕಿ.ಮೀ.) ಇವೆರಡರ ನಡುವಿನ ವೇಗ ಅದಕ್ಕಿಲ್ಲ. ವಿಶ್ವದಲ್ಲಿಯ ಗರಿಷ್ಠ ವೇಗ c.

೩ ಈತರ್ ಎಂಬುದು ಇಲ್ಲ. ವಾಸ್ತವವಾಗಿ ಬೆಳಕು ಚಲಿಸಲು ಮಾಧ್ಯಮ ಅನವಶ್ಯ. ಬೆಳಕು (ವ್ಯಾಪಕವಾಗಿ ವಿಕಿರಣ) ನಿರ್ದ್ರವ್ಯತೆಯಲ್ಲಿ (vacuum) ಚಲಿಸುವ ಶಕ್ತಿ ವಿಶೇಷ. ಅಲ್ಲಿ ಇದರ ವೇಗ c.

೪ ವಿಶ್ವ ನಮಗೆ ರಾಶಿ ಮತ್ತು ಶಕ್ತಿ

(mass and energy) ಎಂಬ ಎರಡು ಬಗೆಗಳಲ್ಲಿ ಪ್ರಕಟವಾಗುವುದು ಸರಿಯಷ್ಟೆ. ಕಲ್ಲು, ನೀರು, ಗಾಳಿ ರಾಶಿಗೂ ಬೆಳಕು, ವಿದ್ಯುತ್ತು, ಬೀಳುವ ನೀರು (ಅಂದರೆ ಇದರಲ್ಲಿ ನಿಹಿತವಾಗಿರುವ ಕಾರ್ಯನಿರ್ವಹಣ ಗುಣ) ಶಕ್ತಿಗೂ ಉದಾಹರಣೆಗಳು. ಆದರೆ ಈ ದ್ವೈತತತ್ತ್ವ ಕೇವಲ ಮೇಲು ನೋಟದ ದೃಶ್ಯ, ಇವನ್ನು ಬಂಧಿಸುವ ಸೂತ್ರವಿದೆ. ಅದೇ ಜಗತ್ಪ್ರಸಿದ್ಧ $E = mc^2$. ಇಲ್ಲಿ E ಎಂಬುದು m ಮೊತ್ತದ ರಾಶಿಯಲ್ಲಿ 'ಘನೀಭವಿಸಿರುವ' ಶಕ್ತಿ. ಐನ್‌ಸ್ಟೈನ್ ಈ ಸೂತ್ರದ ಆವಿಷ್ಕರ್ತೃ.

ವಿಶ್ವದ ಸಮಸ್ತ ಭೌತವೃತ್ತಾಂತವೂ ನ್ಯೂಟನ್‌ಪ್ರಣೀತ ವ್ಯಾಖ್ಯಾನದ ಪರಿಮಿತಿಯೊಳಗೇ ವಿವರಣೆಗೆ ಒಳಪಡುತ್ತದೆ, ಆದ್ದರಿಂದ ಭೌತವಿಜ್ಞಾನ ರಂಗದಲ್ಲಿ ಅನ್ವೇಷಣೆಗೆ ಉಳಿದಿರುವ ವಿಷಯ ಏನೂ ಇಲ್ಲ ಎಂದು ಭಾವಿಸಿ ಪೂರ್ಣ ಸಂತೃಪ್ತ ಸ್ಥಿತಿ ಐದಿದ್ದ ಅಧಿಕಸಂಖ್ಯಾತ ವಿಜ್ಞಾನಿಗಳ ಎದುರು ಶಕಲ ಮತ್ತು ವಿಶೇಷ ಸಾಪೇಕ್ಷತಾ ಸಿದ್ಧಾಂತಗಳು ಪ್ರಚಂಡ ಕ್ರಾಂತಿಯನ್ನೇ ಅನಾವರಣಗೊಳಿಸಿದುವು. ಗೋಚರ ಜಗತ್ತನ್ನು ವಿವರಿಸಲು ನ್ಯೂಟನ್ನನ ಅಭಿಜಾತ ಭೌತವಿಜ್ಞಾನ (classical physics), ಅಣು ಪರಮಾಣು ಲೋಕದ ಅಗೋಚರ ಜಗತ್ತನ್ನು ವ್ಯಾಖ್ಯಾನಿಸಲು ಪ್ಲ್ಯಾಂಕ್ ಮತ್ತು ಐನ್‌ಸ್ಟೈನ್ ಪ್ರವರ್ತಿಸಿದ ನವಜಾತ ಅಥವಾ ಆಧುನಿಕ ಭೌತವಿಜ್ಞಾನ (modern physics) ಎಂಬ ಸ್ಪಷ್ಟ ವಿಭೇದೀಕರಣ ಈ ಕ್ರಾಂತಿಯ ಫಲ: ಮರ ಕಡಿಯುವ ಒರಟು ಕಜ್ಜಕ್ಕೆ ಕತ್ತಿ, ರೋಮ ಸವರುವ ನವುರು ಕೆಲಸಕ್ಕೆ ಅಲಗು ಹೇಗೋ ಹಾಗೆ.

ಎಂಥ ಪ್ರಬಲ ದೃಕ್ಸೂಕ್ಷ್ಮದರ್ಶಕವೂ ಪರಮಾಣುವಿನ ಆಕಾರವನ್ನು ಲಂಬಿಸಿ ಬಿಂಬಿಸಲಾರದು. ಗುಂಡು ಸೂಜಿಯ ಮೊನೆಯ ಮೇಲೆ ಹಲವು ಸಾವಿರ ಪರಮಾಣುಗಳು ಸುಲಭ ಸಹಜೀವನ ನಡೆಸಬಲ್ಲವು — ಅಷ್ಟು ಸೂಕ್ಷ್ಮ ಅವುಗಳ ಗಾತ್ರ. ಆದ್ದರಿಂದ ಈ ಸೂಕ್ಷ್ಮ ಪ್ರಪಂಚದ ರೀತಿ ರಿವಾಜು ತಿಳಿಯಲು ಮತ್ತು ತಿಳಿದು ವಿವರಿಸಲು ಅಲ್ಲಿಗೆ ಒಪ್ಪುವ ಪರಿಭಾಷೆಯನ್ನು ಸೃಷ್ಟಿಸುವುದು ಅನಿವಾರ್ಯವಾಯಿತು — ಗಲಿವರ್ ದೇಶಪರ್ಯಟನೆಯ ವೇಳೆ ಬ್ರಾಬ್ಡಿಂಗ್

ಹಿರಿಮಗನ ಸಾವು

ಬೋರ್ ದಂಪತಿಗಳಿಗೆ ಐವರು ಮಕ್ಕಳು. ಹಿರಿಯನ ಹೆಸರು ಕ್ರಿಶ್ಚಿಯನ್. ಆಟ, ಓಟ, ಪಾಠ, ಸಾಮೂಹಿಕ ವರ್ತನೆ, ಜೀವನೋಲ್ಲಾಸ ಒಂದೊಂದರಲ್ಲಿಯೂ ಈತ ತಂದೆಯ ಯಥಾ ಬಡಿ ಪ್ರತಿ, ಮನೆಯ ಕಣ್ಮಣಿ, ಭವಿಷ್ಯದ ಆಶಾಕಿರಣ. ಬಲು ಜಾಣ. ಮೆಟ್ರಿಕ್ಯುಲೇಶನ್ ಪರೀಕ್ಷೆ. ಚೆನ್ನಾಗಿ ಬರೆದುದಾಯ್ತು. ಎಂದಿನಂತೆ ಗೆಳೆಯರ ಜೊತೆ ದೋಣಿ ವಿಹಾರಕ್ಕೆ ಹೋಗಿದ್ದಾನೆ. ಚುಕ್ಕಾಣಿ ಹಿಡಿದಿದ್ದಾನೆ: ದೋಣಿ ಸಾಗಿದೆ, ಮುಂದೆ ಹೋಗಿದೆ...ಅಷ್ಟರಲ್ಲಿ ಪ್ರಚಂಡ ತರಂಗ ಬಡಿದು ಇವನನ್ನು ಅಪ್ಪಳಿಸಿದೆ. ಮತ್ತೆಂದೂ ಮರಳಲು ಅವಕಾಶವಿರದ ದೂರ ತೀರಕ್ಕೆ ಕೊಂಡೊಯ್ದಿದೆ.

ಈ ಅನಿರೀಕ್ಷಿತ ಆಘಾತದಿಂದ ಬೋರ್ ಕುಟುಂಬ ತತ್ತರಿಸಿಹೋಯಿತು. ಬಂಧು-ಬಾಂಧವರ, ಇಷ್ಟ ಮಿತ್ರರ, ಶಿಷ್ಯ ಅಭಿಮಾನಿಗಳ ಅನುಕಂಪದ ಪ್ರವಾಹ ಕೋಟಿಯೋಪಾದಿ ಹರಿದು ಬಂದು ಇವರಿಗೆ ಸಾಂತ್ವನ ನೀಡಿತು. ಬುದ್ಧನ 'ಸಾವಿಲ್ಲದಾ ಮನೆಯ ಸಾಸಿವೆಯ ತಾರಮ್ಮ' ಆಖ್ಯಾನಕದಿಂದ ಪ್ರಭಾವಿತರಾಗಿದ್ದ ಬೋರ್ ಈ ದುರಂತದ ವೇದನೆಯನ್ನು ತತ್ತ್ವಜ್ಞಾನಿಯ ಮನಸ್ಥೈರ್ಯದಿಂದ ಸಹಿಸಿಕೊಂಡರು.

ನ್ಯಾಗಿನ ಸ್ಥೂಲದೇಹಿಗಳ ಜೊತೆ ಮಾತಾಡಿದ ಭಾಷೆಯೇ ಬೇರೆ, ಲಿಲ್ಲಿಪುಟ್ಟಿನ ಸೂಕ್ಷ್ಮಕಾಯರ ಜೊತೆ ವ್ಯವಹರಿಸಿದ ಪರಿಯೇ ಬೇರೆ. ಹೀಗೆ ಪರಮಾಣು ಪ್ರಪಂಚವನ್ನು ಅರ್ಥವಿಸಲು ಆಧುನಿಕ ಭೌತವಿಜ್ಞಾನದ ನೂತನ ಪರಿಭಾಷೆಯೊಂದೇ ಶರಣು ಎಂಬ ಭಾವನೆ ಮುಂಚೂಣಿ ವಿಜ್ಞಾನಿಗಳಿಗೆ ಸ್ಪಷ್ಟವಾಯಿತು. ಈ ಪರ್ವಕಾಲದಲ್ಲಿ — ೨೦ ನೆಯ ಶತಮಾನದ ಮೊದಲ ದಶಕದಲ್ಲಿ — ನೀಲ್ಸ್ ಬೋರ್ ರಂಗ ಪ್ರವೇಶಿಸಿದರು.

ಮಹಾಶಕ್ತಿಗಳ ಸಂಗಮ

ಅಂದು ಇಂಗ್ಲೆಂಡ್ ಪ್ರಪಂಚದ ವಿಜ್ಞಾನ ಕೇಂದ್ರ. ನ್ಯೂಟನ್ ಪರಂಪರೆಯ ಈ ಭವ್ಯ ನಾಡಿನಲ್ಲಿ ಜೋಸೆಫ್ ಜಾನ್ ತಾಮ್ಸನ್ (೧೮೫೬-೧೯೪೦) ವಿಜ್ಞಾನಿಗಳ ರಾಜ, ಆಧುನಿಕ ಭೌತವಿಜ್ಞಾನದ ಪ್ರವರ್ತಕ, ವಿದ್ಯಾರ್ಥಿಗಳಿಗೆ ಪ್ರೀತಿಯ ಜೆಜೆ, ಉಪಪರಮಾಣವಿಕ ಕಣ (subatomic particle—ಪರಮಾಣುವಿನ ಒಂದು ಘಟಕ ಕಣ) ಎಲೆಕ್ಟ್ರಾನನ್ನು ಆವಿಷ್ಕರಿಸಿ ಪರಮಾಣುವಿನ ಭದ್ರ ಕೋಟೆಯ ಸರಹದ್ದನ್ನು ದಾಟಿದ ಮೊದಲಿಗ. ವಿದ್ಯುತ್ತು ಎಂಬುದು ಎಲೆಕ್ಟ್ರಾನುಗಳ ಪ್ರವಾಹ, ಪರಮಾಣುವಿನ ಬೀಜದ (nucieus) ಸುತ್ತ ಎಲೆಕ್ಟ್ರಾನುಗಳು ವಿವಿಧ ಚಿಪ್ಪುಗಳನ್ನು ನೇಯುತ್ತಿವೆ, ಎಲೆಕ್ಟ್ರಾನ್ ಒಂದು ಋಣವಿದ್ಯುದಾವಿಷ್ಟ ಕಣ (negatively charged particle) ಎಂದು ಮುಂತಾಗಿ ಇಂದು ನಮಗೆ ಗೊತ್ತಿದೆ. ಆದರೆ ಪ್ರಸಕ್ತ ಶತಮಾನದ ಆದಿಯಲ್ಲಿ ಈ ಯಾವ ವಿವರಗಳೂ ತಿಳಿದಿರಲಿಲ್ಲ. ವಿಜ್ಞಾನಿಗಳೆಲ್ಲರೂ ಅರಿಯದ ನಾಡಿನಲ್ಲಿ, ಇಲ್ಲದ ಹಾದಿಯಲ್ಲಿ, ತಿಳಿಯದ ಕ್ರಮದಿಂದ, ಪರಡಿ ನಡೆಯುತ್ತಿದ್ದ ಜಿಜ್ಞಾಸುಗಳಾಗಿದ್ದರು. ವಿಜ್ಞಾನದ ವಿಧಾನ ಪದ್ಧತಿಯೂ ತಮ್ಮ ತಾರ್ಕಿಕ ಸಾಮರ್ಥ್ಯದಲ್ಲಿಯೂ ದೃಢ ಭರವಸೆ ಮಾತ್ರ ಇವರ ಬಂಡವಾಳ.

ನೀಲ್ಸ್ ಬೋರ್ ೧೯೦೯ರಲ್ಲಿ ಭೌತವಿಜ್ಞಾನದಲ್ಲಿ ಮಾಸ್ಟರ್ಸ್ ಪದವಿ ಪಡೆದು ಒಡನೆ ಡಾಕ್ಟೊರೇಟ್ ಮಹಾ ನಿಬಂಧ ರಚನೆಗೆ ಮುಂದಾದರು: ಪ್ರಯೋಗ ನಿರ್ವಹಣೆ, ಲಭ್ಯ ಪುರಾವೆಗೆ ಯೋಗ್ಯ ವ್ಯಾಖ್ಯಾನ ಮಂಡನೆ, ಈ ವ್ಯಾಖ್ಯಾನ ಬಿತ್ತರಿಸಿದ ಕನ್ನೆನೆಲದಲ್ಲಿ ಮತ್ತೆ ಪ್ರಯೋಗ ಈ ಧಾಟಿಯಲ್ಲಿ ಮಹಾ ನಿಬಂಧದ ಸಿದ್ಧತೆ ಮುಂದುವರಿಯಿತು. ಅವರು ಆಯ್ದುಕೊಂಡಿದ್ದ ವಿಷಯ 'ಲೋಹಗಳ ಎಲೆಕ್ಟ್ರಾನ್ ಸಿದ್ಧಾಂತ.' ೧೯೧೧ರಲ್ಲಿ ಡಾಕ್ಟೊರೇಟ್ ದೊರೆಯಿತು. ಅಪ್ರಸಿದ್ಧ ಡೇನಿಶ್ ಭಾಷೆಯಲ್ಲಿ ಬರೆಯಲಾಗಿದ್ದ ಈ ಮಹಾ ನಿಬಂಧ ಈ ಕಾರಣದಿಂದ ಪ್ರಪಂಚದ ಮಹಾ ವಿಜ್ಞಾನಿಗಳ ಗಮನಕ್ಕೆ ಬರದೆ ಉಳಿಯುವಂತಾಯಿತಲ್ಲ ಎಂಬ ಹತಾಶೆಯನ್ನು ಇವರ ಗುರು ಕ್ರಿಶ್ಚಿಯನ್ಸನ್ ವ್ಯಕ್ತಪಡಿಸಿದರು.

ಈ ನಿಬಂಧದಲ್ಲಿ ಬೋರ್ ಜೆಜೆಯವರ ಕೆಲವು ತೀರ್ಮಾನಗಳ ಸಾಧುತ್ವವನ್ನು ತೀವ್ರ ವಿಮರ್ಶೆಗೆ ಒಳಪಡಿಸಿದ್ದರು. ಅವರು ಮಾಡಿದ್ದ ಹಲವು ಗಣನೆಗಳನ್ನು ಪರಿಷ್ಕರಿಸಿ ಸುಧಾರಿಸಿದ್ದರು. ಜೆಜೆಯವರಂಥ ಹಿರಿಯ ವಿಜ್ಞಾನಿ ಆಸೆ ನಡೆ ಇಟ್ಟು ಸಾಗುತ್ತಿದ್ದ ಕೇಂಬ್ರಿಜ್ಜಿನ ಕ್ಯಾವೆಂಡಿಶ್ ಪ್ರಯೋಗಮಂದಿರದಲ್ಲಿ ತಾನು ಅವರ ವಿದ್ಯಾರ್ಥಿಯಾಗಿ ಸಂಶೋಧನೆ ನಡೆಸಬೇಕೆಂಬುದು ಇವರ ಬಯಕೆ. ಈ ದಿಶೆಯಲ್ಲಿ ಕಾರ್ಲ್ಸ್‌ಬರ್ಗ್ ಫೌಂಡೇಶನ್ ಒದಗಿಸಿದ ವಿದ್ಯಾರ್ಥಿ ವೇತನ ನೆರವಿಗೆ ಬಂದದ್ದರಿಂದ ಇವರು ಕೇಂಬ್ರಿಜ್ ವಿಶ್ವವಿದ್ಯಾಲಯ ಪ್ರವೇಶಿಸುವದು ಸುಲಭವಾಯಿತು (ಸೆಪ್ಟೆಂಬರ್ ೧೯೧೧). ಆ ವೇಳೆಗೆ ತಮ್ಮ ಮಹಾ ನಿಬಂಧದ ಇಂಗ್ಲಿಷ್ ಅವತರಣಿಕೆಯನ್ನು ಸಿದ್ಧಪಡಿಸಿ ಜೊತೆಯಲ್ಲಿ ಒಯ್ದಿದ್ದರು. ಇಂಗ್ಲಿಷ್ ಭಾಷೆಯ ಹಾಗೂ ನಡವಳಿಕೆಗಳ ಬಗೆಗೆ ತಮಗಿದ್ದ ಅಲ್ಪ ಜ್ಞಾನದ ಕೊರತೆ ತುಂಬಲು ಚಾರ್ಲ್ಸ್ ಡಿಕನ್ಸ್ ಬರೆದ 'ಡೇವಿಡ್ ಕಾಪರ್‌ಫೀಲ್ಡ್' ಕಾದಂಬರಿಯನ್ನು ವಿದ್ಯಾರ್ಥಿಯ ಕುತೂಹಲದಿಂದಲೂ ಸಂಶೋಧಕನ ನಿಷ್ಠೆಯಿಂದಲೂ ಪಠಿಸಿದರು. ಕೆಂಪು ನಿಘಂಟೊಂದನ್ನು ಸದಾ ಒಡನಾಡಿಯಾಗಿ ಇಟ್ಟುಕೊಂಡರು. ನಡೆ ನುಡಿ ಬಗೆ ಪ್ರತಿಯೊಂದರಲ್ಲಿಯೂ ಪರಿಪೂರ್ಣತೆ ಮತ್ತು ಪರಿಷ್ಕಾರ ಇವರ ಬಾಳಿನ ಸೂತ್ರ.

ಕ್ಯಾವೆಂಡಿಶ್ ಅಂದು ಭಾರಿ ಗೊಂದಲದ ಸಂತೆ. ಲಾರ್ಮರ್, ಜೀನ್ಸ್ ಮೊದಲಾದ

ಹಿರಿಯ ಭೌತವಿಜ್ಞಾನಿಗಳು ಇಲ್ಲಿಯ ಪ್ರಮುಖರು. ತತ್ಪೂರ್ವ ಜೆಜೆಯವರ ಶಿಷ್ಯ ಆಗಿದ್ದ ಅರ್ನೆಸ್ಟ್ ರುದರ್ಫರ್ಡ್ (೧೮೭೧-೧೯೩೭) ಮ್ಯಾಂಚೆಸ್ಟರಿನಿಂದ ಇಲ್ಲಿಗೆ ಆಗಾಗ ಬರುತ್ತಿದ್ದರು. ಪ್ರಪಂಚದ ಇತರ ಮಹಾ ಭೌತವಿಜ್ಞಾನಿಗಳು ಇಲ್ಲಿ ಸಭೆ ಸೇರಿ ಪರಮಾಣು ಪ್ರಪಂಚದ ತಪಶೀಲು ಪಟ್ಟಿಯನ್ನು (inventory) ಪರಿಶೀಲಿಸುತ್ತಿದ್ದರು. ವಾಸ್ತವವಾಗಿ ಪರಮಾಣು ಇವರೊಂದಿಗೆ ಚಕ್ಕಂದವಾಡುತ್ತಿತ್ತು — ಮಾಯಾಮೃಗಲಾಸ್ಯದಂತೆ. ಎಲ್ಲರೂ ಕುರುಡರೇ. ಪ್ರತಿಯೊಬ್ಬನೂ ಪರಮಾಣುವೆಂಬ ಆನೆಯ ತುಣುಕು ಮಾಹಿತಿ ಸಂಗ್ರಹಿಸಿದ್ದ. ಬಿಡಿಬಿಡಿಯಾಗಿ ಈ ಮಾಹಿತಿಗಳು ಯಾವ ಚಿತ್ರವನ್ನೂ ರೂಪಿಸುತ್ತಿರಲಿಲ್ಲ. ಹೀಗಾಗಿ ಗೊಂದಲ ಸಂದೇಹ ತಳಿಬೇನೆ ದೈನಂದಿನ ಒಡನಾಡಿಗಳಾಗಿದ್ದುವು. ಅಲ್ಪ ಮಾಹಿತಿಗಳ ಘೋರಿ ಕಲಸಿನಿಂದ ಸಮಗ್ರತೆಯ ಖಚಿತ ಎಳೆಗಳನ್ನು ಆಯಬಲ್ಲ ದ್ರಷ್ಟಾರ ಇನ್ನೂ ರಂಗ ಪ್ರವೇಶಿಸಿರಲಿಲ್ಲ.

ಪರಮಾಣು ಬಾಂಬ್ ನಿರ್ಮಾಣಕ್ಕೆ ಚಾಲನೆ

ಪರಮಾಣು ಬೀಜದ ವಿದಳನದಿಂದ (fission—ಪರಮಾಣುವಿನ ಬೀಜಕ್ಕೆ ನ್ಯೂಟ್ರಾನ್ ಕಣಗಳನ್ನು ಬಂಬಾಯಿಸಿ ಅದನ್ನು ಒಡೆಯುವ ಪ್ರಕ್ರಿಯೆ; ಈ ಒಡೆತದಿಂದ ಉಂಟಾಗುವ ರಾಶಿನಷ್ಟ $E=mc^2$ ಸೂತ್ರ ತಿಳಿಸುವ ರೀತಿಯಲ್ಲಿ ಪ್ರಚಂಡ ಶಕ್ತಿಯಾಗಿ ಹೊಮ್ಮುತ್ತದೆ) ಹಿಂದೆಂದೂ ಸಾಧಿಸದಿದ್ದ ಅಗಾಧ ಪ್ರಮಾಣದಲ್ಲಿ ಶಕ್ತಿ ಪಡೆಯುವುದು ಸಾಧ್ಯ ಎಂದು ಪ್ರಾಯೋಗಿಕವಾಗಿ ತಿಳಿಯಿತು. (೧೯೩೪).

ಜರ್ಮನಿಯ ಆಟೊಹ್ಯಾನ್ ಇದೇ ಪ್ರಯೋಗವನ್ನು ಪುನರಾವರ್ತಿಸಿ ಹಲವಾರು ಹೊಸ ಸಂಗತಿಗಳನ್ನು ಗುರುತಿಸಿ (೧೯೩೮) ಆ ವೇಳೆಗೆ ಜರ್ಮನಿಯನ್ನು ತೊರೆದು ಸ್ವೀಡನ್ನಿನಲ್ಲಿ ಆಶ್ರಯ ಪಡೆದಿದ್ದ ತಮ್ಮ ಮಾಜಿ ಸಹವರ್ತಿ ಮತ್ತು ಯಹೂದ್ಯ ಕುಲಜೆ ಲೈಸ್ ಮೈಟ್ನರ್ ಅವರಿಗೆ ಅದನ್ನು ಗುಟ್ಟಾಗಿ ರವಾನಿಸಿದರು. ಈ ರಹಸ್ಯ ದಾಖಲೆ ಮೈಟ್ನರ್ ಕೈಸೇರುವ ಹೊತ್ತಿಗೆ ಈಕೆಯ ಸೋದರಳಿಯ ಆಟೋರಾಬರ್ಟ್ ಫ್ರಿಶ್ ಕೆಲವು ದಿನ ಹಾಯಾಗಿ ಅತ್ತೆಯ ಜೊತೆ ಇರೋಣವೆಂದು ಅಲ್ಲಿಗೆ ಬಂದಿದ್ದರು. ಫ್ರಿಶ್ ಆಗ ಕೋಪನ್‌ಹೇಗನ್ನಿನಲ್ಲಿ ಬೋರ್ ನಿರ್ದೇಶನದಲ್ಲಿ ಸಂಶೋಧನೆ ಮಾಡುತ್ತಿದ್ದರು.

ಸ್ಟಾಕ್‌ಹೋಮಿನ ಬಹಿರ್ವಲಯದ ಹಿಮಾಚ್ಛಾದಿತ ಅರಣ್ಯದ ಶಾಂತ ಪರಿಸರದಲ್ಲಿ ಅತ್ತೆ ಮತ್ತು ಅಳಿಯ. ಹ್ಯಾನ್ ಅವರಿಂದ ಬಂದಿದ್ದ ಮಾಹಿತಿಗಳ ಸೂಕ್ಷ್ಮವನ್ನು ಸರ್ವಂಕಷವಾಗಿ ಪರಿಶೀಲಿಸಿದರು. ಹ್ಯಾನ್ ಸಾಧಿಸಿದ್ದು ಖಾತ್ರಿ ಯುರೇನಿಯಮ್ ವಿದಳನವನ್ನೇ ಎಂದು ತೀರ್ಮಾನಿಸಿ ತಮ್ಮ ವಾದವನ್ನು ತಾಂತ್ರಿಕ ನಿಬಂಧ ರೂಪಕ್ಕೆ ಸೇರ್ಪುಗೊಳಿಸಿದರು (೧೯೩೯). ಇದೇನೂ ಸಾಮಾನ್ಯ ವಾದವಾಗಿರಲಿಲ್ಲ: ಪ್ರಪಂಚವನ್ನು ಪರಮಾಣು ಯುಗಕ್ಕೆ ಆವಾಹಿಸಿದ ವಾದ. ಪರಮಾಣು ಶಕ್ತಿಯನ್ನು ಮಾನವ ಹಿಡಬಲ್ಲ ಎಂಬುದನ್ನು ಪ್ರಕಟಿಸಿದ ವಾದ. ಊಹಾತೀತ ಭವಿಷ್ಯ ಸಾಧ್ಯತೆಗಳನ್ನು ಒಳಗೊಂಡಿದ್ದ ವಾದ. ಪರಾತ್ಪರನ ಜ್ಞಾನ ಸೀಮೆಯನ್ನು ಅತಿಶಯ ಲಂಬನಗೊಳಿಸಿದ ವಾದ. ಕೆಲವು ದಿನಗಳ ತರುವಾಯ ಫ್ರಿಶ್ ಕೋಪನ್‌ಹೇಗನ್ನಿಗೆ ಮರಳಿದರು. ನೇರ ಗುರುವಿನೆಡೆಗೆ ಧಾವಿಸಿದರು. ತಮ್ಮ ನೂತನ ಆವಿಷ್ಕಾರವನ್ನು ಅರುಹೋಣವೆಂದು. ಬೋರ್ ಆಗ ಅಮೇರಿಕಕ್ಕೆ ಪಯಣಿಸುವ ತರಾತುರಿಯಲ್ಲಿದ್ದರು. ವಾಸ್ತವವಾಗಿ ಕೇವಲ ಕೆಲವೇ ಮಿನಿಟುಗಳಿಗಿಂತ ಹೆಚ್ಚು ಅವಕಾಶ ಉಳಿದಿರಲಿಲ್ಲ. ಅಷ್ಟರೊಳಗೇ ಫ್ರಿಶ್

ಈ ಹುಚ್ಚರಾಸ್ಪತ್ರೆಯಲ್ಲಿ ಜೆಜೆಯವರು ನಿರ್ವಹಿಸಬೇಕಾಗಿದ್ದ ಕರ್ತವ್ಯಗಳು ಅವೆಷ್ಟೊ. ಬೋರ್ ಬರೆದ ಡಾಕ್ಟೊರಲ್ ಮಹಾ ನಿಬಂಧ ಓದಲು. ಇವರೊಡನೆ ಸಂಶೋಧನ ಸಮಸ್ಯೆ ಕುರಿತು ಚರ್ಚಿಸಲು ಮತ್ತು ಇವರಿಗೆ ಯುಕ್ತ ಮಾರ್ಗದರ್ಶನವೀಯಲು ಅವರಿಗೆ ಬಿಡುವೇ ಇರುತ್ತಿರಲಿಲ್ಲ. ಮುಂದೇನು ?

ವಿಕಿರಣದ ಸಮಸ್ಯೆಯನ್ನು ಅಭಿಜಾತ ಭೌತ ವಿಜ್ಞಾನದ (ಅಂದರೆ ನ್ಯೂಟೋನಿಯನ್ ಚೌಕಟ್ಟು) ನೆಲೆಯಲ್ಲಿ ಪರಿಹರಿಸಬೇಕು — ಇದು ಸಂಪ್ರದಾಯಶರಣರಾದ ಜೆಜೆ ಪಂಥೀಯರ ನಿಲವು. ಈ ಆಧಾರ ಭಾವನೆಯಿಂದ ಮುಂದುವರಿದದ್ದಾದರೆ ಅಸಂಖ್ಯ ವ್ಯಾಘಾತಗಳು (contradictions) ಎದುರಾಗುವುದು ಖರೆ, ಪರಮಾಣು ಎಂದೂ ತನ್ನ ರಹಸ್ಯ ಬಿಟ್ಟುಕೊಡದು ಎಂಬುದು ಬೋರ್ ಮೊದಲಾದ ಆಧುನಿಕ ಭೌತ ವಿಜ್ಞಾನದ (ಅಂದರೆ ಶಕಲ ಮತ್ತು ವಿಶೇಷ ಸಾಪೇಕ್ಷತಾ ಸಿದ್ಧಾಂತಗಳು ವ್ಯಾಖ್ಯಿಸುವ

ಸ್ಥೂಲವಾಗಿ ತಮ್ಮ ವಾದಸಾರವನ್ನು ರೇಖಿಸಿದರು. ಪ್ರಚಂಡ ಪ್ರಖರಮತಿ ಬೋರ್ ಒಡನೆ ಸಮಗ್ರ ಚಿತ್ರ ಗ್ರಹಿಸಿ ಉದ್ಗರಿಸಿದರು. "ಓ ನಾವೆಲ್ಲ ಎಂಥ ಬೆಪ್ಪರಾಗಿದ್ದೆವು. ಅಹಾ! ಇದು ಪರಮಾದ್ಭುತ. ನಿಸರ್ಗ ಹೇಗಿರಬೇಕೋ ಹಾಗೆಯೇ ಇದೆ. ನಾವು ಮಾತ್ರ ಕಣ್ಣು ತೆರೆದಿರಲಿಲ್ಲ, ಅಷ್ಟೆ. ಇದರ ಬಗ್ಗೆ ನೀವೂ ಮೈಟ್ನರರೂ ಸಂಶೋಧನ ಪ್ರಬಂಧ ಬರೆದಿರುವಿರಷ್ಟೆ?"

"ಇಲ್ಲ. ಒಡನೆ ಬರೆಯುತ್ತೇವೆ."

"ಸರಿ ಹಾಗೆ ಮಾಡಿ. ಅದು ಪ್ರಕಟವಾಗುವ ತನಕ ನಾನು ಇದರ ವಿಷಯ ಪ್ರಸ್ತಾಪಿಸುವುದಿಲ್ಲ."

ಮುಂದಿನ ಕೆಲವೇ ಕ್ಷಣಗಳಲ್ಲಿ ಬೋರ್ ಅಮೆರಿಕಗಾಮಿ ಹಡಗೇರಿದ್ದರು.

ಮೈಟ್ನರ್-ಫ್ರಿಶ್ ಪ್ರಬಂಧ ಫೆಬ್ರುವರಿ ೧೯೩೯ರಲ್ಲಿ ಪ್ರಕಟವಾಯಿತು. ಆದರೆ ಆ ಮೊದಲೇ ಪರಮಾಣು ಬೀಜ ವಿದಳನೆಯ ರಹಸ್ಯ ಬಯಲಾಗಿ ಹೋಗಿತ್ತು. ಹೇಗೆ?

ಕಡಲಯಾನದ ವೇಳೆ ಬೋರ್ ಜೊತೆ ಅವರ ಶಿಷ್ಯ ರೋಸೆನ್‌ಫೆಲ್ಡ್ ಇದ್ದರು. ತಮ್ಮ ಎಂದಿನ ದಕ್ಷತೆ ಮತ್ತು ಪರಿಪೂರ್ಣತೆಗಳಿಂದ ಬೋರ್ ಬೈಜಿಕ ವಿದಳನೆಯನ್ನು (**Nuclear fission**) ಇವರೊಂದಿಗೆ ಚರ್ಚಿಸಿದರು. ಆದರೆ ಈ ಮಾತುಕತೆ ವೇಳೆ ಒಂದು ಮುಖ್ಯ ಸಂಗತಿ ಮರೆತಿದ್ದರು: ಇದು ರಹಸ್ಯ ವಿಷಯ. ಮೈಟ್ನರ್-ಫ್ರಿಶ್ ಸಂಶೋಧನ ಪ್ರಬಂಧ ಪ್ರಕಟವಾಗುವ ತನಕ ಬಿತ್ತರಿಸಲ್ಪಡತಕ್ಕದ್ದಲ್ಲ ಎಂಬುದನ್ನು ರೋಸೆನ್‌ಫೆಲ್ಡರಿಗೆ ಹೇಳಿರಲಿಲ್ಲ. ಇವರಾದರೂ ಯೋಚನೆ ಮಾಡಿದ್ದೇನು? ಅದಾಗ ತಾನೇ ಪ್ರಕಟವಾದ ಆದರೆ ತಾನಿನ್ನೂ ನೋಡಿರದ ಬಿಸಿ ಬಿಸಿ ಸುದ್ದಿಯನ್ನು ಬೋರ್ ತನ್ನೊಡನೆ ಆತ್ಮೀಯವಾಗಿ ವಿನಿಮಯಿಸಿದ್ದರೆಂದು.

ಯಾನ ಮುಗಿಯಿತು. ಗುರು ನ್ಯೂಯಾರ್ಕಿನಲ್ಲಿ ತಂಗಿದರು. ಶಿಷ್ಯ ಪ್ರಿನ್ಸ್‌ಟನ್ನಿಗೆ ತೆರಳಿದರು. ಅಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಕಾಂಟಿನೆಂಟಿನಿಂದ (ಯುರೋಪ್) ಖುದ್ದು ಹೊತ್ತು ತಂದ ಈ ಬಿಸಿ ಬಿಸಿ ಸುದ್ದಿಯನ್ನು ಬೋರ್ ನೀಡಿದ ವಿವರಣೆ ಸಹಿತ ವರದಿ ಮಾಡಿದರು. ಬೈಜಿಕ ವಿದಳನೆ — ಬೋರ್ ಮುದ್ರೆ — ಇನ್ನು ಕೇಳಬೇಕೆ? ಅತೀತಾತೀತ ಪತ್ರಿಕಾ ಸಮಾಚಾರವಿದಾಯಿತು (ಜನವರಿ ೧೯೩೯).

ಪರಮಾಣು ಬಾಂಬ್ ನಿರ್ಮಾಣ ನಾಟಕದ ಒಂದನೆಯ ಅಂಕ ಆರಂಭವಾದದ್ದು ಹೀಗೆ.

ಚೌಕಟ್ಟು) ಅನುಯಾಯಿಗಳ ತೀರ್ಮಾನ.

ವಿಜ್ಞಾನದ ಮುನ್ನಡೆಯಲ್ಲಿ ವಾಸ್ತವತೆ ಮತ್ತು ಸಿದ್ಧಾಂತ ಕ್ರಮಾಗತ ಹೆಜ್ಜೆಗಳು — ಒಂದಾದ ಬಳಿಕ ಇನ್ನೊಂದು. ವಾಸ್ತವತೆಯು (ಅಂದರೆ ನಿಸರ್ಗದ ಅಥವಾ ವಿಶ್ವದ) ಮೇಲೆ ಮಾನವನ ಹತೋಟಿ ಇಲ್ಲ. ಮಾನವ ಇದ್ದರೂ ಇರದಿದ್ದರೂ, ಅವನು ಅದನ್ನು ಪರೀಕ್ಷಿಸಿದರೂ ಪರೀಕ್ಷಿಸದಿದ್ದರೂ ಅದು ಅದರಷ್ಟಕ್ಕೆ ಅದರ ನಿಯಮಾನುಸಾರವೇ ವರ್ತಿಸುತ್ತದೆ. ಅಂದಮೇಲೆ ವಾಸ್ತವತೆಯನ್ನು ಅನುಸರಿಸಿ ಸಿದ್ಧಾಂತ ಸಾಗುವುದೊಂದೇ ನಿಜ ಪ್ರಗತಿ. ಎಲ್ಲಿ ಸಿದ್ಧಾಂತ ವಾಸ್ತವತೆಯನ್ನು ಸಮರ್ಪಕವಾಗಿ ವ್ಯಾಖ್ಯಾನಿಸುವುದಿಲ್ಲವೋ ಅಲ್ಲಿ ವ್ಯಾಘಾತ ತಲೆದೋರುತ್ತದೆ. ನೂತನ ಸಿದ್ಧಾಂತದ ಸೃಷ್ಟಿ ಮಾತ್ರ ಇದನ್ನು ಪರಿಹರಿಸಬಲ್ಲದು. ಪರಮಾಣು ಪ್ರಪಂಚವನ್ನು ವ್ಯಾಖ್ಯಾನಿಸುವಲ್ಲಿ ಅಭಿಜಾತ ಸಿದ್ಧಾಂತ ಎದುರಿಸುತ್ತಿದ್ದ ವ್ಯಾಘಾತ ನಿವಾರಣೆಗೆ ಆ ಸಿದ್ಧಾಂತವನ್ನು ತೊರೆದು ಆಧುನಿಕ (ಅಥವಾ ನವಜಾತ) ಸಿದ್ಧಾಂತಕ್ಕೆ ಶರಣಾಗುವುದೊಂದೇ ಮಾರ್ಗ ಎಂಬುದು ಬೋರ್ ಅವರ ಮತ.

ಅದೇ ಅಕ್ಟೋಬರಿನಲ್ಲಿ (೧೯೧೧) ನಡೆದ ಕ್ಯಾವೆಂಡಿಶ್ ವಾರ್ಷಿಕ ಭೋಜನ ಸಮಾರಂಭಕ್ಕೆ ಮ್ಯಾಂಚೆಸ್ಟರಿನಿಂದ ರುದರ್ಫರ್ಡ್ ಆಗಮಿಸಿದ್ದರು. ಆ ದೃಶ್ಯವನ್ನು ಬೋರ್ ವರ್ಣಿಸಿದ್ದಾರೆ: "ರುದರ್ಫರ್ಡರ ವೈಯಕ್ತಿಕ ಸಂಪರ್ಕ ಅಲ್ಲಿಯ ತನಕ ನನಗಿರಲಿಲ್ಲ. ಆದರೆ ತಾವು ಕೆಲಸ ಮಾಡಿದಲ್ಲೆಲ್ಲ ಹೆಚ್ಚು ಕಡಿಮೆ ಅಸಾಧ್ಯವೆನಿಸಿದುದನ್ನು ಸಾಧ್ಯವಾಗಿಸಿದ ಅವರ ಭವ್ಯ ವ್ಯಕ್ತಿತ್ವದ ಸಂಮೋಹಕತೆ ಮತ್ತು ಘನತೆ ನನ್ನ ಮೇಲೆ ಗಾಢ ಮುದ್ರೆ ಒತ್ತಿದುವು."

ರುದರ್ಫರ್ಡ್ ಮತ್ತು ಇವರ ಸಹಕಾರ್ಯಕರ್ತ ಫ್ರೆಡರಿಕ್ ಸಾಡಿ (೧೮೭೭-೧೯೫೬) ಹಲವಾರು ನೂತನ ಪ್ರಯೋಗ ಮಾಡಿ (೧೮೯೯-೧೯೦೨) ವಿಕಿರಣಪಟುತ್ವದ ರಹಸ್ಯ ವಿವರಿಸಿದರು. ಇವರ ಪ್ರಕಾರ ಯುರೇನಿಯಮ್ ಅಥವಾ ತೋರಿಯಮ್ ಧಾತುವಿನಿಂದ ಆರಂಭವಾಗುವ ಪ್ರತಿಯೊಂದು ಧಾತುವೂ ತನ್ನ ಉದರದಿಂದ ಉಪಪರಮಾಣವಿಕ ಕಣವನ್ನು ಉತ್ಸರ್ಜಿಸಿ ಅಪಘಟಿಸುತ್ತದೆ (disintegrates—ಸಿಡಿದು ಸ್ವಂತತ್ವ ಕಳೆದುಕೊಳ್ಳುತ್ತದೆ) ಮತ್ತು ಶೇಷವಸ್ತುವಾಗಿ ಇನ್ನೊಂದು ಧಾತುವನ್ನೂ ಇದು ತನ್ನ ಸರದಿಯಲ್ಲಿ ಮತ್ತೆ ಉಪಪರಮಾಣವಿಕ ಕಣವನ್ನು ಉತ್ಸರ್ಜಿಸಿ ಮಗುದೊಂದು ಧಾತುವನ್ನೂ ಕೊಡುತ್ತವೆ; ನಿಸರ್ಗದಲ್ಲಿ ಈ ತರಹದ ಮೂರು ಅಪಘಟನೆಗಳು ಸಾಧ್ಯ: ಅಂತಿಮ ಶೇಷ ಧಾತು ಸ್ಥಿರವಾಗಿರುತ್ತದೆ. ಆ ಎರಡು ಹಂತಗಳ ಶೇಷ ಧಾತುಗಳು ತತ್ಪೂರ್ವ ಗೊತ್ತಿದ್ದ ಧಾತುಗಳ ಭಿನ್ನ ರೂಪಗಳೆಂದು ಇವರು ರುಜುಪಾತಿಸಿದರು. ಉದಾಹರಣೆಗೆ ಪಾವಟಿಗೆಗಳ ಸರಣಿಯಲ್ಲಿ ನಾವು ಮೇಲೆ ಮೇಲೆ ಹೋದಂತೆ ಅಧಿಕಾಧಿಕ ಅಸ್ಥಿರ ಭಾವ ಮೂಡುತ್ತದೆ. ಅಲ್ಲಿ ತುಸುವೇ ಹಂದಾಡಿದರೂ ಕೆಳಕ್ಕೆ ಒಗೆಯಲ್ಪಡುವುದು ಖಾತ್ರಿ; ಇಂಥ ಒಗೆತ ಮೂರು ಹಂತಗಳಲ್ಲಿ ಸಂಭವಿಸುತ್ತದೆ; ಪ್ರತಿಯೊಂದು ಹಂತದಲ್ಲಿಯೂ ನಮ್ಮ ನೆಲೆ ಕೆಳಗಿನ ಯಾವುದೋ ಒಂದು ಪಾವಟಿಗೆ; ಕೊನೆಯ ಪಾವಟಿಗೆಯಲ್ಲಿಯ ನೆಲೆ ಸ್ಥಿರವಾಗಿದ್ದು ಅಲ್ಲಿಂದ ಮತ್ತೆ ಕೆಳ ಒಗೆತದ ಸಂಭವ ಇರುವುದಿಲ್ಲ.

ವಿಕಿರಣಪಟು ಧಾತು ಒಂದು ಬಗೆಯ ಆತ್ಮಹತ್ಯಾ ಪ್ರಕ್ರಿಯೆಯಲ್ಲಿ ನಿರತವಾಗಿರುತ್ತದೆ. ಈ ಧಾತುವಿನಿಂದ ಮೂರು ಬಗೆಯ ವಿಕಿರಣಗಳು ಉತ್ಸರ್ಜಿತವಾಗುವುದನ್ನು ರುದರ್ಫರ್ಡ್ ಮತ್ತು ಸಾಡಿ ಆವಿಷ್ಕರಿಸಿ ಅವನ್ನು ಆಲ್ಫ, ಬೀಟ, ಗ್ಯಾಮ ವಿಕಿರಣಗಳೆಂದು ಹೆಸರಿಸಿದರು. ಬೀಟ ಕಿರಣಗಳು ಎಲೆಕ್ಟ್ರಾನುಗಳ ಪ್ರವಾಹವೆಂದೂ ಗ್ಯಾಮ ಕಿರಣಗಳು ವಿಶೇಷ ಎಕ್ಸ್‌ಕಿರಣಗಳೆಂದೂ ತಿಳಿಯಿತು. ಆಲ್ಫ ಕಿರಣಗಳು? ರುದರ್ಫರ್ಡ್ ಇವುಗಳ ಬಗ್ಗೆ ತಪಾಸಣೆ ನಡೆಸಿ ಇವು ಋಣವಿದ್ಯುದಾವಿಷ್ಟ ಕಣಗಳಾದ ಎಲೆಕ್ಟ್ರಾನುಗಳಿಗೆ ವಿರುದ್ಧಾವೇಶವಿರುವ (ಆದ್ದರಿಂದ ಧನ ವಿದ್ಯುದಾವಿಷ್ಟ)ಕಣಗಳೆಂದು ನಿರ್ಧರಿಸಿದರು. ಈ ಕಣಕ್ಕೆ ಅವರು ಪ್ರೋಟಾನ್ ಎಂದು ಹೆಸರಿಟ್ಟರು—ಆದಿ ಕಣ ಎಂಬರ್ಥ.

ಒಟ್ಟಾರೆ ಪರಮಾಣು ವಿದ್ಯುತ್ತಟಸ್ಥವೆಂದು ತಿಳಿದಿತ್ತು: ಅದರಲ್ಲಿ ಋಣಾವೇಶಗಳು (ಎಲೆ-

ಜೀವನ ವಾಹಿನಿ

೧೮೮೫ ಕೋಪನಹೇಗನ್ನಿನಲ್ಲಿ ಜನನ (ಅಕ್ಟೋಬರ್ ೭).

೧೯೦೩ ಮೆಟ್ರಿಕ್ಯುಲೇಶನ್ ತೇರ್ಗಡೆ. ಕೋಪನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಭೌತ ವಿಜ್ಞಾನ ಅಧ್ಯಯನಾರಂಭ.

೧೯೦೭ ರಾಯಲ್ ಡೇನಿಶ್ ಅಕಾಡೆಮಿ ಆಫ್ ಸೈನ್ಸ್‌ಸ್‌ನಿಂದ ಸುವರ್ಣ ಪದಕ ಪ್ರದಾನ.

೧೯೦೯ ಸ್ನಾತಕೋತ್ತರ ಪದವಿ.

೧೯೧೧ ಡಾಕ್ಟೊರಲ್ ಮಹಾನಿಬಂಧ: ಲೋಹಗಳ ಎಲೆಕ್ಟ್ರಾನ್ ಸಿದ್ಧಾಂತ.

೧೯೧೧-೧೨ ಕೇಂಬ್ರಿಜ್ಜಿನಲ್ಲಿ ಜೆ.ಜೆ. ತಾಮ್ಸನ್ ಜೊತೆ ಸಂಶೋಧನೆ.

೧೯೧೨ ಮ್ಯಾಂಚೆಸ್ಟರಿನಲ್ಲಿ ಅರ್ನೆಸ್ಟ್ ರುದರ್ಫರ್ಡ್ ಜೊತೆ ಸಂಶೋಧನೆ. ಮಾರ್ಗ್ರೆತ್ ನಾರ್ಲಂಡ್ ಜೊತೆ ಮದುವೆ (ಅಗಸ್ಟ್ ೧).

೧೯೧೩ ಕೋಪನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ. ಪರಮಾಣವಿಕ ಸಂಘಟನೆಯ ಸಿದ್ಧಾಂತ ಮತ್ತು ರೋಹಿತಗಳು.

೧೯೧೪-೧೬ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ.

೧೯೧೬ ಕೋಪನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಸೈದ್ಧಾಂತಿಕ ಭೌತವಿಜ್ಞಾನದ ಪ್ರಾಧ್ಯಾಪಕ.

೧೯೧೭ ರಾಯಲ್ ಡೇನಿಶ್ ಅಕಾಡೆಮಿಯ ಸದಸ್ಯ.

೧೯೨೧ ಸೈದ್ಧಾಂತಿಕ ಭೌತವಿಜ್ಞಾನಕ್ಕೆ ವಿಶ್ವವಿದ್ಯಾಲಯ ಸಂಸ್ಥೆಯ (ನೀಲ್ಸ್ ಬೋರ್ ಇನ್‌ಸ್ಟಿಟ್ಯೂಟ್) ಉದ್ಘಾಟನೆ.

೧೯೨೨ ಆವರ್ತಕೋಷ್ಟಕದ ಸಿದ್ಧಾಂತ. ಭೌತವಿಜ್ಞಾನದಲ್ಲಿ ನೊಬೆಲ್ ಪಾರಿತೋಷಕ.

೧೯೨೭ ಪರಮಾಣವಿಕ ಭೌತವಿಜ್ಞಾನದಲ್ಲಿ ವೀಕ್ಷಣ ಸಮಸ್ಯೆಯ ವಿಶ್ಲೇಷಣೆ (ಪೂರಕತೆ).

೧೯೩೧ ಕಾರ್ಲ್ಸ್‌ಬರ್ಗಿನಲ್ಲಿ (ಕೋಪನ್‌ಹೇಗನ್) ಗೌರವಾರ್ಥ ಗೃಹದಾನ.

೧೯೩೩ ಸಕಲ ವಿದ್ಯುದ್ಗತಿ ವಿಜ್ಞಾನದಲ್ಲಿ ಮಾಪನ ಸಮಸ್ಯೆಯ ವಿಶ್ಲೇಷಣೆ (ಲಿಯೋನ್ ರೋಸೆನ್‌ಫೆಲ್ಡ್ ಜೊತೆ).

೧೯೩೬ ಪರಮಾಣವಿಕ ಬೀಜದ ದ್ರವಬಿಂದು ಪ್ರತಿರೂಪ.

೧೯೩೯ ರಾಯಲ್ ಡೇನಿಶ್ ಅಕಾಡೆಮಿಯ ಅಧ್ಯಕ್ಷ. ಬೈಜಿಕವಿದಳನ ಸಿದ್ಧಾಂತ (ಜಾನ್ ಎ. ವ್ಹೀಲರ್ ಜೊತೆ).

೧೯೪೩ ಸ್ವೀಡನ್ನಿಗೆ ರಹಸ್ಯ ನಿರ್ಗಮನ.

೧೯೪೩-೪೫ ಬ್ರಿಟಿಷ್-ಅಮೇರಿಕನ್ ಪರಮಾಣು ಶಕ್ತಿ ಯೋಜನೆಯಲ್ಲಿ ಸಹಯೋಗ.

೧೯೪೫ ಡೆನ್ಮಾರ್ಕಿಗೆ ಪುನರಾಗಮನ.

೧೯೫೦ ವಿಶ್ವಸಂಸ್ಥೆಗೆ ಮುಕ್ತಪತ್ರ.

೧೯೫೫ ಡೇನಿಶ್ ಅಟಾಮಿಕ್ ಎನರ್ಜಿ ಕಮಿಷನ್ನಿನ ಅಧ್ಯಕ್ಷ.

೧೯೬೨ ಕಾರ್ಲ್ಸ್‌ಬರ್ಗ್ ಗೃಹದಲ್ಲಿ ಮರಣ (ನವೆಂಬರ್ ೧೮).

(ಎಸ್. ರೋಸೆಂತಲ್ ಸಂಪಾದಿಸಿರುವ 'ನೀಲ್ಸ್ ಬೋರ್' ಸ್ಮರಣ ಗ್ರಂಥದಿಂದ ಉದ್ಧೃತ

ಕ್ಟ್ರಾನುಗಳು) ಎಷ್ಟು ಇರುವುವೋ ಧನಾವೇಶ-ಗಳೂ (ಪ್ರೋಟಾನುಗಳು) ಅಷ್ಟೇ ಇದ್ದು ನಿವ್ವಳ ಆವೇಶ ಶೂನ್ಯ ಎಂದರ್ಥ. ಅಂದ ಮೇಲೆ ಪ್ರತಿಯೊಂದು ಪರಮಾಣುವೂ ಈ ನಿಯಮಾನು ಸಾರ ಎಲೆಕ್ಟ್ರಾನ್ ಮತ್ತು ಪ್ರೋಟಾನ್ ಕಣಗಳ ಮಿಶ್ರಣ ಎಂದಾಯಿತು.

ವಿಕಿರಣಪಟು ಧಾತುಗಳಿಂದ ಸಿಡಿಯುತ್ತಿದ್ದ ಕಣಗಳು ಪರಮಾಣುವಿನ ಹೂರಣ ಶೋಧನೆಗೆ ಯೋಗ್ಯ ಕ್ಷಿಪಣಿಗಳಾದುವು. ಲೋಹದ ತೆಳು ತಗಡಿನ ಮೇಲೆ ಎಲೆಕ್ಟ್ರಾನ್ ದೂಲವನ್ನು ಬೀರಿದಾಗ ಆ ಕಣಗಳು ತಗಡಿನಿಂದ ಯಾವುದೇ ಪ್ರತಿರೋಧ ಎದುರಿಸದೇ ಪಾರಾದುವು. ಅಂದ ಮೇಲೆ ಪರಮಾಣುವಿನ ಅಧಿಕಾಂಶ ಶೂನ್ಯ ಪ್ರದೇಶವಾಗಿರಬೇಕು. ಈ ಸಂಗತಿ ಗಮನಿಸಿದ ಜರ್ಮನಿಯ ಫಿಲಿಪ್ ಲೆನಾರ್ಡ್ ಪರಮಾಣು-ವಿನ ಒಂದು ಸ್ಥೂಲಪ್ರತಿರೂಪವನ್ನು (model—ಭೌತ ಮಾದರಿ ಇಲ್ಲವೇ ಗಣಿತೀಯ ಸಂರಚನೆ) ವ್ಯಾಖಿಸಿದರು (೧೯೦೩).

ಜಪಾನಿನ ಎಚ್. ನಾಗಓಕ ಎಂಬವರ ಪ್ರಕಾರ (೧೯೦೪) ಪರಮಾಣು ಒಂದು ಅನಂತಸೂಕ್ಷ್ಮ ಸೌರವ್ಯೂಹ. ಇದರ ಕೇಂದ್ರದಲ್ಲಿ ಧನವಿದ್ಯು-ತ್ಕಣಗಳ ಸಮುಚ್ಚಯವಿದ್ದು ಋಣವಿದ್ಯುತ್ಕಣ-ಗಳು ಇದನ್ನು ಸೂರ್ಯನ ಸುತ್ತಲಿನ ಗ್ರಹ-ಗಳಂತೆ ವಿವಿಧ ಕಕ್ಷೆಗಳಲ್ಲಿ ಪರಿಭ್ರಮಿಸುತ್ತವೆ.

ಜೆ. ಜೆ. ತಾಮ್ಸನ್ ಮಂಡಿಸಿದ (೧೯೦೬) ಪ್ರತಿರೂಪ ಹೀಗಲ್ಲ. ಇದೊಂದು ಧನವಿದ್ಯು-ದಾವೇಶಭರಿತ ಗೋಲ. ಈ ಧನಾವೇಶಗಳನ್ನು ಸರಿದೂಗಿಸಲು ಸಾಕಾಗುವಷ್ಟು ಋಣಾವೇಶಗಳು ಇದರೊಳಗೆ ರವೆ ಉಂಡೆಯೊಳಗಿನ ಗೋಡಂಬಿ ಚೂರುಗಳಂತೆ ಹರಡಿಕೊಂಡಿವೆ.

ರುದರ್ಫರ್ಡ್ ತಮ್ಮ ಪ್ರಯೋಗಕ್ಕೆ (೧೯೦೮) ಚಿನ್ನದ ಅತಿ ತೆಳು ತಗಡನ್ನು ಆಯ್ದುಕೊಂಡರು. ಇದರ ದಪ್ಪ ಕೇವಲ ೨೦೦೦ (ಚಿನ್ನದ) ಪರ ಮಾಣುಗಳನ್ನು ಸಾಲಾಗಿ ಒತ್ತೊತ್ತಿಗೆ ನಿಲ್ಲಿಸಿ-ದಷ್ಟು. ಈ ತಗಡನ್ನು ಅವರು ಆಲ್ಫ ಕಣಗಳ (ಅಂದರೆ ಪ್ರೋಟಾನುಗಳ ಅಥವಾ ಧನಕಣಗಳ) ದೂಲದಿಂದ ತಾಡಿಸಿದರು. ಸರಾಸರಿಯಲ್ಲಿ ೮೦೦೦ ಕಣಗಳ ಪೈಕಿ ಒಂದು ಮಾತ್ರ ತೀವ್ರ ದಿಕ್ಚ್ಯುತಿಗೊಂಡು — ಬಿಲಿಯರ್ಡ್ ಆಟದಲ್ಲಿ ಒಂದು ಚೆಂಡು ಇನ್ನೊಂದನ್ನು ತಾಗಿದಾಗ ದಿಕ್ಚ್ಯುತಿಗೊಳ್ಳುವಂತೆ — ಬೇರೆ ದಿಶೆಯಲ್ಲಿ ಸಿಡಿ ಯುತ್ತಿತ್ತು; ಉಳಿದವೆಲ್ಲವೂ ಯಾವುದೇ ಪ್ರತಿ-ರೋಧ ಎದುರಿಸದೇ ನೇರ ಸೋರಿ ಹೋಗು-ತ್ತಿದ್ದುವು.

ಈ ಎಲ್ಲ ಫಲಿತಾಂಶಗಳನ್ನೂ ಕ್ರೋಢೀಕರಿಸಿ ರುದರ್ಫರ್ಡ್ ಪರಮಾಣುವಿನ ಪ್ರತಿರೂಪವನ್ನು ಮಂಡಿಸಿದರು (೧೯೧೧) : ಪರಮಾಣುವಿಗೆ ಒಂದು ಬೀಜವಿದೆ, ಇದು ಪರಮಾಣುವಿನ ಸಮಸ್ತ ಧನಾವೇಶಗಳ (ಅಂದರೆ ಪ್ರೋಟಾನ್ ಕಣಗಳ) ಸಮುಚ್ಚಯ; ಇದರ ಸುತ್ತ ಸಮ-ಸಂಖ್ಯೆಯ ಋಣಾವೇಶಗಳು (ಅಂದರೆ ಎಲೆ-ಕ್ಟ್ರಾನ್ ಕಣಗಳು) ವಿವಿಧ ಕಕ್ಷೆಗಳಲ್ಲಿ ಪರಿಭ್ರಮಿಸು ತ್ತವೆ, ಪರಮಾಣುವಿನ ರಾಶಿ ಪೂರ್ತಿ ಅದರ ಬೀಜದಲ್ಲಿ ಕೇಂದ್ರೀಕೃತವಾಗಿದೆ. (ಪ್ರೋಟಾನಿನ ರಾಶಿ ಎಲೆಕ್ಟ್ರಾನಿನ ರಾಶಿಯ ೧೮೩೬ ಮಡಿ ದೊಡ್ಡದು.)

೧೯೧೨ರ ವೇಳೆಗೆ ಪರಮಾಣು ಪ್ರಪಂಚದ ನಾಯಕತ್ವ ೫೬ ವರ್ಷ ವಯಸ್ಸಿನ ತಾಮ್ಸನ್ ಅವರಿಂದ ೪೧ ವರ್ಷ ವಯಸ್ಸಿನ ರುದರ್ಫರ್ಡ್ ಅವರಲ್ಲಿಗೆ ಸ್ಥಳಾಂತರಗೊಂಡಿತ್ತು. ತರುಣ ನೀಲ್ಸ್ ಬೋರ್ (ವಯಸ್ಸು ೨೭ ವರ್ಷ) ಕೇಂಬ್ರಿಜ್ಜಿನಿಂದ ಮ್ಯಾಂಚೆಸ್ಟರಿಗೆ ನಿರ್ಗಮಿಸಿದ್ದು ಈ ಸನ್ನಿವೇಶದಲ್ಲಿ.

ರುದರ್ಫರ್ಡ್ ಪ್ರಯೋಗಪರಿಣತಮತಿ, ಸಮಗ್ರ ಕಲ್ಪನೆಯಲ್ಲಿಯೂ ವಿವಿಕ್ತ ವಿವರ-ಗಳಲ್ಲಿಯೂ ಸರ್ವಲೇಲಿಪ್ಯ ವ್ಯಕ್ತಿತ್ವ. ಬೋರ್ ಆದರೋ ಸಿದ್ಧಾಂತನಿರತಮತಿ, ನೂತನ ಪರಿ ಕಲ್ಪನೆಗಳ ಬುದ್ಬುದಾಕರ. ಇಬ್ಬರೂ ಸಾಮೂ-ಹಿಕವಾಗಿ — ಅಂದರೆ ವಿಜ್ಞಾನಿಗಳ ಒಂದು ಸಮೂಹದ ನೇತಾರರಾಗಿ — ಕೆಲಸ ಮಾಡು-ವುದರಲ್ಲಿ ಅಗ್ರಗಣ್ಯರು. ಪ್ರಯೋಗವನ್ನು ಪರಿ ಷ್ಕಾರವಾಗಿ ರೂಪಿಸಿ ಪರಿಪೂರ್ಣವಾಗಿ ನಿರ್ವಹಿ-ಸುವುದು ರುದರ್ಫರ್ಡರ ಹಿರಿಮೆ. ಲಭ್ಯ ಫಲಿತಾಂಶಗಳಿಗೆ ಯುಕ್ತ ಪರಿಭಾಷೆ ತೊಡಿಸಿ ಸಿದ್ಧಾಂತ ಮಂಡಿಸಿ ಅದರಿಂದ ಗರಿಷ್ಠ ಫಲ ಪಡೆಯುವುದು ಬೋರ್ ಅವರ ತ್ರಾಣ. ಎಂದೇ

ಸೈದ್ಧಾಂತಿಕ ಪ್ರಶ್ನೆ ಎದ್ದಾಗಲೆಲ್ಲ ರುದರ್‌ಫರ್ಡ್ "ಬೋರ್ ಅವರನ್ನು ಕೇಳಿ" ಎನ್ನುತ್ತಿದದ್ದು ವಾಡಿಕೆ.

"ನಿಮ್ಮ ಪೂರ್ಣ ಭರವಸೆಗೆ ಪಾತ್ರರಾಗಬಲ್ಲ ವ್ಯಕ್ತಿ ರುದರ್‌ಫರ್ಡ್. ಅವರು ಕ್ಲುಪ್ತವಾಗಿ ಪ್ರಯೋಗಾಲಯಕ್ಕೆ ಬಂದು ಸಂಶೋಧನೆಯ ಪ್ರಗತಿ ಕುರಿತು ವಿಚಾರಿಸುತ್ತಾರೆ ಮತ್ತು ಅತ್ಯಂತ ಸೂಕ್ಷ್ಮ ವಿವರಗಳನ್ನೂ ಚರ್ಚಿಸುತ್ತಾರೆ. ಈ ಪ್ರಗಲ್ಭ ಪುರುಷನಿಗೆ ತಮ್ಮ ಸುತ್ತ ಇರುವ ಎಲ್ಲ ಜನರ ಕೆಲಸದಲ್ಲಿಯೂ ಅಪಾರಾಸಕ್ತಿ." ಇದು ಗುರುವಿನ ಬಗ್ಗೆ ಶಿಷ್ಯನಿಗಿದ್ದ ಗೌರವ ಭಾವ.

ಪರಮಾಣುವಿಗೆ ಮೊದಲ ತಾರ್ಕಿಕ ಪ್ರತಿರೂಪ ಮಂಡಿಸಿದವರು ರುದರ್‌ಫರ್ಡ್. ಇದು ವಾಸ್ತವತೆಗೆ ಮಾನವ ಕಲ್ಪನೆ ಪತ್ತ ಸಾಕ್ಷ್ಯಾಧಾರ ಅವಲಂಬಿಸಿ ನೀಡಿದಗಣಿತ ವ್ಯಾಖ್ಯಾನ — ಗಣಪತಿಯನ್ನು ನಿರ್ಮಿಸಲು ಹೊರಟವನು ಮೊದಲಿಗೆ ಹದಬರಿಸಿದ ಮಣ್ಣಿನ ಪಾಕವನ್ನು ಉದ್ದುದ್ದ ಮುದ್ದೆಯಾಗಿ ತಟ್ಟುವಂತೆ. ಈ ಗಣಿತ ವ್ಯಾಖ್ಯಾನದಿಂದ ಸ್ವತಃ ರುದರ್‌ಫರ್ಡರೇ ಊಹಿಸದಷ್ಟು ಅಧಿಕ ಅರ್ಥ ಬಸಿದವರು ಬೋರ್. ೧೯೦೦ ರಲ್ಲಿ ಜನಿಸಿ ಆಗ (೧೯೧೨) ಪ್ರವರ್ಧಮಾನ ಸ್ಥಿತಿಗೆ ಬರುತ್ತಿದ್ದ ಶಕಲ ಸಿದ್ಧಾಂತದ ಕ್ರಾಂತಿಕಾರಕ ವಿನೂತನ ಪರಿಕಲ್ಪನೆಗಳನ್ನು ಬೋರ್ ಈ ರುದರ್‌ಫರ್ಡ್ ಪರಮಾಣುವಿಗೆ ಅನ್ವಯಿಸಿ ಇದಕ್ಕೆ ನವರೂಪ ನವಸತ್ತ್ವವಿತ್ತರು. ತದನಂತರದ ದಿನಗಳಲ್ಲಿ ಬೋರ್ ಪರಮಾಣುವೆಂದೇ ಪ್ರಸಿದ್ಧಿ ಗಳಿಸಿದ ಈ ಪ್ರತಿರೂಪ ವಾಸ್ತವತೆಗೆ ಅಂದು ದೊರೆತ ಅತ್ಯಂತ ಸಮೀಪ ಪ್ರತಿಬಿಂಬ. ಇದನ್ನು ಆಧರಿಸಿ ಮುಂದಿನ ವರ್ಷಗಳಲ್ಲಿ ಹಲವಾರು ವರಿಷ್ಠ ವಿಜ್ಞಾನಿಗಳು ಮೂಲಭೂತ ಸಂಶೋಧನೆಗೈದು ಪರಮಾಣು ಪ್ರಪಂಚ ಕುರಿತು ಅನೇಕ ಸುಂದರ ವಿವರಣೆಗಳನ್ನು ನೀಡಿದರು. ಧಾತುಗಳ ರಾಸಾಯನಿಕ ಗುಣಗಳು, ವಿಕಿರಣಪಟುತ್ವ, ಪರಮಾಣು ಶಕ್ತಿ, ಪರಮಾಣು ಬೀಜ ಮತ್ತು ಕಕ್ಷಾ ಎಲೆಕ್ಟ್ರಾನುಗಳ ಸಂಬಂಧ, ಧಾತು ಪ್ರವ್ಯಾಂತರಣ (transmutation of elements — ಉದಾಹರಣೆಗೆ ಸೀಸವನ್ನು ಚಿನ್ನವಾಗಿ ಮಾರ್ಪಡಿಸುವ ರಾಸಾಯನಿಕ ಕ್ರಿಯೆ) ಮುಂತಾದ ಅಗೋಚರ ಲೋಕದ ಚಿದಂಬರ ರಹಸ್ಯಗಳು ವಿಜ್ಞಾನಿಗಳಿಗೆ ಲಭ್ಯವಾದುವು; ಮತ್ತು ನೂತನ ಸಂಶೋಧನೆಗಳಿಗೆ ಅವಕಾಶ ಒದಗಿಸಿಕೊಟ್ಟವು.

ಪರಮಾಣುವಿನ ಹೂರಣ

ಪರಮಾಣು ಪ್ರಪಂಚವನ್ನು ವ್ಯಾಖ್ಯಾನಿಸುವಲ್ಲಿ ಅಭಿಜಾತ ಸಿದ್ಧಾಂತ ಹೇಗೆ ಸೋಲು ಎದುರಿಸಿತು, ಪ್ಲ್ಯಾಂಕ್ ಮತ್ತು ಐನ್‌ಸ್ಟೈನ್ ಪ್ರವರ್ತಿಸಿದ ಶಕಲ ಹಾಗೂ ವಿಶೇಷ ಸಾಪೇಕ್ಷತಾ ಸಿದ್ಧಾಂತಗಳು ಹೇಗೆ ಹೊಸ ಜಾಡು ರೂಪಿಸಿದುವು ಮುಂತಾದ ಸಂಗತಿಗಳನ್ನು ಹಿಂದೆ ವಿವರಿಸಿದೆ. ಬೋರ್ ಪರಮಾಣು ಈ ಜಾಡಿಗೆ ಇನ್ನೂ ಒಂದು ಸೈದ್ಧಾಂತಿಕ ಪುರಾವೆಯನ್ನೂ ಅನಿವಾರ್ಯತೆಯನ್ನೂ ಒದಗಿಸಿತು.

ಬೀಜವನ್ನು ಕಕ್ಷಿಸುತ್ತಿರುವ ಎಲೆಕ್ಟ್ರಾನುಗಳನ್ನು ಸೂರ್ಯನನ್ನು ಕಕ್ಷಿಸುತ್ತಿರುವ ಗ್ರಹಗಳ ಜೊತೆ ಹೋಲಿಸುವುದು, ಈ ಪರಿಕಲ್ಪನೆಯ ಸಂಕೀರ್ಣತೆ ಗ್ರಹಿಸಲು ಒಂದು ಮಟ್ಟದವರೆಗೆ ಉಪಯುಕ್ತವಾದೀತು. ಆದರೆ ವಾಸ್ತವವಾಗಿ ಎಲೆಕ್ಟ್ರಾನುಗಳೆಂದರೇನು? ಬೀಜದಲ್ಲಿಯ ಸಂಚಿತ ಧನಾವೇಶವನ್ನು ಸರಿದೂಗಿಸಲು ಬೀಜದ ಸುತ್ತ ವಿವಿಧ ಶಕ್ತಿಮಟ್ಟಗಳಲ್ಲಿ ನಿರಂತರ ಗತಿಶೀಲವಾಗಿರುವ ಋಣಾವೇಶಗಳು.

ಗ್ರಹಗಳನ್ನು ಆಯಾ ಕಕ್ಷೆಗಳಿಗೆ ಬಂಧಿಸಿಟ್ಟಿರುವುದು ಗುರುತ್ವ ಬಲ. ಅಲ್ಲಿ ಸಮೀಪ ಕಕ್ಷೆಗಳಲ್ಲಿ ಅಧಿಕ ಶಕ್ತಿಯೂ ದೂರ ಕಕ್ಷೆಗಳಲ್ಲಿ ನಿಮ್ನ ಶಕ್ತಿಯೂ ಸಂಚಿತವಾಗಿರುತ್ತವೆ. ಉದಾಹರಣೆಗೆ ಸಮೀಪ ಗ್ರಹವಾದ ಬುಧನ ಕಕ್ಷಾವೇಗ ದೂರ ಗ್ರಹವಾದ ಶನಿಯ ಕಕ್ಷಾವೇಗದ ಸುಮಾರು ೫ ಮಡಿ ಜಾಸ್ತಿ ಇದೆ. ಎಲೆಕ್ಟ್ರಾನುಗಳನ್ನಾದರೋ ಆಯಾ ಶಕ್ತಿ ಮಟ್ಟಗಳಿಗೆ (ಅಂದರೆ ಕಕ್ಷೆಗಳಿಗೆ) ಬಂಧಿಸಿಟ್ಟಿರುವುದು ದುರ್ಬಲ ಬೈಜಿಕ ಬಲ. (ಬೀಜದಲ್ಲಿಯ ಕಣಗಳನ್ನು ಬಿಗಿಹಿಡಿತದಲ್ಲಿಟ್ಟಿರುವ ಬಲದ ಹೆಸರು ಪ್ರಬಲ ಬೈಜಿಕ ಬಲ.) ಇದು ಗುರುತ್ವ ಬಲಕ್ಕಿಂತ ಭಿನ್ನವಾದ ಇನ್ನೊಂದು ನೈಸರ್ಗಿಕ

ಮೂಲಭೂತ ಬಲ. ಇಲ್ಲಿ ಸಮೀಪ ಕಕ್ಷೆಗಳಲ್ಲಿ ನಿಮ್ನ ಶಕ್ತಿ, ದೂರ ಕಕ್ಷೆಗಳಲ್ಲಿ ಅಧಿಕಶಕ್ತಿ. ಸೌರ ವ್ಯೂಹದಲ್ಲಿ ಶಕ್ತಿ ಜಾಸ್ತಿ ಆದಂತೆ ಗ್ರಹ ಸೂರ್ಯನಿಗೆ ಕ್ರಮಶಃ ಹತ್ತಿರ ಹತ್ತಿರ ಆಗಿ ಕೊನೆಯಲ್ಲಿ ಸೂರ್ಯನ ಮೇಲೆಯೇ ಬಿದ್ದು ನಾಶವಾಗಿ ಹೋಗುತ್ತದೆ. ಪರಮಾಣುವಿನಲ್ಲಿ ಶಕ್ತಿ ಜಾಸ್ತಿ ಆದಂತೆ ಎಲೆಕ್ಟ್ರಾನ್ ಬೀಜದಿಂದ ವಿವಿಕ್ತ ಸೋಪಾನಗಳಲ್ಲಿ (ಅವಿಚ್ಛಿನ್ನ ರೇಖೆಯಲ್ಲಿ ಅಲ್ಲ) ಉನ್ನತ ಕಕ್ಷೆಗಳಿಗೆ ನೆಗೆಯುತ್ತ ಅಂತಿಮವಾಗಿ ಪರಮಾಣುವಿನ ಸೀಮೆಯಿಂದ ಜಗುಳಿಹೋಗುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಪರಮಾಣು — ಅಂದರೆ ಬೀಜ ಹಾಗೂ ಕಕ್ಷಾ ಎಲೆಕ್ಟ್ರಾನುಗಳ ಸಂಕೀರ್ಣ ವ್ಯವಸ್ಥೆ — ಒಂದು ಸಂತುಲಿತ ರಚನೆ. ಇದಕ್ಕೆ ಹೊರಗಿನಿಂದ ಶಕ್ತಿ ಊಡಿದಾಗ (ಉದಾಹರಣೆಗೆ ಉಷ್ಣ, ವ್ಯಾಪಕವಾಗಿ ವಿಕಿರಣ) ಕಕ್ಷಾ ಎಲೆಕ್ಟ್ರಾನುಗಳು ತಮ್ಮ ನಿಗದಿ ಶಕ್ತಿ ಮಟ್ಟಗಳಿಂದ ಉನ್ನತ (ಅಂದರೆ ಹೊರಗಿನ) ಶಕ್ತಿ ಮಟ್ಟಗಳಿಗೆ ನೆಗೆಯುತ್ತವೆ. ವಿಲೋಮವಾಗಿ, ಪರಮಾಣುವಿನಿಂದ ಶಕ್ತಿ ಬಸಿದಾಗ ಕಕ್ಷಾ ಎಲೆಕ್ಟ್ರಾನುಗಳು ತಮ್ಮ ನಿಗದಿತ ಶಕ್ತಿ ಮಟ್ಟಗಳಿಂದ ನಿಮ್ನ (ಅಂದರೆ ಒಳಗಿನ) ಶಕ್ತಿ ಮಟ್ಟಗಳಿಗೆ ಇಳಿಯುತ್ತವೆ. ಹೀಗೆ ವಿಕಿರಣ (ಅಂದರೆ ಶಕ್ತಿ) ಮತ್ತು ದ್ರವ್ಯ (ಅಂದರೆ ಪರಮಾಣು) ನಡುವಿನ ಅಂತರಕ್ರಿಯೆಯನ್ನು ಇದು (ಬೋರ್ ಪರಮಾಣು) ಸ್ಪಷ್ಟೀಕರಿಸುತ್ತದೆ. ಇಲ್ಲಿ ಶಕ್ತಿ h ನ (ಪ್ಲ್ಯಾಂಕನ ನಿಯತಾಂಕ) ಪೂರ್ಣಾಂಕ ಗುಣಿತಗಳಲ್ಲಿ ಮಾತ್ರ ವಿನಿಮಯವಾಗುತ್ತದೆ. ಇದರ ಅರ್ಥ ನಿಸರ್ಗದಲ್ಲಿ h, 2h, 3h ಮುಂತಾದವು ಮಾತ್ರ ಮಾನ್ಯತೆ ಪಡೆದಿವೆ. 1.5 h, 2.25 h, 3.75 h ಮುಂತಾದವು ಚಲಾವಣೆಯಲ್ಲಿ ಇಲ್ಲ ಎಂದು.

ಈ ಎಲ್ಲ ಸಂಕೀರ್ಣ ವಿದ್ಯಮಾನಗಳಲ್ಲಿ ಎಲೆಕ್ಟ್ರಾನ್ ಕಣಸದೃಶ ಗುಣಗಳನ್ನೂ ತರಂಗ ಸದೃಶ ಗುಣಗಳನ್ನೂ ಪ್ರದರ್ಶಿಸುತ್ತದೆ. ಆದರೆ ಇವು ಪರಸ್ಪರ ಪೂರಕ: ಒಂದು ಗುಣ ಪ್ರಕಟ

ವಾಗುವಾಗ ಇನ್ನೊಂದು ಗುಣ ಪ್ರಕಟವಾಗುವುದಿಲ್ಲ. ಹಾಗಾದರೆ ಎಲೆಕ್ಟ್ರಾನ್ ಏನು? ಕಣವೇ? ಹೌದು. ತರಂಗವೇ? ಹೌದು. ಆದರೆ ಏಕಕಾಲದಲ್ಲಿ ಎರಡೂ ಅಲ್ಲ — ಸರ್ಪರಜ್ಜು ನ್ಯಾಯ!

ಸೌರವ್ಯೂಹದಲ್ಲಿ — ಅಥವಾ ನಮ್ಮ ದೈನಂದಿನ ಜೀವನದಲ್ಲಿ — ಸ್ಥಾನ, ಕ್ಷಣ ಎಂಬ ಪರಿಕಲ್ಪನೆಗಳು ನಮಗೆ ಸುಲಭವಾಗಿ ಅರ್ಥವಾಗುತ್ತವೆ. ಇದು ಗೋಚರ ಜಗತ್ತು. ಇಲ್ಲಿ ಸಲ್ಲುವ ನಿಯಮ ಅಭಿಜಾತ ಸಿದ್ಧಾಂತಪ್ರಣೀತವಾದದ್ದು. ಉದಾಹರಣೆಗೆ ಬುಧಗ್ರಹ ಅದರ ಕಕ್ಷೆಯಲ್ಲಿ ಒಂದು ನಿರ್ದಿಷ್ಟ ಸ್ಥಾನಕ್ಕೆ ಯಾವ ಕ್ಷಣದಲ್ಲಿ ಬರುತ್ತದೆ, ಮತ್ತು ಒಂದು ನಿರ್ದಿಷ್ಟ ಕ್ಷಣದಲ್ಲಿ ಯಾವ ಸ್ಥಾನದಲ್ಲಿರುತ್ತದೆ ಎಂಬ ವಿವರಗಳನ್ನು ಅಭಿಜಾತ ಸಿದ್ಧಾಂತದ ನಿಯಮಗಳ ಪ್ರಕಾರ ಪೂರ್ವಭಾವಿಯಾಗಿ ಗಣಿಸಿ ದೊರೆತ ಫಲಿತಾಂಶಗಳನ್ನು ವಾಸ್ತವತೆಯ ಜೊತೆ ತಾಳೆ ನೋಡಿ ರುಜುವಾತಿಸಬಹುದು. ಆದ್ದರಿಂದ ಇಲ್ಲಿ ಕಾಲ ದತ್ತವಾದಾಗ ಸ್ಥಾನವೂ ಸ್ಥಾನ ದತ್ತವಾದಾಗ ಕಾಲವೂ ತಿಳಿಯುತ್ತವೆಂದಾಯಿತು. ಗ್ರಹಣಗಳನ್ನು ಮುನ್ನುಡಿಯುವಲ್ಲಿ, ಕೃತಕ ಉಪಗ್ರಹಗಳನ್ನು ಉಡಾಯಿಸುವಲ್ಲಿ ಅಥವಾ ಒಂದು ಊರಿನಿಂದ ಇನ್ನೊಂದು ಊರಿಗೆ ಪಯಣಿಸುವಲ್ಲಿ ಅಭಿಜಾತ ಸಿದ್ಧಾಂತದ ಈ ನಿಯಮವನ್ನು ಅನ್ವಯಿಸುತ್ತೇವೆ. ಆದರೆ ಸೌರವ್ಯೂಹದಲ್ಲಿ ಸಲ್ಲುವ ಇದು ಪರಮಾಣುಪ್ರಪಂಚದಲ್ಲಿ ಸಲ್ಲುವುದಿಲ್ಲ. ಬೀಜವನ್ನು ಪರಿಭ್ರಮಿಸುತ್ತಿರುವ ಎಲೆಕ್ಟ್ರಾನ್ ನಿರ್ದಿಷ್ಟಕ್ಷಣದಲ್ಲಿ ಯಾವ ಸ್ಥಾನದಲ್ಲಿರುತ್ತದೆ? ನಿರ್ದಿಷ್ಟ ಸ್ಥಾನಕ್ಕೆ ಯಾವ ಕ್ಷಣದಲ್ಲಿ ಬರುತ್ತದೆ? ಕರಾರುವಾಕ್ಕು ಉತ್ತರವಿಲ್ಲ, ಪ್ರಾಯಶಃ ಈ ಸ್ಥಾನದಲ್ಲಿ ಇರಬಹುದು, ಪ್ರಾಯಶಃ ಈ ಕ್ಷಣಕ್ಕೆ ಬರಬಹುದು ಎಂಬ 'ಬಹುದು'—ಆಧಾರಿತ ಉತ್ತರ ಕೊಡಬಲ್ಲೆವು. ಉದಾಹರಣೆಗೆ ರೂಪಾಯಿ ನಾಣ್ಯವನ್ನು ಗಿರಕಿಸಿ ೧೦೦ ಸಲ ಮೇಲೆಸೆದರೆ ಎಷ್ಟು ಸಲ ಲಾಂಛನಮುಖ ಮೇಲಾಗಿ, ಎಷ್ಟು ಸಲ ಮೌಲ್ಯಮುಖ ಮೇಲಾಗಿ ಬೀಳುತ್ತವೆ? ಪ್ರಾಯಶಃ ೫೨, ೪೮; ಪ್ರಾಯಶಃ ೫೫, ೪೫; ಪ್ರಾಯಶಃ ೪೮, ೫೨ ಇತ್ಯಾದಿ. ಇಲ್ಲಿ ನಿರ್ದಿಷ್ಟತೆ ಸೋಲುತ್ತದೆ; ಸಂಭಾವ್ಯತೆ (probability) ಎಂಬ ನೂತನ ಪರಿಕಲ್ಪನೆ ಮೈದಳೆಯುತ್ತದೆ. ಸಂಭಾವ್ಯತೆಯ ಭಾಷೆ ಸಂಖ್ಯಾಕಲನವಿಜ್ಞಾನ (statistics). ಆದ್ದರಿಂದ ಎಲೆಕ್ಟ್ರಾನಿನ ಸ್ಥಾನ ಅಥವಾ ಕ್ಷಣ ಮುನ್ನುಡಿಯುವುದನ್ನು ಕುರಿತಂತೆ ಸಂಖ್ಯಾಕಲನ ವಿಜ್ಞಾನದ ಪರಿಭಾಷೆ ಬಳಸುವುದು ಅನಿವಾರ್ಯವಾಗುತ್ತದೆ. ಎಂದೇ ಆಧುನಿಕ ಭೌತವಿಜ್ಞಾನ ಸಂಖ್ಯಾಕಲನಾತ್ಮಕವಾಗಿ ವ್ಯವಹರಿಸುತ್ತದೆ ಎನ್ನುವುದುಂಟು.

ಹೀಗೆ ಅಭಿಜಾತ ಸಿದ್ಧಾಂತದ ಸೀಮಿತಗಳನ್ನು ಸ್ಪಷ್ಟವಾಗಿ ಕಾಣಿಸುವುದರಲ್ಲೂ ನವಜಾತ ಸಿದ್ಧಾಂತದ ಪ್ರಾಂತವನ್ನು ಖಚಿತವಾಗಿ ಬಿತ್ತರಿಸುವುದರಲ್ಲೂ ಪ್ಲ್ಯಾಂಕ್—ಐನ್‌ಸ್ಟೈನ್ ಮಾರ್ಗದಲ್ಲಿ ಮೂಲಭೂತ ಚಿಂತನೆ ನಡೆಸಿ ಮತ್ತು ಪ್ರವರ್ತಿಸಿ ಈ ರಂಗದ ಆದಿತ್ರಿಮೂರ್ತಿಗಳ ಪೈಕಿ ಒಬ್ಬರಾಗಿ ವಿಜೃಂಭಿಸಿದವರು ನೀಲ್ಸ್ ಬೋರ್. ನಿಸರ್ಗದ ಸೂಕ್ಷ್ಮಾತಿಸೂಕ್ಷ್ಮ ರಹಸ್ಯಗಳನ್ನು ಅನಾವರಣಗೊಳಿಸಿ ಮಾನವನ ಆಲೋಚನಾ ಧಾಟಿಯನ್ನೇ ಮಾರ್ಪಡಿಸಿ ವರ್ತಮಾನಯುಗವನ್ನು ಪ್ರಾರಂಭಿಸಿದ ಈ ಮಹಾಪುರುಷತ್ರಯರಿಗೆ ಇವರ ಸಾಧನೆಯ (ಮತ್ತು ಪ್ರಾಯದ) ಕಾಲಾನುಗುಣವಾಗಿ ನೊಬೆಲ್ ಪಾರಿತೋಷಿಕ ಪ್ರದಾನವಾದದ್ದು ಉಚಿತವಾಗಿಯೇ ಇದೆ: ಪ್ಲ್ಯಾಂಕ್ ೧೯೧೮, ಐನ್‌ಸ್ಟೈನ್ ೧೯೨೧, ಬೋರ್ ೧೯೨೨.

ಮದುವೆ

೧೯೧೨ ಜುಲೈ ಕೊನೆಯಲ್ಲಿ ಬೋರ್ ಒಂದಿಷ್ಟು ಬಿಡುವು ಮಾಡಿಕೊಂಡು ಮ್ಯಾಂಚೆಸ್ಟರಿನಿಂದ ಡೆನ್ಮಾರ್ಕಿಗೆ ಮರಳಿ ತತ್ಪೂರ್ವ ನಿಶ್ಚಯವಾಗಿದ್ದ ತಮ್ಮ ಒಲವಿನ ವಧು ಮಾರ್ಗ್ರೆತ್ ನಾರ್ಲಂಡ್ ಎಂಬ ಕನ್ಯೆಯನ್ನು ಮದುವೆ ಆದರು. ಮಧುಚಂದ್ರಕ್ಕೆ ಈ ನವ ದಂಪತಿಗಳು ಆಯ್ದುಕೊಂಡ ಪ್ರಶಾಂತ ಮತ್ತು ಪಾವನ ಏಕಾಂತತೆ ಯಾವುದು ಗೊತ್ತೇ? ಮ್ಯಾಂಚೆಸ್ಟರಿನ ಶುದ್ಧ ಭೌತವಿಜ್ಞಾನ ಪರಿಸರ, ಪರಮಾಣುಜಗತ್ತಿನ ನಿಗೂಢ ರಹಸ್ಯಗಳು ಗಣಿತ

ಸಮೀಕರಣಗಳ ರೂಪದಲ್ಲಿ ಪ್ರಕಟವಾಗುತ್ತಿದ್ದ ಹವೆ, ಮಹಾಮತಿಗಳು ಕಲೆತು ಹಗಲಿರುಳೂ ತಾಂತ್ರಿಕ ಭಾಷೆಯಲ್ಲಿ ಸಂಭಾಷಿಸುತ್ತಿದ್ದ ರಣರಂಗ. ವಿಜ್ಞಾನಿಗಳೂ ಕಲಾವಿದರ ಹಾಗೆ. ಇವರ ಪ್ರಥಮ ಪ್ರೇಮ ಆಸಕ್ತ ಕ್ಷೇತ್ರ; ಉಳಿದವೆಲ್ಲವೂ ಆನುಷಂಗಿಕ, ಆಸಕ್ತಿಯನ್ನು ಪೋಷಿಸುವಷ್ಟರ ಮಟ್ಟಿಗೆ ಮಾತ್ರ ಪ್ರಸ್ತುತ.

ಇವರದೊಂದು ಅಪೂರ್ವ ಆದರ್ಶ ದಾಂಪತ್ಯ. ಪೂರಕ ಸಹಯೋಗ. ವಿಜ್ಞಾನದ ಪರಲೋಕಾನ್ವೇಷಣೆಗೆ ತಮ್ಮನ್ನು ತಾವೇ ಸಮರ್ಪಿಸಿಕೊಂಡಿದ್ದ ಜಗದ್ವಿಖ್ಯಾತ ವಿಜ್ಞಾನಿಯ ಸಮರ್ಥ ಪತ್ನಿಯಾಗಿ ಮತ್ತು ಆತ್ಮೀಯ ಸಹಚರಿಯಾಗಿ ಈ ಪ್ರೇಮಮಯಿ ತನ್ನ ವ್ಯಕ್ತಿತ್ವವನ್ನು ಪತಿಯ ಆಶೋತ್ತರಗಳ ಜೊತೆಗೆ ಸಮೀಕರಿಸಿ ಅಸಂಖ್ಯ ಹೊಣೆಗಳನ್ನು ನಿರ್ವಹಿಸಿದ ರೀತಿ ನೀಲ್ಸ್ ಬೋರ್ ಅವರ ಶಿಷ್ಯರಿಂದಲೂ ಮಿತ್ರರಿಂದಲೂ ಮುಕ್ತಪ್ರಶಂಸೆಗೆ ಪಾತ್ರವಾಗಿದೆ, ಪ್ರತಿಯೊಬ್ಬ ಯಶಸ್ವೀ ಪುರುಷನ ಜೀವನದಲ್ಲಿಯೂ ತ್ಯಾಗಶೀಲೆಯಾದ ಮಹಿಳೆಯೊಬ್ಬಳ ಕೂರ್ಮಧಾರಣೆಯನ್ನು ಗುರುತಿಸಬಹುದು ಎನ್ನುವ ಜನಜನಿತ ಹೇಳಿಕೆಗೆ ಸಮರ್ಥನೆ ಒದಗಿಸಿದೆ.

ಬೋರ್ ಮತ್ತು ಐನ್‌ಸ್ಟೈನ್

ಪರಮಾಣು ಪ್ರಪಂಚದ ಕೆಲವು ಮೂಲಭೂತ ತತ್ವಗಳನ್ನು ಕುರಿತಂತೆ ಬೋರ್ ಐನಸ್ಟೈನರ ಎದುರಾಳಿ. "ಭಗವಂತ ಲೆತ್ತವೆಸೆಯುವುದಿಲ್ಲ" ಅಥವಾ "ದೇವರು ನವುರು ಆದರೆ ಎಂದೂ ಕುಹಕಿಯಲ್ಲ" — ಇವು ಐನ್‌ಸ್ಟೈನರ ಸ್ಪಷ್ಟ ನಿಲವು.

ಇಲ್ಲಿ 'ಭಗವಂತ' ಮತ್ತು 'ದೇವರು' ಭೌತವಿಶ್ವವನ್ನು ಪ್ರತೀಕಿಸುತ್ತವೆ. 'ಲೆತ್ತವೆಸೆಯುವುದು' ಸಂಭಾವ್ಯತಾ ಸಿದ್ಧಾಂತಕ್ಕೆ ಶರಣು ಹೋಗುವುದನ್ನೂ ಸಂಖ್ಯಾಕಲನ ವಿಜ್ಞಾನದ ಪರಿಭಾಷೆ ಬಳಸುವುದನ್ನೂ ಸೂಚಿಸುತ್ತವೆ. ಪಗಡೆಯಲ್ಲಿ ದಾಳ ಒಗೆದಾಗ ಯಾವುದೇ ಗರ (ಉದಾಹರಣೆಗೆ ೮) ಬೀಳುವುದನ್ನು ನಿರ್ದಿಷ್ಟವಾಗಿ ಮುನ್ನುಡಿಯುವಂತಿಲ್ಲ. ಆದ್ದರಿಂದ, ಎಲೆಕ್ಟ್ರಾನಿನ ಸ್ಥಾನ ಅಥವಾ ಕ್ಷಣ ಕುರಿತಂತೆ, ಈ ಹಿಂದೆ ವಿವರಿಸಿದಂತೆ, ಸಂಖ್ಯಾಕಲನ ವಿಜ್ಞಾನವನ್ನು ಆಶ್ರಯಿಸುವುದು ಅನಿವಾರ್ಯವಾಗುತ್ತದೆ. ಇದು ಬೋರ್ ಅವರ ನಿಲವಾದರೆ ಈ ಅನಿವಾರ್ಯತೆ ನಿಸರ್ಗನಿಯಮವಲ್ಲ, ಮಾನವನ ಸದ್ಯದ ಅಸಹಾಯತೆಯ ಪ್ರತಿಬಿಂಬ, ಒಂದಲ್ಲ ಒಂದು ದಿನ ವೈಜ್ಞಾನಿಕೋಪಕರಣಗಳು ಇನ್ನೂ ಸೂಕ್ಷ್ಮವಾದಾಗ ಈಗ ಅನಿವಾರ್ಯವೆಂದು ಭಾಸವಾಗುವ ಸಂಭಾವ್ಯತೆ ನಿರ್ದಿಷ್ಟತೆಗೆ ಎಡೆಮಾಡಿಕೊಡದಿರದು ಎಂಬುದು ಐನಸ್ಟೈನರ ವಾದ. ಹೀಗೆ ಲೆತ್ತವೆಸೆಯದ ಭಗವಂತ ಐನ್‌ಸ್ಟೈನ್ ಆದರೆ ಲೆತ್ತವೆಸೆಯುವ ಭಗವಂತ ಬೋರ್ ಆಗಿದ್ದರು. ಇಲ್ಲಿ ಬೋರ್ ಮಹಾವಿಜ್ಞಾನಿಗಳ ಒಂದು ತಂಡದ ನಾಯಕರಾಗಿದ್ದರು. ಐನಸ್ಟೈನ್ ಮಾತ್ರ ಕೊನೆಯ ತನಕವೂ ಏಕವ್ಯಕ್ತಿ ಸಂಸ್ಥೆಯಾಗಿ ಒಂಟಿ ಪಯಣಿಗನಾಗಿ ಉಳಿದರು.

ಹೀಗಾಗಿ ಬೋರ್ – ಐನ್‌ಸ್ಟೈನ್ ಒಂದೆಡೆ ಸಂಧಿಸಿದಾಗ ಅದೊಂದು ಸಮಬಲರ ನಡುವಿನ ಮಹಾ ವಾಗ್ಸಮರವೇ ಆಗುತ್ತಿತ್ತು. ಐನ್‌ಸ್ಟೈನರ ಮೂಲಭೂತ ನಂಬಿಕೆ ಮತ್ತು ತತ್ವಶಾಸ್ತ್ರೀಯ ಅಭ್ಯಂತರವನ್ನು ಯಾವುದೇ ಬಗೆಯ ವಾದದಿಂದ ಇಲ್ಲವೇ ಪುರಾವೆಯಿಂದ ಸುಲಭವಾಗಿ ನಿವಾರಿಸಲು ಬೋರ್ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಬ್ರುಸ್ಸೆಲ್ಸಿನಲ್ಲಿ ಸಾಧಾರಣವಾಗಿ ಮೂರು ತಲೆಮಾರಿನ ಹಿರಿಯ ವಿಜ್ಞಾನಿಗಳ ಶೃಂಗ ಸಮ್ಮೇಳನ ಸೇರಿತ್ತು. ಲೊರೆಂಟ್ಸ್, ಪ್ಲ್ಯಾಂಕ್ ಒಂದನೆಯ ತಲೆಮಾರಿನವರು: ಐನ್‌ಸ್ಟೈನ್, ಬೋರ್, ಬಾರ್ನ್, ಎರೆನ್‌ಫೆಸ್ಟ್ ಎರಡನೆಯ ತಲೆಮಾರಿನವರು; ಹೈಸನ್‌ಬರ್ಗ್, ಪೌಲಿ ಮೊದಲಾದವರು ಮೂರನೆಯ ತಲೆಮಾರಿನವರು. ಬೋರ್ – ಐನ್‌ಸ್ಟೈನ್ ಜೋಡಿ ಎಂದಿನ 'ಕಾಳಗ'ಕ್ಕಿಳಿಯಿತು. ಪ್ರತಿಸಲವೂ ಐನ್‌ಸ್ಟೈನ್ ತಮ್ಮ ವಾದ ಸಮರ್ಥನೆಗೋಸ್ಕರ ಅತ್ಯದ್ಭುತ ಭಾವನಾತ್ಮಕ ಪ್ರತಿರೂಪಗಳನ್ನು ಮಂಡಿಸುತ್ತಿದ್ದರು. ಬೋರ್ ಇವನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಇವುಗಳ ಅಸಾಧುತ್ವವನ್ನು ತೋರಿಸಿಕೊಡು

ತಿದ್ದರು. ಹೀಗೆ ಗಂಟೆಗಟ್ಟಲೆ ವಾದವಿವಾದ ಮುಂದುವರಿದು ಕೊನೆಗೆ ಐನ್‌ಸ್ಟೈನರ ಬತ್ತಳಿಕೆಯಲ್ಲಿ ಅಸ್ತ್ರಗಳೇ ಇಲ್ಲದಂಥ ಶೂನ್ಯ ಪರಿಸ್ಥಿತಿ ತಲೆದೋರಿತು. ಆದರೆ ಇವರು ಮಾತ್ರ "ನಮ್ಮ ಇಂದಿನ ಅಪರಿಪೂರ್ಣ ಜ್ಞಾನವೇ ಭಗವಂತನ ಯಥಾ ಪ್ರತಿಬಿಂಬ" ಎಂದು ಸುತರಾಂ ಒಪ್ಪಲಿಲ್ಲ. ಇಡೀ 'ಕಾಳಗ'ವನ್ನು ನಿರಪೇಕ್ಷವಾಗಿ ಗಮನಿಸಿದ ಐನ್‌ಸ್ಟೈನರ ಪರಮ ಮಿತ್ರ ಏರೆನ್‌ಫೆಸ್ಟರಿಗೆ ಸಾತ್ತ್ವಿಕ ರೋಷ ತಡೆಯಲಾಗಲಿಲ್ಲ. ಐನ್‌ಸ್ಟೈನ್ ಮೊಂಡುತನ ಪ್ರದರ್ಶಿಸುತ್ತಿದ್ದಾರೆಂದು ಅನ್ನಿಸಿರಬಹುದು. ಅವರೆಂದರು "ಐನ್‌ಸ್ಟೈನ್! ನಿಮ್ಮ ಬಗ್ಗೆ ನನಗೆ ಕಡುನಾಚಿಕೆ ಆಗುತ್ತಿದೆ. ನಿಮ್ಮ ಸಾಪೇಕ್ಷತಾ ಸಿದ್ಧಾಂತವನ್ನು ಅಲ್ಲಗಳೆಯಲು ನಿಮ್ಮ ವಿರೋಧಿಗಳು ಹಿಡಿಯುವ ಸ್ಥಾನವನ್ನು ನೀವಿಲ್ಲಿ ಹಿಡಿದಿದ್ದೀರಿ."

ಈ ಉದ್ಗಾರದಿಂದ ಐನ್‌ಸ್ಟೈನ್ ಏನೂ ಕುಪಿತರಾಗಲಿಲ್ಲ "ನನ್ನ ವೈಜ್ಞಾನಿಕ ಪ್ರಜ್ಞೆಗೆ ಇಷ್ಟೊಂದು ವ್ಯತಿರಿಕ್ತವಾಗಿರುವ ನಿಮ್ಮ ನಿಲವನ್ನು ಹೇಗೆ ಅಂಗೀಕರಿಸಲಿ? ಇನ್ನಷ್ಟು ಪರಿಪೂರ್ಣ ಪರಿಕಲ್ಪನೆಯ ಅನ್ವೇಷಣೆಯೇ ನನ್ನ ಬಾಳಿನ ಗುರಿ." ಇವರ ಈ ತಾತ್ತ್ವಿಕ ಹಠಮಾರಿತನದ ಪರಿಣಾಮವಾಗಿ ಗರವೆಸೆಯುವ ದೇವರ ಅನುಯಾಯಿಗಳ ಹತ್ಯಾರುಗಳು ಮಾತ್ರ ಇನ್ನಷ್ಟು ಮೊನಚಾದುವು ಮತ್ತು ನಾಜೂಕಾದುವು.

ಗರ ಒಗೆಯುದ ಭಗವಂತನ ಗುಣಗಾನವನ್ನು ಇವರ ಬಾಯಿಯಿಂದ ಪದೇ ಪದೇ ಕೇಳಿ ರೋಸಿಹೋಗಿದ್ದ ಬೋರ್ ಒಮ್ಮೆ ನೇರವಾಗಿ ಐನ್‌ಸ್ಟೈನರ ಮುಖಕ್ಕೆ ವಾಗ್ಬಾಣ ಎಸೆದಿದ್ದರು "ಭಗವಂತನಿಗೆ ಆತ ಏನು ಮಾಡಬೇಕೆಂದು ವಿಧಿಸುವುದನ್ನು ನಿಲ್ಲಿಸಿ."

ಅಲ್ಲಿ ನೆರೆದಿದ್ದ ಇತರ ಎಲ್ಲ ಭೌತವಿಜ್ಞಾನಿಗಳೂ ಬೋರ್ ಅನುವರ್ತಿಗಳೇ. ಆದರೆ ಅದೇ ದೇವರ ಬಗೆಗೆ ಐನ್‌ಸ್ಟೈನರಿಗಿಂತ ಹೆಚ್ಚಿನ ಅರಿವು, ಸಾಕ್ಷಾತ್ ಬೋರ್ ಅವರನ್ನೂ ಒಳಗೊಂಡಂತೆ ಬೇರೆ ಯಾರಿಗೂ ಇಲ್ಲವೆಂದು ಅವರೆಲ್ಲರೂ ಭಾವಿಸಿದ್ದರು.

ವಿಜ್ಞಾನೇತಿಹಾಸವನ್ನು ಅಭ್ಯಸಿಸಿರುವವರ ಪ್ರಕಾರ ಬೋರ್ ಅವರ ಚಿಂತನವಿಧಾನ ಫ್ಯಾರಡೆಯದರೊಂದಿಗೆ ಸಾಮ್ಯ ಪಡೆದಿದೆ. ಇವರು ಮಾನಸಿಕ ಚಿತ್ರಗಳ (ಒಂದು ಬಗೆಯ ಭಾವಸಾತ್ಮಕ ಪ್ರತಿರೂಪಗಳ) ಮೂಲಕ ಭೌತ ವಿಶ್ವವನ್ನು ಅರ್ಥವಿಸಲು ಪ್ರಯತ್ನಿಸುತ್ತಿದ್ದರು — ಛಾಯಾಚಿತ್ರ ಮುದ್ರಕನ ದೃಷ್ಟಿ. ಐನ್‌ಸ್ಟೈನರ ಚಿಂತನವಿಧಾನ ಇದಕ್ಕಿಂತ ಭಿನ್ನವಾದದ್ದು — ಇದು ಶುದ್ಧ ತಾರ್ಕಿಕ ವಿಧಾನ, ನ್ಯೂಟನ್ನನದರಂತೆ. ಇಲ್ಲಿ ಚಿತ್ರಗಳಿಲ್ಲ. ಗಣಿತ ಸಂರಚನೆಗಳ ಮೂಲಕ ವ್ಯವಹಾರ. ವಿದ್ಯುತ್ಕಾಂತತ್ವದ ಗುಣ ನಿರೂಪಣೆ ಹಾಗೂ ಪರಮಾಣುವಿನ ರಹಸ್ಯ ಭೇದನೆ ಫ್ಯಾರಡೇ-ಬೋರ್ ವಿಧಾನದ ಪರಮಸಿದ್ಧಿಯಾದರೆ ವಿಶ್ವಗುರುತ್ವಾಕರ್ಷಣ ನಿಯಮದ ಶೋಧ ಹಾಗೂ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತದ ಮಂಡನೆ (೧೯೧೫) ನ್ಯೂಟನ್-ಐನ್‌ಸ್ಟೈನ್ ವಿಧಾನದ ಪಕ್ವಫಲ.

ಕಾರ್ಯವಿಧಾನ

ಪರಿಷ್ಕಾರಕ್ಕೆ ಪರ್ಯಾಯ ನಾಮ ಬೋರ್. ಮೂಲಭೂತವಾಗಿ ಇವರು ಐನ್‌ಸ್ಟೈನರಂತೆಯೇ ಭೌತವಿಜ್ಞಾನಿ. ಇವರಿಗೆ ಗಣಿತಾವಲಂಬನೆ ಆನುಷಂಗಿಕ — ತಮ್ಮ ಅಮೂರ್ತ ಭೌತ ಪರಿಕಲ್ಪನೆಗಳಿಗೆ ಮೂರ್ತ ರೂಪ ಕೊಡುವಷ್ಟರ ಮಟ್ಟಿಗೆ. ಯಾವುದೇ ವಿದ್ಯಮಾನದ ಭೌತ ವೃತ್ತಾಂತವನ್ನು ಅಂತರ್ಬೋಧೆಯಿಂದ ಗ್ರಹಿಸುವುದು, ಬಳಿಕ ಅದಕ್ಕೆ ಒಪ್ಪುವ ಗಣಿತ ಪರಿಭಾಷೆ ತೊಡಿಸುವುದು, ಹೀಗೆ ದೊರೆತ ಗಣಿತ ಪ್ರತಿರೂಪದಿಂದ ಗರಿಷ್ಠ ಅರ್ಥ ಹಿಂಡಿ ಭೌತವಿಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸುವುದು ಭೌತ ವಿಜ್ಞಾನಿಯ ಮಾರ್ಗ. ಇಲ್ಲಿ ನಿಸರ್ಗ ಮೊದಲು, ಗಣಿತ ತರುವಾಯ. ಗಣಿತವಿಜ್ಞಾನಿಯ ಚಿಂತನ ವಿಧಾನವಾದರೋ ತದ್ವಿರುದ್ಧ.

ಚಿಂತನವಿಧಾನದಲ್ಲಿ ಬೋರ್ ಕ್ರಮ ಬೇರೆ, ಐನ್‌ಸ್ಟೈನ್ ಕ್ರಮ ಬೇರೆ — ಮೊದಲನೆಯವರದು ಸಾಮೂಹಿಕ ಸಂವಾದರೂಪವಾದದ್ದು, ಎರಡನೆಯವರದು ವೈಯಕ್ತಿಕ

ಚಿಂತನರೂಪವಾದದ್ದು. ಆನೆಗಳ ಹಿಂಡಿನ ನಾಯಕ ಬೋರ್, ಒಂಟಿ ಸಲಗ ಐನ್‌ಸ್ಟೈನ್.

ಬೋರ್ ಅವರ ತರುಣ ಅನುಯಾಯಿ ಯೋರ್ಗನ್ ಕಾಲ್ಕರ್ ಬರೆದಿರುವ ನುಡಿ ಚಿತ್ರ: "ತಾವು ಸಂಪರ್ಕ ಪಡೆದ ವ್ಯಕ್ತಿಗಳಿಗೆ ಅಷ್ಟೊಂದು ಮುಕ್ತ ಮನಸ್ಸಿನಿಂದ ತಮ್ಮ ಹೃದಯವಂತಿಕೆ ಯನ್ನೂ ಪರೇಂಗಿತಗ್ರಹಣಜ್ಞಾನವನ್ನೂ ಧಾರೆ ಎರೆದ ಬೋರ್ ಅವರಿಗೆ ಸ್ವತಃ ಆ ವ್ಯಕ್ತಿ ಗಳಿಂದ ಅವೇ ಗುಣಗಳ ಅಗತ್ಯ ಅಷ್ಟೇ ತೀವ್ರ ವಾಗಿತ್ತು. ಪರಸ್ಪರ ಸಹಕಾರ ಯಾವಾಗಲೂ ಸಾಮೂಹಿಕ ಉತ್ಸಾಹದ ತಳಹದಿಯ ಮೇಲೆ ನಿಲ್ಲಬೇಕೆಂಬುದು ಅವರ ದೃಢ ನಿಲುವು. ಪರಿಪೂರ್ಣ ಸಾಂಗತ್ಯದ ಮನಃಸ್ಥಿತಿಯಲ್ಲಿ ಮಾತ್ರ ಅವರು ನಿಜ ಸ್ಫೂರ್ತಿ ತಳೆಯಬಲ್ಲವರಾಗಿದ್ದರು. ಶಾಸ್ತ್ರೀಯ ಪ್ರಬಂಧ ರಚನೆಯ ವೇಳೆ, ವಿಶೇಷ ಕಠಿಣ ಪರಿಕಲ್ಪನೆಯೊಂದರ ಸಂವಹನತೆ ಕುರಿತಂತೆ, ಅದರ ಅಂತಿಮ ರೂಪ ಹೇಗಿರಬೇಕೆಂಬುದರ ಬಗ್ಗೆ ನಮ್ಮ ನಡುವೆ ಒಮ್ಮೊಮ್ಮೆ ಭಿನ್ನಾಭಿಪ್ರಾಯ ಹಣುಕುತ್ತಿತ್ತು. ಅಂಥ ಸಂದರ್ಭದಲ್ಲಿ ಚರ್ಚೆ ಮುಂದುವರಿಯುವ ಸಲುವಾಗಿ ಅವರ ಸೂಚನೆಯನ್ನು ನಾವು, ಅದು ನಮ್ಮ ಹೃದಯಕ್ಕೆ ಒಪ್ಪಿಗೆ ಆಗದಿದ್ದರೂ, ಅನುಮೋದಿಸುವುದಿತ್ತು.

ಮೇಜದ ಸುತ್ತ ಎಡ್ಡತಿಡ್ಡ ಅಡ್ಡಾಡುತ್ತಿದ್ದ ಅವರು ಥಕ್ಕನೆ ನಿಂತು ಸಮ್ಮುತ್ತ ತೀಕ್ಷ್ಣ ದೃಷ್ಟಿ ಬೀರಿ 'ಈಗ ನೀವಿವರ ಬಗ್ಗೆ ಅಸಂತುಷ್ಟರಾಗ ಬೇಕಾಗಿಲ್ಲ. ನಾನು ಪೈತ್ಯವಶನಾಗಿರುವೆನೆಂದು ಭಾವಿಸಬೇಡಿ. ಆದರೆ...' ಹೀಗೆ ಉದ್ಗರಿಸಿ ಆ ಚರ್ಚಾಸ್ಪದ ನಿರೂಪಣೆಯ ಸರ್ವ ಮುಖಗ ಳನ್ನೂ ಕೂಲಂಕಷವಾಗಿ ಬಿತ್ತರಿಸಿ ನಿಗೂಢ ಸೂತ್ರಗಳನ್ನು ಸರಳವಾಗಿ ಎಳೆ ಬಿಡಿಸಿ ಅನಾವ ರಣಗೊಳಿಸುತ್ತಿದ್ದರು. ಆಗ ಸಮ್ಮತಿಯ ಹೂ ನಗು ನಮ್ಮ ತುಟಿಗಳಲ್ಲಿ ಅರಳುತ್ತಿದ್ದುದನ್ನು ಗಮನಿಸಿದ ಅವರು ತಮ್ಮ ಅತ್ಯಂತ ಕಿರಿಯ ವಿದ್ಯಾರ್ಥಿಯೂ ತಮ್ಮ ಜೊತೆ ಹೆಜ್ಜೆ ಇಡುತ್ತಿರು ವನೆಂದು — ಆತ ತಮ್ಮ ಮನೋಧರ್ಮದ ಮಟ್ಟ ಲ್ಲಿಯೇ ಇರುವನೆಂದು — ತಿಳಿದು ಸಂತೃಪ್ತರಾಗು ತ್ತಿದ್ದರು. ಮುಂದೊಮ್ಮೆ ಅದೇ ನಿರೂಪಣೆ ಯನ್ನು ಓದುತ್ತ ಆ ಚರ್ಚಾಸ್ಪದ ಭಾಗಕ್ಕೆ ಬಂದಾಗ ನಮ್ಮ ಅನುಮೋದನೆ ಹೇಗೆ ಪರಿ ಪೂರ್ಣವಾಗಿದೆ ಎಂಬುದು ಅವರ ಲಕ್ಷ್ಯಕ್ಕೆ ಬರು ತ್ತಿತ್ತು. 'ಈಗ ನೋಡಿದಿರಾ ಹಾಗೆ ಬರಬೇಕು. ನೀವಿದನ್ನು ಇಷ್ಟಪಡುವಿರೆಂದು ತಿಳಿದಿತ್ತು!' ಯಾವುದೇ ಚರ್ಚೆಯಲ್ಲಿ — ವ್ಯಾವಹಾರಿಕ ವಿಚಾರ ಕುರಿತಲ್ಲಿ ಕೂಡ — ಬೋರ್ ಅವರ ಅಗಾಧ ತ್ರಾಣವಿದ್ದುದೇ ಇಲ್ಲಿ: ತಮ್ಮ ಅಧಿಕಾರ ವಾಣಿ ಯನ್ನು ಎಲ್ಲಿಯೂ ಯಾರ ಮೇಲೆಯೂ ಹೇರದೆ ತಮ್ಮ ದೃಷ್ಟಿಕೋನದ ಸಮರ್ಥನೆಗೆ ತರ್ಕಬದ್ಧ ವಾದವನ್ನು ರೂಪಿಸಬಲ್ಲ ಅದ್ವಿತೀಯ ಕೌಶಲ."

ಪ್ರಬಂಧ ರಚನೆ

ಪರಮಾಣು ಪ್ರಪಂಚದ ನಿರ್ವಿವಾದ ಪ್ರಭು ವಾದ ಈ ಮಹಾಶಯನಿಗೆ ಲೇಖನ ರಚನೆ ಅಧ್ವರ ನಿರ್ವಹಣೆಯಂಥ ಅಗಾಧ ಸಾಹಸವೆನಿಸು ತ್ತಿತ್ತು. ಮಹಾಗಾತ್ರದಲ್ಲಿ ಅತಿವೇಗದಿಂದ ಉದ್ಭವಿಸುತ್ತಿದ್ದ ಭಾವನೆಗಳಿಗೆ ರೂಪವಿತ್ತು ಭಾಷೆಯ ಉಡುಪು ತೊಡಿಸಿ ಲೆಕ್ಕಣಿಕೆಯ ಕಪ್ಪು ಶಾಯಿ ಮೂಲಕ ಲಿಪಿಗೆ ಇಳಿಸುವುದು ವಿಪರೀತ ತ್ರಾಸದ ಕಾರ್ಯವಾಗುತ್ತಿತ್ತು. ಈ ಸವಾಲು ಎದುರಿಸಲು ಇವರು ಸ್ವಂತ ವಿಧಾನವೊಂದನ್ನು ರೂಪಿಸಿಕೊಂಡಿದ್ದರು. ಇವರ ಪ್ರಕಾರ ಬೋರ್ ಒಬ್ಬ ಲೆಕ್ಕಣಿಗನ ನೆರವು ಪಡೆಯುತ್ತಿದ್ದರು. ತಾವು ಧ್ಯಾನಸ್ಥರಾಗಿ ಕೊಠಡಿಯಲ್ಲಿ ಮೇಲೆ ಕೆಳಗೆ ತಿರುಗುತ್ತ ಆಗ ಈಗ ಉದುರಿಸುತ್ತಿದ್ದ ಒಂದೋ ಎರಡೋ ವಿಸಂಬಂಧಿತ ಪದಗಳನ್ನು ಈತ ಅದೇ ಕ್ರಮದಲ್ಲಿ ದಾಖಲಿಸಬೇಕಾಗಿತ್ತು. ಪುನರಾ ವರ್ತಿತ ಪದಗಳ ಮತ್ತು ಪರಸ್ಪರ ಸಂಬಂಧವಿರದ ಈ ಪದಸಂತೆಯಿಂದ ಒಟ್ಟಾರೆ ಯಾವ ಅರ್ಥವೂ ಹೊಮ್ಮುತ್ತಿರಲಿಲ್ಲ. ಅವು ಸಂಗತವಾಕ್ಯಗಳಾಗಿ ಕೋದುಕೊಂಡರೆ ತಾನೇ ಅರ್ಥಪೂರ್ತಿ ಆಗು ವುದು! ಕೆಲವು ಗಂಟೆಗಳ ತಪಸ್ಸು, ಪರ್ಯಟನೆ ಉದ್ಗಾರ ಮುಂತಾದ ವಿವಿಧ ಲಾಸ್ಯ ಭಂಗಿಗಳ ಪರಿಣಾಮವಾಗಿ ಉತ್ಪನ್ನಗೊಂಡ ಮೊದಲ ಕರಡು ಮುಂದಿನ ಪ್ರತಿಗೆ ಅಡಿಪಾಯವಾಗು-ತ್ತಿತ್ತು. ಅರ್ಥಸ್ಪಷ್ಟತೆ, ಭಾಷಾಸೌಂದರ್ಯ ಮತ್ತು ಪದಗಳ ಮಿತವ್ಯಯ ಇವನ್ನು ಕುರಿತಂತೆ ಇವರೊಬ್ಬ ಪರಿಪೂರ್ಣತಾವಾದಿ, ಯಾವುದನ್ನೂ ಸಂದರ್ಭದ ಸೆಳವಿಗೆ ಬಿಟ್ಟುಕೊಡದ ಛಲದಂಕ ಮಲ್ಲ.

ಪಾಲ್ ಅರ್ಥರ್ ಶಿಲ್ಪ್ ಎಂಬ ಅಮೇರಿಕನ್ ವಿದ್ವಾಂಸ ಐನ್‌ಸ್ಟೈನರಿಗೆ ಎಪ್ಪತ್ತುವರ್ಷ ಪ್ರಾಯ ತುಂಬುವ ಶುಭದಿನದಂದು (೧೪. ೩. ೧೯೪೯) ಒಂದು ವಿಶೇಷ ಅಭಿನಂದನ ಗ್ರಂಥ ಅರ್ಪಿಸಬೇಕೆಂದು ಯೋಜಿಸಿ ಈ ಗ್ರಂಥಕ್ಕೆ ಯುಕ್ತಲೇಖನ ಬರೆದುಕೊಡಬೇಕೆಂದು ಬೋರ್ ಅವರನ್ನು ಪ್ರಾರ್ಥಿಸಿದರು. "ಐನ್ ಸ್ಟೈನರ ಧೀಶಕ್ತಿ ನಮ್ಮ ಇಡೀ ತಲೆಮಾರಿಗೆ ನೀಡಿರುವ ಮಾರ್ಗದರ್ಶನವನ್ನು ಕೃತಜ್ಞತೆಯಿಂದ ಸ್ಮರಿಸುತ್ತ" ಈ ಪ್ರಿಯ ಕರ್ತವ್ಯ ನೆರವೇರಿ ಸಲು ಬೋರ್ ಒಪ್ಪಿಕೊಂಡರು. ಆದರೆ ಬರೆ ಯುವುದು ಯಾವಾಗ, ಎಲ್ಲಿ?

ಆಗ ಅವರು ಪ್ರಿನ್‌ಸ್ಟನ್ನಿಗೆ ಗೌರವ ಸಂದ ರ್ಶಕ ಪ್ರಾಧ್ಯಾಪಕರಾಗಿ ಆಗಮಿಸಿದ್ದರು. ಇದು ಐನ್‌ಸ್ಟೈನ್ ಇದ್ದ ಸಂಸ್ಥೆ ಮತ್ತು ನಗರ. ಇಲ್ಲಿ ಕೆಲವು ತಿಂಗಳಕಾಲ ತಂಗುವ ಕಾರ್ಯಕ್ರಮ ವಿದ್ದುದರಿಂದ ಲೇಖನವನ್ನು ಈ ವಾಸ್ತವ್ಯದ ವೇಳೆ ಬರೆಯುವುದಾಗಿ ಹಮ್ಮಿಕೊಂಡಿದ್ದರು. ಪ್ರಿನ್‌ಸ್ಟನ್ನಿನಲ್ಲಿದ್ದ ತಮ್ಮ ಶಿಷ್ಯ ಅಬ್ರಹಮ್ ಪಾಯ್ಸ್ ಅವರನ್ನು ಲೆಕ್ಕಣಿಗನಾಗಿ ತನಗೆ ನೆರ

ವಾಗಲು ಕೋರಿದರು: ಆ ವೇದವ್ಯಾಸನಿಗೆ ಈ ಮೂಷಕವಾಹನ!

"ನನಗೊಂದು ಮೂಲಬಿಂದು ಬೇಕು ನೋಡಿ ನಿರ್ದೇಶಕ ವ್ಯವಸ್ಥೆ (coordinate system) ರೂಪಿಸಲು" ಎಂದರು ಬೋರ್. ಆ ಮೂಲ ಬಿಂದುವೇ ಪಾಯ್ಸ್.

ಪ್ರಿನ್ಸ್‌ಟನ್ನಿನ ಫೈನ್ ಹಾಲ್ ಎಂಬ ಕಟ್ಟಡ. ಅಲ್ಲಿಯ ಒಂದು ಕಿರುಕೊಠಡಿ ಐನ್‌ಸ್ಟೈನರ ಅಧಿಕೃತ ಕಚೇರಿ. ದೊಡ್ಡ ಕೊಠಡಿ ಇವರಿಗೆ ಇಷ್ಟವಾಗುತ್ತಿರಲಿಲ್ಲ. ಈ ಕೊಠಡಿಯ ಪಕ್ಕದ್ದನ್ನು ಬೋರ್ ಅವರಿಗೆ ಕೊಡಲಾಗಿತ್ತು. ಬೋರ್ ಮತ್ತು ಪಾಯ್ಸ್ ಇದರ ಒಳಹೊಕ್ಕರು. ಕದ ಮೆತ್ತಗೆ ತಳ್ಳಿ ಮುಚ್ಚಿದರು. ಬಾದಾಮಿ ಆಕಾರದ ದೊಡ್ಡ ಮೇಜಿನ ಅಂಚಿನಲ್ಲಿ ಪಾಯ್ಸ್ ಕುಳಿತರು. ಎದುರಿದ್ದ ತೆರೆಜಾಗದಲ್ಲಿ ಬೋರ್ ಕೊಠಡಿಯ ಉದ್ದಕ್ಕೂ ಹಿಂದೆ ಮುಂದೆ ಭರದಿಂದ ಗಸ್ತು ತಿರುಗತೊಡಗಿದರು. ಒಂದು ಪದದ ಮೇಲೆ ಮಾನಸಿಕವಾಗಿ ಲಕ್ಷ್ಯ ಕೇಂದ್ರೀಕರಿಸಿದರು. ಅದನ್ನು ನೇವರಿಸಿದರು, ಪೋಷಿಸಿದರು, ಬೆಂಬಲಿಸಿದರು. ಇದ್ದಕ್ಕಿದ್ದಂತೆ ಅವರ ಗಂಟಲಿನ ಅಂತರಾಳದಿಂದ ಇಕ್ಕುಳ ಹಾಕಿ ಹೊರಗೆಳೆದಂತೆ ಒಂದು ಪದ ಸಿಗಿದು ಬಿತ್ತು: "ಐನ್‌ಸ್ಟೈನ್."

ಮುಂದೇನು? ಶತಪಥ, ತಕಪಕ, ತಕಧಿಮಿ, ತಕ ಜೊಣು. ಮತ್ತೆ ಅದೇ ಪದ: "ಐನ್‌ಸ್ಟೈನ್."

ನಿಂತರು, ಪದದ ಬೆನ್ನೇರಿ ನಡೆದರು, ಮುಂದಿನ ಪದಕ್ಕೆ ಗಾಳ ಹಾಕಿದರು, ಹೊಂಚಿದರು. ಇಲ್ಲ, ಅದು ಕಚ್ಚಲಿಲ್ಲ. ಎರೆ ಸಾಕಾಗಲಿಲ್ಲವೋ ಏನೋ! ಮತ್ತೆ ಓಡಾಟ. ಆಗೊಂತು ಬಂತು ಬನಿ ಬಂತು ಬಂತು ದನಿ ಬಂತು! ಸೋತು ಹಣ್ಣಾಗಿದ್ದರು: "ಐನ್‌ಸ್ಟೈನ್ ಐನ್‌ಸ್ಟೈನ್."

ಈಗ ಅವರು ಪೂರ್ತಿ ಸೋತಿದ್ದರು. ಕೈ ಕೊಡಹಿ ಚತ್ತುವನ್ನು ನಿಟ್ಟಿಸಿದರು. ಬಾಗಿಲಿನ

ನೇರಿದಿರು ಇದ್ದ ಕಿಟಕಿಯೆಡೆಗೆ ಜಗಿದರು, ಕಂಬಿಗಳ ಮೇಲೆ ಒಡಲ ತೂಕ ಚೆಲ್ಲಿ ಹೊರಗಿನ ದೃಶ್ಯದ ಮೇಲೆ ದಿಟ್ಟಿ ಹಾಯಿಸಿದರು, ನವ ಸ್ಫೂರ್ತಿ ನಿರೀಕ್ಷಿಸುತ್ತ ನಿಂತರು.

ತೀರ್ಥೋದ್ಭವವನ್ನು ಎದುರು ನೋಡುವ ಭಕ್ತನಂತೆ ಪಾಯ್ಸ್ ಕಾದರು. ಅಷ್ಟರಲ್ಲೇ ಇವರ ಗಮನ ಬಾಗಿಲಿನತ್ತ ಹರಿಯಿತು — ಹರಿಯುವುದು ಅನಿವಾರ್ಯವಾಯಿತು. ಅಲ್ಲೇನು ವಿಶೇಷ? ಕದ ಮೆತ್ತಗೆ ಸರಿಯುತ್ತಿತ್ತು, ಸದ್ದು ಇನಿತೂ ಸೂಸುತ್ತಿರಲಿಲ್ಲ. ಆದರೆ ಇದೇನು ಯಾರು ಹೀಗೆ ಆಟವಾಡುತ್ತಿದ್ದಾರೆ? ಇನ್ನಾರು? ಅವರೇ — ಸಾಕ್ಷಾತ್ ಐನ್‌ಸ್ಟೈನರೇ! ಪಾಯ್ಸರಿಗೆ ಗಾಬರಿ. ಇವರೇಕೆ ಹೀಗೆ ಬರುತ್ತಿದ್ದಾರೆ? ಬೋರ್ ಹೊಡೆದ ಬೊಬ್ಬೆ ಕೇಳಿ ತಮಾಷೆ ನೋಡಲೆಂದೇ? ಬಾಗಿಲೊಳು ಕೈಮುಗಿದು!

ಕಣ್ಣುಗಳ ಅಂಚಿನಲ್ಲಿ ಕಿರುಚೇಷ್ಟೆ ಬೀರುವ ಮಂದಹಾಸ. ತೋರುಬೆಟ್ಟನ್ನು ತುಟಿಯ ಮೇಲಿಟ್ಟು ಮೌನವಾಗಿರಲು ಸಂಜ್ಞೆ. ಹಸ್ತವನ್ನು ಕೆಳಮೊಗವಾಗಿ ಕೆಳಕ್ಕೆ ಬೀಸಿ ಏಳಕೂಡದೆಂಬ ಆದೇಶ. ಪಾಯ್ಸ್ ವಿಸ್ಮಿತನೇತ್ರರಾಗಿ ಒಮ್ಮೆ ಐನ್‌ಸ್ಟೈನ್ ಮುಖ ಒಮ್ಮೆ ಬೋರ್ ಬೆನ್ನು ಹೀಗೆ ದೃಷ್ಟಿ ಹಾಯಿಸುತ್ತ ತಮ್ಮ ಅಸುಖಾಸನಕ್ಕೆ ಅಂಟಿಕೊಂಡರು.

ಅವರು ಬಂದರು. ಕಳ್ಳ ಹೆಜ್ಜೆ ಇಡುತ್ತ ಬಂದರು. ಬೆಕ್ಕಿನಂತೆ ಮೆತ್ತಗೆ ನಡೆದು ಬಂದರು. ಮೇಜಿನ ಅಂಚು ತಲಪಿದರು. ಅಲ್ಲಿದ್ದ ತಂಬಾಕದ ಕರಡಿಗೆಗೆ (ಐನ್‌ಸ್ಟೈನರಂತೆ ಬೋರ್ ಕೂಡ ಧೂಮಪಾನಪ್ರಿಯ. ಪೈಪಿಗೆ ಗಿಡಿಯಲು ತಮ್ಮೊಡನೆ ಒಯ್ಯುತ್ತಿದ್ದ ತಂಬಾಕು ಕರಡಿಗೆಯನ್ನು ಮೇಜಿನ ಮೇಲಿರಿಸಿದ್ದರು. ಈ ಸೂಕ್ಷ್ಮ ಐನ್‌ಸ್ಟೈನರಿಗೆ ಮೊದಲೇ ಗೊತ್ತಿತ್ತು–– ವೃತ್ತಿ ರಹಸ್ಯ) ಮೆತ್ತಗೆ ಬೆರಳಿಟ್ಟು ಚಿಟಿಕೆ ತಂಬಾಕು ಎತ್ತಿ ಪೈಪಿಗೆ ಸದ್ದಿಲ್ಲದೆ ತುಂಬಿದರು. ಮಾತಿಲ್ಲ, ತೃಪ್ತಭಾವ. ಇನ್ನೇನು ಹಿಂತಿರುಬೇಕು...

ಅಷ್ಟರಲ್ಲಿ ಬೋರ್ ನವೋತ್ಸಾಹೋನ್ಮೀಲಿತರಾಗಿ "ಐನ್‌ಸ್ಟೈನ್ ಐನ್‌ಸ್ಟೈನ್" ಎಂದು ಅರ್ಭಟಿಸುತ್ತ ವಿದ್ಯುತ್ತಿನ ಚುರುಕಿನಿಂದ ೧೮೦ ಡಿಗ್ರಿ ಪೂರ್ತಿ ತಿರುಗಿದರು (ಪೀಚೇಮೂಡ್). ಇನ್ನೇನು ಎಡಗಾಲು ಮುಂದಿಡಬೇಕು...... ಇಲ್ಲ, ಅರೆ ಐನ್‌ಸ್ಟೈನ್ ಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ? ಇಲ್ಲ, ನಿಂತೇ ಇದೆ! ಅದೇ ಮುಗ್ಧ ಚೇಷ್ಟೆ ಭಂಗಿ, ತನ್ನ ಗರ್ಜನೆಗೆ ಓಗೊಟ್ಟು ಬಂದು ನಿಂತು "ಏನಪ್ಪಣೆ?" ಎಂದು ಕೇಳುತ್ತಿರುವರೋ ಎನ್ನುವಂತೆ. ಆದರೆ ಕಂಡು ಧನ್ಯನಾಗುವ ಸಂದರ್ಭ ಅದಲ್ಲವಷ್ಟೆ!

ಈ ನಾಟಕದ ಮೂರು ಪಾತ್ರಧಾರಿಗಳೂ ಗರಬಡಿದವರಂತೆ ಸ್ತಂಭೀಭೂತರಾದರು: ಬೋರ್ ಅರಿಯದೆ ಮಾಡಿದ ಅಪಚಾರಕ್ಕಾಗಿ; ಐನ್‌ಸ್ಟೈನ್ — ಲೆತ್ತವೆಸೆಯುವ ಭಗವಂತನ (= ಬೋರ್) ನವಲೀಲೆಯ ಸಾಕ್ಷಾತ್ಕಾರಕ್ಕಾಗಿ, ಪಾಯ್ಸ್— ಲೆತ್ತವೆಸೆಯದ (= ಐನ್‌ಸ್ಟೈನ್) ಮತ್ತು ಲೆತ್ತವೆಸೆಯುವ ಭಗವಂತರುಗಳ ಹಠಾತ್ ಸಂಘಟ್ಟನೆಗಾಗಿ.

ಇದೊಂದು ಅತ್ಯುಚ್ಚ ವಿದ್ಯುದಾವಿಷ್ಟ ಸನ್ನಿವೇಶ. ಐನ್‌ಸ್ಟೈನರೇ ಮೊದಲು ಮಾತಾಡಿ ಇದನ್ನು ಫುಸ್‌ಗೊಳಿಸಿದರು (defused): "ನೋಡಿ! ನನ್ನ ಆರೋಗ್ಯ ಗಮನಿಸಿದ ವೈದ್ಯ ನಾನು ತಂಬಾಕು ಕೊಳ್ಳುವುದನ್ನು ಪೂರ್ತಿ ನಿಷೇಧಿಸಿದ್ದಾನೆ. ಆದರೆ ಕದಿಯಬಾರದೆಂದು ವಿಧಿಸಿಲ್ಲವಷ್ಟೆ? ಅದಕ್ಕಾಗಿಯೇ ನಾನಿಲ್ಲಿಗೆ ಬಂದದ್ದು!"

ಕೂಪನ್‌ಹೇಗನ್ನಿನ ಚೇತನ

ಭೌತವಿಜ್ಞಾನ ಕ್ಷೇತ್ರದಲ್ಲಿ ಬೋರ್ ಪ್ರಪಂಚದ ವರಿಷ್ಠರ ಸಮಭುಜರೆಂದು ತಿಳಿದಾಗ ಸಹಜವಾಗಿ ಡೆನ್ಮಾರ್ಕ್ ದೇಶ ಇವರ ಬಗೆಗೆ ಹೆಮ್ಮೆ ತಳೆಯಿತು. ಮ್ಯಾಂಚೆಸ್ಟರಿನಲ್ಲಿ ಉಪನ್ಯಾಸಕ (೧೯೧೪-೧೬) ಆಗಿದ್ದ ಇವರನ್ನು ತಾಯ್ನಾಡಿಗೆ ಆಹ್ವಾನಿಸಿ ಕೂಪನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿ ನೇಮಿಸಲಾಯಿತು. ಇಲ್ಲಿ ಈ ಮಹಾವಿಜ್ಞಾನಿ ಸಂಸ್ಥೆ ಕಟ್ಟಿದರು. ೧೯೨೧ರಿಂದೀಚೆಗೆ ಇದು ನೀಲ್ಸ್ ಬೋರ್ ಇನ್‌ಸ್ಟಿಟ್ಯೂಟ್ ಎಂದು ಪ್ರಪಂಚ ಪ್ರಸಿದ್ಧವಾಗಿದೆ. ಪ್ರಪಂಚದ ಮುಖವನ್ನೇ

ಬದಲು ಮಾಡಲು ಕಾರಣರಾದ ಅಸಂಖ್ಯ ಪ್ರತಿಭಾಶಾಲಿಗಳು ಈ ಸಂಸ್ಥೆಯಲ್ಲಿ ಸಂಶೋಧಕರಾಗಿ, ಪ್ರಾಧ್ಯಾಪಕರಾಗಿ, ಸಂದರ್ಶನ ಪ್ರಾಧ್ಯಾಪಕರಾಗಿ ಇತ್ಯಾದಿ ದುಡಿದು ಇದನ್ನು ಭೌತವಿಜ್ಞಾನಿಗಳ ಕಾಶಿ ಆಗಿಸಿದ್ದಾರೆ. ಬೋರ್ ಇವರ ಸಹಜ ನಾಯಕ. ಕ್ರಮೇಣ ಇವರ ವ್ಯಕ್ತಿತ್ವದ ಸುತ್ತ ಕೂಪನ್‌ಹೇಗನ್ನಿನ ಚೇತನ ಎನ್ನುವ ಪರಿವೇಶ ಮಿನುಗತೊಡಗಿತು.

ಒಮ್ಮೆ ಇವರು ಮಾಸ್ಕೊ ನಗರಕ್ಕೆ ಲೆವ್ ಲ್ಯಾಂಡೌ ಅವರ ಗೌರವಾನ್ವಿತ ಅತಿಥಿಯಾಗಿ ಹೋದರು. ಲ್ಯಾಂಡೌ ರಶ್ಯಾ ದೇಶದ ಪ್ರಮುಖ ಭೌತವಿಜ್ಞಾನಿ, ಬೋರ್ ಅವರ ಶಿಷ್ಯ, ನೊಬೆಲ್ ಪ್ರಶಸ್ತಿ ವಿಜೇತ.

ಲ್ಯಾಂಡೌ ಕೇಳಿದರು "ಕೂಪನ್‌ಹೇಗನ್ ಸೈದ್ಧಾಂತಿಕ ಭೌತವಿಜ್ಞಾನದ ಇಷ್ಟೊಂದು ಪ್ರಖ್ಯಾತ ಕೇಂದ್ರವಾಗಿರುವುದರ ಮತ್ತು ಅಷ್ಟೊಂದು ಮಂದಿ ಪ್ರತಿಭಾವಂತರನ್ನು ಸೃಷ್ಟಿಸುತ್ತಿರುವುದರ ರಹಸ್ಯವೇನು?"

ಬೋರ್ ಚಕಿತರಾಗಿ ಉದ್ಗರಿಸಿದರು "ನಿಜಕ್ಕೂ ನಾನರಿಯೆ. ಪ್ರಾಯಶಃ ಅಲ್ಲಿ ನಾವು ನಮಗೆ ಅರ್ಥವಾಗದ್ದನ್ನು ಸ್ಪಷ್ಟಪಡಿಸಿಕೊಳ್ಳಲು ಎಂಥ ಮುಠ್ಠಾಳ ಪ್ರಶ್ನೆಗಳನ್ನು ಕೂಡ ಕೇಳಲು ಹಿಂಜರಿಯುವುದಿಲ್ಲ."

ಜರ್ಮನಿಯ ವರ್ನರ್ ಹೈಸನ್‌ಬರ್ಗ್ ಇವರ ಇನ್ನೊಬ್ಬ ಶಿಷ್ಯ, ನೊಬೆಲ್ ಪ್ರಶಸ್ತಿ ವಿಜೇತ, ಪರಮಾಣುವಿನ ಕೂಪನ್‌ಹೇಗನ್ ವ್ಯಾಖ್ಯಾನ ಮಂಡಿಸಿದ ಅಗ್ರಮಾನ್ಯರ ಪೈಕಿ ಒಬ್ಬರು. ಇವರು ತಮ್ಮ ಮಿತ್ರ ವೈಸ್ಝೋಕರರಿಗೆ ಹೇಳಿದ ಮಾತು "ನಾನು ಆಶಾವಾದವನ್ನು ಸೊಮ್ಮರ್‌ಫೆಲ್ಡ್ ಅವರಿಂದಲೂ ಗಣಿತವನ್ನು ಗಟಿಂಗೆನ್ನಿನ (ಜರ್ಮನಿಯ ಪ್ರಸಿದ್ಧ ಗಣಿತ ಕೇಂದ್ರ) ಜನರಿಂದಲೂ ಭೌತವಿಜ್ಞಾನವನ್ನು ನೀಲ್ಸ್ ಬೋರ್ ಅವರಿಂದಲೂ ಕಲಿತೆ."

೧೯೩೦ರಿಂದ ಮುಂದಕ್ಕೆ ಜರ್ಮನಿಯ ಆಂತರಿಕ ಹವೆ ಪ್ರಪಂಚ ಶಾಂತಿಗೆ ಮಾರಕವಾಗುವ ತೆರದಲ್ಲಿ ತೀವ್ರವಾಗಿ ಬಿಗಡಾಯಿಸತೊಡಗಿತು. ಆಗ ನಾಟ್ಸೀಗಳ ಅಧಿಕಾರಾರೋಹಣಪರ್ವವೂ ಯಹೂದ್ಯಹನನ ಕ್ರೌರ್ಯಪರ್ವವೂ ರುದ್ರ ನಾಟಕವೊಂದರ ಅಂಕಗಳೋಪಾದಿಯಲ್ಲಿ ವ್ಯವಸ್ಥಿತವಾಗಿ ಮುನ್ನಡೆದು ಅಡಾಲ್ಫ್ ಹಿಟ್ಲರ್ ३೦-೧-೧೯३३ ರಂದು ಗದ್ದುಗೆ ಏರುವುದರಲ್ಲಿ 'ಯಶಸ್ಸು' ಕಂಡವು. ಮುಂದೆ ಸುಯೋಜಿತ ಸ್ವರಮೇಳದ ಲಯಬದ್ಧತೆಯಿಂದ ಯಹೂದ್ಯ ಬೇಟೆ, ಜರ್ಮನಿಯ ನಾಟ್ಸೀಕರಣ ಮತ್ತು ಸಾಮ್ರಾಜ್ಯ ವಿಸ್ತರಣ ಕಾರ್ಯಕ್ರಮ ಅನಾವರಣಗೊಂಡು ೧-೯-೧೯೩೯ ರಂದು ಎರಡನೆಯ ಮಹಾಯುದ್ಧವಾಗಿ ಸ್ಫೋಟಿಸಿದುವು.

ಯೂರೋಪ್ ಖಂಡದ ಬಹ್ವಂಶ ಈ ದಾವಾನಲದಿಂದ ದಹಿಸತೊಡಗಿತು. ಜರ್ಮನಿಯಿಂದ ಯಹೂದ್ಯ ಪ್ರವಾಹ ಇತಿಹಾಸದಲ್ಲಿ ಹಿಂದೆಂದೂ ಸಂಭವಿಸದಿದ್ದ ಗಾತ್ರ ಮತ್ತು ತೀವ್ರತೆಗಳಿಂದ ನೆರೆರಾಷ್ಟ್ರಗಳಿಗೆ ಹರಿಯತೊಡಗಿತು. ಯಹೂದ್ಯರು ಮಾತ್ರವಲ್ಲ, ಯಹೂದ್ಯ ಮೂಲದವರು ಕೂಡ ನಾಟ್ಸೀಗಳ ಭಲ್ಲೂಕ ದೃಷ್ಟಿಯಿಂದ ಪಾರಾಗುವುದು ಅಶಕ್ಯವಾಗಿತ್ತು. ಆಗ ವಿಜ್ಞಾನಿಗಳು ತಮ್ಮ ಪ್ರಯೋಗಮಂದಿರದ ಶಾಂತ ಮತ್ತು ಸೌಹಾರ್ದ ಪರಿಸರ ತೊರೆದು ನರಮೇಧದ ಆಕ್ರಾಂತ ಮತ್ತು ದಾರುಣ ಸನ್ನಿವೇಶ ಎದುರಿಸುವುದು ಅನಿವಾರ್ಯವಾಯಿತು. ದಿನೇ ದಿನೇ ಅಧಿಕಾಧಿಕ ಪ್ರದೇಶಗಳನ್ನು ಸ್ವಾಹಾಕರಿಸುತ್ತಿದ್ದ ಜರ್ಮನ್ ಯುದ್ಧಾಸುರನ ಎದುರು ಯುರೋಪಿನ ಯಾವ ರಾಷ್ಟ್ರವೂ ಯಹೂದ್ಯಕುಲಜರಿಗೆ ಸುರಕ್ಷಣೆ ಒದಗಿಸಲಾರದಾಗಿತ್ತು. ದೂರದ ಅಮೇರಿಕ ದೇಶಕ್ಕೆ ಕದ್ದು ಪಲಾಯನಗೈಯುವುದೊಂದೇ ಅವರಿಗೆ ಪ್ರಾಣ ಮತ್ತು ಮಾನ ಉಳಿಸಿಕೊಳ್ಳುವ ಹಾದಿಯಾಗಿತ್ತು.

ಬೋರ್ ತಮ್ಮ ತಾಯಿಯ ಕಡೆಯಿಂದ ಯಹೂದ್ಯಮೂಲದವರು. ಅತ್ಯಂತ ಉದಾರ ಗೃಹ ಪರಿಸರದಲ್ಲಿ ಮತ್ತು ವಿಜ್ಞಾನದ ವಸ್ತುನಿಷ್ಠ ವಾತಾವರಣದಲ್ಲಿ ಅರಳಿದ ಈ ಪ್ರತಿಭಾನ್ವಿತ ವ್ಯಕ್ತಿ ಮತಧರ್ಮ ಕುರಿತಂತೆ ಪೂರ್ಣ ವಿವೃತಮನಸ್ಕರಾಗಿದ್ದರು: ವ್ಯಕ್ತಿ ಮತ್ತು ಆತ ನಂಬಿದ ಪರಮಚೇತನದ ನಡುವಿನ ಖಾಸಗಿ ಸಂಬಂಧವಾದ ಧರ್ಮ ಸಾರ್ವಜನಿಕ ಜೀವನದ ಸಂದರ್ಭದಲ್ಲಿ ಸುಸಂಸ್ಕೃತ ವರ್ತನೆಯಾಗಿ ಪ್ರಕಟ

ವಾಗಬೇಕೇ ವಿನಾ ಕುರುಡು ಹಠಮಾರಿತನವಾಗಿ ಅಲ್ಲ ಎಂಬುದು ಇವರ ದೃಢ ನಿಲವು.

ಅಂದಿನ ಅಮಾನವೀಯ ಮತ್ತು ಕ್ರೂರ ಹವೆಯಲ್ಲಿ ತಮ್ಮ ಪಾತ್ರ ಏನೆಂಬುದರ ಬಗ್ಗೆ ಇವರಿಗೆ ಸ್ಪಷ್ಟ ಕಲ್ಪನೆ ಇತ್ತು. ಜರ್ಮನಿಯಿಂದಲೂ ನಾಟ್ಸೀ ಆಕ್ರಮಿತ ರಾಷ್ಟ್ರಗಳಿಂದಲೂ ತಪ್ಪಿಸಿಕೊಂಡು ಬಂದ ವಿಜ್ಞಾನಿಗಳಿಗೆ ಆಶ್ರಯ ಒದಗಿಸುವ ಹಾಗೂ ಅವರನ್ನು ಇಂಗ್ಲೆಂಡ್ ಅಥವಾ ಅಮೆರಿಕ ದೇಶಕ್ಕೆ ರಹಸ್ಯವಾಗಿ ಸಾಗಹಾಕುವ ಸೇವೆಯಲ್ಲಿ ನಿರತರಾದರು. ಇವರ ಈ ನಿಷ್ಠೆ ಸಹಜವಾಗಿ ನಾಟ್ಸೀಗಳ ಆಕ್ರೋಶಕ್ಕೆ ಕಾರಣವಾಯಿತು. ಹಿಮಾಶ್ಮ ಪ್ರವಾಹದ ಗಭೀರತೆಯಿಂದ ಮುಂದೊತ್ತಿ ಬರುತ್ತಿದ್ದ ನಾಟ್ಸೀ ದುರಾಕ್ರಮಣಕ್ಕೆ ಡೆನ್ಮಾರ್ಕ್ ದೇಶ ಇಂದಲ್ಲ ನಾಳೆ ಬಲಿ ಆಗುವುದು ನಿರೀಕ್ಷಿತವೇ. ಆ ವೇಳೆಗೆ ಬೋರ್ ಮತ್ತು ಅವರ ಕುಟುಂಬದ ವೈಯಕ್ತಿಕ ರಕ್ಷಣೆ ಹೇಗೆ ಸಾಧ್ಯವಾದೀತು? ಇವು ಯಾವುದನ್ನೂ ಲೆಕ್ಕಿಸದೆ ಆರ್ತರಿಗೆ ಸಂರಕ್ಷಣೆ ಮತ್ತು ಪ್ರಯೋಗಾಲಯದಲ್ಲಿ ಸಂಶೋಧನೆ ಮುಂದುವರಿದೇ ಇದ್ದುವು.

೧೯೪೦ರಲ್ಲಿ ಅದು ಘಟಿಸಿಯೇಬಿಟ್ಟಿತು: ಡೆನ್ಮಾರ್ಕಿನ ಪತನ. ತಮ್ಮ ಹೆಸರು ನಾಟ್ಸೀ ದುರಾತ್ಮರ ಕೊಲೆ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆಯೆಂದು ತಿಳಿದಿದ್ದರೂ ಮಾತೃಭೂಮಿಯನ್ನು ತೊರೆದು ಹೋಗುವ ಯೋಚನೆ ಮಾಡಲಿಲ್ಲ. ಅವರೇ ಹೇಳುತ್ತಿದ್ದಂತೆ "ಡೆನ್ಮಾರ್ಕಿನಲ್ಲಿ ಜನಿಸಿದೆ, ಅಲ್ಲಿ ಇದೆ ನನ್ನ ನೆಲೆ, ನನ್ನ ಜಗತ್ತು ಆರಂಭವಾಗುವುದು ಅಲ್ಲಿಂದ."

೧೯೪೩ ಆಗಸ್ಟ್ ವೇಳೆಗೆ ರಶ್ಯಾದಲ್ಲಿಯ ಪ್ರಚಂಡ ಪರಾಭವದಿಂದ ಧೃತಿಗೆಟ್ಟು ಪಲಾಯನ ಮಾಡುತ್ತಿದ್ದ ನಾಟ್ಸೀಗಳು ಆಕ್ರಮಿತ ಯೂರೋಪಿನಲ್ಲಿ ಧ್ವಂಸಕಾರ್ಯಮಗ್ನರಾದರು. ಅಲ್ಲಿಯ ತನಕ ಡೆನ್ಮಾರ್ಕಿನಲ್ಲಿ ನೆಲಸಿದ್ದ ಒಂದು ಬಗೆಯ ಅಶಾಂತ ತಾಟಸ್ಥ್ಯ ಕುಸಿದು ಕುಕ್ಕರಿಸಿ ಸಾರ್ವಜನಿಕ ಅರಾಜಕತೆ ತಾಂಡವವಾಡತೊಡಗಿತು. ಆಗ ಬೋರ್ ಕುಟುಂಬ ಕ್ಷಣಕ್ಷಣಕ್ಕೂ ಪ್ರಾಣಾಪಾಯ ಎದುರಿಸಬೇಕಾದ ಕಟು ವಾಸ್ತವತೆ ತಲೆದೋರಿತ್ತು.

ಇತ್ತ ಸ್ವತಂತ್ರವಾಗಿ ಇನ್ನೊಂದು ರೀತಿಯ ಮಾರಣಹೋಮದ ಪೂರ್ಣಾಹುತಿ ಮುಹೂರ್ತ ಸನ್ನಿಹಿತವಾಗುತ್ತಿದ್ದುದು ಎಲ್ಲ ವಿಜ್ಞಾನಿಗಳ ಗಮನಕ್ಕೂ ಬಂದಿತ್ತು: ಅದು ಯಮರಾಯನ ಖಚಿತಾಗಮನ ಸಾರುವ ಪರಮಾಣು ಬಾಂಬಿನ ಸಾಕ್ಷಾತ್ಕಾರ. ಮಿತ್ರ ರಾಷ್ಟ್ರಗಳ ವಿಜ್ಞಾನಿಗಳ ಊಹೆಯ ಪ್ರಕಾರ ಹಿಟ್ಲರ್ ಈ ಪರಮಾಂತಿಮಾಸ್ತ್ರದ ಸಿದ್ಧಿಗೆ ಸರ್ವಪ್ರಯತ್ನ ನಡೆಸಿದ್ದಾನೆ, ಎಲ್ಲ ರಂಗಗಳಲ್ಲಿಯೂ ಸೋಲು ಸಾವು ಅನುಭವಿಸಿ ಚೆಲ್ಲಾಪಿಲ್ಲಿ ಚದರಿಹೋಗಿದ್ದ ಸೈನ್ಯಗಳನ್ನು ಒಗ್ಗೂಡಿಸಲು ಹಾಗೂ ಜರ್ಮನ್ ವರಿಷ್ಠತೆಯನ್ನು ಪುನರುಜ್ಜೀವನಗೊಳಿಸಲು ಈ ಅಸ್ತ್ರದ ಪ್ರಯೋಗವೊಂದೇ ಉಳಿದಿರುವ ಉಪಾಯ, ಆದ್ದರಿಂದ ಕೇವಲ ತಿಂಗಳುಗಳ ಒಳಗೆ ಈ ಘೋರ ಹನನ ಸಂಭವಿಸುವುದು ದಿಟ ಎಂದಿತ್ತು. ಇದು ಆಗದಿರಬೇಕಾದರೆ, ನಾಗರಿಕತೆಗೆ ಸಾವು ಬರದಿರಬೇಕಾದರೆ ಮತ್ತು ಪ್ರಪಂಚದಲ್ಲಿ ಶಾಂತಿ ನೆಲಸಿರಬೇಕಾದರೆ ಮಿತ್ರ ರಾಷ್ಟ್ರಗಳ ಕೈ ಮೇಲಾಗುವುದೊಂದೇ ಹಾದಿ. ಆದ್ದರಿಂದ ಪರಮಾಣು ಬಾಂಬ್ ಉತ್ಪಾದನೆಯಲ್ಲಿ ಹಿಟ್ಲರನಿಗಿಂತ ಮೊದಲು ಮಿತ್ರರಾಷ್ಟ್ರಗಳು ಜಯಗಳಿಸಬೇಕು ಎಂದು ತೀವ್ರ ಚಿಂತನೆ, ಯೋಚನೆ ಯೋಜನೆ ಹರಿದುವು. ಇಂಗ್ಲೆಂಡ್ ಮತ್ತು ಅಮೆರಿಕ ಈ ದಿಶೆಯಲ್ಲಿ ಈಗಾಗಲೇ ಸಾಕಷ್ಟು ಪ್ರಗತಿ ಸಾಧಿಸಿದ್ದುವು. ಈ ರಾಷ್ಟ್ರಗಳ ಸಂಯುಕ್ತ ಯೋಜನೆಯಾಗಿ ಅಮೇರಿಕದಲ್ಲಿ ಮನಹಟ್ಟನ್ ಪ್ರೊಜೆಕ್ಟ್ ಎಂಬ ಹೆಸರಿನ ವ್ಯವಸ್ಥಾಪನೆ ಪರಮಾಣು ಬಾಂಬ್ ನಿರ್ಮಾಣ ಕಾರ್ಯದಲ್ಲಿ ತೊಡಗಿತ್ತು. ಇದರಲ್ಲಿ ಭೌತವಿಜ್ಞಾನಿಗಳ ಉನ್ನತ ಸಮೂಹ ದುಡಿಯುತ್ತಿತ್ತು, ಮುಂತಾದ ವಿವರಗಳು ಬೋರ್ ಅವರಿಗೆ ತಿಳಿದಿದ್ದುವು. ಆದ್ದರಿಂದ ಸದ್ಯಕ್ಕೆ ಅಮೆರಿಕವೆ ತಮ್ಮ ಗುರಿ ಎಂದು ನಿರ್ಧರಿಸಿದರು. ಹೀಗೆ ಸನ್ನಿವೇಶಗಳ ಪಿತೂರಿಯ ಪರಿಣಾಮವಾಗಿ ಇವರು ಕುಟುಂಬ ಸಹಿತ ತಮ್ಮ ಆತ್ಮೀಯ ಪರಿಸರ ಡೆನ್ಮಾರ್ಕನ್ನು ತೊರೆದು ಸ್ವೀಡನ್ ಮಾರ್ಗವಾಗಿ ಮೊದಲು

ಇಂಗ್ಲೆಂಡಿಗೂ ಅಲ್ಲಿಂದ ಅಮೆರಿಕಕ್ಕೂ ಯಾನಿಸುವುದು ಅನಿವಾರ್ಯವಾಯಿತು (೨೯-೯-೧೯೪೩).

ಪರಮಾಣು ಬಾಂಬ್ ಅಥವಾ ಶಾಂತಿ?

ಅಮೆರಿಕದಲ್ಲಿ ಬೋರ್ ಮತ್ತು ಇವರ ಮಗ ಆಗೇ ಬೋರ್ (ಇವರೂ ಭೌತವಿಜ್ಞಾನಿ) ಮನಹಟ್ಟನ್ ಪ್ರೊಜೆಕ್ಟನ್ನು ಸೇರಿಕೊಂಡರು. ಇಲ್ಲಿ ಅವರು ಪರಮಾಣುಶಕ್ತಿ ಬಸಿತದ ಎಲ್ಲ ಹಂತಗಳನ್ನೂ ಗಮನಿಸಿದರು; ಈ ಶಾಂತಿಪ್ರಿಯ ಮಹಾಪುರುಷನ ಮನಸ್ಸಿನಲ್ಲಿ ಮತ್ತೆ ಮತ್ತೆ ಮಿಡಿದ ಪ್ರಶ್ನೆ ಇದೇ:

ಇಂದಲ್ಲ ನಾಳೆ ಮಾನವನ ವಶವಾಗಲಿರುವ ಪರಮಾಣು ಶಕ್ತಿಯನ್ನು ಹನನ ಕಾರ್ಯಕ್ಕೆ ದುರ್ವಿನಿಯೋಗಿಸದೆ ಉದ್ಧಾರ ಕಾರ್ಯಕ್ಕೆ ನಿಯೋಜಿಸುವುದು ಹೇಗೆ? ಪ್ರಪಂಚದ ಮೂರು ಮುಖ್ಯ ಶಕ್ತಿಶಾಲಿ ರಾಷ್ಟ್ರಗಳಾದ ಅಮೆರಿಕ, ಇಂಗ್ಲೆಂಡ್ ಮತ್ತು ರಶ್ಯಾ ಸದ್ಯ ಯುದ್ಧಜಯ ಎಂಬ ಸೀಮಿತೋದ್ದೇಶದ ಸಿದ್ಧಿಗಾಗಿ ಸಹಕರಿಸುತ್ತಿವೆ. ಆದರೆ ಯುದ್ಧಾನಂತರ ಪ್ರಪಂಚ ಎರಡು ವಿರುದ್ಧ ಶಕ್ತಿ ಬಣಗಳಾಗಿ ಒಡೆದು ಹೋಗುವುದು ಖಂಡಿತ. ಆಗ ಪ್ರತಿಯೊಂದು ಬಣವೂ ತನ್ನ ಹಿತಾಸಕ್ತಿಯ ಮೂಗಿನ ನೇರವೇ ನಡೆಯುತ್ತಿರುವುದು. ಇಂಥ ಅಹಿತಕರ ಪೈಪೋಟಿ ಸನ್ನಿವೇಶದಲ್ಲಿ ಪರಮಾಣುಶಕ್ತಿ ಯಾವುದೇ ಒಂದು ಬಣದ ಸೀಮಿತ ಸೊತ್ತು ಆಗಬಾರದು, ಮಾನವಕೋಟಿಯ ಸಾರ್ವಜನಿಕ ನ್ಯಾಸ ಆಗಬೇಕು. ಆಗ ಮಾತ್ರ ಪ್ರಪಂಚ ಕಲ್ಯಾಣ ಸಾಧ್ಯವಾದೀತು. ಸಧ್ಯ ಪರಮಾಣು ಶಕ್ತಿ ಬಸಿತ ಕುರಿತಂತೆ ಯಶಸ್ಸಿನ ಕೊನೆಯ ಮಜಲಿನಲ್ಲಿರುವ ಅಮೆರಿಕ ಮತ್ತು ಇಂಗ್ಲೆಂಡ್ ಸ್ವಪ್ರೇರಣೆಯಿಂದ ಮುಂಬಂದು ತಮ್ಮ ರಹಸ್ಯ ಜ್ಞಾನವನ್ನು ರಶ್ಯದ ಜೊತೆ ಹಂಚಿಕೊಳ್ಳುವುದೊಂದೇ ಆ ದೇಶದ ವಿಶ್ವಾಸ ಗಳಿಸಲು ಇರುವ ಹಾದಿ.

ಎಂದೂ ರಾಜಕಾರಣಿ ಆಗಿರದಿದ್ದ ಬೋರ್ ಈ ಉದ್ದೇಶ ಸಾಧನೆಗಾಗಿ ರಾಜಕಾರಣಕ್ಕೆ ಇಳಿಯಬೇಕಾಯಿತು. ಅಮೆರಿಕದ ಅಧ್ಯಕ್ಷ ರೂಸ್ವೆಲ್ಟ್ ಏನೋ ಬೋರ್ ಅವರ ಪ್ರಾಮಾಣಿಕ ಚಿಂತನೆಯ — ಮನುಕುಲದ ಮನಸ್ಸಾಕ್ಷಿಯ ಸೂಕ್ಷ್ಮ ಸ್ಪಂದನದ—ಪ್ರಖರತೆಯಿಂದ ಪ್ರಭಾವಿತರಾಗಿ ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಜೊತೆ ಈ ವಿಷಯ ಚರ್ಚಿಸಲು ಸೂಚಿಸಿದರು, ಮತ್ತು ಅವರಿಗೆ ತಲಪಿಸಲು ಒಂದು ಸಂದೇಶವನ್ನೂ ಕೊಟ್ಟರು. ಚರ್ಚಿಲ್ಲರ ಭೇಟಿ ತುಂಬ ಪ್ರಯಾಸದಿಂದ ಒದಗಿತು (ಮೇ ೧೯೪೪). ಆದರೆ ಪರಿಸ್ಥಿತಿ ತೀರ ಪ್ರತಿಕೂಲವಾಗಿ ಹದಗೆಟ್ಟಿತು. ಆರಂಭದಲ್ಲೇ ವಿಷಯಾಂತರವಾಗಿ ಬೋಳೆ ಸ್ವಭಾವದ ಬೋರ್ ಅವರಿಗೆ ವಾದ ಮಂಡಿಸಲು ಅವಕಾಶ ದೊರೆಯಲಿಲ್ಲ. ಇತ್ತ ಮಹಾ ರಾಜಕಾರಣಿ ಚರ್ಚಿಲ್ಲರಿಗೆ ಇವರನ್ನು ಕೇಳುವ ತಾಳ್ಮೆ ಇರಲಿಲ್ಲ.

ಈ ವಿಫಲ ಭೇಟಿಯ ಕೊನೆಯಲ್ಲಿ ಹತಾಶ ಬೋರ್ ಒಂದು ಮಾತು ಹೇಳಿದರು "ನಾನು ಹೇಳಬೇಕಾದುದೆಲ್ಲವನ್ನೂ ಕಾಗದದಲ್ಲಿ ಬರೆದು ನಿಮಗೆ ಕಳಿಸಬಹುದೇ?"

ಚರ್ಚಿಲ್ "ನಿಮ್ಮಿಂದ ಪತ್ರ ಬರುವುದು ನನಗೆ ಸಲ್ಲುವ ಗೌರವವೆಂದು ಭಾವಿಸಿದ್ದೇನೆ — ಆದರೆ ರಾಜಕಾರಣದ ವಿಚಾರವಾಗಿ ಮಾತ್ರ ಅಲ್ಲ" ಎಂದರು.

ಮುಂದೇನು? ಮೊದಲು ಪರಮಾಣು ಬಾಂಬ್ ಹಿರೋಶಿಮಾದ ಮೇಲೂ (೬ - ೮ - ೧೯೪೫) ಎರಡನೆಯ ಪರಮಾಣು ಬಾಂಬ್ ನಾಗಸಾಕಿ ಮೇಲೂ (೯-೮-೧೯೪೫) ಬಿದ್ದುವು. ಪ್ರತ್ಯಕ್ಷ ಯುದ್ಧವೇನೊ ನಿಂತಿತು. ಆದರೆ ರಶ್ಯ ಮತ್ತು ಅಮೆರಿಕ ಬಣಗಳ ನಡುವೆ ಪ್ರಚ್ಛನ್ನ ಶೀತಲ ಸಮರ ತೊಡಗಿತು. ಇಂಥ ಪ್ರಪಾತಗಾಮಿ ಪಥಕ್ರಮಣದಿಂದ ಪ್ರಪಂಚವನ್ನು ಪಾರುಗಾಣಿಸುವುದು ಹೇಗೆ? ಇದು ಬೋರ್ ಅವರನ್ನು ಕಾಡಿದ ಮುಂದಿನ ಪ್ರಶ್ನೆ.


ಶಾಂತಿ ಉದ್ದೇಶಕ್ಕೆ ಪರಮಾಣು ಬಳಕೆಯೊಂದೇ ಪರಿಹಾರವೆಂದು ಬಗೆದ ಈ ಶಾಂತಿದೂತ ತಮ್ಮ ಚಿಂತನೆಯನ್ನು ಕ್ರೋಢೀಕರಿಸಿ ವಿಶ್ವಸಂಸ್ಥೆಗೆ (United Nations) ಮುಕ್ತ ಪತ್ರ ಬರೆದರು (೯-೬-೧೯೫೦). ರಾಷ್ಟ್ರಗಳ ನಡುವೆ ವಿಶ್ವಾಸ ಮೊಳೆತು ಸಹಕಾರ ಏರ್ಪಟ್ಟು ಸೌಹಾರ್ದ ಅರಳಲು ಪರಮಾಣು

ಶಕ್ತಿಯನ್ನು ಹೇಗೆ ವಿನಿಯೋಗಿಸಬೇಕು ಎಂಬ ಸಂಗತಿಯನ್ನು ಇವರು ಈ ಪತ್ರದಲ್ಲಿ ಪ್ರಪಂಚದ ಪ್ರಜ್ಞಾವಂತ ಪ್ರಜೆಯಾಗಿ ಚರ್ಚಿಸಿದ್ದಾರೆ, ತಮ್ಮ ಸಾರ್ಥಕ ಜೀವನದ ಆದರ್ಶ ಹಾಗೂ ಮೌಲ್ಯಗಳ ಸಾರವನ್ನೇ ಬಟ್ಟಿ ಇಳಿಸಿದ್ದಾರೆ. ಆದರೆ ಪಾಶವೀಶಕ್ತಿ ಒದಗಿಸುವ ಕ್ರೂರಾನಂದದ ಅಮಲಿನಲ್ಲಿದ್ದ ಯುದ್ಧ ವಿಜೇತ ರಾಷ್ಟ್ರಗಳು ಈ ಮನವಿಗೆ ವಿಶೇಷ ಗಮನವೇನೂ ಕೊಡಲಿಲ್ಲ. "ವಿಜ್ಞಾನಿಯ ಪರಿಶ್ರಮದ ಪಕ್ವ ಫಲ ನಮಗೆ ಬೇಕು. ಆದರೆ ಆತನ ಜೀವನಧರ್ಮದ ಸಾರ ವಾಣಿ ಬೇಡ" — ಇದು ಸಾಧಾರಣವಾಗಿ ಎಲ್ಲ ಕಾಲಗಳಲ್ಲಿಯೂ ರಾಜಕಾರಣಿಗಳ ನಿಲವು. (ಚರ್ಚಿಲ್ ಒಮ್ಮೆ ಬೋರ್ ಅವರನ್ನು ದಸ್ತಗಿರಿ ಮಾಡಿಸಲು ಯೋಚಿಸಿದ್ದಿತ್ತು.) ಎಂದೇ ಬುದ್ಧ, ಗಾಂಧಿ, ಐನ್‌ಸ್ಟೈನ್ ಅಥವಾ ಬೋರ್ ಸಮಕಾಲೀನವಾಗಿ ಪ್ರಸ್ತುತರಾಗಲಿಲ್ಲ.

ಯುದ್ಧ ಮುಗಿದ ಬಳಿಕ ಬೋರ್ ೧೯೪೫ರಲ್ಲಿ ಡೆನ್ಮಾರ್ಕಿನ ತಮ್ಮ ಪ್ರಿಯ ಸಂಸ್ಥೆಗೆ ಮರಳಿದರು, ಎಪ್ಪತ್ತೇಳರ ಪಕ್ವ ವಯಸ್ಸಿನ ತನಕ ಬಾಳಿದರು (ಮರಣ ೧೮-೧೧-೧೯೬೨. ಕೂಪನ್‌ಹೇಗನ್). ಇವರು ಸ್ವತಃ ಮಾಡಿದ ಸಂಶೋಧನೆ, ಶಿಷ್ಯ ಪರಂಪರೆಯನ್ನು ರೂಪಿಸಿ ಒಬ್ಬೊಬ್ಬನೂ ಪರಿಪೂರ್ಣ ವಿಜ್ಞಾನಿಯಾಗಿ ವಿಕಸಿಸುವಂತೆ ನೀಡಿದ ಮಾರ್ಗದರ್ಶನ, ಆಧುನಿಕ ವಿಜ್ಞಾನದ ಮುನ್ನಡೆಯಲ್ಲಿ ವಹಿಸಿದ ಸಕ್ರಿಯ ಪಾತ್ರ, ಪ್ರಪಂಚ ಶಾಂತಿಗಾಗಿ ಮಾಡಿದ ತ್ಯಾಗ ಮತ್ತು ತಮ್ಮ ಜೀವಿತಾವಧಿಯಲ್ಲಿ ಐನ್‌ಸ್ಟೈನ್ ಸಮಭುಜರಾಗಿ ಬಾಳಿದ ರೀತಿ ಈಗ ಇತಿಹಾಸದ ಅವಿಭಾಜ್ಯ ಅಂಶಗಳಾಗಿವೆ.

"ಯುಗಪ್ರವರ್ತಕ ಮೇಧಾವಿಗಳು ಸಮಸ್ತ ಪ್ರಪಂಚಕ್ಕೆ ಸೇರಿದ ವ್ಯಕ್ತಿಗಳು. ತಮ್ಮ ಎಲ್ಲ ಚಟುವಟಿಕೆಗಳಲ್ಲಿಯೂ ನೀಲ್ಸ್ ಬೋರ್ ಅವರಂತೆ ಪ್ರಪಂಚದ ನಿಜ ಪ್ರಜೆಗಳಾಗಿದ್ದವರು ತೀರ ವಿರಳ. ಇದರೊಂದಿಗೆ ಅವರು ಡೇನಿಶ್ ಸಂಸ್ಕೃತಿ, ಚಿಂತನೆ ಹಾಗೂ ಭಾವಗಳ ಜೊತೆ ಕೂಡ ಅಷ್ಟೇ ಸನ್ನಿಕಟವಾಗಿ ಬೆಸೆದುಕೊಂಡಿದ್ದರು. ಎಂದೇ ಅವರೇನಾದರೂ ಬೇರೆ ದೇಶದಲ್ಲಿ ಹುಟ್ಟಿ ಬೆಳೆದುದಾಗಿದ್ದರೆ ನೀಲ್ಸ್ ಬೋರ್ ಮಾತ್ರ ಆಗಿರುತ್ತಿರಲಿಲ್ಲ." ಪ್ರೊಫೆಸರ್ ಕ್ರಿಶ್ಚಿಯನ್ ಮ್ಯೂಲರ್ ನೀಡಿರುವ ಈ ನುಡಿಕಾಣ್ಕೆ ಬೋರ್ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಹೊಸ ಜಾಡ ತುಳಿದರಾರ್?
ಧಾತು ಗುಣವ ಪೇಳ್ದರಾರ್?
ಶಾಂತಿ ಬೋಧೆ ಮಾಳ್ದರಾರ್?
ಅವರ ಪೆಸರ್ ನೀಲ್ಸ್ ಬೋರ್!



Edited, printed & published by M. N. Mahishi on behalf of the Receiver (Moveables), Loka Shikshana Trust, Samyukta Karnataka Press, Koppikar Road, Hubli-580 020, Phoue : 64307. Rept : Bombay: V. Satyamurthy Phone: 5510502, Calcutta : H. Majumdar Phone : 46-42331 Madras : K. A. Subramanian Phone : 842201; New Delhi : V. K. Chopra Phone : 7114785.

Registered with the Registrar of Newspapers for India under No. 3530/57

Licensed to Post without Pre payment. *Licence No. L2120/WPP No.*



